॥ ಶ್ರೀಃ ಹರಿಃ ಓಂ ॥

ಶ್ರೀ ಹರಿದಾಸ ಸಾಹಿತ್ಯ ಪ್ರಚಾರಮಾಲೆ

ಶ್ರೀ ಜಗನ್ನಾಥದಾಸವರ್ಯಕೃತ

# ಶ್ರೀಮದ್ಧರಿಕಥಾಮೃತಸಾರ

## ಸರ್ವವ್ಯಾಖ್ಯಾನಸಾರಸಂಗ್ರಹ
## ಮಂಗಳಾಚರಣಸಂಧಿ

(ಸಂಪುಟ ೧)

ಪ್ರಕಾಶಕರು :

**ಹೆಚ್. ಎಸ್. ಶ್ರೀನಿವಾಸಮೂರ್ತಿ**

ನಂ. ೬೧, [illegible] ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ

ಬೆಂಗಳೂರು-೫೬೦ ೦೧೯

[illegible]·K· SRINIVASA RAO

[illegible] Sri Guruvarna [illegible]

[illegible] Electricals Centre(?),

Vidhyapeetha Circle,

Kathriguppe Main Rd,

Bangalore 560050

॥ ಶ್ರೀಃ ಹರಿಃ ಓಂ ॥

ಶ್ರೀ ಹರಿದಾಸ ಸಾಹಿತ್ಯ ಪ್ರಚಾರಮಾಲೆ



ಶ್ರೀ ಜಗನ್ನಾಥದಾಸವರ್ಯಕೃತ

# ಶ್ರೀಮದ್ಧರಿಕಥಾಮೃತಸಾರ

## ಸರ್ವವ್ಯಾಖ್ಯಾನಸಾರಸಂಗ್ರಹ

## ಮಂಗಳಾಚರಣಸಂಧಿ

(ಸಂಪುಟ ೧)

ಪ್ರಕಾಶಕರು :
ಹೆಚ್. ಎಸ್. ಶ್ರೀನಿವಾಸಮೂರ್ತಿ
ನಂ. ೬೧, ೫ನೆಯ ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ
ಬೆಂಗಳೂರು-೫೬೦ ೦೧೯

ಶ್ರೀಮದ್ಧರಿಕಥಾಮೃತಸಾರ
ಸರ್ವವ್ಯಾಖ್ಯಾನಸಾರಸಂಗ್ರಹ
ಮಂಗಳಾಚರಣ ಸಂಧಿ
ಸಂಪುಟ (೧)


ಪ್ರಥಮ ಮುದ್ರಣ: ಕ್ರಿ. ಶ. ೧೯೮೫
ಪ್ರತಿಗಳ ಸಂಖ್ಯೆ: ೧೦೦೦
ದ್ವಿತೀಯ ಮುದ್ರಣ: ೧೦-೧೧-೧೯೮೬
ಪ್ರತಿಗಳ ಸಂಖ್ಯೆ: ೫೦೦

ಬೆಲೆ: ಹತ್ತು ರೂಪಾಯಿಗಳು

ಪ್ರತಿಗಳು ದೊರೆಯುವ ಸ್ಥಳ:
(೧) ಹೆಚ್. ಎಸ್. ಶ್ರೀನಿವಾಸಮೂರ್ತಿ
ನಂ. ೬೧, ೫ನೆಯ ಅಡ್ಡರಸ್ತೆ,
ನರಸಿಂಹರಾಜಾ ಕಾಲೋನಿ,
ಬೆಂಗಳೂರು-೫೬೦ ೦೧೯.

(೨) ವೇದಾಂತ ಬುಕ್‌ಹೌಸ್
ಉಮಾ ಚಿತ್ರಮಂದಿರದ ಬಳಿ,
ಚಾಮರಾಜಪೇಟೆ,
ಬೆಂಗಳೂರು-೫೬೦ ೦೧೮.

ಮುದ್ರಕರು:
ಪರಿಮಳ ಎಂಟರ್‌ಪ್ರೈಸಸ್
ಲಾಲ್‌ಬಾಗ್ ಫೋರ್ಟ್‌ರಸ್ತೆ,
ಬೆಂಗಳೂರು-೫೬೦ ೦೦೪.

ಶ್ರೀ ಜಗನ್ನಾಥದಾಸವರ್ಯರು

ಮಾನವಿ (ರಾಯಚೂರು ಜಿಲ್ಲೆ)

ಪುಣ್ಯದಿನ : ಭಾದ್ರಪದ ಶುಕ್ಲ ನವಮೀ



ದಾಸವರ್ಯಂ ದಯಾಯುಕ್ತಂ ದೂರೀಕೃತದುರಾಶಿಷಮ್।
ಹರಿಕಥಾಮೃತವಕ್ತಾರಂ ಜಗನ್ನಾಥಗುರುಂ ಭಜೇ ॥

# ಪ್ರಕಾಶಕರ ನುಡಿ

ಶ್ರೀಮದ್ಧರಿಕಥಾಮೃತಸಾರವು ಶ್ರೀ ಜಗನ್ನಾಥದಾಸವರೇಣ್ಯರ ಮೇರು ಕೃತಿ. ಅಪರೋಕ್ಷೀಕೃತಶ್ರೀಶರಾದ ದಾಸವರ್ಯರು ಈ ಅಮರಕೃತಿಯಲ್ಲಿ ಶ್ರೀಮನ್ಮಧ್ವಮತಸಿದ್ಧಾಂತಪ್ರಮೇಯರಹಸ್ಯಗಳನ್ನು ಹೃದಯಂಗಮವಾಗಿ ಪ್ರತಿಪಾದಿಸಿದ್ದಾರೆ. ವೇದಾರ್ಥನಿರ್ಣಾಯಕವಾದ ಬ್ರಹ್ಮಸೂತ್ರಗಳೂ, ವೇದಾರ್ಥಗಳು, ಶ್ರುತಿಶಿರ ಎಂದು ಕರೆಯಲ್ಪಡುವ ಉಪನಿಷತ್ತುಗಳ ಮಂತ್ರಾರ್ಥಗಳು. ಪುರಾಣ ಹಾಗೂ ಇತಿಹಾಸಗಳೆಂಬ ಜಲಧಿಯಲ್ಲಿ ಅಂತರ್ಭೂತವಾಗಿರವ ಪ್ರಮೇಯರತ್ನಗಳು ಇತ್ಯಾದಿ ಶಾಸ್ತ್ರಾರ್ಥಗಳಿಂದ ಘಟಕವಾಗಿರುವುದೇ ಈ ಗ್ರಂಥದ ವೈಶಿಷ್ಟ್ಯ. ಮೂವತ್ತೆರಡು ಸಂಧಿಗಳನ್ನು ಒಳಗೊಂಡ ಈ ಗ್ರಂಥರತ್ನವು ಶ್ರೀವಾಯುದೇವರ ತೃತೀಯಾವತಾರ ಭೂತರಾದ ಶ್ರೀಮನ್ಮಧ್ವಮುನಿಗಳ ದ್ವಾತ್ರಿಂಶತಿ ಸುಲಕ್ಷಣಗಳಂತೆ, ದೇದೀಪ್ಯಮಾನವಾಗಿದೆ. ಆಚಂದ್ರಾರ್ಕವಾಗಿ ವೈಭವದಿಂದ ಮೆರೆಯಬಲ್ಲ ಈ ಗ್ರಂಥಚೂಡಾಮಣಿಗೆ ಅನೇಕ ಜ್ಞಾನಿವರೇಣ್ಯರು ಅಮೋಘ ವ್ಯಾಖ್ಯಾಗಳನ್ನು ರಚಿಸಿರುತ್ತಾರೆ.

(೧) ಶ್ರೀ ಸಂಕರ್ಷಣ ಒಡೆಯರ ಟೀಕೆ.

(೨) ಶ್ರೀ ಪದ್ಮನಾಭದಾಸರಿಂದ ವಿರಚಿತ **"ಭಾವಪ್ರಕಾಶಿಕೆ"** ಎಂಬ ವ್ಯಾಖ್ಯಾನ.

(೩) ಶ್ರೀ ಕಮಲಾಪತಿದಾಸರಿಂದ ವಿರಚಿತ **"ಭಾವದರ್ಪಣ ಟೀಕಾ"**

(೪) ಶ್ರೀ ಗುರು ವಿಜಯವಿಠ್ಠಲರ ಟೀಕಾ (ಮೊದಲಕಲ್ಲು ಶೇಷದಾಸರು)

(೫) ಗುರು ಶ್ರೀಶವಿಠ್ಠಲರ ಟೀಕೆ (ಕುಂಟೋಜಿದಾಸರು)

(೬) ದ್ರೌಪದೀಶವಿಠ್ಠಲರ ಟೀಕೆ.

(೭) ಜಮಖಂಡೀವಾದಿರಾಜಾರ್ಯಕೃತ **"ಭಾವಸೂಚನ"**

(೮) ಶ್ರೀ ಗುರುಯೋಗಿಧ್ಯೇಯವಿಠ್ಠಲಾಂಕಿತ ಶ್ರೀ ರಾಘವೇಂದ್ರ ದಾಸರಿಂದ ವಿರಚಿತ **"ಗುರುಹೃದಯಪ್ರಕಾಶಿಕಾ"**

ಈ ಎಂಟು ವ್ಯಾಖ್ಯಾನಗಳೂ ಕನ್ನಡ ವ್ಯಾಖ್ಯಾನಗಳು. ಇನ್ನು ಸಂಸ್ಕೃತ ವ್ಯಾಖ್ಯಾನಗಳು ಎರಡು ಇವೆ.

(೧) ಶ್ರೀ ತಾಮ್ರಪರ್ಣೀಯ ವ್ಯಾಖ್ಯಾನ (**ಪದಪ್ರಕಾಶಿಕೆ** ಎಂತಲೂ ಪ್ರಸಿದ್ಧಿ)

(೨) ಜಮಖಂಡೀ ವಾದಿರಾಜಾಚಾರ್ಯಕೃತ **ಶ್ರೀವ್ಯಾಸ-ದಾಸ ಸಿದ್ಧಾಂತ ಕೌಮುದೀ.**

ಪ್ರಾಕೃತ ಗ್ರಂಥಕ್ಕೆ "ಸಂಸ್ಕೃತ ವ್ಯಾಖ್ಯಾನಗಳಿವೆ" ಎಂದ ಮೇಲೆ, ಈ ಗ್ರಂಥದ ಮಹತ್ವ ಮತ್ತು ಮಹಿಮಾವಿಶೇಷಗಳು ಎಷ್ಟು ಉನ್ನತ ಎಂದು ಭಾವಿಸಬಹುದು.

ಗ್ರಂಥಕರ್ತೃಗಳಾದ ಶ್ರೀ ಜಗನ್ನಾಥದಾಸವರ್ಯರು ಶಾ. ಶ. ೧೬೫೦. ಅಂದರೆ, ಕೀಲಕನಾಮಸಂವತ್ಸರದ ಶ್ರಾವಣ ಶುದ್ಧ ದ್ವಿತೀಯಾ (೨೬-೭-೧೭೨೮) ಶುಭದಿನದಂದು ಜನಿಸಿದರು. ಇವರ ತಂದೆ ನರಸಪ್ಪನವರು. ತಾಯಿ ಲಕ್ಷ್ಮಕ್ಕ. ನೈಜಾಂ ಸಂಸ್ಥಾನದ ಮಾನವಿ ಕ್ಷೇತಕ್ಕೆ ಸೇರಿದ ಬ್ಯಾಗವಟ್ಟಿ ಎಂಬ ಗ್ರಾಮದಲ್ಲಿ ನರಸಪ್ಪನವರು ಶಾನುಭೋಗವೃತ್ತಿಯಲ್ಲಿದ್ದರು. ಸಂಸಾರದಲ್ಲಿ ವಿರಕ್ತರಾದ ನರಸಪ್ಪನವರು ಶ್ರೀ ವಿಜಯದಾಸವರ್ಯರ ಶಿಷ್ಯರಾದ ವೇಣುಗೋಪಾಲವಿಠ್ಠಲಾಂಕಿತ ಪಂಗನಾಮತಿಮ್ಮಣ್ಣದಾಸರಿಂದ ದಾಸದೀಕ್ಷೆ ಪಡೆದು, ನರಸಿಂಹವಿಠ್ಠಲ ಎಂಬ ಅಂಕಿತವನ್ನು ಪಡೆದರು. ಸಪ್ತಗಿರಿವಾಸ ಶ್ರೀ ಶ್ರೀನಿವಾಸನ ವರಪ್ರಸಾದದಿಂದ ಹುಟ್ಟಿದ ಈ ಪುತ್ರರತ್ನಕ್ಕೆ ಶ್ರೀನಿವಾಸಪ್ಪನೆಂದು ನಾಮಕರಣ ಮಾಡಲಾಯಿತು.

ಬಾಲ್ಯದಿಂದಲೇ ತೇಜಸ್ಸು ಮತ್ತು ವರ್ಚಸ್ಸುಗಳಿಂದ ಶೋಭಿಸುತ್ತಿದ್ದ ಈ ಬಾಲಕ ಶ್ರೀರಾಯರ ಮಠದ ಪರಂಪರೆಯಲ್ಲಿ ಬಂದು, ಆಗ ಶ್ರೀ ಸರ್ವಜ್ಞಾಚಾರ್ಯರ ಪೀಠವನ್ನು ಅಲಂಕರಿಸಿದ್ದ ಶ್ರೀ ವರದೇಂದ್ರತೀರ್ಥ ಶ್ರೀಪಾದಂಗಳವರ ಸಮ್ಮುಖದಲ್ಲಿ **"ವರದೇಂದ್ರ ಪಂಚರತ್ನ"**ವೆಂಬ ಸುಂದ

ಮಧುರವಾದ ಶೈಲಿಯಲ್ಲಿ ಐದು ಸಂಸ್ಕೃತ ಶ್ಲೋಕಗಳನ್ನು ರಚಿಸಿ, ಶ್ರೀಪಾದಂಗಳವರ ಪಾದಪಂಕಜಗಳಿಗೆ ಅರ್ಪಿಸಿದನು. ಗುರುಗಳ ಪರಮಾನುಗ್ರಹಕ್ಕೆ ಪಾತ್ರನಾದ ಬಾಲಕ ಶ್ರೀನಿವಾಸಪ್ಪನು, ಕ್ರಮೇಣ ನ್ಯಾಯ, ವೇದಾಂತಾದಿ ಸಕಲ ಶಾಸ್ತ್ರಗಳಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸಿ, ಚತುಶ್ಶಾಸ್ತ್ರಪಂಡಿತರೆಂದು ಖ್ಯಾತನಾಮರಾದರು. ಅವರೇ ಮಾನವೀ ಶ್ರೀನಿವಾಸಾಚಾರ್ಯರು.

ಕಾಲಬಲಸಂಯೋಗದಿಂದ ಅಂತಹ ಅತ್ಯುನ್ನತಮಟ್ಟದ ವಿದ್ವನ್ಮಣಿಗಳಾಗಿದ್ದ ಶ್ರೀನಿವಾಸಾಚಾರ್ಯರು ಒಮ್ಮೆ ಭೃಗಂಶಸಂಭೂತರಾದ ಶ್ರೀ ವಿಜಯದಾಸವರೇಣ್ಯರಲ್ಲಿ ಸ್ವೋತ್ತಮದ್ರೋಹಗೈದ ನಿಮಿತ್ತ, ಪ್ರಾರಬ್ಧ ಕರ್ಮವಶದಿಂದ ತೀವ್ರವಾದ ಉದರ ಬಾಧೆಗೆ ಒಳಗಾದರು. ತಿರುಪತಿಗೆ ಹೋಗಿ ಶ್ರೀನಿವಾಸನನ್ನು ಮೊರೆಹೊಕ್ಕರು. ಘಟಿಕಾಚಲದಲ್ಲಿ ಶ್ರೀಪ್ರಾಣ ದೇವರ ಸೇವೆಯನ್ನು ಅನನ್ಯ ಭಕ್ತಿಯಿಂದ ಮಾಡಿದರು. ಕಲಿಯುಗದ ಕಾಮಧೇನು, ಹಾಗೂ ಶರಣಜನರ ಸಂತಾಪಹಾರಕರಾದ ಶ್ರೀಮಂತ್ರಾಲಯ ಪ್ರಭುಗಳನ್ನು ಸೇವಿಸಿದರು, ಎಲ್ಲಿಯೂ ವ್ಯಾಧಿ ಗುಣಮುಖವಾಗಲೇ ಇಲ್ಲ. ವ್ಯಾಧಿಯ ಸ್ವರೂಪ ತೀವ್ರತರವಾಯಿತು. ದಿನೇ ದಿನೇ ವ್ಯಾಧಿಯ ಆಘಾತದಿಂದ ಆಚಾರ್ಯರು ತತ್ತರಿಸಿ, ಕ್ಷೀಣರಾದರು. ಕೊನೆಯಲ್ಲಿ ಸ್ವಪ್ನದ್ವಾರಾ ಸೂಚನೆಯನ್ನು ಹೊಂದಿ, ಯಾವ ಮೂಲದಲ್ಲಿ ಸ್ವೋತ್ತಮದ್ರೋಹ ರೂಪವಾದ ಅಪಚಾರ ಆಚಾರ್ಯರಿಂದ ನಡೆದಿತ್ತೋ, ಅಲ್ಲಿಗೇ ಅಂದರೆ, ಶ್ರೀ ವಿಜಯದಾಸರಲ್ಲಿಗೇ ಹೋಗಿ ಅವರಿಗೆ ಶರಣಾಗತರಾದರು. ಇದಲ್ಲವೇ ದೈವಲೀಲೆ ! ಆ ಅಗಮ್ಯಮಹಿಮನ ಲೀಲಾವಿಲಾಸಗಳನ್ನು ತಿಳಿದವರಾರು ? ಕರುಣಾದ್ರಹೃದಯರಾದ ಶ್ರೀ ವಿಜಯದಾಸರು ಆಚಾರ್ಯರನ್ನು ಸ್ವಾಂತನಗೊಳಿಸಿ, ತಮ್ಮ ಆತ್ಮೀಯ ಶಿಷ್ಯರಾದ ಶ್ರೀ ಗೋಪಾಲದಾಸರಲ್ಲಿಗೆ ಕಳುಹಿಸಿಕೊಟ್ಟರು. ಶ್ರೀ ಭಾಗಣ್ಣದಾಸರು ಎರಡು ಜೋಳದ ಭಕ್ರಿಗಳನ್ನು ಅಭಿಮಂತ್ರಿಸಿ, ಅವುಗಳಲ್ಲಿ ಧನ್ವಂತ್ರೀದೇವರನ್ನು ಆವಾಹಗೈದು, ಆಚಾರ್ಯರಿಗೆ ತಿನ್ನಲು ಕೊಟ್ಟು, ತಮ್ಮ ಅತ್ಯಮೂಲ್ಯವಾದ ಆಯುಸ್ಸಿನಲ್ಲಿ ೪೦ವರ್ಷಗಳಷ್ಟು ಆಯುರ್ದಾನ ಮಾಡಿ, ಅವರಿಗೆ ಪರಮಾನುಗ್ರಹ ಮಾಡಿದರು. ಇದರಿಂದ

ಆಚಾರ್ಯರಿಗೆ ಪ್ರಾಣಾಂತಕವಾಗಿದ್ದ ಘೋರವ್ಯಾಧಿಯು ಪರಿಹಾರವಾಗಿ, ಆರೋಗ್ಯದಿಂದ ದೃಢಕಾಯರಾದರು. ಅದೆಂತಹ ಪರಿವರ್ತನೆ ಆಚಾರ್ಯರ ಬಾಳಿನಲ್ಲಿ ! ನಂತರ, ಭಾಗಣ್ಣದಾಸರಿಂದ ಆಜ್ಞಪ್ತರಾಗಿ, ಚಂದ್ರಭಾಗಾ ನದಿಯಲ್ಲಿ ಸ್ನಾನಮಾಡುತ್ತಿರುವಾಗ, ಶಿಲಾಂಕಿತ **ಜಗನ್ನಾಥವಿಠ್ಠಲ** ಎಂಬ ದಿವ್ಯ ಅಂಕಿತವನ್ನು ಪಡೆದು, ಲೋಕೋತ್ತರ ಪುರುಷರಾದರು. ಅನೇಕ ಶಿಷ್ಯ ಸಮೂಹದಿಂದ ಕೂಡಿ, ದಿವ್ಯಕ್ಷೇತ್ರಗಳನ್ನು ಸಂದರ್ಶಿಸಿ, ಶಾಸ್ತ್ರಾರ್ಥ ಪ್ರಮೇಯಗಳಿಂದ ತುಂಬಿ ಹೊರಸೂಸುತ್ತಿರುವ ಅನೇಕ ಪದ, ಪದ್ಯ, ಸುಳಾದಿ ತತ್ತ್ವಸುವ್ವಾಲಿಗಳನ್ನು ರಚಿಸಿ, ಹರಿದಾಸಸಾಹಿತ್ಯದ ಸಿರಿವಂತಿಕೆ ಯನ್ನು ಹೆಚ್ಚಿಸಿದರು. ವ್ಯಾಸ–ದಾಸ ಈ ಉಭಯ ವಾಙ್ಮಯಗಳಲ್ಲಿ ಪ್ರಕಾಂಡಪಂಡಿತರಾದ ದಾಸವರ್ಯರು ತಮ್ಮ ಬಾಳಿನ ಕೊನೆಯ ದಿನಗಳಲ್ಲಿ ರಚಿಸಿದ ಕೃತಿಯೇ **ಶ್ರೀಮದ್ಹರಿಕಥಾಮೃತಸಾರ.**

**"ಸರ್ವವ್ಯಾಖ್ಯಾನಸಾರಸಂಗ್ರಹ"** ಎಂಬ ಶೀರ್ಷಿಕೆಯಲ್ಲಿ ಪ್ರಕಟ ವಾಗಲಿರುವ ಪ್ರತಿ ಸಂಪುಟದಲ್ಲಿಯೂ ಆಯಾಯ ಸಂಧಿಗತ ಪದ್ಯಗಳನ್ನು ದಪ್ಪ ಅಕ್ಷರದಲ್ಲಿ ಮುದ್ರಿಸಿ, ಪ್ರತಿ ಪದಕ್ಕೂ ಪ್ರತಿಪದಾರ್ಥ, ವಿಶೇಷಾರ್ಥ, ತಾತ್ಪರ್ಯ ಮತ್ತು ಆಯಾಯ ವಿಷಯಗಳಿಗೆ ಪುಷ್ಟಿ ಕೊಡುವ **ಪ್ರಮಾಣ ಗಳನ್ನು** ಕೊಡಲಾಗುವುದು ನಂತರ ಪ್ರತಿ ಪದ್ಯಕ್ಕೂ ಆರು ಸುಪ್ರಸಿದ್ಧ ವ್ಯಾಖ್ಯಾನಗಳನ್ನು ಸಮಗ್ರವಾಗಿ ಕೊಡಲಾಗಿದೆ. ಈ ವ್ಯಾಖ್ಯಾನಗಳು ಕ್ರಮ ವಾಗಿ (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ, (೨) ಶ್ರೀಪದ್ಮನಾಭದಾಸರ **ಭಾವಪ್ರಕಾಶಿಕಾ** ವ್ಯಾಖ್ಯಾನ, (೩) ಶ್ರೀ ಕಮಲಾಪತಿದಾಸರ **ಭಾವ ದರ್ಪಣ ಟೀಕಾ.** (೪) ತಾಮ್ರಪರ್ಣೀಯ ವ್ಯಾಖ್ಯಾನ, (೫) ಜಮಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ ಮತ್ತು (೬) ಗುರುಯೋಗಿಧ್ಯೇಯ ವಿಠ್ಠಲಾಂಕಿತ ಶ್ರೀ ರಾಘವೇಂದ್ರದಾಸರ **ಗುರುಹೃದಯಪ್ರಕಾಶಿಕಾ** ವ್ಯಾಖ್ಯಾನ. ಪ್ರತಿ ಪದ್ಯದ ಕೊನೆಯಲ್ಲಿ ಈ ಮೇಲಿನ ಆರು ವ್ಯಾಖ್ಯಾನಗಳ ಸಾರರೂಪವಾದ **ಸರ್ವವ್ಯಾಖ್ಯಾನಸಾರಸಂಗ್ರಹ**ವನ್ನು ಕೊಡಲಾಗಿದೆ. ಇದ ರಿಂದ ಸಂಧಿಯಲ್ಲಿನ ಪ್ರತಿಪದ್ಯವೂ ವಿಸ್ತಾರವಾಗಿ ಪ್ರಮೇಯಪ್ರಮಿತವಾಗಿ

ವಿವರಿಸಲ್ಪಡುವುದು. ಇಂತಹ ಸಮಗ್ರ ವ್ಯಾಖ್ಯಾನರೂಪವಾದ ಪ್ರಕಟಣೆಯನ್ನು ಬೆಳಕಿಗೆ ತರಬೇಕೆಂದು ನನ್ನ ಮಹತ್ವಾಕಾಂಕ್ಷೆಯಾಗಿತ್ತು. ಆ ಧ್ಯೇಯಸಾಧನೆ ದಾಸರ ಅಂತರ್ಯಾಮಿ ಶ್ರೀ ಜಗನ್ನಾಥವಿಠ್ಠಲನ ಕೃಪಾವಿಶೇಷದಿಂದ ಕೈಗೂಡಿದೆ. ಮುಂದಿನ ಸಂಪುಟಗಳೆಲ್ಲವೂ ಬೇಗ ಬೇಗ ಮುದ್ರಿತವಾಗಿ, ಗ್ರಾಹಕರ ಕೈಸೇರಲಿ ಎಂದು ಶ್ರೀಹರಿವಾಯುಗಳಲ್ಲಿ ಪ್ರಾರ್ಥಿಸುತ್ತೇನೆ.

ಈ ಮೇರುಕೃತಿಯಲ್ಲಿ ಅಂತರ್ಭೂತವಾಗಿರುವ ಅನೇಕ ಪ್ರಮೇಯಗಳನ್ನು ಆಗಿಂದಾಗ್ಗೆ ನನಗೆ ಬೋಧಿಸಿ, ಪರಮಾನುಗ್ರಹ ಮಾಡಿದ ಕೀರ್ತಿಶೇಷ ನನ್ನ ಪರಮ ಪೂಜ್ಯ ಗುರುವರ್ಯ ಶ್ರೀ ಉರಗಾದ್ರಿವಾಸ ವಿಠ್ಠಲದಾಸರಿಗೂ, ಈ ಅಮರ ಕೃತಿಯ ಅನೇಕ ಪದ್ಯಗಳಲ್ಲಿ ಪ್ರಯೋಗಿಸಲ್ಪಟ್ಟಿರುವ ಅರ್ಥಾನುಸಂಧಾನ. ಶೈಲಿಯ ಸೊಗಸು ಮತ್ತು ಶಬ್ದಸಂಪತ್ತುಗಳನ್ನು ಅಧ್ಯಯನ ಸಮಯದಲ್ಲಿ ವಿವರಿಸುತ್ತಿದ್ದ ಕೀರ್ತಿಶೇಷ ತಂದೆ ಶ್ರೀ ವೆಂಕಟೇಶ ವಿಠ್ಠಲದಾಸರಿಗೂ ನನ್ನ ಭಕ್ತಿಪೂರ್ವಕವಾದ ಸಾಷ್ಟಾಂಗ ನಮಸ್ಕಾರಗಳು.

ದಾಸಸಾಹಿತ್ಯ ಕ್ಷೇತ್ರದಲ್ಲಿ ಆಳವಾದ ಅಧ್ಯಯನ ನಡೆಯಿಸಿ, ತತ್ರಾಪಿ ಶ್ರೀಮದ್ಹರಿಕಥಾಮೃತಸಾರವನ್ನು ನನಗೆ ಆಮೂಲಾಗ್ರವಾಗಿ ಉಪದೇಶಿಸಿ ನನ್ನ ತೀರ್ಥರೂಪರಾದ ಕೀರ್ತಿಶೇಷ ಶ್ರೀ ಹೆಚ್. ಶಾಮರಾಯರಿಗೆ (ಅಂತರಾತ್ಮವಿಠ್ಠಲದಾಸರು) ನನ್ನ ಸಾಷ್ಟಾಂಗಪ್ರಣಾಮಗಳೊಡನೆ ಈ ಪ್ರಕಟಣೆಯನ್ನು ಅವರಿಗೆ ಅರ್ಪಿಸಿದ್ದೇನೆ.

ಶ್ರೀ ಜಗನ್ನಾತದಾಸವರ್ಯರ ಪಡಿಯಚ್ಚನ್ನು ತಯಾರಿಸುವಾಗ, ದಾಸರಾಯರ ಭಾವಚಿತ್ರವನ್ನು ಒದಗಿಸಿದ ಶ್ರೀ ಎ. ಎನ್. ಅನಂತಸ್ವಾಮಿಯವರಿಗೂ ಮತ್ತು ಕೀರ್ತಿಶೇಷ ಶ್ರೀ ಹೆಚ್. ಶಾಮರಾಯರ ಭಾವಚಿತ್ರವನ್ನು ಒದಗಿಸಿದ ಶ್ರೀ ಎಮ್. ಆರ್. ಸೇತೋಮಾಧವರಾಯರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಈ ಪ್ರಕಟಣೆಯ ಕಾರ್ಯದಲ್ಲಿ ನಾನಾರೀತಿಗಳಲ್ಲಿ ನೆರವಾದ ನನ್ನ ಸಹಧರ್ಮಿಣಿ ಶ್ರೀಮತಿ ಪದ್ಮಾಮೂರ್ತಿಯರಿಗೆ ವಂದನೆಗಳು.

ಈ ಪ್ರಥಮ ಸಂಪುಟವಾದ **"ಮಂಗಳಾಚರಣಸಂಧಿ"** ಯನ್ನು ದಿನಾಂಕ 7-4-1985 ರಂದು ಶ್ರೀಮನ್ಮಧ್ವಶಾಸ್ತ್ರಸಂಪನ್ನರಾದ ಪರಮಪೂಜ್ಯ **ಶ್ರೀ ಬಾಳಗಾರು ಶ್ರೀನಿವಾಸಾಚಾರ್ಯರು** ತಮ್ಮ ಅಮೃತ ಹಸ್ತದಿಂದ ಬಿಡುಗಡೆ ಮಾಡಿದರು. ಈ ಸಂಪುಟವು ಪ್ರಕಟವಾದ ಆರು ತಿಂಗಳಿನ ಅವಧಿಯೊಳಗಾಗಿಯೇ ಪ್ರತಿಗಳೆಲ್ಲವೂ ತೀರಿಹೋದವು. ಅನಂತರ ಈ ಸಂಪುಟಕ್ಕೆ ಬೇಡಿಕೆ ಅತ್ಯಧಿಕವಾಗಿ ಬಂದಿದ್ದರಿಂದ, ಪುನರ್ಮುದ್ರಣಕಾರ್ಯ ಅನಿವಾರ್ಯವಾಯಿತು. 500 ಪ್ರತಿಗಳನ್ನು ಮಾತ್ರ ಮುದ್ರಿಸಿ, ಸಹೃದಯ ವಾಚಕರ ಕೈಲಿ ಇಡುವುದಕ್ಕೆ ತುಂಬಾ ಸಂತೋಷವಾಗಿದೆ.

ಈ ಸಂಪುಟವನ್ನು ಅತ್ಯಂತ ಜಾಗ್ರತೆಯಾಗಿ ಹಾಗೂ ಅಂದವಾಗಿ ಪುನರ್ಮುದ್ರಿಸಿಕೊಟ್ಟ ಶ್ರೀ ಪರಿಮಳ ಎಂಟರ್‌ಪ್ರೈಸಸ್‌ನ ಮಾಲೀಕರಾದ ಶ್ರೀಯುತ ಪಿ. ಆರ್. ಎಮ್. ದೇಸಾಯಿಯವರಿಗೂ ಮತ್ತು ಇದಕ್ಕೆ ನೆರವಾದ ಶ್ರೀ ಎಸ್. ಎಲ್. ಗುರುಶಾಂತಮೂರ್ತಿಯವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಇಂತೀ

ಸಜ್ಜನರ ಪಾದಪದ್ಮಾರಾಧಕ

**ಹೆಚ್. ಎಸ್. ಶ್ರೀನಿವಾಸಮೂರ್ತಿ**

(ಪ್ರಕಾಶಕರು)

ಬೆಂಗಳೂರು-೧೯

ದಿನಾಂಕ : ೧೦-೧೧-೮೭

# ಅರ್ಪಣೆ

ಬಾಲ್ಯದಿಂದಲೂ ನನ್ನಲ್ಲಿ ಅಧ್ಯಾತ್ಮಿಕಜ್ಞಾನವನ್ನು ಮೂಡಿಸಿ ಜ್ಞಾನೋಪದೇಶಕರಾಗಿದ್ದು. **ಶ್ರೀ ಹರಿಕಥಾಮೃತಸಾರದ** ರಹಸ್ಯಾರ್ಥ ಪ್ರಮೇಯಗಳನ್ನು ಸಮಗ್ರವಾಗಿ ನನಗೆ ಭೋಧಿಸಿ, ನನ್ನ ಆತ್ಮೋದ್ಧಾರಕ್ಕೆ ಕಾರಣರಾದ ನನ್ನ ತೀರ್ಥರೂಪರು

**ಕೀರ್ತಿಶೇಷ ಶ್ರೀ ಹೆಚ್. ಶಾಮರಾಯರಿಗೆ**

ಈ ಪ್ರಥಮಸಂಪುಟದ ಕುಸುಮವನ್ನು ಅರ್ಪಿಸಲಾಗಿದೆ.

—**ಪ್ರಕಾಶಕರು**

## ಹೊಳೇನರಸೀಪುರದ ಹೆಚ್. ಶಾಮರಾಯರು



( ಅಂತರಾತ್ಮ ವಿಠ್ಠಲಾಂಕಿತ ದಾಸರು )

ಜನನ : ೩-೧೦-೧೯೦೦ ನಿರ್ಯಾಣ : ೨೭-೬-೧೯೭೩

॥ ಶ್ರೀಃ ಹರಿಃ ಓಂ ॥

॥ ಶ್ರೀ ಹನುಮಭೀಮಮಧ್ವಾಂತರ್ಗತ ಶ್ರೀ ರಾಮಕೃಷ್ಣ ವೇದವ್ಯಾಸಾಯ ನಮಃ ॥

॥ ಶ್ರೀ ಜಗನ್ನಾಥವಿಠ್ಠಲೋ ವಿಜಯತೇ ॥

# ಸಂಧಿ ೧

# ಮಂಗಳಾಚರಣ ಸಂಧಿ

**ಮಂಗಳಾಚರಣ :**

**ಹರಿಕಥಾಮೃತಸಾರ ಗುರುಗಳ |**
**ಕರುಣದಿಂದಾಪನಿತು ಪೇಳುವೆ |**
**ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ ಪ ॥**

ಈ ಗ್ರಂಥದ ಕರ್ತೃಗಳಾದ ಶ್ರೀ ಜಗನ್ನಾಥದಾಸವರೇಣ್ಯರು ತಾವು ರಚಿಸಿರುವ ಗ್ರಂಥದ ಹೆಸರನ್ನು ತಿಳಿಸಿ, ಆ ಗ್ರಂಥದ ವಿಷಯದಲ್ಲಿ ಆದರ ಮಾಡಬೇಕೆಂದು ಭಕ್ತರಿಗೆ ಪ್ರಾರ್ಥಿಸಿದ್ದಾರೆ. ಈ ಗ್ರಂಥಕ್ಕೆ ಅಧಿಕಾರಿಗಳನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ :**

**ಹರಿ** = ಪಾಪಪರಿಹಾರಕನಾದ ಪರಮಾತ್ಮನ, **ಕಥಾ** = ಮಹಾಮಹಿಮೋಪೇತವಾದ ವಿಷಯಗಳಿಂದ ಕೂಡಿದ **ಚರಿತ್ರೆ** (ಕಥಾ) ಎಂಬುವ, **ಅಮೃತ** = ಮೋಕ್ಷಕ್ಕೆ ಸಾಧನರೂಪವಾದ (ಅಮೃತದಲ್ಲಿ ತೆಗೆಯಲ್ಪಟ್ಟ) **ಸಾರ** = ಅಧ್ಯಾತ್ಮರೂಪವಾದ ಅನುಸಂಧಾನವೇ ಸಾರವೆನಿಸುವುದು. **ಗುರುಗಳ** = ಸಚ್ಛಾಸ್ತ್ರಗಳನ್ನು ಉಪದೇಶಿಸುವ ಸ್ವೋತ್ತಮರಾದ ಗುರುಗಳ

**ಕರುಣದಿಂದ**=ಕಾರುಣ್ಯವಿಶೇಷದಿಂದ (ಅನುಗ್ರಹಬಲದಿಂದ) **ಅಷನಿತು**= ನನ್ನ ಬುದ್ಧಿಗೆ ತೋರಿದಷ್ಟು, **ಪೇಳುವೆ**=ವಿವರಿಸುತ್ತೇನೆ (ಹೇಳುತ್ತೇನೆ). **ಪರಮ**=ಶ್ರೇಷ್ಠರಾದ (ನಿಷ್ಕಾಮುಕರಾದ) **ಭಗವದ್ಭಕ್ತರು**=ಷಡ್ಗುಣೈಶ್ವರ್ಯಸಂಪನ್ನರಾದ ಪರಮಾತ್ಮನ ಏಕಾಂತ ಭಕ್ತರು **ಇದನ**= ಈ ಗ್ರಂಥವನು, **ಆದರದಿ** = ವಿಶ್ವಾಸಪೂರ್ವಕವಾಗಿ, **ಕೇಳುವುದು** = ಶ್ರವಣ ಮಾಡುವುದು.

**ತಾತ್ಪರ್ಯ :**

ಗ್ರಂಥಾರಂಭದಲ್ಲಿ ಅಪರೋಕ್ಷಜ್ಞಾನಿಗಳಾದ ಶ್ರೀ ಜಗನ್ನಾಥದಾಸ ವರೇಣ್ಯರು ಶಾಸ್ತ್ರಸಂಪ್ರದಾಯವನ್ನನುಸರಿಸಿ, ಮಂಗಳಾಚರಣೆ ಮಾಡಿದ್ದಾರೆ. "ಹರಿಕಥಾಮೃತಸಾರ"ವೆಂಬ ಈ ಗ್ರಂಥವನ್ನು ನೀತಗುರುಗಳ ಕಾರುಣ್ಯಬಲ ಹಾಗೂ ಅನುಗ್ರಹವಿಶೇಷದಿಂದ ನನ್ನ ಬುದ್ಧಿಗೆ ತೋಚಿದಷ್ಟುಮಟ್ಟಿಗೆ ಹೇಳುತ್ತೇನೆ. ಶ್ರೀಹರಿಯಪಾದಾರವಿಂದಗಳಲ್ಲಿ ಅವಿಚ್ಛಿನ್ನ ಭಕ್ತಿಯನ್ನು ಹೊಂದಿರುವ, ಯಾವ ಫಲಾಪೇಕ್ಷೆಯೂ ಇಲ್ಲದ ನಿಷ್ಕಾಮಭಕ್ತರು ಈ ಗ್ರಂಥದಲ್ಲಿ ಪ್ರತಿಪಾದಿತವಾಗಿರುವ ರಹಸ್ಯಪ್ರಮೇಯಗಳನ್ನು ಶ್ರದ್ಧಾಭಕ್ತಿಗಳಿಂದ ಕೇಳುವವರಾಗಲಿ–ಎಂದು ಪ್ರಾರ್ಥಿಸಿಕೊಂಡಿದ್ದಾರೆ.

**ವ್ಯಾಖ್ಯಾನ**

ಒಂದು ಗ್ರಂಥವನ್ನು ರಚಿಸಬೇಕಾದರೆ ನಾಲ್ಕು ಲಕ್ಷಣಗಳಿರಬೇಕೆಂದು ಶಾಸ್ತ್ರಸಂಪ್ರದಾಯವಿರುವುದು. ಈ ನಾಲ್ಕು ಲಕ್ಷಣಗಳಿಗೆ "ಅನುಬಂಧ ಚತುಷ್ಟಯ" ಎಂದು ಹೆಸರು. ಇವುಗಳಿದ್ದರೇ ಅದು ಅತ್ಯುತ್ತಮ ಗ್ರಂಥವೆಂದೆನಿಸುವುದು. ಈ ಅನುಬಂಧಚತುಷ್ಟಯಗಳಾವುವೆಂದರೆ :
(೧) ವಿಷಯ (ಪ್ರತಿಪಾದ್ಯ), (೨) ಪ್ರಯೋಜನ, (೩) ಅಧಿಕಾರಿ ಮತ್ತು (೪) ಸಂಬಂಧ.

ಈ ನಾಲ್ಕು ಲಕ್ಷಣಗಳನ್ನು ಹೇಳದ ಹೊರತು, ಗ್ರಂಥಾರಂಭ ಮಾಡಕೂಡದೆಂದು ಶಾಸ್ತ್ರಕಾರರ ಸಂಪ್ರಾದಾಯವಿರುವುದು.

೧) ಈ ಗ್ರಂಥದಲ್ಲಿ "ಶ್ರೀಹರಿ"ಯೇ ಮುಖ್ಯ ವಿಷಯನು. ಶ್ರೀಹರಿಯೇ ಈ ಗ್ರಂಥಪ್ರತಿಪಾದ್ಯನು.

ಈ ಗ್ರಂಥದ ಶೀರ್ಷಿಕೆ "ಹರಿಕಥಾಮೃತಸಾರ"ವೆಂದು. ಇಲ್ಲಿ "ಹರಿ" ಎಂಬ ಶಬ್ದಕ್ಕೆ ಅನೇಕ ಅರ್ಥಗಳಿವೆ. ಈ ಶಬ್ದವು ಬಹ್ವರ್ಥಗರ್ಭಿತವಾದದ್ದು.

ಸಚ್ಚೇತನರ ಸರ್ವಪಾಪಗಳನ್ನು ಪರಿಹಾರಮಾಡುವುದರಿಂದ ಪರಮಾತ್ಮನಿಗೆ "ಹರಿ" ಎಂದು ಹೆಸರು. ಪಾಪಪರಿಹಾರಕನಾದ ಶ್ರೀಹರಿಯೇ ಬಿಂಬರೂಪೀ ಪರಮಾತ್ಮನು, ಸಮಸ್ತಜೀವರ ಅಂತಃಪ್ರೇರಕನಾಗಿದ್ದಾನೆ, ಶ್ರೀಹರಿಯೇ ಪುರುಷನಾಮಕ ಪರಮಾತ್ಮನು. ಈ ಪ್ರಬಂಧವು ಶ್ರೀಹರಿಯನ್ನೇ ಮುಖ್ಯತ್ವೇನ ಪ್ರತಿಪಾದಿಸುವುದರಿಂದ ಶ್ರೀಹರಿಯೇ ಈ ಗ್ರಂಥಕ್ಕೆ ವಿಷಯನು. "ಹರಿ" ಎಂಬ ಶಬ್ದಕ್ಕೆ ಪಾಪಪರಿಹಾರಕತ್ವ ಎಂದರ್ಥ. ಈ ಧರ್ಮವು ಪರಮಾತ್ಮನ ನೈಜ ಲಕ್ಷಣವಾಗಿದೆ. ಶ್ರೀ ಹರಿಯೇ ಸಮಸ್ತಚೇತನರ ಬಿಂಬನಾದ್ದರಿಂದ, ಬಿಂಬೋಪಾಸನೆಯು ಅತ್ಯಂತಮುಖ್ಯ. ಬಿಂಬೋಪಾಸನೆಯಿಂದ ಅಪರೋಕ್ಷಜ್ಞಾನ — ತದ್ವಾರಾಮೋಕ್ಷಪ್ರಾಪ್ತಿ. ಜೀವನು ಚಿದಾನಂದಾತ್ಮನು. ಆದರೆ ಅನಾದಿಕರ್ಮರೂಪವಾದ ತ್ರಿಗುಣಾತ್ಮಕವಾದ ಲಿಂಗದೇಹದ ದೆಸೆಯಿಂದ ಬದ್ಧನಾಗಿದ್ದಾನೆ. ಪ್ರಾರಬ್ಧಕರ್ಮಜನ್ಯವಾದ ಸಂಚಿತ ಮತ್ತು ಆಗಾಮಿಗಳೆಂಬ ಕರ್ಮಪ್ರವಾಹದ ದೆಸೆಯಿಂದ ಅನೇಕ ಜನ್ಮಗಳನ್ನು ಹೊಂದಿ, ಸಂಸಾರಚಕ್ರವೆಂಬ ವಿಷವ್ಯೂಹದಲ್ಲಿ ಸಿಲುಕಿ ದುಃಖಪಡುತ್ತಾನೆ. ಇದರಿಂದ ಪಾಪಸಂಘಟನೆಯಾಗುತ್ತದೆ. ಬೆಟ್ಟದಂತಿರುವ ಈ ಪಾಪರಾಶಿಯ ಪರಿಹಾರಕನೇ ಶ್ರೀಹರಿಯು. ಪಾಪಪರಿಹಾರವಾಗದೇ ಸ್ವರೂಪ ಅಭಿವ್ಯಕ್ತಿ ಇಲ್ಲ. ಅಂದರೆ, ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷವನ್ನು ಹೊಂದಲಾರ. ಈ ತ್ರಿಗುಣಗಳ ಭವಣೆಗೆ ಲಿಂಗದೇಹವೇ ಮೂಲ. ಲಿಂಗದೇಹದ ನಾಶಕ್ಕೆ (ಲಿಂಗಭಂಗಕ್ಕೆ) ಶ್ರೀಹರಿಯಪ್ರಸಾದದ ಹೊರತು ಗತ್ಯಂತರವಿಲ್ಲ. ಶ್ರೀ ಹರಿಯು ರಮಾಕಾಂತ. ಅವನೇ ಪ್ರಣವಪ್ರತಿಪಾದ್ಯನಾದ ಆದಿನಾರಾಯಣ. ಅತಏವ ಸರ್ವೋತ್ತಮನು. ಇಂತಹ ಸರ್ವೋತ್ತಮನಾದ ಸರ್ವದೋಷವಿದೂರನಾದ ಶ್ರೀ ಹರಿಯ ಸ್ಮರಣೆಯಿಂದಲೇ ಸಕಲದೋಷ ಪರಿಹಾರ–ತನ್ಮೂಲಕ ಮೋಕ್ಷಪ್ರಾಪ್ತಿ. ಶ್ರೀ ಹರಿಯ ಸ್ಮರಣೆಯು ಲಿಂಗ

ದೇಹಭಂಗಕ್ಕೆ ಕಾರಣ. ಜೀವನು ತ್ರಿಗುಣಾತ್ಮಕವಾದ ಈ ಲಿಂಗದೇಹದಿಂದ ಬದ್ಧನಾಗಿದ್ದಾನೆ. ಲಿಂಗದೇಹರೂಪವಾದ ಅವಿದ್ಯಾಪಟಲವು ಹರಿಯುವ ವರೆಗೂ ಸ್ವಸ್ವರೂಪಾನಂದದ ಆವಿರ್ಭಾವವಿಲ್ಲ. ಇದು ಅಪಸರಣವಾಗ ಬೇಕಾದರೆ, ಶ್ರೀಹರಿಯ ಸ್ಮರಣೆ ಮತ್ತು ಆತನ ಪರಮಾನುಗ್ರಹ ಆಗಲೇಬೇಕು. ಶ್ರೀ ಹರಿಸ್ಮರಣೆಯಿಂದ ಕಾಮಾದಿ ಅರಿಷಡ್ವರ್ಗಗಳು ಪರಿಹಾರವಾಗಿ, ತಜ್ಜನ್ಯ ವಾದ ಪಾಪರಾಶಿಯು ನಾಶವಾಗುವುದು. ಶ್ರೀಹರಿನಾಮಸ್ಮರಣೆಯು ಅಜ್ಞಾನವೆಂಬೋ ತೂಲರಾಶಿಗೆ (ಹತ್ತಿಗೆ) ಅಗ್ನಿಸದೃಶವಾಗಿದೆ. ಆದರಿಂದ ಸಕಲಸಾಧನ ಕೈಗೂಡುವುದು.

**ಪ್ರಮಾಣ :**

**"ನಾಮ್ನೋಽಸ್ತಿ ಯಾವತೀ ಶಕ್ತಿಃ ಪಾಪನಿರ್ಹರಣೇ ಹರೇಃ । ತಾವತ್ಕರ್ತುಂ ನ ಶಕ್ನೋತಿ ಪಾತಕಂ ಪಾತಕೀ ಜನಮ್ ॥**

ಇದೇ ಅಭಿಪ್ರಾಯವನ್ನೇ **ಹರಿಯನಾಮಕೆ ಹರಿಯದ ಪಾಪವು ಈ ಧರೆಯೊಳಗಿಲ್ಲವೆಂಬೋದು ಖರೆ** ಎಂದು ಶ್ರೀ ಗೋವಿಂದದಾಸರು ತಮ್ಮ ಕೀರ್ತನೆಯೊಂದರಲ್ಲಿ ಸಮರ್ಥಿಸಿರುತ್ತಾರೆ.

(೨) "ಹರಿ" ಎಂದರೆ "ಶ್ರೇಷ್ಠ"ನೆಂದರ್ಥ. (ಸಿಂಹವಾಚ್ಯ-ಮೃಗರಾಜ) ಅಂದರೆ, ಶ್ರೀಹರಿಯೇ ಸರ್ವೋತ್ತಮದೇವತೆಯು. ಅವನೇ ಈ ಗ್ರಂಥದ ಪ್ರತಿಪಾದ್ಯದೇವತೆ.

(೩) "ಹರಿ" ಎಂಬ ಶಬ್ದವನ್ನು ಸಂಖ್ಯಾಗತಿಯಿಂದಲೂ ವಿವರಿಸ ಬಹುದು. "ಹ"ಕಾರವು ಅವರ್ಗೀಯ ವ್ಯಂಜನಾಕ್ಷರಗಳ ಶ್ರೇಣಿಯಲ್ಲಿ ೮ನೆಯ ಸ್ಥಾನವನ್ನು ಹೊಂದಿದೆ. ಹಾಗೆಯೇ "ರ" ಕಾರವು ೨ನೆಯ ಸ್ಥಾನವನ್ನು ಹೊಂದಿದೆ. ಅಂದರೆ, ಸಂಖ್ಯಾಗತಿಯು ೮೨ ಆಯಿತು. **"ಅಂಕಾನಾಂ ವಾಮತೋ ಗತಿಃ"** ಎಂಬ ನಿಯಮದಂತೆ, ವಾಮಾಂಕಗತಿಯಿಂದ ೨೮ ಎಂದಾಗುವುದು. ಈ ೨೮ ಸಂಖ್ಯಾವಾಚಕವಾದ ಭಗವದ್ರೂಪಗಳು.

| | | | |
|---|---|---|---|
| (೧) | ತತ್ತ್ವಗಳು | ೨೪ | (ಸ್ಥೂಲಶರೀರದಲ್ಲಿ) |
| (೨) | ತ್ರಿಗುಣಗಳು | ೩ | (ಲಿಂಗಶರೀರದಲ್ಲಿ) |
| (೩) | ಬಿಂಬರೂಪೀಪರಮಾತ್ಮ | ೧ | (ಸ್ವರೂಪದೇಹದಲ್ಲಿ) |

ಒಟ್ಟು ೨೮ ರೂಪಗಳಾಯಿತು.

(೪) ಮಾತೃಕನ್ಯಾಸಪದ್ಧತಿಯಿಂದ ಹಂ = ಹಂಸಾಯ ನಮಃ, ರಂ = ರಾಮಾಯನಮಃ ಎಂಬ ವರ್ಣ ವಾಚ್ಯತ್ವದಿಂದ ಅನಂಕಲ್ಯಾಣಗುಣ ಗಣಪರಿಪೂರ್ಣನೂ. ಅತಏವ ಸಮಸ್ತದೋಷದೂರನೂ ಆದ ಪರಮಾತ್ಮನಿಗೆ "ಹಂಸ" ಎಂದು ಹೆಸರು. ಸಜ್ಜನರಿಗೆ ಸಮೀಚೀನಜ್ಞಾನಪ್ರದರೂಪವು. ಜಗತ್ತಿನಲ್ಲಿ ಸರ್ವಕ್ರೀಡಾದಿವಿಶಿಷ್ಟರೂಪವಾದ ವ್ಯಾಪಾರಾದಿಗಳನ್ನು ಸರ್ವತಂತ್ರ ಸ್ವತಂತ್ರನಾಗಿ ಶ್ರೀಹರಿಯೇ ಮಾಡುವುದರಿಂದ "ರಾಮ" ನಾಮಕನು.

**ಕಥಾ :** ಎಂದರೆ, ಸೃಷ್ಟ್ಯಾದಿವ್ಯಾಪಾರರೂಪವಾದ ಪ್ರಸಂಗ ವಿಶೇಷ. ಬಿಂಬರೂಪಿಯಾದ ಶ್ರೀಹರಿಯ ಸಕಲಬಿಂಬಕ್ರಿಯಾಲೀಲಾ ವ್ಯಾಪಾರರೂಪವಾದ ಗುಣಕಥನವೇ "ಕಥಾ". ಪರಮಾತ್ಮನು ಜೀವಸ್ವರೂಪದ ಹೊರಗೆ ಲಿಂಗ, ಅನಿರುದ್ಧ ಮತ್ತು ಸ್ಥೂಲದೇಹಗಳಲ್ಲಿ ಮಾಡುವ ವ್ಯಾಪಾರ ವಿಶೇಷ-ಬ್ರಹಾಂಡದ ಸೃಷ್ಟಿ, ಸ್ಥಿತಿ, ಲಯಾದಿ ವ್ಯಾಪಾರಗಳು-ಶ್ರೀ ರಾಮಕೃಷ್ಣಾದಿ ಅನಂತಾವತಾರದಿಂದ ಮಾಡುವ ಲೀಲಾವಿಶೇಷಗಳು- ಇತ್ಯಾದಿ ಪರಮಾತ್ಮನ ವಿಷಯಕವಾದ "ಗುಣಕಥಾ". ಈ ಲೀಲಾವಿಶಿಷ್ಟವಾದ ಗುಣಕಥನವೇ **ಪ್ರಯೋಜನವು.** ಅಂದರೆ, (೧) ಶ್ರೀಹರಿಯೇ ಈ ಗ್ರಂಥ ಪ್ರತಿಪಾದ್ಯನು (ವಿಷಯನು) ಮತ್ತು (೨) ಆತನ ಗುಣಕಥನವೇ ಪ್ರಯೋ ಜನವು. ಶ್ರೀಹರಿಯಗುಣಕಥನಾರೂಪವಾದ ಶ್ರವಣದಿಂದ ಸುಜ್ಞಾನ ಪ್ರಾಪ್ತಿ. ಆದರಿಂದ, ಶ್ರೀಹರಿಯಲ್ಲಿ ಅವಿಚ್ಛಿನ್ನವಾದ ಭಕ್ತಿ-ತದ್ವಾರಾ ವಿಷಯಗಳಲ್ಲಿ ವಿರಕ್ತಿ-ತನ್ಮೂಲಕ ಸ್ವರೂಪಾನಂದಾವಿರ್ಭಾವರೂಪವಾದ "ಮೋಕ್ಷ"ಪ್ರಾಪ್ತಿ. ಈ ಅನ್ಯೋನ್ಯಸಂಬಂಧವೇ ಜೀವರಿಗೆ **ಪ್ರಯೋಜನವು.**

**"ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ"** ಎಂಬ ಸೂತ್ರವಚನದಂತೆ, ಗುಣಪರಿಪೂರ್ಣನಾದ ಪರಬ್ರಹ್ಮನ "ಜಿಜ್ಞಾಸೆ"ಯಿಂದ "ಅನಂತಜ್ಞಾನಾನಂದಪರಿಪೂರ್ಣನಾದವನೇ ಪರಬ್ರಹ್ಮನು" ಎಂಬ ಸುಜ್ಞಾನವುಂಟಾಗುವುದು. ಇದೇ ಶ್ರೀ ಹರಿಕಥಾ. ತದ್ವಾರಮೋಕ್ಷಪ್ರಾಪ್ತಿ. ಇದೇ ಜೀವರಿಗೆ ಉಂಟಾಗುವ **ಪ್ರಯೋಜನವು.** ಶ್ರೀರಮಾಕಾಂತನಾದ ನಾರಾಯಣನ ಕ್ರೀಡಾವಿಲಾಸವೇ **"ಶ್ರೀಹರಿಕಥಾ".** ಅಸ್ಪೃಶ್ಯರಾದ ತೃಣಾದಿಬ್ರಹ್ಮಾಂತ ಅನಂತ ವಿಧಜೀವರ ಸೃಷ್ಟಿ, **ಸ್ಥಿತಿ** ಮತ್ತು ಬ್ರಹ್ಮಾದಿಗಳಿಗೆ ಮುಕ್ತಿಪ್ರದನಾಗಿ ಸ್ವಪದ ಕೊಡುವುದು ಇವೇಮುಂತಾದ ಲೀಲಾವಿಶೇಷಗಳೇ "ಶ್ರೀ ಹರಿಕಥಾ" ಭಗವದ್ಭಕ್ತರಿಗೆ ಈ ಕಥನ ಶ್ರವಣ, ಧ್ಯಾನ, ಅನುಸಂಧಾದಿಗಳಿಂದ ಇಹಪರದಲ್ಲಿ ಆನಂದೋದ್ರೇಕವಾಗುವುದು.

**ಅಮೃತ**—ಎಂದರೆ, "ಸಾವಿಲ್ಲದಿರುವಿಕೆ" ಅಂದರೆ, ನಿತ್ಯಾನಂದರೂಪ ವಿಶಿಷ್ಟವಾದ **"ಮೋಕ್ಷ"**ವೆಂದರ್ಥ. ಅಂಥಹ ಮೋಕ್ಷಪ್ರಾಪ್ತಿಯೇ ಈ ಗ್ರಂಥದ ಮುಖ್ಯ **ಪ್ರಯೋಜನವು.** ಹರಿಯಗುಣಕಥನವೇ ಅಮೃತದೋಪಾದಿ ಸಾರವು **ಪ್ರಮಾಣ :** ಪುರಾಕಥಾನಾಂ ಭಗವತ್ಕಥಾಸುಧಾಂ ಆಪೀಯ ಕರ್ಣಾಂಜಲಿಭಿರ್ಭವಾಪಹಾಂ । ಅಹೋವಿರಜ್ಯೇತ ವಿನಾನರೇತರವ್"-ಶ್ರೀಮದ್ಭಾಗವತ ವಚನ. ಈ ಅಮೃತರೂಪವಾದ ವಿಷಯವೇ **ಸಂಬಂಧವು.**

**ಸಾರ**—ಎಂದರೆ ಮುಖ್ಯಾಂಶವೆಂದರ್ಥ. ಶ್ರೀ ಹರಿಯೇ ಸಕಲಕಾರ್ಯಗಳನ್ನೂ ಮಾಡಿಸುವ ಮುಖ್ಯಕರ್ತ. ಆತನೇ ಎಲ್ಲದರಲ್ಲಿಯೂ **"ಸಾರಭೂತ"**ನು. **ಪ್ರಮಾಣ :** "ತತ್ರ ತತ್ರ ಸ್ಥಿತೋವಿಷ್ಣುಃ ತತ್ತಚ್ಛಕ್ತೀಃ ಪ್ರಬೋಧಯನ್ ಏಕಏವ ಮಹಾಶಕ್ತಿಃ ಕುರುತೇ ಸರ್ವಮಂಜಸಾ". ಶ್ರೀ ಹರಿಯೇ ಸರ್ವಸಾರಾಖ್ಯನೆಂದು ಶ್ರೀಮದಾಚಾರ್ಯರು ದ್ವಾದಶ ಸ್ತೋತ್ರದಲ್ಲಿ ಎರಡು ಕೈಗಳನ್ನೂ ಎತ್ತಿ ಜಗತ್ತಿಗೆ ಸಾರಿದ್ದಾರೆ. **ಪ್ರಮಾಣ :** "ಕುರುಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದ ವಿನಮ್ರಧಿಯಾ ಸತತಮ್ । ಹರಿರೇವಪರೋ ಹರಿರೇವಗುರುರ್ಹರಿರೇವ ಜಗತ್ಪಿತೃಮಾತೃಗತಿಃ ॥ ಶ್ರೀದ್ವಾದಶಸ್ತೋತ್ರ-ತೃತೀಯೋಽಧ್ಯಾಯ-ಶ್ಲೋಕ (೧). ಶ್ರೀ ಹರಿಯು

ಪ್ರಸ್ತಾಪಶ್ರವಣವೇ ಮೋಕ್ಷಕ್ಕೆ (ಅಮೃತ) ಮುಖ್ಯಸಾಧನ. ಶ್ರೀಹರಿ ಕಥೆಯೇ ಭಗವದ್ಭಕ್ತರಾದ ರಸಜ್ಞರಿಗೆ ಅಮೃತಕ್ಕಿಂತ ರುಚಿಕರ.

**ಪ್ರಮಾಣ :** "ದಧಿಮಧುರಂ ಮಧು ಮಧುರಂ ದ್ರಾಕ್ಷಾಮಧುರಾ ಸುಧಾಪಿ ಮಧುರೈವ । ಮಧುರಾದಪಿ ತನ್ಮಧುರಂ ಮಧುರಾನಾಥಸ್ಯನಾಮ ಯದ್ಗೀತಮ್". ಇದರಂತೆ, ಶ್ರೀಹರಿಯು ರಸಕ್ಕೆರಸರೂಪನಾಗಿದ್ದಾನೆ. ಶ್ರೀಹರಿಯ ಸ್ವರೂಪಪ್ರತಿಪಾದಕವಾದ ವೇದಾದಿಗುಣಕಥನಗಳೇ ಮೋಕ್ಷದಲ್ಲಿನ ಸಾರವೆಂದು ತಿಳಿಯಬೇಕು.

"ಹರಿಕಥಾಮೃತಸಾರ" ಎಂಬ ಶಬ್ದ ಸಮುಚ್ಚಯವು ತಾರತಮ್ಯ ಪ್ರತಿಪಾದಕವಾಗಿಯೂ ಇದೆ. **ಹರಿ** = ಸಕಲಪಾಪಪರಿಹಾರಕನಾದ ಸರ್ವೋತ್ತಮನಾದ ಬಿಂಬರೂಪೀ ಶ್ರೀಹರಿಯು. **ಕಥಾ** = ಆತನ ಮಹಿಮಾವಿಶೇಷಗಳನ್ನು ನಿರಂತರದಲ್ಲಿಯೂ ಧ್ಯಾನಿಸುತ್ತಿರುವ, ಶ್ರೀಹರಿಯ ನಿತ್ಯಾವಿನಿಯೋಗಿಯಾದ, ಈಶಕೋಟಿಪ್ರವಿಷ್ಟರಾದ, ನಿತ್ಯಮುಕ್ತರಾದ, ತ್ರಿಗುಣಾಭಿಮಾನಿಗಳಾದ ಶ್ರೀರಮಾದೇವಿಯರು. **ಅಮೃತ** = ಶ್ರೀಹರಿಯ ಏಕಾಂತ (ನಿರ್ವ್ಯಾಜ) ಭಕ್ತಶ್ರೇಷ್ಠರಾದ, ಜೀವೋತ್ತಮರಾದ, ಸಕಲ ಮುಕ್ತಿಯೋಗ್ಯ ಚೇತನರಿಗೆ ಸತ್ಸಾಧನೆಗಳನ್ನು ಮಾಡಿಸಿ. ತದ್ವಾರಾ ಶ್ರೀಹರಿಯ ಪರಮ ಪ್ರಸಾದಪ್ರಾಪ್ತಿಯಾಗುವಂತೆ ಮಾಡಿಸಿ, ತನ್ಮೂಲಕ ಶ್ರೀಹರಿಯ ಕಾರುಣ್ಯ ಮಹಿಮಾವಿಶೇಷದಿಂದ ಮೋಕ್ಷವನ್ನು ಕೊಡಿಸುವ ಶ್ರೀವಾಯುದೇವರು. **ಸಾರ** = ಇತರ ತತ್ವಾಭಿಮಾನಿ ದೇವತೆಗಳು, ಈ ರೀತಿಯಲ್ಲಿ ತಾರತಮ್ಯಾನುಸಾರಾಜ್ಞಾನಪೂರ್ವಕ ಅನುಸಂಧಾನಕ್ರಮ.

ಹೀಗೆ, ಶಾಸ್ತ್ರಸಂಪ್ರದಾಯವನ್ನು ಅರಿತ, ಅಪರೋಕ್ಷಜ್ಞಾನಿಗಳಾದ ಶ್ರೀಜಗನ್ನಾಥದಾಸವರೇಣ್ಯರು ಇಷ್ಟಪ್ರಾಪ್ತಿಗಾಗಿಯೂ, ಹಾಗೂ ಅನಿಷ್ಟ ನಿವೃತ್ತಿಗಾಗಿಯೂ ಮಂಗಳಾಚರಣೆಯನ್ನು **"ಹರಿಕಥಾಮೃತಸಾರ"**—ಎಂಬ ಶಬ್ದಪ್ರಯೋಗದಿಂದ ಮಾಡಿರುತ್ತಾರೆ. ಈ ಗ್ರಂಥದಲ್ಲಿ (೧) ಶ್ರೀಹರಿಯೇ ವಿಷಯನು. (೨) ಆತನ ಪರಿಪೂರ್ಣವಾದ ಅನಂತಕಲ್ಯಾಣಗುಣಗಳಕಥನ ರೂಪವಾದ ಕಥೆಯೇ **ಪ್ರಯೋಜನವು.** (೩) ಅಮೃತವು **ಸಂಬಂಧವು**

ಮತ್ತು (೪) ಸಾರವು ಅಧಿಕಾರಿಯು. "ಅತ್ರ ವಿಷಯೋ ಹರಿಃ । ಕಥಾ ಪ್ರಯೋಜನಮ್ । ಅಮೃತಮೇವ ಸಂಬಂಧಃ । ಸಾರೋಧಿಕಾರೀ ।" **(ತಾಮ್ರಪರ್ಣೀಯ ವ್ಯಾಖ್ಯಾನ)** ಈ ರೀತಿಯಲ್ಲಿ ದಾಸರಾಯರು ಪ್ರತಿ ಸಂಧಿಯ ಆರಂಭದಲ್ಲಿಯೂ ಪಠಿಸುವವರ ಸೌಕರ್ಯಕ್ಕಾಗಿ ಅರ್ಧಪದ್ಯಾತ್ಮಕವಾದ ಪಲ್ಲವಿಯಲ್ಲಿಯೇ ಮಂಗಳಾಚರಣೆಮಾಡಿ, ಸಾಧನ ಚತುಷ್ಟಯನ್ನು ಪ್ರತಿಪಾದಿಸಿರುತ್ತಾರೆ. ಇಲ್ಲಿ ವಿಷಯ-ಪ್ರಯೋಜನ-ಸಂಬಂಧ-ಅಧಿಕಾರಿ ಎಂಬ ಈ ನಾಲ್ಕು ಅನುಬಂಧಗಳಿಗೆ ಅನ್ಯೋನ್ಯಯೋಗವಿದೆ. ಹೇಗೆಂದರೆ :- (೧) ಶ್ರೀಹರಿಗೂ ಮತ್ತು ಕಥೆಗೂ ಪ್ರತಿಪಾದ್ಯ-ಪ್ರತಿಪಾದಕವೆಂಬ ಸಂಬಂಧ (ಹೇಳಲ್ಪಡುವುದು-ಹೇಳುವುದು). (೨) ಕಥೆಗೂ ಮತ್ತು ಅಮೃತಕ್ಕೂ ಸಂಬಂಧ. ಇದು ಪ್ರಯೋಜ್ಯ-ಪ್ರಯೋಜಕ ಸಂಬಂಧವು (೩) ಅಮೃತಕ್ಕೂ ಮತ್ತು ಸಾರಕ್ಕೂ ಗಮ್ಯಗಂತೃಸಂಬಂಧ (ಹೊಂದಲ್ಪಡುವುದು-ಹೊಂದುವುದು.) (೪) ಸಾರಕ್ಕೂ ಮತ್ತು ಶ್ರೀಹರಿಗೂ ದಾಸ-ಈಶ ಸಂಬಂಧ ಮತ್ತು (೫)ಕಥೆಗೂ ಮತ್ತು ಅಧಿಕಾರಿಗೂ ವಾಚ್ಯವಕ್ತೃ ಸಂಬಂಧ. ಹೀಗೆ ಅನ್ಯೋನ್ಯ ಸಂಬಂಧವುಳ್ಳ "ಅನುಬಂಧಚತುಷ್ಟಯ" ವಿರುವುದರಿಂದ, ಈ ಗ್ರಂಥವು ಆರಂಭಣೀಯವು. (ಆರಂಭಿಸಲು ಯೋಗ್ಯವಾದದ್ದು.)

**ಗುರುಗಳ** = ಇಲ್ಲಿ ತಾರತಮ್ಯೋಕ್ತವಾಗಿ ಗುರುಪರಂಪರೆಯನ್ನು ತೆಗೆದುಕೊಳ್ಳಬೇಕು. (೧) ಸ್ವರೂಪೋದ್ಧಾರಕರಾದ ನೀತಗುರುಗಳು. ಶ್ರೀ ಜಗನ್ನಾಥದಾಸವರ್ಯರ ನೀತಗುರುಗಳೇ ಶ್ರೀಗಣೇಶಾಂಶರೆಂದು ಖ್ಯಾತನಾಮರಾದ "ಶ್ರೀ ಭಾಗಣ್ಣದಾಸರು" (ಶ್ರೀಗೋಪಾಲದಾಸರು). (೨) ಅವರ ಪರಮಗುರುಗಳಾದ ಭೃಗಂಶಸಂಭೂತರಾದ "ಶ್ರೀವಿಜಯದಾಸವರ್ಯರು." (೩) ಸಾಧನಭೂಯಿಷ್ಠವಾದ ಈ ಸ್ಥೂಲಶರೀರದಲ್ಲಿದ್ದು ಸತ್ಸಾಧನೆಗಳನ್ನು ಮಾಡಿಸುತ್ತಿರುವ "ತತ್ವಾಭಿಮಾನಿ ದೇವತೆಗಳು". (೪) ಈ ಗ್ರಂಥರತ್ನವು ಶ್ರೀ ದಾಸರಾಯರ ಮುಖಾರವಿಂದದಿಂದ ಹೊರಬೀಳುತ್ತಿರುವಾಗ "ನಾನು ಮುಂದು ತಾನು ಮುಂದು" ಎಂದು ದಾಸರಾಯರಲ್ಲಿ ಪರಮಾನುಗ್ರಹವನ್ನು ಮಾಡಿದ "ವರ್ಣಾಭಿಮಾನಿ ದೇವತೆಗಳು". (೫) ಇವರೆಲ್ಲರಿಗೂ ನಿಯಾಮಕರಾದ ಶ್ರೀ ವಾಯುದೇವರ ಅವತಾರಭೂತರಾದ ಶ್ರೀಮದಾ

ಚಾರ್ಯರು. (೬) ಇವರೆಲ್ಲರನ್ನೂ ನಿಯಾಮಿಸುತ್ತಿರುವ, ಸರ್ವಪ್ರೇರಕನಾದ, ಸರ್ವನಿಯಾಮಕನಾದ ಬಿಂಬರೂಪೀ ಶ್ರೀಹರಿಯೇ ಎಲ್ಲಾ ಚೇತನರಿಗೂ ಮುಖ್ಯಗುರುವು. **ಕರುಣದಿಂದ** = ಗುರುಗಳ ಕಾರುಣ್ಯವಿಶೇಷ ಮತ್ತು ಅನುಗ್ರಹಬಲದಿಂದ ಎಂದರ್ಥ. ತಮ್ಮ **ಹೇಳುವಿಕೆಯ** ಕರ್ತೃತ್ವವು ಬಹು ಪರಾಧೀನವಾದುದೆಂದು ದಾಸರಾಯರು ಈ ಪದಪ್ರಯೋಗದಿಂದ ಸೂಚಿಸುತ್ತಾರೆ. ಗುರುವಿನ ಅನುಗ್ರಹ ಬಲವಿಲ್ಲದೆ ಶ್ರೀಹರಿಯ ಪ್ರಸಾದವು ಉಂಟಾಗುವುದಿಲ್ಲ. ಇದೇ ಅಭಿಪ್ರಾಯವನ್ನೇ ಶ್ರೀ ಸುಮಧ್ವವಿಜಯಕಾರರು ಪ್ರತಿಪಾದಿಸಿರುತ್ತಾರೆ.

"ಮುಕುಂದಭಕ್ತ್ಯೈ ಗುರುಭಕ್ತಿಜಾಯೈ ಸತಾಂ ಪ್ರಸತ್ತ್ಯೈ ಚ ನಿರಂತರಾಯೈ। ಗರೀಯಸೀಂ ವಿಶ್ವಗುರೋರ್ವಿಶುದ್ಧಾಂ ವಕ್ಷ್ಯಾಮಿ ವಾಯೋರವತಾರಲೀಲಾಮ್ ॥" – (ಶ್ರೀ ಸುಮಧ್ವವಿಜಯ–ಒಂದನೆಯ ಸರ್ಗ-ಶ್ಲೋಕ-೫.)

**ಅಪನಿತು**–ನನ್ನ ಬುದ್ಧಿಗೆ ತೋಚಿದಷ್ಟು.

**ಪ್ರಮಾಣ :** "ಆಚಕ್ಷ್ವ ಆತ್ಮಾವಗಮೋತ್ರ ಯಾವಾನ್ । ನಭಃ ಪತಂತ್ಯಾತ್ಮ ಸಮಂ ಪತತ್ರಿಣಃ । ತಥಾ ಸಮಂ **ವಿಷ್ಣುಗತಂ ವಿಪಶ್ಚಿತಃ** ॥" ಶ್ರೀಮದ್ಭಾಗವತವಚನ. ಅಂದರೆ, ಪಕ್ಷಿಗಳು ತಮ್ಮ ಯೋಗ್ಯತಾನುಸಾರ (ಯಥಾಶಕ್ತಿ) ಅಂತರಿಕ್ಷದಲ್ಲಿ ಹಾರುವುವು. ಹಾಗೆಯೇ ತಮ್ಮ ತಮ್ಮ ಜ್ಞಾನ ತಾರತಮ್ಯಾನುಸಾರ ಪರಮಾತ್ಮನ ಗುಣಾತಿಶಯಗಳನ್ನು ವರ್ಣಿಸುವುದು ಎಂದರ್ಥ. ಯಥಾಮತಿ ಹೇಳುತ್ತೇನೆ. **ಪರಮಭಗವದ್ಭಕ್ತರು**-ಪರಮ ಎಂದರೆ ಶ್ರೇಷ್ಠರಾದ, (ಭಕ್ತಿಯು ಸಹಜವಾಗಿರಬೇಕು.) ಪರಮಾತ್ಮನಿಂದ ಯಾವ ಇಷ್ಟಾರ್ಥಗಳನ್ನೂ ಬಯಸದೇ ನಿಷ್ಕಾಮರಾಗಿರಬೇಕು. ಇಂತಹ ಸ್ವಾಭಾವಿಕ ಹಾಗೂ ನಿಷ್ಕಾಮಭಕ್ತಿಯುಳ್ಳವರೇ ಶ್ರೇಷ್ಠ(ಪರಮ)ರು ಎಂದರ್ಥ.

**ಪ್ರಮಾಣ :** "ನಾನ್ಯಥಾ ಹ್ಯಾವಯೋರರ್ಥೋ ರಾಜಸೇವಕಯೋರಿವ" ಅಂದರೆ, ಪರಸ್ಪರ ಫಲಾಪೇಕ್ಷೆಯುಳ್ಳ ರಾಜ ಮತ್ತು ಆಳಿನ ಹಾಗೆ,

ಕಾರ್ಯಸಾಧನಾಪೇಕ್ಷೆಯಿಲ್ಲದೇ ಎಂದರ್ಥ. ಆಕಾಶದಲ್ಲಿ ಮೋಡವಿದ್ದರೆ, ನವಿಲುಗಳು ಅದನ್ನು ನೋಡಿ ಸ್ವಾಭಾವಿಕವಾಗಿ ನೃತ್ಯಮಾಡುವುವು. ಇಂತಹ ನೃತ್ಯವು ನವಿಲುಗಳಿಗೆ ಸಹಜ ಧರ್ಮ, ಅದರಂತೆಯೇ ಶ್ರೇಷ್ಠರಾದ ಭಕ್ತರು ಪರಮಾತ್ಮನಲ್ಲಿ ಮಾಡುವ ಭಕ್ತಿಯು ಅತ್ಯಂತ ಸಹಜವಾದದ್ದು. ಅದರಲ್ಲಿ ಯಾವ ಫಲಾಪೇಕ್ಷೆಯೂ ಇಲ್ಲ. ಷಡ್ಗುಣೈಶ್ವರ್ಯಸಂಪನ್ನನಾದ ಪರಮಾತ್ಮನ (ಭಗವಂತನ) ಏಕಾಂತ ಭಕ್ತರು ಮಾಡುವ ಭಕ್ತಿಯು ಅವಿಚ್ಛಿನ್ನವಾದದ್ದು. ನೈಜಭಕ್ತಿಯ ಲಕ್ಷಣವನ್ನು ಶಾಸ್ತ್ರಕಾರರು ಈ ರೀತಿ ಪರಿಷ್ಕಾರ ಮಾಡಿದ್ದಾರೆ. ಪ್ರಮಾಣ : "ನಿರವಧಿಕಾನಂತಾನವದ್ಯ ಕಲ್ಯಾಣಗುಣತ್ವ ಜ್ಞಾನಪೂರ್ವಕ ಸ್ವಾತ್ಮಾತ್ಮೀಯಸಮಸ್ತವಸ್ತುಭ್ಯೋಽನೇಕ ಗುಣಾಧಿಕಾಂತರಾಯಸಹಸ್ರೇಣಾಪ್ಯಪ್ರತಿಬದ್ಧನಿರಂತರ ಪ್ರೇಮಪ್ರವಾಹರೂಪ ಭಕ್ತಿಃ"। –ಶ್ರೀ ಟೀಕಾಕೃತ್ಪಾದರ ವಚನ. ಹೀಗೆ, ಮಹಾತ್ಮಜ್ಞಾನಪೂರ್ವಕವಾದ ಅವಿಚ್ಛಿನ್ನ ಪ್ರೇಮ ಪ್ರವಾಹ ರೂಪವಾದ ಭಕ್ತಿಯನ್ನುಳ್ಳವರೇ **"ಪರಮ ಭಗವದ್ಭಕ್ತರು"** ಇಂತಹ ಭಕ್ತರೇ ಈ ಗ್ರಂಥಾಭ್ಯಾಸಕ್ಕೆ ನಿಜವಾದ ಅಧಿಕಾರಿಗಳು—ಎಂದು ದಾಸರಾಯರ ಅಭಿಪ್ರಾಯ. **"ಪರಮ"** ಎಂಬ ಶಬ್ದಕ್ಕೆ **ಪರಾ** = ದೇಶಕಾಲಗುಣಗಳಿಂದ ನಾಶರಹಿತವಾದ ; **ಮಾ** = ಜ್ಞಾನವುಳ್ಳವರು, ಅಂದರೆ, ಎಂತಹ ಪರಿಸ್ಥಿತಿಯಲ್ಲಿಯೂ ಅವರ ಭಕ್ತಿಯು ಕುಂದುವುದಿಲ್ಲ. ಅವಿಚ್ಛಿನ್ನವಾಗಿಯೂ ಮತ್ತು ನಿರಂತರವಾಗಿಯೂ ಇರುವುದು. **ಭಗಃ** ಎಂದರೆ, ಪೂರ್ಣವಾದ ಐಶ್ವರ್ಯ, ವೀರ್ಯ, ಯಶಸ್ಸು, ಶ್ರೀ ಜ್ಞಾನ ಮತ್ತು ವಿಜ್ಞಾನ ಎಂಬ ಈ ಆರುವಿಧವಾದ ಐಶ್ವರ್ಯವಿಶೇಷವೇ ಷಡ್ಗುಣೈಶ್ವರ್ಯಗಳು. ಇವುಗಳನ್ನು ಪೂರ್ಣವಾಗಿ, (ಸಮಗ್ರ) ಉಳ್ಳವನೇ **"ಭಗವಂತನು"** ಪ್ರಮಾಣ **"ಸಮಗ್ರೈಶ್ವರ್ಯಂ, ಸಮಗ್ರವೀರ್ಯಂ, ಸಮಗ್ರಂ ಯಶಃ, ಸಮಗ್ರಾಶ್ರೀಃ, ಸಮಗ್ರಂ ಜ್ಞಾನಂ, ಸಮಗ್ರಂ ವಿಜ್ಞಾನಂ ಸಮಗ್ರಷಡೈಶ್ವರ್ಯಂ ಆಸ್ಯಾಸ್ತೀತಿ ಭಗವಾನ್."**—ಎಂಬಂತೆ ಭಗವಂತನ ಏಕಾಂತಭಕ್ತರು ಎಂದರ್ಥ. ಇಂತಹ ಪರಮಭಗವದ್ಭಕ್ತರು ಉತ್ಕೃಷ್ಟ (ಪರಮ)ವಾದ "ಶ್ರೀ ಹರಿಸರ್ವೋತ್ತಮ ಮತ್ತು ಶ್ರೀವಾಯು ಜೀವೋತ್ತಮ" ಎಂಬ ಸಮೀಚೀನಜ್ಞಾನವುಳ್ಳವರು ಎಂದು ಇನ್ನೊಂದರ್ಥ. **ಇದನು ಆದರದಿ**—ಮೋಕ್ಷಪ್ರದವಾದ ಈ ಗ್ರಂಥವನ್ನು ಕೇವಲ ಶ್ರದ್ಧಾ

ಭಕ್ತ್ಯಾದಿಗಳಿಂದ ಕೇಳಬೇಕು. ಶ್ರವಣಕಾರ್ಯವು ವಿಶ್ವಾಸಾತಿಶಯ ಹಾಗೂ ಮುಹೋಲ್ಲಾಸಾದಿಗಳಿಂದ ಕೂಡಿರಬೇಕು. ಗ್ರಂಥಶ್ರವಣದಿಂದ ವಿಶ್ವಾಸವು ಹೆಚ್ಚುವುದು ಮತ್ತು ಮನಸ್ಸಿಗೆ ಅತೀವ ಉಲ್ಲಾಸ ಮತ್ತು ಆನಂದವುಂಟಾಗುವುದು. "ಈ ಗ್ರಂಥಶ್ರವಣದಿಂದ ಮೋಕ್ಷವುಂಟಾಗುವುದು" ಎಂಬ ದೃಢ ನಿಶ್ಚಯರೂಪವಾದ ಆದರದಿಂದ ಕೇಳಬೇಕೆಂದು ದಾಸರಾಯರು ಅಧಿಕಾರಿಗಳಾದ ಪರಮಭಗವದ್ಭಕ್ತರಲ್ಲಿ ಪ್ರಾರ್ಥಿಸುತ್ತಾರೆ. **ಪ್ರಮಾಣ : "ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ ಸನ್ಯಾಸಯೋಗಾದ್ಯತಯಃ ಶುದ್ಧಸತ್ವಾಃ । ತೇ ಬ್ರಹ್ಮಲೋಕೇಷು ಪರಾಂತಕಾಲೇ ಪರಾಮೃತಾತ್ ಪರಿಮುಚ್ಯಂತಿ ಸರ್ವ" —ಅಥರ್ವಣೋಪನಿಷತ್ತಿನವಚನ.** ಅಂದರೆ, ವೇದಾಂತವಿಜ್ಞಾನದಿಂದ ಪರಮಾತ್ಮನ ವಿಷಯದಲ್ಲಿ ನಿಶ್ಚಯಜ್ಞಾನವುಳ್ಳವರೂ, ಸನ್ಯಾಸಯೋಗದಿಂದ ಯತಿಗಳೂ, ಶುದ್ಧಸಾತ್ವಿಕರೂ ಆದ ಅಧಿಕಾರಿಗಳೆಲ್ಲರೂ ಬ್ರಹ್ಮಲೋಕದಲ್ಲಿ ಪರ್ಯಾಂತಕಾಲದಲ್ಲಿ ಪರಮಾತ್ಮನ ಮಹಾಪ್ರಸಾದದಿಂದ ಮುಕ್ತರಾಗುತ್ತಾರೆ-ಎಂದು **ಅಥರ್ವಣಉಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ.** ಇಂತಹ ಸವಿಾಚೀನವಾದ ಜ್ಞಾನವು ಈ ಗ್ರಂಥದ ಶ್ರವಣ ಮತ್ತು ಅಧ್ಯಯನಗಳಿಂದ ಉಂಟಾಗುವುದು. ಜ್ಞಾನೋದಯದಲ್ಲಿ ಶ್ರವಣವೇ ಪ್ರಥಮಸೋಪಾನವು (ಮೊದಲನೆಯಮೆಟ್ಟಿಲು). ಶ್ರವಣದಿಂದ ಮನನ-ಮನನದಿಂದ ಧ್ಯಾನ-ಧ್ಯಾನದಿಂದ ಭಕ್ತಿ-ಭಕ್ತಿಯಿಂದ ಅಪರೋಕ್ಷಜ್ಞಾನ-ಅಪರೋಕ್ಷಜ್ಞಾನದಿಂದ ಮೋಕ್ಷ-ಹೀಗೆ ಹಂತ ಹಂತವಾಗಿ ಮೋಕ್ಷವು ಸಿದ್ಧಿಸುವುದು. ಈ ಕಾರಣದಿಂದಲೇ "ಇದನು ಆದರದಿ ಕೇಳುವುದು"–ಎಂದು ದಾಸರಾಯರು ಪ್ರತಿಪಾದಿಸಿದ್ದಾರೆ. **ಪ್ರಮಾಣ : ಶ್ರವಣಂ ಮನನಂ ಚೈವ ಧ್ಯಾನಂ ಭಕ್ತಿಃ ತಥೈವಚ । ಸಾಧನಂ ಜ್ಞಾನಸಂಪತ್ತೌ ಪಧಾನಂ ನಾನ್ಯದಿಷ್ಯತೆ ಇತಿ ಶ್ರೀಮದ್ಭಾಷ್ಯವಚನ.**

ಅಧಿಕಾರಿಗಳಲ್ಲಿ ಮೂರು ಪ್ರಭೇದಗಳು : (೧) ಮಂದಾಧಿಕಾರಿಗಳು (೨) ಮಧ್ಯಮಾಧಿಕಾರಿಗಳು ಮತ್ತು (೩) ಉತ್ತಮಾಧಿಕಾರಿಗಳು ಎಂದು. (೧) ಮಾನುಷೋತ್ತಮರು ಮಂದಾಧಿಕಾರಗಳು ವಿಷ್ಣುವಿನಲ್ಲಿ ಭಕ್ತಿಯುಳ್ಳವರಾಗಿ ಅಧ್ಯಯನಮಾಡುವವರು. (೨) ಋಷಿ ಮತ್ತು ಗಂಧರ್ವರು ಮಧ್ಯಮಾಧಿಕಾರಿಗಳು. ಶಮದಮಾದಿ ಗುಣಗಳಿಂದ ಕೂಡಿದವರಾಗಿ, ವಿಷ್ಣುಭಕ್ತಿಪೂರ್ವಕ

ಅಧ್ಯಯನ ಸಂಪತ್ತುಳ್ಳ ವರ್ಗ. (೩) ದೇವತೆಗಳು ಉತ್ತಮಾಧಿಕಾರಿಗಳು. ಚತುರ್ಮುಖಬ್ರಹ್ಮನನ್ನು ಆರಂಭಿಸಿಕೊಂಡು, ತೃಣಾಂತವಾದ ಜಗತ್ತೆಲ್ಲವೂ ಅಸಾರವೆಂದೂ, ಆಯಾಪದವಿಗಳು ಕೇವಲ ಅನಿತ್ಯವೆಂದೂ ತಿಳಿಯುತ್ತಾ, ತಜ್ಜನ್ಯವಾದ ವೈರಾಗ್ಯವುಳ್ಳವರಾಗಿ, ಸಮಸ್ತ ಕರ್ಮಫಲಗಳನ್ನೂ ಪರಿತ್ಯಜಿಸಿ, ಕೇವಲ ವಿಷ್ಣುವಿನಲ್ಲಿಯೇ ಸರ್ವೋತ್ತಮತ್ವಜ್ಞಾನದಿಂದ ಸಹಜವಾದಭಕ್ತಿಯನ್ನು ಮಾಡುತ್ತಾ, ವಿಷ್ಣುಪಾದೈಕಸಂಶ್ರಿತನಾಗಿರುವವನೇ ಉತ್ತಮಾಧಿಕಾರಿಯು.

**ಪ್ರಮಾಣಃ "ಭಕ್ತಿಮಾನ್ ಪರಮೋ ವಿಷ್ಣೌ, ಯಸ್ತ್ವಧ್ಯಯನವಾನ್ನರಃ । ಅಧಮಃ ಶಮಾದಿ ಸಂಯುಕ್ತೋ ಮಧ್ಯಮಃ ಸಮುದಾಹೃತಃ ॥ ಆಬ್ರಹ್ಮಸ್ತಂಬಪರ್ಯಂತಂ ಅಸಾರಂಚಾಪ್ಯ ನಿತ್ಯಕಮ್ । ವಿಜ್ಞಾನಜಾತವೈರಾಗ್ಯೋ ವಿಷ್ಣುಪಾದೈಕಸಂಶ್ರಯಃ ॥ ಸ ಉತ್ತಮಾಧಿಕಾರೀ ಸ್ಯಾತ್ ಸನ್ಯಸ್ತಾಖಿಲ ಕರ್ಮವಾನ್" –ಶ್ರೀಮದ್ಭಾಷ್ಯವಚನ.**

ಹೀಗೆ ಗುರುಗಳ ಮುಖಕಮಲದಿಂದ ಸ್ತೋತ್ರಮಾಡುವ ಈ ಹರಿಕಥಾಮೃತವನ್ನು ಪರಮಭಕ್ತರಾದವರು ಪಾನಮಾಡಿದರೆ, ಅವರು ಸಂಸಾರಕ್ಲೇಶಗಳಿಂದ ದೂರರಾಗಿ, ನಿತ್ಯವಾದ ಸ್ವರೂಪಸುಖಾಭಿವ್ಯಕ್ತಿಯನ್ನು ಪಡೆಯುವರು; ಅಂದರೆ, ಅಮೃತವೆಂಬ ಮುಕ್ತಿಯನ್ನು ಹೊಂದುವರು. ಕೇವಲೋತ್ತಮರಾದ ಫಲಾಪೇಕ್ಷಾರಹಿತರಾದ ಭಕ್ತರು ಭಕ್ತಿಪುರಸ್ಸರವಾಗಿ, ಪರಮಾದರದಿಂದ, ಆಸಕ್ತರಾಗಿ ಶ್ರವಣಮಾಡಬೇಕೆಂದು ದಾಸರಾಯರು ಉಪದೇಶಿಸಿದ್ದಾರೆ.

**ಪ್ರಮಾಣ : "ಯೇ ಸ್ಮರಂತಿ ಸದಾವಿಷ್ಣುಂ ಶಂಖಚಕ್ರಗಧಾಧರಂ। ಸರ್ವಪಾಪವಿನಿರ್ಮುಕ್ತಾಃ ಪರಂಬ್ರಹ್ಮ ವಿಶಂತಿತೇ"**

❋

# ಮಂಗಳಾಚರಣ ಸಂಧಿ

## ಪದ್ಯ (೧)

**ಶ್ರೀರಮಣಿಕರಕಮಲ ಪೂಜಿತ ।**
**ಚಾರುಚರಣ ಸರೋಜ ಬ್ರಹ್ಮ ಸ ।**
**ಮೀರವಾಣಿ ಫಣೀಂದ್ರ ವೀಂದ್ರ ಭವೇಂದ್ರ ಮುಖವಿನುತ ॥**
**ನೀರಜಭವಾಂಡೋದಯ ಸ್ಥಿತಿ ।**
**ಕಾರಣನೆ ಕೈವಲ್ಯದಾಯಕ ।**
**ನಾರಸಿಂಹನೆ ನಮಿಪೆ ಕರುಣಿಪುದೆಮಗೆ ಮಂಗಳವಾ ॥೧॥**

ಈ ಪದ್ಯದಿಂದ ಗ್ರಂಥಾರಂಭದಲ್ಲಿ ಶ್ರೀ ಜಗನ್ನಾಥದಾಸವರೇಣ್ಯರು ತಮ್ಮ ಇಷ್ಟದೇವತೆಯೂ, ಕುಲದೈವವೂ. ಗ್ರಂಥಪ್ರತಿಪಾದ್ಯ ದೇವತೆಯೂ ಆದ ಗುಣಪೂರ್ಣನಾದ ಶ್ರೀಲಕ್ಷ್ಮೀನರಸಿಂಹದೇವರನ್ನು ವಂದನೆಮಾಡಿ, ತಾರತಮ್ಯೋಕ್ತ ಪ್ರಾರ್ಥನೆ ಮಾಡುತ್ತಾರೆ. ಪೂರ್ವೋಕ್ತ ಅರ್ಥಪದ್ಯಾತ್ಮಕವಾದ ಪಲ್ಲವಿಯಲ್ಲಿ ಪರಮತನಿರಾಕರಣಪೂರ್ವಕ ಸ್ವಮತಸ್ಥಾಪನ ಎಂಬ ಸಂಪ್ರದಾಯದಂತೆ, ಸಂಕ್ಷಿಪ್ತವಾಗಿ **"ಪ್ರತಿಜ್ಞಾವಾಕ್ಯ"**ವೆಂದು ಸಂಧಿಸೂಚನೆಯ ರೂಪದಲ್ಲಿ ತಿಳಿಸಿ, **ಸಂಕ್ಷೇಪವಿಸ್ತಾರಾಭ್ಯಾಂ ಚ ಕಥಯಂತಿ ಮನೀಷಿಣಃ"** ಎಂಬ ನ್ಯಾಯಾನುಸಾರ "ನಾಂದೀಸಂಧಿ" ಎಂಬ ಮಂಗಳಾಚರಣಸಂಧಿಯನ್ನು ಉಪಕ್ರಮಮಾಡುತ್ತಾರೆ.

**ಪ್ರತಿಪದಾರ್ಥ :** ಶ್ರೀ= ಕಾಂತಿಸಂಪನ್ನಳಾದ. ಐಶ್ವರ್ಯಪೂರ್ಣಳಾದ-**"ಶ್ರೀ"** ಎಂಬ ಅಭಿದಾನ-ಸತ್ವಗುಣಾಭಿಮಾನಿಯಾದ ಶ್ರೀ ರಮಾದೇವಿಯರ. **ರಮಣಿ**= ಶ್ರೀಮನ್ನಾರಾಯಣನ ಪತ್ನಿಯರಾದ, **ಕರಕಮಲ**= ಕಮಲದಂತೆ ಕೋಮಲವಾದ ಕೈಗಳಿಂದ **ಪೂಜಿತ**=ಪೂಜಿಸಲ್ಪಟ್ಟ **ಚಾರು**= ಮನೋಹರವಾದ **ಚರಣಸರೋಜ**=ಪಾದಕಮಲಗಳುಳ್ಳ ; ಅಂದರೆ. **ಶ್ರೀ** ನಾಮಕಳಾದ ರಮಾದೇವಿಯರ ಕರಕಮಲದಿಂದ **ಪೂಜಿತಪಾದಪದ್ಮ**ನಾದ

**ಬ್ರಹ್ಮ** = ಚತುರ್ಮುಖಬ್ರಹ್ಮದೇರು. **ಸಮೀರ** = ಪ್ರಧಾನವಾಯು ದೇವರು. **ವಾಣಿ**= ಶ್ರೀ ಸರಸ್ವತೀ ದೇವಿಯರು—ತಥಾ ಶ್ರೀಭಾರತೀದೇವಿ ಗ್ರಾಹ್ಯ. **ಫಣೀಂದ್ರ**= ಸರ್ಪಶ್ರೇಷ್ಠರಾದ ಶ್ರೀ ಶೇಷದೇವರು. **ವೀಂದ್ರ** ಪಕ್ಷಿಶ್ರೇಷ್ಠರಾದ ಶ್ರೀಗರುಡದೇವರು, **ಭವ** = ಶ್ರೀ ರುದ್ರದೇವರು. **ಇಂದ್ರ**= ಇಂದ್ರದೇವರು **ಮುಖ**=ಇವರೇ ಮೊದಲಾದ ದೇವತಾಸಮೂಹದಿಂದ **ವಿನುತ**= ಸ್ತುತ್ಯನಾದ, (ಸಂಸ್ತುತನಾದ) **ನೀರಜ**=ನೀರಿನಲ್ಲಿ **ಉತ್ಪತ್ತಿ**ಯಾದ **ಕಮಲ**ದಲ್ಲಿ **ಭವಾಂಡ**= ಉತ್ಪನ್ನರಾದ ಬ್ರಹ್ಮದೇವರದೇಹವೇ ಬ್ರಹ್ಮಾಂಡ ವೆನಿಸುವುದು. **ಉದಯ**= ಇಂತಹ ಬ್ರಹಾಂಡದ ಸೃಷ್ಟಿಗೂ **ಸ್ಥಿತಿ**= ಅದನ್ನು ಪಾಲನೆಮಾಡುವುದು (ರಕ್ಷಣಾಕಾರ್ಯ) **ಕಾರಣನೇ** =ಬ್ರಹ್ಮಾಂಡದ ಸೃಷ್ಟಿ ಪಾಲನೆ ಇವೇ ಮೊದಲಾದ ಸೃಷ್ಟ್ಯಾದ್ಯಷ್ಟಕಾರ್ಯಗಳಿಗೆ ಮುಖ್ಯ ಕಾರಣನಾದವನೇ **ಕೈವಲ್ಯದಾಯಕ**=ಮುಕ್ತಿಯನ್ನು ಕೊಡುವ (ಮೋಕ್ಷ ಪ್ರದ) **ನಾರಸಿಂಹನೇ** = ಶ್ರೀನರಸಿಂಹರೂಪಿಯಾದ ಪರಮಾತ್ಮನೇ **ನಮಿಸೆ**= ನಿನಗೆ ಸಾಷ್ಟಾಂಗ ಪೂರ್ವಕವಾಗಿ ನಮಸ್ಕರಿಸುತ್ತೇನೆ **ಎಮಗೆ** = ನಿಮ್ಮ ಪಾದಕಮಲಗಳನ್ನು ನಂಬಿರುವ ನಮಗೆ (ಪರಮಭಗವದ್ಭಕ್ತರಿಗೆ) **ಮಂಗಳವ** =ಶುಭವನ್ನು **ಕರುಣಿಸುವುದು** = ಕಾರುಣ್ಯವಿಶೇಷದಿಂದ ಕೊಡುವವನಾಗು.

**ತಾತ್ಪರ್ಯ :—** ಶ್ರೀನರಸಿಂಹರೂಪೀ ಶ್ರೀ ಹರಿಯು ದಾಸರಾಯರ ಕುಲದೈವ ಹಾಗೂ ಉಪಾಸ್ಯಮೂರ್ತಿ. ಸತ್ವಗುಣಾಭಿಮಾನಿಗಳಾದ ಶ್ರೀ ರಮಾದೇವಿಯರು ಶ್ರೀಹರಿಯ ಪರಮಮಂಗಳಕರವಾದ ಪಾದಕಮಲಗಳನ್ನು ನಿರಂತರವೂ ತಮ್ಮ ಸುಕೋಮಲವಾದ ಕರಪದ್ಮಗಳಿಂದ ಪೂಜಿಸುತ್ತಿರುವರು. ಶ್ರೀ ಹರಿಯು ರಮಾದೇವಿಯರಿಂದಲೇ ಪೂಜಿತನು. ತಾರತಮ್ಯಾನುಸಾರ ವಾಗಿ, ಜೀವಕೋಟಿಪ್ರವಿಷ್ಟರಾದ ಶ್ರೀಬ್ರಹ್ಮ, ವಾಯು, ಸರಸ್ವತೀ,ಭಾರತೀ, ರುದ್ರ, ಇಂದ್ರಾದಿ ಸಮಸ್ತದೇವತಾಗಣದಿಂದ ಸ್ತೋತ್ರಮಾಡಿಕೊಳ್ಳಲ್ಪಡುವ ವನು. ಈ ಬ್ರಹ್ಮಾಂಡದ ಸೃಷ್ಟಿ ಸ್ಥಿತಿಲಯಾದಿ ಸಮಸ್ತವ್ಯಾಪಾರವಿಶೇಷ ಗಳಿಗೂ ತಾನೇ ಮುಖ್ಯ ಕಾರಣನು. ಚತರ್ವಿಧ ಪರಮಪುರುಷಾರ್ಥಗಳಲ್ಲಿ ಅತ್ಯಂತಶ್ರೇಷ್ಠವಾದ ಸಮಸ್ತಭಗವದ್ಭಕ್ತರಿಂದಲೂ ಅಪೇಕ್ಷಣೀಯವಾದ "ಸ್ವರೂಪಾನಂದಾವಿರ್ಭಾವ" ರೂಪವಾದ ಮೋಕ್ಷವನ್ನು ಕೊಡುವವನು.

ಅಂತಹ ಪರಮಮಂಗಳಕರನಾದ, ದಿವ್ಯಮಂಗಳವಿಗ್ರಹನಾದ, ಅನಂತಕಲ್ಯಾಣ ಗುಣಗಣಪರಿಪೂರ್ಣನಾದ, ಅತಏವ ಸಮಸ್ತದೋಷದೂರನಾದ ಶ್ರೀನಾರಸಿಂಹನನ್ನು ಸಾಷ್ಟಾಂಗಪೂರ್ವಕವಾಗಿ ನಮಸ್ಕರಿಸುತ್ತಾರೆ. ಇಂತಹ ಸರ್ವೋತ್ತಮನ ಸ್ತೋತ್ರದಿಂದ ನಮಗೆಲ್ಲಾ ಶುಭವುಂಟಾಗಲಿ ಎಂದು ಪರಮ ಕಾರುಣ್ಯಸಾಗರನಾದ ಶ್ರೀ ಹರಿಯಲ್ಲಿ ದಾಸರಾಯರು ಭಕ್ತವಶರಾಗಿ ಮೊರೆಯಿಟ್ಟಿದ್ದಾರೆ.

**ವ್ಯಾಖ್ಯಾನ :—ಶ್ರೀ**–"ಶ್ರೀ ಎಂದರೆ ಜ್ಞಾನಸಂಪತ್ತು ಎಂದರ್ಥ. ಶ್ರೀರಮಾದೇವಿಯರಿಗೆ ಶ್ರೀ ಶಬ್ದ ಮುಖ್ಯವಾಗಿ ಉಂಟಾಗುತ್ತದೆ. ಬ್ರಹ್ಮಾದಿಗಳ ಜ್ಞಾನಸಂಪತ್ತಿಗೆ ಶ್ರೀ ರಮಾದೇವಿಯರು ಅಭಿಮಾನಿಗಳು. ಈ ಕಾರಣದಿಂದ ರಮಾದೇವಿಯರು "ಶ್ರೀ" ಎಂದು ಕರೆಯಿಸಿಕೊಳ್ಳಲ್ಪಡುತ್ತಾರೆ. ಆದಿ ಮೂಲಸ್ವರೂಪಿಯಾದ ಶ್ರೀಮನ್ನಾರಾಯಣನ ಮಹಿಮಾತಿಶಯಗಳನ್ನು ಕೊಂಡಾಡುವ ವಿಷಯದಲ್ಲಿ ಜ್ಞಾನ, ಭಕ್ತಿ ಮುಂತಾದ ದೈವೀಸಂಪತ್ತುಗಳನ್ನು ಕರುಣಿಸುವುದರಿಂದ ಸಂಪತ್ಪ್ರದಳಾಗಿದ್ದಾಳೆ. ಶ್ರೀ ರಮಾದೇವಿಯರು ತ್ರಿಗುಣಾಭಿಮಾನಿಗಳು. ಸತ್ವಗುಣಕ್ಕೆ "ಶ್ರೀ" ಎಂಬ ಹೆಸರಿನಿಂದಲೂ, ರಜೋಗುಣಕ್ಕೆ "ಭೂ" ಎಂಬ ಹೆಸರಿನಿಂದಲೂ ಮತ್ತು ತಮೋಗುಣಕ್ಕೆ "ದುರ್ಗಾ" ಎಂಬ ಹೆಸರಿನಿಂದಲೂ ಅಭಿಮಾನಿಗಳಾಗಿದ್ದಾರೆ. ಹೀಗೆ ಶ್ರೀ ಭೂ ದುರ್ಗಾ ರೂಪಳಾದ ಶ್ರೀ ರಮಾದೇವಿಯರು ಕಾಂತಿಸಂಪನ್ನರು. ಈಶಕೋಟಿ ಪ್ರವಿಷ್ಟರಾದ ಶ್ರೀ ರಮಾದೇವಿಯರು ಭಗವದ್ಭಕ್ತರಿಗೆ ಇಹದಲ್ಲಿ ಸಕಲ ಸಂಪತ್ತನ್ನೂ ಮತ್ತು ಪರದಲ್ಲಿ ನಿತ್ಯಾನಂದ ರೂಪವಾದ ಮೋಕ್ಷವೆಂಬ ಸಂಪತ್ತನ್ನೂ (ಶ್ರೀ ಹರಿಯ ಆಜ್ಞಾನುಸಾರ) ಕೊಡುವ ಮಹಾಮಹಿಮರು. "ಚಿತ್ತದಲಿ ಆನಂದಸುಖವನೀವಳು ರಮಾ" ಎಂದು ಶ್ರೀ ಪುರಂದರದಾಸವರ್ಯರು ತಮ್ಮ ಉಗಾಭೋಗದಲ್ಲಿ ಇದೇ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ್ದಾರೆ. "ಭಾಗ್ಯದಲಕ್ಷ್ಮೀ ಬಾರಮ್ಮ" ಎಂದು ದೈನ್ಯದಿಂದ ಕರೆದಿದ್ದಾರೆ. ಜ್ಞಾನ, ಭಕ್ತಿ ಮತ್ತು ವೈರಾಗ್ಯ ಎಂಬಿವೇ "ಭಾಗ್ಯ". ಈ ಭಾಗ್ಯವೇ ದೈವೀ ಸಂಪತ್ತು. **ರಮಣಿ** = ಶ್ರೀಮನ್ನಾರಾಯಣನಲ್ಲಿ ಸದಾ ರಮಿಸುತ್ತಳಾದ ಕಾರಣ "**ರಮಣಿ**" ಎಂದು ಕರೆಸುತ್ತಾಳೆ. ನಿತ್ಯಮುಕ್ತಳೂ, ನಿರ್ವಿಕಾರಳೂ

ಮತ್ತು ಶ್ರೀಹರಿಯ ನಿತ್ಯಾವಿನಿಯೋಗಿನಿಯಾದ ಶ್ರೀ ರಮಾದೇವಿಯರು ಯಾವಾಗಲೂ ಕಾಂತಿಸಂಪನ್ನರಾಗಿ, ಅಪ್ರಾಕೃತ ಯವ್ವೌನದಿಂದ ಕೂಡಿರುವರು. ಇದರಿಂದ "ರಮಣಿ" ಎಂಬ ಶಬ್ದಪ್ರಯೋಗ. **ಕರಕಮಲಪೂಜಿತ** ಪರಮಮುಖ್ಯ ವೃತ್ತಿಯಿಂದ ಶ್ರೀಮನ್ನಾರಾಯಣನ ವಕ್ಷೋನಿವಾಸಿಯಾದ ಶ್ರೀ ಲಕ್ಷ್ಮೀದೇವಿಗೆ ಶ್ರೀ ಹರಿಯು ಬಿಂಬನು. ಈ ಬಿಂಬರೂಪೀ ಹರಿಯು ವಿಜ್ಞಾನಮಯನು. ಆನಂದಮಯನಾದ ಶ್ರೀಹರಿಯು ಸ್ವರಮಣನಾದ್ದರಿಂದ ಶ್ರೀ ಶಬ್ದವಾಚ್ಯನು. ಈ ಪ್ರಕಾರ ಮಹಾಮಹಿಮಾಜ್ಞಾನ ಸಂಪತ್ತುವುಳ್ಳ ಶ್ರೀ ರಮಾದೇವಿಯರ ಕರಕಮಲಗಳಿಂದ ಪೂಜಿತನಾದವನು. ಶ್ರೀ ರಮಾದೇವಿಯು ಸಕಲವಾಙ್ಮನೋನಿಯಾಮಕರಾದ್ದರಿಂದ ಅತ್ಯಾವಶ್ಯಕವಾದ ನಮಸ್ಕಾರವು ಭಗವಂತನ ಪತ್ನಿಯೆಂದು ವಿಶೇಷ ಭಾವದಿಂದ ಮಾಡಲ್ಪಟ್ಟಿದೆ. ಶ್ರೀ ಹರಿಯು ಸಮಸ್ತವಿಧವಾದ ಸೇವೆಗಳನ್ನೂ ರಮಾದ್ವಾರಮಾತ್ರವೇ ಸ್ವೀಕರಿಸುವನು. ಮಹಾಪ್ರಳಯಕಾಲದಲ್ಲಿಯೂ, ಶುದ್ಧಲಕ್ಷ್ಮ್ಯಾತ್ಮಕ ಶ್ರೀ ಭಾಗದಲ್ಲಿಯೂ ಶ್ರೀ ರಮಾದೇವಿಯರಿಂದಲೇ ಸೇವಿತನಾದವನು. ಪಾದ ಸೇವಾಪೂರ್ವಕವಾಗಿ ಸಮಸ್ತ ಪೂಜೋಪಚಾರಗಳೂ ಶ್ರೀ ರಮಾದೇವಿಯವರೇ ಪರಮಾತ್ಮನಿಗೆ ಮಾಡುವರು. ಅನ್ಯರಿಗೆ ಈ ಪದವಿ ಅಥವಾ ಅಧಿಕಾರವಿಲ್ಲ ಇದೇ ಅಭಿಪ್ರಾಯವನ್ನೇ ಶ್ರೀ ಪುರಂದರದಾಸರು "ಏನು ಧನ್ಯಳೋ ಲಕುಮಿ ಎಂಥಾ ಮಾನ್ಯಳೋ" ಎಂಬ ಪದದಲ್ಲಿ "ಕೋಟಿಕೋಟಿ ಭೃತ್ಯರಿರಲು ಪಾಟ ಕಾಂಬಕನ ಸೇವೆ ಸಾಟಿಯಿಲ್ಲದೆ ಪೂರ್ಣಗುಣಗಳು ತಾನೇ ಮಾಡುತಿಹಳು" ಎಂದು ಕೊಂಡಿದ್ದಾರೆ. **ಶ್ರೀ ರಮಣಿ ಕರಕಮಲಪೂಜಿತ ಚಾರುಚರಣ** ಎಂಬ ವಿಶೇಷಣವು ಲಕ್ಷ್ಮೀವಲ್ಲಭನಾದ ಶ್ರೀ ಹರಿಗೆ ಸಲ್ಲುವುದೇ ಹೊರತು, ಅನ್ಯರಿಗಲ್ಲ. ಈ ವಿಶೇಷಣವು ಬ್ರಹ್ಮಾದಿವಂದ್ಯತ್ವವನ್ನು ಸ್ಪಷ್ಟವಾಗಿ ಪ್ರತಿಪಾದಿಸುವುದು.

**ಪ್ರಮಾಣ :—ಯಂ ಕಾಮಯೇ ತಂತಮುಗ್ರಂ ಕರೋಮಿ ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಮ್** ।। -**ಶ್ರೀ ಅಂಭ್ರಣೀಸೂಕ್ತ ವಚನ**—ಅಂದರೆ, ಯಾವ ಮಹಾಪುರುಷನನ್ನು ರುದ್ರನಾಗಿ ಮಾಡಬೇಕೆಂದು ನನಗೆ ಇಚ್ಛೆ ಹುಟ್ಟುವುದೋ. ಅವನನ್ನು ರುದ್ರನನ್ನಾಗಿ ಮಾಡುತ್ತೇನೆ.

ಯಾವನನ್ನು ಬ್ರಹ್ಮನನ್ನಾಗಿ ಮಾಡಬೇಕೆಂದು ತೋರುವುದೋ, ಅವನನ್ನು ಬ್ರಹ್ಮನನ್ನಾಗಿ ಮಾಡುವೆನು. ಹೀಗೆ ಶ್ರೀಲಕ್ಷ್ಮೀದೇವಿಯರು ತಮಗೆ ಬ್ರಹ್ಮ ರುದ್ರಾದಿಗಳನ್ನು ಸೃಷ್ಟಿಮಾಡುವ ಯೋಗ್ಯತೆ ಇದೆ ಎಂದು ಹೇಳಿ ಕೊನೆಯಲ್ಲಿ **ನಮಮಯೋನಿರಪ್ಸ್ವಂತಃ ಸಮುದ್ರೇ** ಎಂದು ಈ ನನ್ನ ಯೋಗ್ಯತಾ ಸಾಮರ್ಥ್ಯಕ್ಕೆ ಮುಖ್ಯಕಾರಣನು ಸರ್ವಾಂತರ್ಯಾಮಿಯೂ ಮತ್ತು ಕ್ಷೀರ ಸಮುದ್ರಶಾಯಿಯೂ ಆದ ಶ್ರೀ ಹರಿಯೇ ; ಆತನ ಅನುಗ್ರಹಬಲದಿಂದಲೇ ತನಗೆ ಈ ಶಕ್ತಿಯು ಉಂಟಾಗಿದೆ ಎಂದು ಹೇಳಿಕೊಂಡಿದ್ದಾರೆ. ಇಂತಹ ಬ್ರಹ್ಮರುದ್ರಾದಿಗಳನ್ನು ಸೃಷ್ಟಿಮಾಡಲು ಯೋಗ್ಯತೆಯುಳ್ಳ ಶ್ರೀ ರಮಾದೇವಿ ಯರಕರಾರವಿಂದಗಳಿಂದ ಪೂಜಿತನಾದ ಚರಣಕಮಲಗಳುಳ್ಳವನೆಂದಮೇಲೆ ಶ್ರೀ ಹರಿಯ ಸರ್ವೋತ್ತಮತ್ವ ವಿಚಾರದಲ್ಲಿ ಬೇರೊಂದು ಪ್ರಮಾಣ ಬೇಕೆ ?

**ಬ್ರಹ್ಮ**—ಶ್ರೀಪದ್ಮನಾಭರೂಪನಾದ ಶ್ರೀಮನ್ನಾರಾಯಣನ ನಾಭೀ ಕಮಲದಿಂದ ಉತ್ಪನ್ನರಾದ ಶ್ರೀ ಚತುರ್ಮುಖಬ್ರಹ್ಮದೇವರು. "ಬ್ರಹ್ಮ" ಎಂದರೆ "ಪೂರ್ಣ" ಎಂದರ್ಥ. ಪರಬ್ರಹ್ಮನಾದ ಶ್ರೀಹರಿಯೇ "ಪರಿ ಪೂರ್ಣ"ನು. ಜೀವಕೋಟಿಯಲ್ಲಿ ಶ್ರೇಷ್ಠರಾದ್ದರಿಂದ ಚತುರ್ಮುಖ ಬ್ರಹ್ಮ ದೇವರಿಗೆ "ಬ್ರಹ್ಮ" ಎಂದು ಹೆಸರು. ಜೀವರ ವಿವಿಕ್ಷಾ ಜೀವೋತ್ತಮರು.

**ಸಮೀರ**—ಈರ ಎಂದರೆ ಶ್ರೀ ವಾಯುದೇವರು. ಅಜ್ಞಾನಾದಿ ದೋಷಗಳಿಂದ ನಿತ್ಯದೂರರಾಗಿ, ಶುದ್ಧಸತ್ವಪ್ರಚುರರಾದ ಶ್ರೀಮುಖ್ಯ ಪ್ರಾಣದೇವರಿಗೆ ಮಹಾಪ್ರಳಯಕಾಲದಲ್ಲಿಯೂ ಅಜ್ಞಾನಾದಿ ದೋಷಗಳಿಲ್ಲ. ಕಲ್ಯಾದಿಗಳ ಬಾಧೆಯಿಲ್ಲ. ಶ್ರೀಹರಿಯ ವಿಷಯದಲ್ಲಿ ಸಮ್ಯಕ್ ಜ್ಞಾನವನ್ನು ಹೊಂದಿರುವುದರಿಂದ ಪ್ರಧಾನ ವಾಯುದೇವರಿಗೆ "ಸಮೀರ" ಎಂದು ನಾಮ ಧೇಯ, **ವಾಣಿ**—ಶ್ರೀ ಸರಸ್ವತೀದೇವಿಯರು. "ವಾಗಾಭಿಮಾನಿ"ಗಳಾದ್ದ ರಿಂದ, ಅವರಿಗೆ "ವಾಣಿ" ಎಂದು ಸಂಭೋದಿಸಿದ್ದಾರೆ. ಈ ಪದಪ್ರಯೋಗ ದಿಂದ ಶ್ರೀವಾಯುದೇವರ ನೀತಪತ್ನಿಯರಾದ ಶ್ರೀಭಾರತೀದೇವಿಯರೂ ಗ್ರಾಹ್ಯ, **ಫಣೀಂದ್ರ**—"ಫಣ" ಎಂದರೆ "ಹೆಡೆ". ಹೆಡೆಯುಳ್ಳದ್ದು ಸರ್ಪ. ಈ ಸರ್ಪಕುಲಕ್ಕೆ ಶ್ರೇಷ್ಠ (ಇಂದ್ರ) ರಾದವರು ಶ್ರೀಶೇಷದೇವರು. **ವೀಂದ್ರ**—

"ವಿ" ಎಂದರೆ ಅಂತರಿಕ್ಷದಲ್ಲಿ ವಿಹರಿಪ ಪಕ್ಷಿಸಮೂಹ. ಪಕ್ಷಿಶ್ರೇಷ್ಠರಾದ ಶ್ರೀ ಗರುಡದೇವರು "ವೀಂದ್ರ" ಎನಿಸುವರು. **ಭವ**—ಶ್ರೀರುದ್ರದೇವರು. **ಇಂದ್ರ**—ಶ್ರೀ ರುದ್ರದೇವರಿಗಿಂತ ಅವರರಾದ ಸುರಲೋಕಾಧಿಪತಿಗಳಾದ ಶ್ರೀ ಇಂದ್ರದೇವರು. ಇಲ್ಲಿ **ಬ್ರಹ್ಮ ಸಮೀರ ವಾಣಿ ಫಣೀಂದ್ರ ವೀಂದ್ರ ಭವೇಂದ್ರ** ಎಂಬ ಪದಸಮುಚ್ಚಯದಿಂದ ದಾಸರಾಯರು ತಾರತಮ್ಯಕ್ರಮವನ್ನು ನಿರೂಪಿಸಿದ್ದಾರೆ. ಬ್ರಹ್ಮಾದಿಪರ್ಯಂತ ತೃಣಾಂತಮುಕ್ತಿಯೋಗ್ಯ ಚೇತನರಿಗೆ ಶ್ರೀ ಹರಿಯನ್ನು ಭಕ್ತಿಯಿಂದ ಸ್ತೋತ್ರಮಾಡುವುದಕ್ಕೆ ಅಧಿಕಾರವಿದೆಯೇ ಹೊರತು, ಪಾದಸೇವಾರೂಪವಾದ ಪೂಜಾಧಿಕಾರವಿಲ್ಲ. ಈ ಪದಸಮುಚ್ಚಯ ಪ್ರಯೋಗದಿಂದ ಕೆಲವು ವಿಶೇಷಾರ್ಥಗಳನ್ನು ದಾಸಾರಾಯರು ತಿಳಿಸುತ್ತಾರೆ.

**ವಿಶೇಷಾರ್ಥ** :—(೧) ಶ್ರೀಮನ್ನಾರಾಯಣನು ಸರ್ವೋತ್ತಮನು. ಅನಂತಾನಂತರೂಪಾತ್ಮಕನಾದ ಶ್ರೀರಮೇಶನೇ ಲೋಕೇಶನು. ಕ್ಷರಾಕ್ಷರಾತ್ಮಕ ಸಮಸ್ತಜೀವಕೋಟಿಗೆ ಈಶನು. ಜಗನ್ನಿಯಾಮಕನು. (೨) ಶ್ರೀ ಹರಿಗೆ ಅನಂತಾನಂತಗುಣಗಳಿಂದ ಅವರಳಾದ ಶ್ರೀ ರಮಾದೇವಿಯರು ಅಕ್ಷರಳು. ನಿತ್ಯಮುಕ್ತಳು ಹಾಗೂ ನಿರ್ವಿಕಾರಳು. ಈಶಕೋಟಿಪ್ರವಿಷ್ಟರಾದ ಶ್ರೀ ರಮಾದೇವಿಯರ ದ್ವಾರವೇ ಶ್ರೀ ಹರಿಯು ಸಮಸ್ತಪೂಜಾರೂಪವಾದ ಸೇವಾದಿಗಳನ್ನು ಸ್ವೀಕರಿಸುವನು. ನಿತ್ಯ ಶ್ರೀಹರಿಯ ಪಾದಸೇವಾನಿರತರಾದ ಶ್ರೀ ಲಕ್ಷ್ಮೀದೇವಿಯರು ಶ್ರೀಹರಿಯ ವಕ್ಷೋನಿವಾಸಿನಿಯಾಗಿದ್ದುಕೊಂಡು ಛತ್ರ, ಚಾಮರ, ವ್ಯಜನ, ಪರ್ಯಂಕ ಇತ್ಯಾದಿ ನಾನಾ ರೂಪಗಳಿಂದ ಶ್ರೀಹರಿಯ ಸೇವೆಯನ್ನು ನಿರಂತರವೂ ಮಾಡುತ್ತಿರುವರು. ಶ್ರೀ ರಮಾದೇವಿಯು ಬ್ರಹ್ಮಾದಿಗಳ ಅಂತರ್ಗತಳು. ಶ್ರೀ ಬ್ರಹ್ಮದೇವರ ದ್ವಾರಾ ಸೃಷ್ಟಿವ್ಯಾಪಾರ ಮತ್ತು ಶ್ರೀ ವಾಯುದೇವರ ದ್ವಾರಾ ಭಗವತ್ಕಾರ್ಯಸಾಧಕರೂಪವಾದ ಜಗದ್ವ್ಯಾಪಾರ ಕಾರ್ಯಗಳನ್ನು ಶ್ರೀಹರಿಯು ತಾನುಮಾಡಿ ಶ್ರೀ ರಮಾದೇವಿಯರ ದ್ವಾರಾ ಮಾಡಿಸುವನು. ಅವ್ಯಕ್ತತತ್ವಕ್ಕೆ ನಿಯಾಮಕಳು, ಆನಂದಮಯಕೋಶಕ್ಕೆ ಅಭಿಮಾನಿಗಳು. ಬ್ರಹ್ಮಾಂತರ್ಗತಳಾಗಿ ಸಕಲ ಅವಯವಗಳಿಂದಲೂ ಶ್ರೀಮನ್ನಾರಾಯಣನ ವಿರಾಡ್ರೂಪ, ಸ್ವದೇಹ ಸ್ವಬಿಂಬಾಭಿನ್ನರೂಪಿ ಪರಮಾತ್ಮನ ಪೂಜಾ ಮಾಡುತ್ತಾರೆ.

(೩) ಬ್ರಹ್ಮ ಮತ್ತು ವಾಯುಗಳು ವಿಜ್ಞಾನಕೋಶಕ್ಕೆ ಅಭಿಮಾನಿಗಳು. ಅವ್ಯಕ್ತತತ್ವದಿಂದ ಹುಟ್ಟಿದ ಮಹತ್ತತ್ವಕ್ಕೆ ನಿಯಾಮಕರು. ಜೀವಕೋಟಿಪ್ರವಿಷ್ಠರಾದ ಬ್ರಹ್ಮವಾಯುಗಳು ಕ್ಷರ ವರ್ಗಕ್ಕೆ ಸೇರಿದವರಾಗಿ, ಜೀವೋತ್ತಮರೆಂದೆನಿಸಿಕೊಂಡಿದ್ದಾರೆ. ಗರುಡಶೇಷಾದಿ ಸಮಸ್ತತತ್ವಾಭಿಮಾನಿದೇವತೆಗಳಲ್ಲಿ ೨೪ ತತ್ತ್ವಗಳಿಗೆ ನಿಯಾಮಕರಾಗಿ, ಶ್ರೀ ರಮಾಂತರ್ಗತ ಶ್ರೀಮನ್ನಾರಾಯಣನ ಪಾದಪದ್ಮಗಳ ಸ್ತೋತ್ರ ಮಾಡುತ್ತಾ, ಪೂಜೆ ಮಾಡು ವಾಡುತ್ತಾರೆ. ಇವರಿಗೆ ಪಾದಸೇವಾದಿ ಪೂಜಾ ಇಲ್ಲ. ಸ್ತೋತ್ರ ರೂಪವಾದ ಪೂಜಾಮಾತ್ರ. ಇದೇ ಶ್ರೀರಮಾದೇವಿಯರಿಗೂ ಮತ್ತು ಬ್ರಹ್ಮವಾಯುಗಳಿಗೂ ಇರುವ ತಾರತಮ್ಯಭಾವ.

(೪) ಬ್ರಹ್ಮವಾಯುಗಳ ತರುವಾಯ ಗರುಡಶೇಷರುದ್ರಾದಿಗಳು. ಇವರು ಅಹಂಕಾರ ತತ್ವಕ್ಕೆ ನಿಯಾಮಕರು. ಮನೋಕೋಶಕ್ಕೆ ಅಭಿಮಾನಿಗಳು. ಇವರು ಶ್ರೀ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀ ರಮಾಂತರ್ಗತ ಶ್ರೀಮನ್ನಾರಾಯಣನ ಪಾದಾರವಿಂದಗಳ ಸ್ತೋತ್ರಾರ್ಹರು. ಶ್ರೀ ಹರಿಯು ಇವರ ಸೇವೆಯನ್ನು ಶ್ರೀ ವಾಯುದೇವರ ದ್ವಾರಾ ಸ್ವೀಕರಿಸಿ, ಅವರನ್ನು ಅನುಗ್ರಹಿಸುತ್ತಿರುವನು. ಮನಸ್ಸು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚಭೂತಗಳೂ ಹಾಗೂ ಪಂಚತನ್ಮಾತ್ರಗಳು ಈ ೨೧ ತತ್ತ್ವಕಾರ್ಯಗಳನ್ನು ಶ್ರೀ ವಾಯುದೇವರ ಪ್ರೇರಣೆಯಂತೆ ಸಮಸ್ತ ಜೀವರಾಶಿಗಳಲ್ಲಿ ಬಿಂಬಪ್ರೇರಣೆಯಿಂದ ಮಾಡುತ್ತಾ ಕರ್ಮಸಮರ್ಪಣೆಯನ್ನು ಶ್ರೀ ವಾಯುದೇವರದ್ವಾರಾ ಶ್ರೀ ಹರಿಯಲ್ಲಿ ನಿವೇದಿಸುವರು. ಹೀಗೆ ಬ್ರಹ್ಮವಾಯುಗಳಿಗೂ ಮತ್ತು ಗರುಡಶೇಷರುದ್ರಾದಿಗಳಿಗೂ ತಾರತಮ್ಯ ತಿಳಿಯಬೇಕು. ಈ ಮೂವರೂ ಸಮಾನಕಕ್ಷದಲ್ಲಿದ್ದಾರೆ. ಆದರೆ ಸಾಧನಾದಿಗಳು ಬೇರೆಬೇರೆ.

(೫) ಇವರ ತರುವಾಯ ಇಂದ್ರ ಮತ್ತು ಕಾಮರು. ಇವರು ಮನೋಭಿಮಾನಿಗಳು. ಇವರು ಸ್ವೋತ್ತಮರಾದ ಗರುಡ ಶೇಷ ರುದ್ರರ ದ್ವಾರಾ, ಶ್ರೀ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀಕಾಂತನ ಸ್ತೋತ್ರರೂಪವಾದ ಸೇವಾ ಮಾಡುತ್ತಾರೆ.

**ಮುಖವಿನುತಾ**— ಈ ಪದಪ್ರಯೋಗದಿಂದ ಬ್ರಹ್ಮ, ವಾಯು, ಸರಸ್ವತೀ, ಭಾರತೀ, ಗರುಡ, ಶೇಷ, ರುದ್ರ, ಇಂದ್ರ, ಕಾಮರು ಇವರ ತರುವಾಯ ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಪಂಚತನ್ಮಾತ್ರ ಮತ್ತು ಪಂಚಭೂತಾಭಿಮಾನಿದೇವತೆಗಳು, ಪೂರ್ವೋಕ್ತಪ್ರಕಾರ ತಾರ ತಮ್ಯಾನುಸಾರ ಶ್ರೀಮನ್ನಾರಾಯಣನನ್ನು ಇಂದ್ರಿಯಾಭಿಮಾನಿದೇವತೆಗಳು ಸ್ತೋತ್ರಮಾಡುತ್ತಾರೆ. ಮಾನುಷೋತ್ತಮರಿಂದ ಆರಂಭವಾಗಿ ಬ್ರಹ್ಮಪರ್ಯಂತ ತಮ್ಮತಮ್ಮ ಬಿಂಬಮೂರ್ತಿ ಪರಮಾತ್ಮನ ಪೂಜಾರೂಪವಾದ ಸ್ತೋತ್ರ ಮಾಡಿ ಮುಕ್ತರಾಗುತ್ತಾರೆ. ಈ ಉಪಾಸನಾಕ್ರಮದಲ್ಲಿ ಸ್ವಾಧಮರು ಸ್ತೋತ್ತಮ್ಮರ ಅಂತರ್ಗತ ಶ್ರೀಮನ್ನಾರಾಯಣನಪೂಜೆಯನ್ನು ಸ್ವಯೋಗ್ಯತಾ ನುಸಾರ ಸ್ತೋತ್ರರೂಪದಿಂದ ಮಾಡಿ, ತಮ್ಮ ತಮ್ಮ ಪದದಿಂದ ಮುಕ್ತರಾಗು ತ್ತಾರೆ. ಸ್ವೋತ್ತಮರು ಸ್ವಾವರರಿಗೆ ಬಿಂಬರಾಗಿದ್ದಾರೆ. ಶ್ರೀ ಹರಿಯೇ ಮುಖ್ಯತ್ವೇನ ಸಕಲರ ಬಿಂಬನಾದರೂ, ಸ್ವಾವರರು ತಮಗಿಂತ ಉತ್ತಮರಾದ ಗುರುಗಳ ಅಧಿಷ್ಠಾನ ದ್ವಾರಾ ಶ್ರೀಹರಿಯನ್ನು ಚಿಂತಿಸಿ,ಸ್ತೋತ್ರ ಮಾಡುವರು. ಶ್ರೀ ಹರಿಯು ಸ್ವಾಧಮಾಂತರ್ಗತನಾಗಿ ಪೂಜಾ ಮಾಡಿಸಿಕೊಂಡು (ಸ್ತೋತ್ರ ರೂಪವಾಗಿ) ಸ್ವೋತ್ತಮಾಂತರ್ಗನಾಗಿ ಆ ಸ್ತೋತ್ರರೂಪವಾದ ಪೂಜೆ ಯನ್ನು ಸ್ವೀಕರಿಸಿ- ಪ್ರೀತನಾಗುತ್ತಾನೆ. ಇದರಿಂದ ಗುರು-ಶಿಷ್ಯರಿಬ್ಬರಿಗೂ ಸಾಧನವಿಶೇಷ. ಪೂಜ್ಯ ಪೂಜಕರಲ್ಲಿ ತಾನೇ ಅಂತರ್ಯಾಮಿತ್ವೇನ ಇದ್ದು, ಪೂಜ್ಯಪೂಜಕನೆನಿಸಿ, ಪೂಜಾಸಾಧನವಸ್ತುಗಳಲ್ಲಿ ತಾನೇ ಇದ್ದು ಸೇವ್ಯಸೇವಕ ನೆನಿಸಿ, ಅವ್ಯಕ್ತನಾಗಿ (ಯಾರಿಗೂ ತಿಳಿಯಗೊಡದೆಲೆ) ವ್ಯಾಪಾರ ಮಾಡಿ ಮಾಡಿಸಿ, ಶ್ರೀ ಲಕ್ಷ್ಮೀಪತಿಯು ವಿಹರಿಸುತ್ತಾನೆ. ಈ ಪ್ರಕಾರ ಶ್ರೀ ರಮಾ ಬ್ರಹ್ಮ ರುದ್ರೇಂದ್ರಾದಿಗಳು ತಾರತಮ್ಯಾನುಸಾರ ಶ್ರೀ ರಮಾವಲ್ಲಭನಾದ ಪ್ರಣವಪ್ರತಿಪಾದ್ಯನಾದ ಶ್ರೀಮನ್ನಾರಾಯಣನ ಪಾದಕಮಲಗಳನ್ನು ಸ್ತೋತ್ರ ಮಾಡುತ್ತಾರೆ.

**ನೀರಜಭವಾಂಡೋದಯಸ್ಥಿತಿ ಕಾರಣನೆ-ನೀರಜ್ಜಾಯತೇ ಇತಿ ನೀರಜಂ;** ಅಂದರೆ, ನೀರಿನಲ್ಲಿ (ನೀರ) ಹುಟ್ಟಿದ್ದು (ಜ) **ಕಮಲ** ಎಂದರ್ಥ. ತಸ್ಮಾದ್ಭವತೀತಿ ನೀರಜಭವೋ ; ಅಂದರೆ, ಕಮಲದಲ್ಲಿ ಉತ್ಪನ್ನನಾದ ಚತುರ್ಮುಖ ಬ್ರಹ್ಮದೇವರು. ತಸ್ಯಾಂಡಂ ಬ್ರಹ್ಮಾಂಡಂ ; ಅಂದರೆ,

ಬ್ರಹ್ಮಾಂಡ ಎಂದರ್ಥವಾಗುವುದು. ಶ್ರೀ ಪದ್ಮನಾಭರೂಪೀ ಶ್ರೀಮನ್ನಾರಾಯಣನ ನಾಭಿ(ಹೊಕ್ಕಳು)ಯಿಂದ ಉತ್ಪನ್ನವಾದ ಸುವರ್ಣಾತ್ಮಕ ಕಮಲವು ಚತುರ್ದಶ ದಳಾತ್ಮಕವಾದದ್ದು, ಅಂದರೆ ೧೪ ದಳಗಳಿಂದ ಕೂಡಿದ್ದು. ಈ ದಳಗಳು ಬ್ರಹ್ಮಾಂಡಾಂತರ್ಗತವಾದ ೧೪ ಲೋಕಗಳನ್ನು ಪ್ರತಿಪಾದಿಸುವುವು. ಇಂತಹ ಸುವರ್ಣಾತ್ಮಕ ಕಮಲದಲ್ಲಿ ಚತುರ್ಮುಖ ಬ್ರಹ್ಮ ದೇವರು ಜನಿಸಿದರು. ಇದರಿಂದಲೇ ಬ್ರಹ್ಮದೇವರಿಗೆ **ಹಿರಣ್ಯ ಗರ್ಭ** ಎಂದು ಹೆಸರು. ಅಂಡ-ಎಂದರೆ ಬ್ರಹ್ಮದೇವರ ದೇಹ. ಇದಕ್ಕೆ ಬ್ರಹಾಂಡದ ಸೃಷ್ಟಿ (ಉದಯ)ಗೆ ಶ್ರೀ ಹರಿಯೇ ಮುಖ್ಯ ಕಾರಣನು. ಇಂತಹ ಸೃಷ್ಟಿಯು ವೈವಿಧ್ಯಗಳಿಂದ ಕೂಡಿದೆ, (೧) ಕೆಲವು ಜಡಗಳು. **ಅಭೂತ್ವಾ ಭಾವಿತ್ವ** ಅಂದರೆ, ಪೂರ್ವದಲ್ಲಿ ಇರದೇ ಅನಂತರ ಇರುವಿಕೆಯನ್ನು ಹೊಂದುವುದು. (೨) ಇನ್ನು ಕೆಲವು ಜಡಗಳಿಗೆ ಬೆಳವಣಿಗೆಯು (ಅಭಿವೃದ್ಧಿರೂಪಸೃಷ್ಠಿ). (೩) ಕೆಲವು ಜೀವರಿಗೆ ಶರೀರ ಸಂಬಂಧವು ಜನ್ಮಾಂತರರೂಪವಾದ ಸೃಷ್ಟಿ (೪) ಕೆಲವು ಚೇತನಗಳಿಗೆ ವಿಶಿಷ್ಟ ಪರಾಧೀನತೆಯು (ಪರಾಧೀನವಿಶೇಷಾವಾಪ್ತಿಃ). ಈ ರೀತಿಯಲ್ಲಿ ಪ್ರಭೇದಾತ್ಮಕವಾದ ಸೃಷ್ಟಿಯು "ಉದಯ" (ಉತ್ಪತ್ತಿ) ಎಂದೆನಿಸುವುದು. **(ತಾಮ್ರಪರ್ಣೀಯ ವ್ಯಾಖ್ಯಾನ)** ಬ್ರಹ್ಮಾಂಡದ ಸೃಷ್ಟಿ ಎಂದರೆ, ಚತುರ್ದಶ ಲೋಕಗಳ ಸೃಷ್ಟಿ. ಈ ಲೋಕಗಳಲ್ಲಿ ವಿದ್ಯಮಾನವಾದ ತ್ರಿಸ್ಥಳಗಳು, ಭೂ (ಭೂಮಿ),ಜಲ(ನೀರು), ಮತ್ತು ಖೇಚರ (ಆಕಾಶ) ಇವುಗಳಲ್ಲಿ ಸತ್ವರಜಸ್ತಮರಾದ ಸಕಲ ಜೀವರುಗಳನ್ನು ಶ್ರೀ ಹರಿಯು ಸೃಷ್ಟಿಸಿರುವನು. "ತ್ರಿಗುಣಗಳ ವೈಷಮ್ಯ"ವೇ ಸೃಷ್ಟಿ ಎನಿಸುವುದು. ಮೂಲಪ್ರಕೃತಿಯ ದೆಶೆಯಿಂದ ಸತ್ತ್ವ, ರಜ, ಮತ್ತು ತಮ ಎಂಬ ತ್ರಿಗುಣಗಳ ಮಿಶ್ರಣದಿಂದ ಸೃಷ್ಟಿವ್ಯಾಪಾರರೂಪವಾದ ಕಾರ್ಯವನ್ನು ಮಾಡಿ, ಸಕಲ ಜೀವಜಡಾತ್ಮಕವಾದ ಜಗತ್ತನ್ನು ಅಭಿವ್ಯಕ್ತಿಗೊಳಿಸುವನು. ಹೀಗೆ ಸೃಷ್ಟಿಸಿದ ಜಗತ್ತಿನ ಸ್ಥಿತಿ, ಅಂದರೆ ಪಾಲನೆ (ರಕ್ಷಿಸುವುದು). ಜಗತ್ತಿನ ಪಾಲನಾರೂಪವಾದ ಜವಾಬ್ದಾರಿ ಅತ್ಯಂತ ಮುಖ್ಯ. ಸೃಷ್ಟಿ ಮತ್ತು ಸ್ಥಿತಿ ಇವೆರಡಕ್ಕೂ ಹರಿಯೇ ಮುಖ್ಯ ಕಾರಣನು. ಉದಯ ಮತ್ತು ಸ್ಥಿತಿ ಈ ಪದ ಪ್ರಯೋಗದಿಂದ ಪರಮಾತ್ಮನ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ ಅಜ್ಞಾನ, ಬಂಧ ಮತ್ತು ಮೋಕ್ಷಗಳೆಂಬ **ಅಷ್ಟಕರ್ತೃತ್ವವೂ** ಗ್ರಾಹ್ಯ.

**ಕೈವಲ್ಯದಾಯಕ :–ಕೈವಲ್ಯ** ಎಂದರೆ **ಮೋಕ್ಷನೆಂದರ್ಥ.** ಅಂದರೆ, ಶ್ರೀ ಹರಿಯೇ ಮೋಕ್ಷದಾತನು. ಬ್ರಹ್ಮಾದಿಜೀವರುಗಳ ಸೃಷ್ಟಿ ಸ್ಥಿತಿ ಮಾಡಿ, ಅವರವರ ಆಗಾಮಿ ಸಂಚಿತಗಳೆಂಬ ಕರ್ಮಪ್ರವಾಹಗಳನ್ನು ಕಳೆದು, ಉಳಿದಿರುವ ಪ್ರಾರಬ್ಧವನ್ನೂ ಕೂಡಿ ಭೋಗಮಾಡಿಸಿ, ಸ್ಥೂಲ, ಅನಿರುದ್ಧ ಮತ್ತು ಲಿಂಗಶರೀರಗಳನ್ನು ನಾಶಗೈದು. ಅಪುನರಾವರ್ತಿರೂಪವಾದ ಲೋಕದಲ್ಲಿ ಅತ್ಯುತ್ತಮವಾದ ಸುಖವನ್ನು ಕೊಡುತ್ತಾನೆ. ಇದಕ್ಕೇ **ಕೈವಲ್ಯ** ಎಂದು ಹೆಸರು. **(ಶ್ರೀ ಗುರುವಿಜಯವಿಠ್ಠಲರ ಟೀಕಾ)** ಮಹಾಪ್ರಳಯ ಕಾಲದಲ್ಲಿ "ಕೇವಲ" ನಾಮಕನಾಗಿ ಶ್ರೀಮನ್ನಾರಾಯಣನೊಬ್ಬನೇ ಉಳಿಯು ವವನು. ಈ ಸ್ಥಿತಿರೂಪವಾದ "ಕೈವಲ್ಯ" ಅಂದರೆ, ಮೋಕ್ಷವನ್ನು ಕೊಡುವವನೇ ಶ್ರೀಹರಿಯು.

**ನಾರಸಿಂಹನೆ**— ಶ್ರೀ ಜಗನ್ನಾಥದಾಸವರೇಣ್ಯರ ಕುಲದೈವವು ಶ್ರೀ ಲಕ್ಷ್ಮೀನರಸಿಂಹಸ್ವಾಮಿಯು. ಆತನೇ ಅವರ ಉಪಾಸ್ಯಮೂರ್ತಿಯೂ ಹೌದು. **ಬಿಂಬರೂಪೋಪಾಸನಂ ಚಕಾರ್ಯಂ ಸದ್ಭಕ್ತಿಪೂರ್ವಕಂ** ಎಂಬ ಪ್ರಮಾಣವಿರುವುದರಿಂದ, ನರಸಿಂಹರೂಪಕ್ಕೆ ನಮಸ್ಕಾರ ಮಾಡಿದ್ದಾರೆ. ನರಸಿಂಹರೂಪವು ಅನಿಷ್ಟನಿವೃತ್ತಿಪೂರ್ವಕ ಇಷ್ಟಪ್ರಾಪ್ತಿಮಾಡುವ ರೂಪವು. ಈ ಗ್ರಂಥದ ಪ್ರತಿಪಾದ್ಯದೇವತೆಯು ಶ್ರೀಹರಿಯು. ಯದ್ಯಪಿ ಮೂಲರೂಪ ನಾದ ನಾರಾಯಣನಿಗೂ ಮತ್ತು ಅವತಾರರೂಪಗಳಾದ ನರಸಿಂಹ, ರಾಮ, ಕೃಷ್ಣಾದಿ ರೂಪಗಳಿಗೂ ಯಾವ ಭೇದವೂ ಇಲ್ಲ. ಪರಮಾತ್ಮನು ಸ್ವಗತಭೇದವಿವರ್ಜಿತನು. **ನ ಹಿ ವಿಕೃತಂ ತ್ಯಜಂತಿ ಕನಕಸ್ಯತದಾತ್ಮತಯಾ** ಎಂಬ **ಶೃತಿಗೀತಾವಾಕ್ಯ** ಪ್ರಮಾಣದಿಂದ, ಚಿನ್ನವು ಉತ್ಕೃಷ್ಟವಾದ ಲೋಹವು. ಅದರಿಂದ ಸರಿಗೆ, ವಂಕಿ ಕಡಗ ಮುಂತಾದ ವಿವಿಧ ಒಡವೆ ಗಳನ್ನು ಮಾಡಿಸುವರು. ಅವುಗಳ ರೂಪಭೇದದಿಂದಲೂ ಮತ್ತು ಅವುಗಳನ್ನು ಧರಿಸುವ ಸ್ಥಳ ಭೇದದಿಂದಲೂ ಬೇರೆ ಬೇರೆ ಹೆಸರುಗಳಿವೇ ಹೊರತು, ಚಿನ್ನದಲ್ಲಿ ಭೇದವಿಲ್ಲ. ಹಾಗೆಯೇ ಮತ್ಸ್ಯ ಕೂರ್ಮಾದಿ ರೂಪಭೇದಗಳಿಂದ ನಾಮ ಭೇದವೇ ಹೊರತು, ಅನಂತಾನಂತಾಖ್ಯವಾದ ಗುಣಾದಿಗಳಲ್ಲಿ ಭಗವದ್ರೂಪ ಗಳಿಗೆ ಪರಸ್ಪರ ಯಾವ ಬೇಧವೂ ಇರುವುದಿಲ್ಲ. ದಾಸರಾಯರ ಕುಲದೈವವೂ

ಇಷ್ಟದೇವತೆಯೂ ಮತ್ತು ಉಪಾಸ್ಯಮೂರ್ತಿಯೂ ಆದ ಗರುಡವಾಹನ ಶ್ರೀ ಲಕ್ಷ್ಮೀನರಸಿಂಹರೂಪಕ್ಕೂ ಮತ್ತು ಈ ಗ್ರಂಥಪ್ರತಿಪಾದ್ಯನಾದ ಶ್ರೀಹರಿಯ ರೂಪಕ್ಕೂ ಅಭೇದ.

**ನಾರಸಿಂಹ**—ಎಂಬ ಶಬ್ದದ ನಿರ್ವಚನ.

(೧) **ಅರಾಃ** ಅಂದರೆ ದೋಷಗಳು. ಅದಿಲ್ಲದಿರುವವನು **ನಾರ** ಎಂದಾಗುವನು. **ಸಿಂಹ** ಎಂಬ ಶಬ್ದಕ್ಕೆ ರಮಾಬ್ರಹ್ಮಾದಿ ಸಕಲದೇವತೆಗಳಿಗಿಂತಲೂ **ಶ್ರೇಷ್ಠ**ನೆಂದರ್ಥ. ಅಂದರೆ, ಅನಂತಕಲ್ಯಾಣಗುಣಗಣ ಪರಿಪೂರ್ಣನೂ: ಅತಏವ, ದೋಷದೂರನೂ, ಸರ್ವೋತ್ತಮನೂ ಆದವನು ಎಂಬುದೇ "ನಾರಸಿಂಹ" ಎಂ ಶಬ್ದದಪರಿಷ್ಕಾರ.

(೨) **ನಾರಾಃ** ಅಂದರೆ,ದುಃಖಾತಿ ದೋಷದೂರರಾದ **ಮುಕ್ತ**ರೆಂದರ್ಥ. ಅವರಿಗೆ ಸಿಂಹನು ಅಂದರೆ ಶ್ರೇಷ್ಠನು ಎಂದಾಗುವುದು. ಅಂದರೆ, ಸಮಸ್ತ ಮುಕ್ತಗಣದಿಂದ ವಂದ್ಯನು, ಸೇವ್ಯನು ಮತ್ತು ಮುಕ್ತಾಶ್ರಯನು ಎಂದು ತಾತ್ಪರ್ಯ.

(೩) **ಸಿಂಹ** ಶಬ್ದಕ್ಕೆ ಪರ್ಯಾಯಪದವು **ಮೃಗೇಂದ್ರ** ಎಂದಾಗುವುದು. **ಮೃಗಯಂತೀತಿ ಮೃಗಾಃ** ಎಂಬ ನಿರ್ವಚನದಿಂದ ಶ್ರೀಹರಿಯ ಅಪಾರವಾದ ಗುಣಾತಿಶಯಗಳನ್ನು, ನಾಮರೂಪಗಳನ್ನು ಪಾರುಗಾಣದೆ ಯಾವಾಗಲೂ ಹುಡುಕುತ್ತಲೇ ಇರುವುದರಿಂದ **ಮೃಗಾ** ಅಂದರೆ, ರಮಾಬ್ರಹ್ಮಾದಿಗಳು ಎಂದರ್ಥ. ಇವರುಗಳಿಗಿಂತ ಅನಂತಾನಂತ ಗುಣಗಳಿಂದ "ಶ್ರೇಷ್ಠನು" ಎಂದು ತಾತ್ಪರ್ಯ. **ಮೃಗಾಣಾಂ ಇಂದ್ರಃ = ಮೃಗೇಂದ್ರಃ** ಎಂಬ ನಿಷ್ಪತ್ತಿಯಿಂದ ರಮಾಬ್ರಹ್ಮಾದಿವಂದ್ಯತ್ವವು ಶ್ರೀಹರಿಗೆ ಸಿದ್ಧವಾದಂತಾಯಿತು.

(೪) **ನಾರಶ್ಚ ಸೌ ಸಿಂಹಶ್ಚ** ನಾರಸಿಂಹ ಎಂಬ ಅರ್ಥದಿಂದಲೂ, ನಿರ್ದೋಷನೂ ಮತ್ತು ರಮಾಬ್ರಹ್ಮಾದಿವಂದ್ಯನೂ ಆದುದರಿಂದ **ನಾರಸಿಂಹ** ಎಂದು ಹೆಸರು. **ನಾರಂ ದದಾತೀತಿ ನಾರಃ** ಅಂದರೆ ನಾರ ಎಂದರೆ, ನಿರ್ದೋಷವಾದ ವೈಕುಂಠಲೋಕವು ಭಗವದ್ಭಕ್ತರಿಗೆ ವೈಕುಂಠಲೋಕವನ್ನು ಕೊಡುವವನಾದ್ದರಿಂದ, ಶ್ರೀಹರಿಗೆ ನಾರ ಎಂದು ಹೆಸರು. **ಸಿಂಹ**

ಎಂದರೆ **ಶ್ರೇಷ್ಠ**ವಾಚ್ಯನು. ಅತ ಏವ, **ಸರ್ವೋತ್ತಮ**ನು. ಸರ್ವೋತ್ತಮನಾದ ಶ್ರೀಹರಿಯ ಪರಮಪ್ರಸಾದದಿಂದಲೇ ವೈಕುಂಠಾದಿಲೋಕಗಳ ಪ್ರಾಪ್ತಿಯುಂಟಾಗುವುದರಿಂದಲೇ ದಾಸರಾಯರು **ಕೈವಲ್ಯದಾಯಕ** ಎಂಬ ಪದ ಪ್ರಯೋಗ ಮಾಡಿರುತ್ತಾರೆ. **(ಶ್ರೀ ಪದ್ಮನಾಭ ದಾಸರ ಭಾವಪ್ರಕಾಶಿಕಾ ವ್ಯಾಖ್ಯಾನ)**

**ಕಾವ್ಯ ಪರ್ಣೀಯ ವ್ಯಾಖ್ಯಾನದಲ್ಲಿ ನಾರಸಿಂಹ** ಎಂಬ ಪದವನ್ನು ಹೀಗೆ ನಿರ್ವಚನ ಮಾಡಿರುತ್ತಾರೆ.

(೧) ನಾರಾ ಅಂದರೆ, ಅಜ್ಞಾನ ದುಃಖರೂಪವಾದ ದೋಷಾದಿಗಳು ಯಾರಲ್ಲಿ ಇಲ್ಲವೋ ಅಂತಹವರೇ **ಶ್ರೀಲಕ್ಷ್ಮೀದೇವಿಯು. ಆವಳಿಗೆ ಸಿಂಹ** ಎಂದರೆ **ಪತಿ** ಎಂದರ್ಥ. ಅಂದರೆ **ನಾರಸಿಂಹ** ಎಂದರೆ **ಲಕ್ಷ್ಮೀಪತಿ** ಎಂದು ತಾತ್ಪರ್ಯ. **ಸಿಂಹ** ಶಬ್ದಕ್ಕೆ **ಅಧೀಶ ಪತಿ ಪ್ರಭು** ಎಂಬ ವಿವಿಧಾರ್ಥಗಳನ್ನು **ಅಮರಕೋಶದಲ್ಲಿ** ಹೇಳಲಾಗಿದೆ.

(೨) ಅಂತಹ ಶ್ರೀಲಕ್ಷ್ಮೀದೇವಿಗೂ ಅಂತಃಪ್ರೇರಕನೂ ಮತ್ತು ನಿಯಾಮಕನೂ ಆದುದರಿಂದ **ಪ್ರಭು**ವೆನಿಸಿಕೊಳ್ಳುವನು.ಆತ ಏವ, **ನಾರಸಿಂಹ** ವಾಚ್ಯನು.

(೩) **ನಾರ** ಎಂದರೆ ದುಃಖ, ನಾಶ, ಸಂಸಾರ ಕ್ಲೇಶಾದಿಗಳಿಂದ ದೂರರಾದ **ಮುಕ್ತರು** ಎಂದು ತಾತ್ಪರ್ಯ. ಮುಕ್ತರ ಪ್ರಭುವಾದ್ದರಿಂದ **ನಾರಸಿಂಹನು.**

**ನ ಅರಮಣಂ ದುಃಖಂ ಏಷಾಮಿತಿ ಅರಮಣಂ ದುಃಖಂ ನಾರಮಣಂ ಏಷಾಮಿತಿ ವಾ, ದೋಷಾ ಏಷಾಮಿತಿವಾ, ನ ವಿದ್ಯತೇ ಅರಃ ಯೋಗ್ಯನಾರೂ ಏಷಾಮಿತಿ ವಾ ನಾರಾಃ ಮುಕ್ತಾಃ। ತೇಷಾಂ ಸಿಂಹಃ ಪ್ರಭುರಿತ್ಯರ್ಥಃ.**

(೪) ಎಲ್ಲಾ ಪ್ರಾಣಿಗಳಿಗಿಂತಲೂ ವೀರ್ಯತಮನೂ ಮತ್ತು ಶ್ರೇಷ್ಠ ತಮನೂ ಆಗಿರುವುದರಿಂದ **ನಾರಸಿಂಹನೆನಿಸಿಕೊಳ್ಳುತ್ತಾನೆ.** ಅಂದರೆ, **ಪರಮೇಶ್ವರನು** ಎಂದು ತಾತ್ಪರ್ಯ.

**ಯಸ್ಮಾತ್ ಸರ್ವೇಷಾಂ ಭೂತಾನಾಂ ವೀರ್ಯತಮಃ ಶ್ರೇಷ್ಠ ತಮಶ್ಚ ತಸ್ಮಾನ್ನೃ ಸಿಂಹಃ ಆಸೀತ್ಪರಮೇಶ್ವರಃ.**

**(ತಾಮ್ರಪರ್ಣೀಯವ್ಯಾಖ್ಯಾನ)**

**ಓಂ ವಿಕಲ್ಪೋ ವಿಶಿಷ್ಟ ಫಲವತ್ವಾತ್ ಓಂ** ಎಂಬ **ಸೂತ್ರಭಾಷ್ಯ**ದಲ್ಲಿ ತಮತಮಗೆ ಯೋಗ್ಯವಾದ ಬಿಂಬರೂಪದ ಉಪಾಸನೆಯು. ಅನಂತರ ಸ್ವಬಿಂಬಾತಿರಿಕ್ತವಾದ ಶ್ರೀ ನೃಸಿಂಹಾದಿರೂಪಗಳ ಉಪಾಸನೆಯು ವಿಶಿಷ್ಟ ಫಲರೂಪವಾದ ಅಪೇಕ್ಷೆಯಿರುವುದರಿಂದ, "ಮುಕ್ತಿಗಾಗಿ ಸ್ವಬಿಂಬೋಪಾಸನೆ ಮಾಡಬೇಕು. ಅತಿರಿಕ್ತವಾದ ನೃಸಿಂಹರೂಪದ ಉಪಾಸನೆಯನ್ನು ದುರಿತ, ವಿಘ್ನ ಪಾಪಾದಿಗಳ ಪರಿಹಾರಕ್ಕಾಗಿ ಮಾಡಬೇಕು". ಭಗವದುಪಾಸನೆಯಿಂದ ದುರಿತಪರಿಹಾರ. ತದ್ವಾರಾ ಶ್ರೀಭಗವದನುಗ್ರಹ ಪ್ರಾಪ್ತಿ, ತನ್ಮೂಲಕ ಮೋಕ್ಷಪ್ರಾಪ್ತಿ, ಹೀಗೆ, ಪರಮಾಭೀಷ್ಟಪ್ರದನೂ, ಅನಿಷ್ಟನಿವಾರಕನೂ ಮತ್ತು ಸರ್ವಸ್ವರೂಪಸ್ಥ ಬಿಂಬರೂಪನೂ ಆಗಿರುವ ಶ್ರೀಹರಿಯಿಂದ ಅಭಿನ್ನನಾದ ಶ್ರೀ ಲಕ್ಷ್ಮೀನರಸಿಂಹದೇವರಿಗೆ ವಂದನ ಮಾಡುತ್ತಾರೆ. ಮುಕ್ತಿಯೋಗ್ಯ ಚೇತನರಿಗೆ ಅನಿಷ್ಟವೆಂದರೆ, ಸ್ವರೂಪದೇಹಕ್ಕೆ ಆವರ್ಕವಾಗಿರುವ ಅವಿದ್ಯಾ ರೂಪವಾದ ಅನಾದಿ ಲಿಂಗದೇಹ. ಲಕ್ಷ್ಮ್ಯಾತ್ಮಕವಾದ ವಿರಜಾನದಿಯ ಸ್ನಾನದಿಂದ ಲಿಂಗದೇಹಭಂಗ. ಅಂತಹ ಲಿಂಗದೇಹವನ್ನು ಶ್ರೀನರಸಿಂಹ ದೇವರು ತಮ್ಮ ಖಡ್ಗದಿಂದ ಸೀಳಿ ಲಿಂಗಭಂಗ ಮಾಡುವರು. ಇದರಿಂದ ನರಸಿಂಹ ರೂಪವು ಅನಿಷ್ಟನಿವಾರಕವು.

**ವಿರಜಾಸ್ನಾನತೋ ಲಿಂಗಂ ಸಿಕ್ತಂ ದ್ವಿಗುಣತೊಚ್ಛ್ರಿತಂ। ತಂ ದೃಷ್ಟ್ವಾ ದೇವದೇವೋಸೌ ಲಿಂಗಂ ಸತ್ವಗುಣಾನ್ವಿತಂ। ವಿದಾರಯತಿ ಸರ್ವೇಶೋ ಸ್ವಖಡ್ಗೇನಾಂತರಾತ್ಮವಾನ್। ನೃಸಿಂಹರೂಪೀ ಭಗವಾನ್ ಕ್ರೀಡತೇ ಭಗವಾನ್ ಹರಿರಿತಿ। (ತಾಮ್ರಪರ್ಣೀಯ ವ್ಯಾಖ್ಯಾನ)**

**ನಮಿಸಿ** — ಇಂತಹ ಬಿಂಬರೂಪಿಯಾದ ಶ್ರೀನಾರಸಿಂಹಾಭಿನ್ನ ಶ್ರೀಹರಿಗೆ ಸಾಷ್ಟಾಂಗಪೂರ್ವಕವಾಗಿ ನಮಸ್ಕರಿಸುತ್ತೇನೆ ಎಂದಿದ್ದಾರೆ ದಾಸ ವರೇಣ್ಯರು. ನಮಸ್ಕಾರ ಎಂದರೆ, ಸಾಷ್ಟಾಂಗ ಪ್ರಣಾಮವೆಂದರ್ಥ.

**ಉರಸಾ ಶಿರಸಾ ದೃಷ್ಟ್ಯಾ ಮನಸಾ ವಚಸಾ ತಥಾ । ಪದ್ಭ್ಯಾಂ ಕರಾಭ್ಯಾಂ ಜಾನುಭ್ಯಾಂ ಪ್ರಣಾಮೋಷ್ಟಾಂಗ ಈರಿತಃ** ಎಂದು ಪ್ರಮಾಣ. ಅಂದರೆ (೧) ಎದೆ, (೨) ತಲೆ, (೩) ಪಾದ, (೪) ಕೈಗಳು, (೫) ಮೊಣ ಕಾಲು(ಜಾನು)ಗಳನ್ನು ನೆಲದಮೇಲೆ ಊರಿಕೊಂಡು, (೬) ದೃಷ್ಟಿಯಿಂದ ನೋಡುತ್ತಾ (ದೃಷ್ಟ್ಯಾ) (೭) ಮನಸ್ಸಿನಿಂದ ಧ್ಯಾನಿಸುತ್ತಾ (ಮನಸಾ) ಮತ್ತು (೮) ವಾಕ್ಯದಿಂದ ಸ್ತೋತ್ರಮಾಡುತ್ತಾ (ವಚಸಾ ತಥಾ)-ಹೀಗೆ ಎಂಟು ಅಂಗಳಿಂದ ಮಾಡುವ ಪ್ರಣಾಮಕ್ಕೆ **ಸಾಷ್ಟಾಂಗ ನಮಸ್ಕಾರ** ಎಂದು ಹೆಸರು. ಮನುಷ್ಯೋತ್ತಮರಿಗೆ ಇದೇ ಮುಕ್ತಿಸಾಧನವು. ಈ ವಿಷಯದಲ್ಲಿ ಶ್ರೀಮದಾಚಾರ್ಯರ ಪ್ರಮಾಣವು. ಹೀಗಿದೆ :

**ಏಕೋಽಪಿ ಕೃಷ್ಣಸ್ಯ ಸಕೃತ್ಪ್ರಣಾಮೋ ದಶಾಶ್ವಮೇಧಾವಭೃತೇನ ತುಲ್ಯಃ ॥ ದಶಾಶ್ವಮೇಧಿ ಪುನರೇತಿ ಜನ್ಮ ಕೃಷ್ಣಪ್ರಣಾಮೋ ನಪುನರ್ಭವಾಯ ॥**

ಸಾಷ್ಟಾಂಗವಿಧಿಪೂರ್ವಕವಾಗಿ, ಭಕ್ತಿಯಿಂದ ಶ್ರೀಹರಿಗೆ ಒಂದು ನಮಸ್ಕಾರವನ್ನು ಮಾಡಿದರೂ, ಹತ್ತು ಅಶ್ವಮೇಧಯಾಗಗಳನ್ನು ಮಾಡಿ, ಅವಭೃತ ಸ್ನಾನಮಾಡಿದವನಿಗೆ ಯಾವ ಫಲವು ಬರುವುದೋ. ಆ ಫಲವು ಅವನಿಗೆ ಉಂಟಾಗುವುದು. ಆದರೆ ಹತ್ತು ಅಶ್ವಮೇಧಯಾಗಗಳನ್ನು ಮಾಡಿದವನು ಸ್ವರ್ಗಕ್ಕೆ ಹೋಗಿ, ಪುಣ್ಯಕ್ಷೀಣವಾದನಂತರ, ಮತ್ತೆ ಭೂಮಿಯಲ್ಲಿ ಹುಟ್ಟುವನು **ಕ್ಷೀಣೇಪುಣ್ಯೇ ಮರ್ತ್ಯಲೋಕಂ ವಿಶಂತಿ-ಗೀತಾವಾಕ್ಯ.** ಆದರೆ ಶ್ರೀಕೃಷ್ಣನಿಗೆ ಭಕ್ತಿಪೂರ್ವಕವಾಗಿ ಸಾಷ್ಟಾಂಗ ನಮಸ್ಕಾರ ಮಾಡಿದವನು ಸ್ವರ್ಗದಲ್ಲಿ ಭೋಗಾದಿಗಳನ್ನು ಅನುಭವಿಸಿ,ಮುಕ್ತಿಯಲ್ಲಿ ಶಾಶ್ವತವಾದ ಆನಂದ ರೂಪವಾದ ಸುಖವನ್ನು ಪಡೆಯುವನು. ಅವನಿಗೆ ಪುನರ್ಜನ್ಮವಿಲ್ಲ-ಎಂಬುದೇ ಶ್ರೀಮದಾಚಾರ್ಯರ ಶ್ಲೋಕಾಭಿಪ್ರಾಯವು.

ಈ ಗ್ರಂಥವನ್ನು ಶ್ರವಣ ಪಠನಾದಿಗಳನ್ನು ಮಾಡಲು ಪ್ರಾರಂಭಿಸಿದಾಗ ನಮಸ್ಕಾರಾದಿಕರ್ಮಗಳನ್ನು ಮಾಡಿ, ಭಗವದನುಗ್ರಹ ಪಡೆದು, ಕ್ರಮಕ್ರಮ ವಾಗಿ ಮುಂದಿನ ಸಂಧಿಗಳನ್ನು ಪಠಿಸುತ್ತಾ ಬಂದರೆ, ಸಮೀಚೀನವಾದ ಜ್ಞಾನವು ಲಭ್ಯವಾಗುವುದೆಂದು ತಿಳಿಸುವುದಕ್ಕಾಗಿ ದಾಸರಾಯರು ಪ್ರಥಮಾಧಿ ಕಾರಿಗಳ ಉದ್ದಿಶ್ಯಾರ್ಥವಾಗಿ **ನಮಿಪೆ** ಎಂಬ ಶಬ್ದವನ್ನು ಪ್ರಯೋಗ ಮಾಡಿರು ವರು. ಇದರಿಂದ ಈ ಮೆಟ್ಟಲುಗಳನ್ನು ಏರಿದವರೇ,ಭಾಗವತಾದಿ ಶಾಸ್ತ್ರಗಳಿಗೆ ಅಧಿಕಾರಿಗಳೆಂದು ಸೂಚಿತವಾಗಿದೆ. ಇಂತಹ ಭಗವದ್ರೂಪಾಖ್ಯವಾದ ಧ್ಯಾನವು ವಾಙ್ಮನೋಗೋಚರವು. ಇಂತಹ ಧ್ಯಾನರೂಪವಾದ ಉಪಾಸನೆಗೆ ಪರಮಾತ್ಮನ ಸ್ವರೂಪಜ್ಞಾನವು ಅತ್ಯಾವಶ್ಯಕ. ಇದಕ್ಕೆ ವಿಶಿಷ್ಟರೂಪವಾದ **ಲಕ್ಷಣದ** ಜ್ಞಾನವು ಅವಶ್ಯಕ. ಇತರ ಯಾವ ದೇವತೆಗಳಲ್ಲಿಯೂ ಕಂಡುಬರದಿರುವ ವಿಶಿಷ್ಟಧರ್ಮಕ್ಕೆ "ಲಕ್ಷಣ" ಎಂದು ಹೆಸರು. **ಸಾಸ್ನಾದಿಮಾನ್ ಗೌ** ಎಂಬಂತೆ ಚತುಷ್ಪಾದಪ್ರಾಣಿವರ್ಗದಲ್ಲಿ **ಗಂಗೆತೊಗಲು** ಎಂಬ ಜೋಲಾಡು ತ್ತಿರುವ ಚರ್ಮವೇ ಗೋವಿನ ಲಕ್ಷಣವು. ಈ ಲಕ್ಷಣವು ಇನ್ನಿತರ ಪ್ರಾಣಿಗಳಲ್ಲಿ ಇಲ್ಲ. ಹೀಗೆ ಬ್ರಹ್ಮಸೂತ್ರ ಮತ್ತು ಶ್ರೀಮದ್ಭಾಗವತಾದಿಗ್ರಂಥಗಳಲ್ಲಿ ಹೇಳಿರುವಂತೆ **ಓಂ ಜನ್ಮಾದ್ಯಸ್ಯಯತಃ ಓಂ** ಎಂಬ **ಸೂತ್ರ**ದಿಂದಲೂ ಮತ್ತು **ಜನ್ಮಾದಸ್ಯ ಯತೋನ್ವಯಾತ್** ಎಂಬ **ಶ್ರೀಮದ್ಭಾಗವತದ ಮಂಗಳಾ ಚರಣಶ್ಲೋಕ**ದಿಂದಲೂ ಹೇಳಿರುವಂತೆ, ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಾದಿ ವ್ಯಾಪಾರವಿಶೇಷಗಳು ಶ್ರೀಹರಿಯ ಸ್ವಾಭಾವಿಕ ಧರ್ಮವಲ್ಲದೇ ಇತರರ್‍ಯಾರಿಗೂ ಇಲ್ಲ ಎಂಬ ಭಾವವನ್ನೇ **ನೀರಜಭವಾಂಡೋದಯ ಸ್ಥಿತಿಕಾರಣನೆ ಕೈವಲ್ಯದಾಯಕನಾರಸಿಂಹನೆ** ಎಂಬ ಪದಸಮುಚ್ಚಯದಿಂದ ಪ್ರತಿಪಾದಿಸಿದ್ದಾರೆ. ಇಂತಹ ಗುಣಪೂರ್ಣನಾದ ಮುಕ್ತಾಶ್ರಯನೂ ಸಮಸ್ತ ದೋಷದೂರನೂ ಆದ ಶ್ರೀಮನ್ನಾರಾಯಣನನ್ನು ನಮಸ್ಕರಿಸುತ್ತಾರೆ.

**ಜನ್ಮಾದ್ಯಸ್ಯ ಯತೋನ್ವಯಾದಿತರತಃ** ಎಂಬ **ಶ್ರೀಮದ್ಭಾಗವತದ** ಮಂಗಳಾಚರಣೆಯ ಶ್ಲೋಕದಲ್ಲಿ ಹೇಳಿರುವ ಅರ್ಥವನ್ನೇ ವಿಶದೀಕರಿಸುತ್ತಾ ಶ್ರೀಮದಾಚಾರ್ಯರು : **ಸೃಷ್ಟಿಸ್ಥಿತ್ಯಪ್ಯಯೇಹ ನಿಯತಿವಿಶಿತನೋ ಬಂಧ ಮೋಕ್ಷಾಶ್ಚಯಸ್ಮಾದಸ್ಯ ಶ್ರೀ ಬ್ರಹ್ಮರುದ್ರಪ್ರಭೃತಿಸುರನರದ್ವೀಶ ಶತ್ರ್ವಾತ್ಮ**

**ಕಸ್ಯ|| ವಿದ್ಯೋಽಸ್ತ್ಯಾಃ ಸಮಸ್ತ್ಯಾಃ ಸಕಲಗುಣನಿಧಿಃ ಸರ್ವದೋಷ ವ್ಯಪೇತಃ ಪೂರ್ಣಾನಂದೋಽವ್ಯಯೋಽಯೋ ಗುರುರಪಿ ಪರಮಶ್ಚಿಂತಯೇ ತಂ ಮಹಾಂತಮ್.** ಶ್ರೀಮದ್ಭಾಗವತತಾತ್ಪರ್ಯದಲ್ಲಿ ಮಂಗಳಾಚರಣ ಶ್ಲೋಕವನ್ನು ರಚಿಸಿದವರು. ಬ್ರಹ್ಮ, ರುದ್ರ ಮೊದಲಾದ ದೇವತೆಗಳೂ ಮನುಷ್ಯರೂ, ದೈತ್ಯರೂ ಇವರುಗಳಿಂದ ಕೂಡಿದ ಸಮಸ್ತಚೇತನಾ ಚೇತನಾತ್ಮಕವಾದ ಈ ಪ್ರಪಂಚಕ್ಕೆ ಯಾವ ಶ್ರೀಪರಮಾತ್ಮನಿಂದ, ಸೃಷ್ಟಿ-ಸ್ಥಿತಿ-ಲಯ-ಜ್ಞಾನ-ಅಜ್ಞಾನ-ಬಂಧ ಮತ್ತು ಮೋಕ್ಷಗಳೆಂಬ ವಿವಿಧ ವ್ಯಾಪಾರಗಳು ಅವರವರ ಯೋಗ್ಯತಾನುಸಾರ ಸಾಕಲ್ಯದಿಂದಲೂ ಮತ್ತು ಸಂಕೋಚದಿಂದಲೂ ಆಗುತ್ತಿರುವುವೋ, ಆವಾತನು ಸಕಲಗುಣಗಳಿಗೆ ನಿಧಿಯಾಗಿರುವನೋ, ಸರ್ವದೋಷರಹಿತನೋ. ಸಕಲಜಗದ್ಗುರುವೋ, ಸರ್ವೋತ್ತಮನೋ ಅಂತಹ ಮಹಾತ್ಮನನ್ನು ಧ್ಯಾನಿಸುವೆನು-ಎಂದು ಪ್ರಾರ್ಥಿಸಿದ್ದಾರೆ. ಇದೇ ಭಾವವನ್ನೇ ದಾಸರಾಯರು-**ನಮಿಪೆ** ಎಂಬ ಪದದಲ್ಲಿ ಗರ್ಭೀಕರಿಸಿರುತ್ತಾರೆ. ಇದೇ ಅಲ್ಲದೆ, **(೧) ಅಥಾತೋ ಬ್ರಹ್ಮ ಜಿಜ್ಞಾಸಾ। (೨) ಜನ್ಮಾದ್ಯಸ್ಯ ಯತಃ। (೩) ಶಾಸ್ತ್ರಯೋನಿತ್ವಾತ್ । ಮತ್ತು (೪) ತತ್ತು ಸಮನ್ವಯಾತ್ ಓಂ ।** ಎಂಬ ಶ್ರೀಬ್ರಹ್ಮಸೂತ್ರಗತ ನಾಲ್ಕು ಸೂತ್ರಾರ್ಥಗಳನ್ನು ಈ ಪದ್ಯದಲ್ಲಿ ನಿರೂಪಿಸಿದ್ದಾರೆ. ಇದರಿಂದ ಶ್ರೀಮನ್ಮಹಾಭಾರತ, ಶ್ರೀಮದ್ಭಾಗವತ. ನಿರ್ಣಯಾದಿಸಕಲಶಾಸ್ತ್ರಾರ್ಥಗಳೂ ಈ ಪದ್ಯದಲ್ಲಿ ಅಡಗಿರುವುವು ಎಂಬ ಸೂಚನೆಯಿಂದ ಈ ಪದ್ಯಕ್ಕೆ **ಸಂಧಿಸೂಚನೆ** ಎಂದು **ಹೆಸರಿಟ್ಟರು**ವರು. ಅಂದರೆ, ಈ ಸಂಧಿಯಲ್ಲಿ ಯಾವ ಅಭಿಪ್ರಾಯವನ್ನು **ಹೇಳಿರುವರೋ ಅದೇ** ಅಭಿಪ್ರಾಯವನ್ನೇ ಈ ಪದ್ಯದಲ್ಲಿ ಸೂಚಿಸಿರುವರು, ಈ ಸಂಧಿಯಲ್ಲಿ ಶ್ರೀಮನ್ಮಧ್ವಮತಾವಲಂಬಿಗಳು ಮುಖ್ಯವಾಗಿ ತಿಳಿದುಕೊಂಡು, ಅನುಸರಿಸಬೇಕಾದ ಸನ್ಮಾರ್ಗವನ್ನು ದಿಗ್ದರ್ಶನ ಮಾಡಿರುತ್ತಾರೆ. **(ಭಾವಪ್ರಕಾಶಿಕಾ-ಶ್ರೀ ಪದ್ಮನಾಭದಾಸರ ವ್ಯಾಖ್ಯಾನ)(ಭಾವದರ್ಪಣ ಟೀಕಾ-ಶ್ರೀಕಮಲಾಪತಿದಾಸರಿಂದ ವಿರಚಿತ ವ್ಯಾಖ್ಯಾನ)**. ಬ್ರಹ್ಮಾದಿದೇವತೆಗಳನ್ನು ಬಿಟ್ಟು ಶ್ರೀಹರಿಗೇ ವಂದನೆ ಮಾಡುವುದಕ್ಕೆ ಕಾರಣವೇನೆಂದರೆ, **ನಮ್ಯತ್ವ ಪ್ರಯೋಜಕೀಭೂತ ವಿಶಿಷ್ಟತ್ವ ಇಷ್ಟತ್ವ ಆಧಿಕ್ಯತತ್ವರೂಪವಾದ** ಸಕಲ ಧರ್ಮಗಳೂ ಸಾಕಲ್ಯೇನ ಶ್ರೀಹರಿಯಲ್ಲಿಯೇ ಇರುವುದರಿಂದ, ವಂದನೆ ಮಾಡುತ್ತಾರೆಂದು ತಿಳಿಯಬೇಕು. ಇದಲ್ಲದೆ, ಶ್ರೀಪರಮಾತ್ಮನ ಅನಂತಾವತಾರ

ರೂಪಗಳು ಇರುತ್ತಿರಲು ನೃಸಿಂಹರೂಪವನ್ನೇ ಏಕೆ ವಂದಿಸುತ್ತಾರೆ ಎಂದರೆ, **ಬಿಂಬರೂಪೋಪಾಸನಂ ಚ ಕಾರ್ಯಂ ಸದ್ಭಕ್ತಿಪೂರ್ವಕಮ್** ಎಂದು **ಸತ್ತತ್ತ್ವರತ್ನಮಾಲಾ** ವಚನವಿರುವುದರಿಂದ, ತಮ್ಮ ಹೃದಯಕಮಲದ ಬಿಂಬಮೂರ್ತಿಯೇ ನೃಸಿಂಹರೂಪದಿಂದ ಪ್ರತ್ಯಕ್ಷನಾದ್ದರಿಂದಲೂ, ಸಕಲವಿಘ್ನ ಧ್ವಂಸಪೂರ್ವಕ ಕೈವಲ್ಯದಾಯಕನೆಂದು ನೃಸಿಂಹದೇವರನ್ನು ಸಂಪೂರ್ಣ ಭಕ್ತಿಯಿಂದ ವಂದಿಸಿದರು ಎಂತ ತಾತ್ಪರ್ಯ, ಇಂತಹ ನೃಸಿಂಹರೂಪನಾದ ಶ್ರೀ ಹರಿಯ ವಿಶಿಷ್ಟಲಕ್ಷಣಗಳನ್ನು ನಿರೂಪಿಸುತ್ತಾರೆ. ಶ್ರೀ ಎಂದರೆ ರಮಾ ಎಂದರ್ಥ. **ಕಮಲ ಶ್ರೀ ಹರಿಪ್ರಿಯಾ** ಎಂದು ಅಮರಕೋಶ. **ರಮಣೀ**-- ಎಂಬ ಶಬ್ದಕ್ಕೆ ಸುಂದರಸ್ತ್ರೀ ಎಂದರ್ಥ. (೧) ಶ್ರೀ ರಮಾದೇವಿಯಿಂದ ಪೂಜಿತನಾದ ಮನೋಹರವಾದ ಪಾದಪದ್ಮಗಳುಳ್ಳವ-ಇದು ಆದ್ಯವಿಶೇಷಣಾರ್ಥ (೨) ಬ್ರಹ್ಮ, ವಾಯು, ಸರಸ್ವತಿ, ಶೇಷ, ಗರುಡ, ರುದ್ರ, ಪುರಂದರ ಇವರೇ ಮೊಲಾದ ದೇವತಾಗಣದಿಂದ ಸ್ತುತ್ಯ (ವಿನುತ) ಎಂದು ದ್ವಿತೀಯ ವಿಶೇಷಣಾರ್ಥ, ಈ ಉಭಯವಿಶೇಷಣಗಳಿಂದ (ಪೂಜಿತ ಮತ್ತು ಸ್ತುತ್ಯ) ಶ್ರೀ ಹರಿಗೆ ವಿಶಿಷ್ಟತ್ವ ಹೇಳಿದಂತಾಯಿತು. (೩) ಈ ಬ್ರಹ್ಮಾಂಡದ (ನೀರಜ ಭವಾಂಡ) ಸೃಷ್ಟ್ಯಾದಿ ವ್ಯಾಪಾರಗಳಿಗೆ ನಿಮಿತ್ತಕಾರಣನೆ ಎಂಬುದು ತೃತೀಯ ವಿಶೇಷಣಾರ್ಥ. ಈ ವಿಶೇಷಣದಲ್ಲಿ ಸೃಷ್ಟಿ ಮತ್ತು ಸ್ಥಿತಿ ಇವೆರಡೇ ಕ್ರಿಯೆಗಳನ್ನು ಹೇಳಿರುವುದಕ್ಕೆ ಆಧಾರವಾಗಿ ಶ್ರೀ ಸರ್ವಜ್ಞಾಚಾರ್ಯರಿಂದ ಪ್ರಣೀತವಾದಶ್ಲೋಕದಲ್ಲಿ **ಉತ್ಪತ್ತಿಸ್ಥಿತಿ ಸಂಹಾರ ನಿಯತಿಜ್ಞಾನಮಾವೃತೀಃ || ಬಂಧಮೋಕ್ಷೌ ಚ ಪುರುಷಾರ್ಥ್ಯಸ್ಮಾತ್ಸ ಹರಿರೇಕರಾಟ್** । ಎಂಬ ಪ್ರಮಾಣಾನುಸಾರ ಸೃಷ್ಟ್ಯಾದ್ಯಷ್ಟಕರ್ತೃತ್ವವನ್ನೂ ಗ್ರಹಿಸಬೇಕು. ಇದೇ ವಿಶೇಷಣದಲ್ಲಿ ಸೃಷ್ಟಿ ಹೇಳಿರುವುದರಿಂದ ಈ ಗ್ರಂಥಕ್ಕೆ ಪರಮಸಾತ್ವಿಕತ್ವವೂ ಲಬ್ಧವಾಯಿತು. ಇದಕ್ಕೆ ಪ್ರಮಾಣ: **ಪೂರ್ವಂಹಿ ಸೃಷ್ಟಿಃ ಪ್ರತಿಪಾದ್ಯತೇ ಹಿ ಯತೋಹ್ಯತೋ ಭಗವಂತಂ ಪರಂ ಸ್ಮೃತಮ್ || ಯಸ್ಮಿನ್ ಪುರಾಣೇ ಕಥಯಂತಿ ಸೃಷ್ಟಿಂ ಹೃದೌಚ ವಿಷ್ಣ್ವಾದಿಕ ದೇವತಾನಾಮ್|| ಜ್ಞಾನರ್ಥಮೇವಂ" ಕಥಯಂತಿ ವಿಪ್ರಾ ನೀಚೋಚ್ಚರೂಪಂ ಜ್ಞಾನಮಾಹುರ್ಮಹಾಂತಃ || ತೇನೈವ ಸಿದ್ಧಿಂ ಪ್ರವದಂತಿ ಸರ್ವೇ ಹ್ಯತಃ ಪರಂ ಭಗವಂತಂ ಪುರಾಣಮ್**- ಎಂದು **ಗರುಡಪುರಾಣೋಕ್ತಿ.** (೪) **ಕೈವಲ್ಯ**

**ದಾಯಕ**– ಎಂದರೆ ಮೋಕ್ಷದಾಯಕನೆಂದರ್ಥ. **ಮುಕ್ತಿ: ಕೈವಲ್ಯ ನಿರ್ವಾಣ ಶ್ರೇಯೋ ನಿಶ್ರೇಯಸಾ ಅಮೃತಮ್** – ಎಂದು ಅಮರಕೋಶ. ಇದು ಚತುರ್ಥವಿಶೇಷಣಾರ್ಥ. ಹೀಗೆ ತೃತೀಯಚತುರ್ಥವಿಶೇಷಣಾರ್ಥಗಳಿಂದ (೧) ಶ್ರೀಹರಿಗೆ **ಇಷ್ಟತ್ವವನ್ನು** ಹೇಳಿದಂತಾಯಿತು. (೨) ಈ ಗ್ರಂಥಪ್ರತಿಪಾದ್ಯನೇ ಶ್ರೀ ನಾರಸಿಂಹನಾದುದರಿಂದ **ಅಧಿತತ್ವವನ್ನು** ನಿರೂಪಿಸಿದಂತಾಯಿತು. ಈ ಗ್ರಂಥವು ವ್ಯಾಸಂಗಕ್ಕೆ ಬಹುಯೋಗ್ಯವೆಂಬ ವಿಷಯದಲ್ಲಿ ವಿವರ. (೧) ಈ ಗ್ರಂಥಪ್ರತಿಪಾದ್ಯ ಶ್ರೀನಾರಸಿಂಹದೇವರೇ **ವಿಷಯ** (೨) ಜಗಜನ್ಮಾದಿಕಾರಣತ್ವೇನ ಜನ್ಯವಾದ ಜ್ಞಾನವೇ **ಅವಾಂತರ ಪ್ರಯೋಜನ**. (೩) ಕೊನೆಯಲ್ಲಿ ಅನಿಷ್ಟನಿವೃತ್ತಿ- ವಿಶಿಷ್ಟೇಷ್ಟಪ್ರಾಪ್ತಿ ಲಕ್ಷಣಮೋಕ್ಷವೇ **ಮುಖ್ಯಪ್ರಯೋಜನವು.** (೪) ಮುಕ್ತಿಯೋಗ್ಯರೇ **ಅಧಿಕಾರಿಗಳು** (೫) ಯಥಾಯೋಗ್ಯ **ಸಂಭಂಧ.** ಹೀಗೆ ವಿಷಯಾದಿ ಚತುಷ್ಟಯುವಿರುವುದರಿಂದ ಈ ಗ್ರಂಥವು ಆರಂಭಣೀಯ ಯೋಗ್ಯವಾದದ್ದು. ಹೀಗೆ ವಿವರಗಳನ್ನು ತಿಳಿದು. ಶ್ರವಣ ಮತ್ತು ಮನನಾದಿಗಳನ್ನು ಮಾಡಿದವರಿಗೆ ಮಹಾಫಲವು ಪ್ರಾಪ್ತಿಯಾಗುವುದೆಂದು ದಾರ್ಢ್ಯದಿಂದ ತಿಳಿಯಬೇಕು. ಇದಕ್ಕೆ ಪ್ರಮಾಣ : **ಅಧಿಕಾರಂ ಫಲಂಚೈವ ಪ್ರತಿಪಾದ್ಯಂ ಚ ವಸ್ತುಯತ್ । ಸ್ಮೃತ್ವಾ ಪ್ರಾರಂಭತೋ ಗ್ರಂಥಂ ಕರೋತಿಶೋ ಮಹತ್ಫಲವ್ ॥** ಎಂದು **ಭಾಗವತ ತಾತ್ಪರ್ಯ** ವಚನ.

# ಪದ್ಯ (೨)

**ಜಗದುದರನತಿವಿಮಲ ಗುಣರೂ ।**
**ಪಗಳನಾಲೋಚನದಿ ಭಾರತ ।**
**ನಿಗಮತತಿಗಳತಿಕ್ರಮಿಸಿ ಕ್ರಿಯಾ ವಿಶೇಷಗಳ ॥**
**ಬಗೆಬಗೆಯ ನೂತನವ ಕಾಣುತ ।**
**ಮಿಗೆ ಹರುಷದಿಂ ಪೊಗಳಿ ಹಿಗ್ಗುವ ।**
**ತ್ರಿಗುಣಮಾನಿ ಮಹಾಲಕುಮಿ ಸಂತೈಸಲನುದಿನವು** ॥೨॥

ಈ ಪದ್ಯದಲ್ಲಿ ಶ್ರೀ ಜಗನ್ನಾಥದಾಸವರೇಣ್ಯರು ಶ್ರೀಹರಿಗೆ ಅನಂತಾನಂತ ಗುಣಗಳಿಂದ ಅವರರಾದ ಈಶಕೋಟಿಪ್ರವಿಷ್ಟರಾದ ಶ್ರೀ ರಮಾದೇವಿಯರನ್ನು ಸ್ತೋತ್ರ ಮಾಡುತ್ತಾರೆ.

**ಪ್ರತಿಪದಾರ್ಥ :**

**ಜಗದುದರನ** = ಅನಂತಾನಂತ ಜಗತ್ತುಗಳನ್ನು ತನ್ನ ಉದರದಲ್ಲಿ ಇಟ್ಟು ಕೊಂಡು ಸಂರಕ್ಷಿಸುವ. **ಅತಿವಿಮಲ** = ಅತ್ಯಂತ ನಿರ್ದುಷ್ಟವಾದ, ಅತಿಶುದ್ಧ ವಾದ **ಗುಣರೂಪಗಳನು** = ಜ್ಞಾನಾನಂದಾದಿ ಅನಂತಕಲ್ಯಾಣಗುಣಗಳಿಂದ ಪರಿಪೂರ್ಣವಾದ, ಹಾಗೂ ಅಪ್ರಾಕೃತವಾದ ರೂಪವಿಶೇಷಗಳನ್ನು **ಆಲೋಚನದಿ** = ತನ್ನ ಬುದ್ಧಿ ಬಲದಿಂದ ಆಲೋಚಿಸಿ, ಅಂದರೆ, ಶ್ರೀರಮಾದೇವಿಯರಿಗೆ ಜಗದ್ವಿಚಾರದಲ್ಲಿ ಆಲೋಚನೆಯಿಲ್ಲ; ಆದರೆ ಶ್ರೀ ಪರಮಾತ್ಮನ ಅಪಾರಗುಣ ಸ್ತೋಮಗಳನ್ನು ಆಲೋಚನೆಯಿಂದ ತಿಳಿಯುತ್ತಾರೆಂದು ತಾತ್ಪರ್ಯ. **ಭಾರತ** = ಪಂಚಮವೇದವೆಂದು ಪ್ರಖ್ಯಾತವಾದ ಹಾಗೂ ಶಾಸ್ತ್ರಾರ್ಥಗಳಿಂದ ನಿಬಿಡವಾಗಿ ಇತಿಹಾಸಾದಿಗ್ರಂಥಗಳಲ್ಲಿ ರತ್ನಪ್ರಾಯವಾಗಿರುವ ಶ್ರೀಮನ್ಮಹಾ ಭಾರತಗ್ರಂಥದಲ್ಲಿ **ನಿಗಮತತಿಗಳ** = ಅಪೌರುಷೇಯವಾದ ವೇದಸಮೂಹಗಳಲ್ಲಿ ವಿದ್ಯಮಾನವಾದ ಗುಣವಿಶೇಷಗಳನ್ನು **ಅತಿಕ್ರಮಿಸಿ** = ಭಾರತ ಮತ್ತು ವೇದ ಸಮೂಹಗಳಲ್ಲಿ ಹೇಳಿರುವ ಶ್ರೀಹರಿಯಗುಣರೂಪ ವಿಶೇಷಗಳನ್ನು ಆಲೋಚನೆ ಯಿಲ್ಲದೆ ತಿಳಿದಿದ್ದಾರೆ. ಆದರೆ, ಇವೆರಡನ್ನೂ ಮೀರಿ, ಅಂದರೆ ಭಾರತ ಮತ್ತು ವೇದಾತೀತವಾಗಿರುವ **ಕ್ರಿಯಾವಿಶೇಷಗಳ** = ಶ್ರೀಹರಿಯ ನಿರತಿಶಯವಾದ ವ್ಯಾಪಾರವಿಶೇಷಗಳನ್ನು ಉಪಾಸನಾ ಮಾಡುವ ಕಾಲದಲ್ಲಿ **ಬಗೆಬಗೆಯ** = ನಾನಾರೀತಿಗಳಲ್ಲಿ (ವಿಧವಿಧವಾಗಿ) **ನೂತನವ ಕಾಣುತ** = ಹೊಸಹೊಸದಾಗಿ ಕಾಣುತ್ತಾ. **ಮಿಗೆ ಹರುಷದಿಂ** = ನಿರತಿಶಯವಾದ ಆನಂದದಿಂದ (ಆನಂದದ ಉದ್ರೇಕಸ್ಥಿತಿಯಿಂದ) **ಪೊಗಳಿ** = ಶ್ರೀಹರಿಯಗುಣಾತಿಶಯಗಳನ್ನು ಸ್ತೋತ್ರ ಮಾಡಿ **ಹಿಗ್ಗುವ** = ಪರಮಾನಂದದಿಂದ ಮೈಮರೆತು ಉಬ್ಬಿ, ಮುಖವಿಕಾಸ ಹೊಂದುವ **ತ್ರಿಗುಣಮಾನಿ** = ಜಗದುಪಾದಾನವಾದ ತ್ರಿಗುಣಗಳಿಗೆ (ಸತ್ವ ರಜಸ್ತಮೋಗುಣಗಳಿಗೆ) ಅಭಿಮಾನಿಯಾದ **ಮಹಾಲಕುಮಿ** = ಬ್ರಹ್ಮಾದಿ ಗಳಿಂದಲೂ **ಶ್ರೇಷ್ಠ**ಳಾದ (ಮಹಾ) ಶ್ರೀಲಕ್ಷ್ಮೀದೇವಿಯರು **ಅನುದಿನವು** =

ಪ್ರತಿದಿವಸದಲ್ಲಿಯೂ (ಯಾವಾಗಲೂ) **ಸಂತೈಸಲಿ**=ನಮ್ಮಗಳನ್ನು ರಕ್ಷಿಸಿ, ಸಂತೋಷಪಡಿಸಲಿ ಎಂದು ಪ್ರಾರ್ಥಿಸುತ್ತಾರೆ.

**ತಾತ್ಪರ್ಯ :**

ಶ್ರೀಲಕ್ಷ್ಮೀದೇವಿಯರು ಶ್ರೀಹರಿಯ ಅಧೀನರು, ಶ್ರೀಮನ್ನಾರಾಯಣ ನಿಗಿಂತ ಅನಂತಾನಂತ ಗುಣಗಳಿಂದ ಅವರವರು. ಇದರಿಂದ ಶ್ರೀರಮಾ ದೇವಿಯವರಿಗೆ **ಸಮಾಸಮರೆಂದು** ಪ್ರಸಿದ್ಧಿ. ಶ್ರೀಹರಿಯು ಮಹಾಪ್ರಳಯ ಕಾಲದಲ್ಲಿ "ಜಗದ್ಭುಕ್" ಎಂದು ಕರೆಸಿಕೊಂಡು ಸಮಸ್ತ ಜಗತ್ತನ್ನೂ ನುಂಗಿ, ತನ್ನ ಉದರದಲ್ಲಿ ಇಟ್ಟುಕೊಂಡು ಸಂರಕ್ಷಿಸುತ್ತಾನೆ. ಶ್ರೀಹರಿಯು ಅನಂತ ಕಲ್ಯಾಣಗುಣಗಣಪೂರ್ಣನು. ಆತನ ಗುಣಾತಿಶಯಗಳು ಅಪಾರ ಹಾಗೂ ಅನಂತ. ಯಾರಿಂದಲೂ ಸಾಕಲ್ಯೇನ ತಿಳಿಯಲು ಸಾಧ್ಯವೇ ಇಲ್ಲ. ಶ್ರೀವೇದವ್ಯಾಸರಿಂದ ಪ್ರಣೀತವಾದ ಶ್ರೀಮನ್ಮಹಾಭಾರತವು ಇತಿಹಾಸ ರತ್ನ. ಸಕಲಶಾಸ್ತ್ರಾರ್ಥಗಳೂ ಮತ್ತು ಅನೇಕಪ್ರಮೇಯರಹಸ್ಯಗಳೂ ಈ ಮಹಾ ಗ್ರಂಥದಲ್ಲಿ ಅಡಗಿವೆ. ಇಲ್ಲಿ ಶ್ರೀಹರಿಯ ಮಹಿಮಾತಿಶಯಗಳು ಹಾಗೂ ಗುಣಗಳೂ ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ. ಇದು ಪೌರುಷೇಯಗ್ರಂಥ. ವೇದಸಮೂಹಗಳು ಅಪೌರುಷೇಯ ವೇದಗಳು ಅನಂತಸಂಖ್ಯಾವಾಚ್ಯ. ಶ್ರೀ ಹರಿಯು ವೇದಪ್ರತಿಪಾದ್ಯನು. ಶೃತಿಸ್ಮೃತಿಗಳು ಶ್ರೀಹರಿಯ ಗುಣಾತಿಶಯ ಗಳನ್ನು ಕೊಂಡಾಡುತ್ತವೆ. ಭಾರತಾದಿ ಇತಿಹಾಸಗ್ರಂಥಗಳು ಹಾಗೂ ಅನಂತಾ ಖ್ಯವಾದ ವೇದಸಮೂಹಗಳಲ್ಲಿ ವರ್ಣಿತವಾಗಿರುವ ಶ್ರೀಹರಿಯ ಗುಣಾತಿ ಶಯಗಳನ್ನು ಶ್ರೀಲಕ್ಷ್ಮೀದೇವಿ ಆಲೋಚನೆಯಿಲ್ಲದೆ (ಅನಾಲೋಚನೆಯಿಂ) ತಿಳಿಯುತ್ತಾರೆ. ಸ್ವತಃ ವೇದಾಭಿಮಾನಿಗಳಾದ ಶ್ರೀರಮಾದೇವಿಯರಿಗೆ ವೇದೋಕ್ತ ವಿಚಾರವಿಶೇಷಗಳನ್ನು ಕರತಲಾಮಲಕದಂತೆ (ಅಂಗೈಯಲಿರುವ ನೆಲ್ಲಿಕಾಯಿಯಂತೆ ಪ್ರತ್ಯಕ್ಷ ಹಾಗೂ ಸುಸ್ಪಷ್ಟ) ತಿಳಿಯುತ್ತಾರೆ. ಆದರೆ ಭಾರತಾದಿ ಗ್ರಂಥಗಳು ಮತ್ತು ವೇದಾದಿಗಳನ್ನೂ ಮೀರಿ, ನಿರತಿಶಯ ವಾಗಿರುವ ಶ್ರೀಹರಿಯ ಗುಣೋಪಾಸನೆ ಮಾಡುವಾಗ, ತಮ್ಮ ಬುದ್ಧಿಬಲ ದಿಂದ ಆಲೋಚಿಸಿ, ಧ್ಯಾನಯೋಗದಿಂದ ತಿಳಿಯಲು ಪ್ರಯತ್ನಿಸುತ್ತಿರುವಾಗಲೇ **ಶ್ರೀಹರಿಯು ಅವರಿಗೆ** ನಿತ್ಯನೂತನವಾಗಿ **ಕಾಣಿಸುತ್ತಿರುತ್ತಾನೆ.** ಆಗ ಕ್ಷಣ

ಕ್ಷಣಕ್ಕೂ ನೂತನವಾಗಿ ಕಾಣಿಸುತ್ತಿರುವ ಶ್ರೀ ಹರಿಯ ಗುಣಾತಿಶಯಗಳನ್ನು ಸಾಕಲ್ಯೇನ ಕಾಣದೇ ಚಿತ್ತಚಾಂಚಲ್ಯವನ್ನು ಹೊಂದುತ್ತಾರೆ. ಇದೆ ಅಭಿಪ್ರಾಯವನ್ನೇ ಶ್ರೀ ಪುರಂದರದಾಸರು **ನಿಗಮಕೆ ಸಿಲುಕದ ಅಗಣಿತಮಹಿಮನ** ಎಂದು ಕೊಂಡಾಡಿದ್ದಾರೆ. ಶ್ರೀ ಹರಿಯು ವೇದಪ್ರತಿಪಾದ್ಯನೂ ಹೌದು. ವೇದಾತೀತನೂ ಹೌದು. ಹೀಗೆ ಶ್ರೀಹರಿಯ ಗುಣ. ರೂಪ ಕ್ರಿಯಾವಿಶೇಷಗಳನ್ನು ಸಾಕಲ್ಯೇನ ಕಾಣದೆ, ನಿತ್ಯನೂತನವಾಗಿ ಪರಿಶೋಭಿಸುತ್ತಿರುವ ಶ್ರೀಹರಿಯ ಅಪಾರಮಹಿಮಾವಿಶೇಷಗಳನ್ನು ಹೊಗಳುತ್ತಾ, ಆನಂದಪರವಶರಾಗುತ್ತಾರೆ ಶ್ರೀ ರಮಾದೇವಿಯರು, ಬ್ರಹ್ಮಾದಿದೇವತೆಗಳಿಗಿಂತ ಶ್ರೇಷ್ಠರಾದ, ಈಶಕೋಟಿಪ್ರವಿಷ್ಟರಾದ ಶ್ರೀ ಲಕ್ಷ್ಮೀದೇವಿಯರು ಮೂಲಪ್ರಕೃತಿಗೆ ಅಭಿಮಾನಿಗಳು. ಮೂಲಪ್ರಕೃತಿಯ ಸಹಜಧರ್ಮಗಳಾದ ಸತ್ವ, ರಜ ಮತ್ತು ತಮ ಎಂಬ ಮೂರು ಪ್ರಾಕೃತಗುಣಗಳಿಗೆ ಅಭಿಮಾನಿಗಳು. ಅಂತಹ ತ್ರಿಗುಣಾಭಿಮಾನಿಯಾದ ಜಗಜ್ಜನನಿಯಾದ ಶ್ರೀ ಲಕ್ಷ್ಮೀದೇವಿಯರು ನಮ್ಮೆಲ್ಲರನ್ನೂ ಸದಾ ಸಂರಕ್ಷಿಸಲಿ ಮತ್ತು ಆನಂದವನ್ನು ಕೊಡಲಿ (ಚಿತ್ತದಲಿ ಆನಂದ ಸುಖವನೀವಳು ರಮಾ- ಶ್ರೀ ಪುರಂದರದಾಸರ ವಚನ) ಎಂದು ದಾಸರಾಯರು ಪ್ರಾರ್ಥಿಸಿದ್ದಾರೆ.

**ವ್ಯಾಖ್ಯಾನ :**

(೧) **ಶ್ರೀ ಸಂಕರ್ಷಣ ಒಡೆಯರವ್ಯಾಖ್ಯಾನ :** ಈ ಪದ್ಯದಲ್ಲಿ ಪ್ರಳಯಕಾಲದಲ್ಲಿ ಶ್ರೀಮನ್ನಾರಾಯಣನ ಪಾದಸೇವಾ ಮಾಡುವ.ಪರಮಾತ್ಮನ ವಿವಕ್ಷಯಾ ನ್ಯೂನಳಾದ ಶ್ರೀಲಕ್ಷೀದೇವಿಯರನ್ನು ಸ್ತೋತ್ರಮಾಡುತ್ತಾರೆ. "ಜಗದುದರನ" ಎಂಬುದಕ್ಕೆ ಪ್ರಮಾಣ-**ಉದರಂ ಚಿಂತ್ಯಮೀಶಸ್ಯ ತನುತ್ವೇಪ್ಯಖಿಲಂ ಭರಂ**- ಎಂದು ಶ್ರೀಮದಾಚಾರ್ಯರ **ದ್ವಾದಶಸ್ತೋತ್ರ** ಪ್ರಮಾಣಾನುಸಾರ, ಪ್ರತ್ಯಕ್ಷಗೋಚರವಾಗುತ್ತಿರುವ ಈ ಸ್ಥಾವರಜಂಗಮಾತ್ಮಕ ಜಗತ್ತು, ಇನ್ನೂ ಇಂತಹ ಅನಂತ ಎನಂತಜಗತ್ತುಗಳನ್ನು ಉದರಗಲ್ಲಿ ಉಳ್ಳ ಶ್ರೀಪರಮಾತ್ಮನ ಅತ್ಯಂತ ನಿರ್ದುಷ್ಟಗಳಾದ ಕಲ್ಯಾಣಗುಣಗಳಿಂದ ಪೂರ್ಣವಾದ ರೂಪಗಳನ್ನು (ಅತಿವಿಮಲಗುಣರೂಪಗಳ) ಆಲೋಚನೆಯಿಂದ ಅಂದರೆ, ಜಗದ್ವಿಚಾರವನ್ನು ಯಾವ ಆಲೋಚನೆಯೂ ಇಲ್ಲದೆ ಶ್ರೀ ರಮಾ

ದೇವಿಯರು ತಿಳಿಯುತ್ತಾರೆ. ಆದು ಹಸ್ತಗತವಸ್ತುವಿನಂತೆ ಆವರಿಗೆ ಸಾಕಲ್ಯೇನ ವೇದ್ಯ, ಆದರೆ, ಪರಮಾತ್ಮನ ಗುಣವಿಶೇಷಗಳನ್ನು ಆಲೋಚನೆಯಿಂದ ಕಾಣು ವರು ಎಂದು ತಾತ್ಪರ್ಯ. ಇನ್ನು ನಾಲ್ಕು ವೇದಗಳು, ಭಗವದ್ಗುಣಗಳನ್ನು ಪ್ರತಿಪಾದಿಸುವ ಜಟಿಲವಾಗಿರತಕ್ಕ ಏಕೈಕ ವೇದಾಪೇಕ್ಷಯಾ ಅಧಿಕ ಎಂದು ಪ್ರಖ್ಯಾತವಾಗಿರುವ,ವೇದ ಸಮ ಎಂದು ಪರಿಗಣಿಸಲ್ಪಡುತ್ತಿರುವ ಪೌರುಷೇಯ ವಾದ ವೇದಾನುಶ್ರುತ್ಯವಾದ (ವೇದಗಳಿಗೆ ಅನುಗಣವಾಗಿ ಶಾಸ್ತ್ರಾರ್ಥಗಳನ್ನು ಒಳಗೊಂಡ) ಶ್ರೀಮನ್ಮಹಾಭಾರತಗ್ರಂಥದಲ್ಲಿ ವರ್ಣಿತವಾಗಿರುವ ಪರಮಾತ್ಮನ ಗುಣವಿಶೇಷಗಳನ್ನು, ಹಾಗೂ ವೇದಸಮೂಹಗಳಲ್ಲಿ ವಿದ್ಯಮಾನವಾದ ಗುಣ ವಿಶೇಷಗಳು-ಇವೆರಡರಲ್ಲಿ (ಭಾರತ ಮತ್ತು ನಿಗಮ ತತಿಗಳು) ಹೇಳದೇಇರುವ ಗುಣಗಳಲ್ಲಿ ಶ್ರೀ ರಮಾದೇವಿಯರಿಗೆ ಆಲೋಚನೆ ಸ್ವಲ್ಪವೂ ಇಲ್ಲ ಎಂದು ತಾತ್ಪರ್ಯ. ಇವುಗಳಲ್ಲಿ ವರ್ಣಿತವಾಗಿರುವ ಶ್ರೀಹರಿಯ ಗುಣರೂಪಕ್ರಿಯಾ ವಿಶೇಷಗಳನ್ನು ಸಾಕಲ್ಯೇನ ತಿಳಿದಿದ್ದಾರೆ. ಆದರೆ, ಇವೆರಡರಲ್ಲೂ ಹೇಳಲ್ಪಡ ದಿರುವ, ಆಂದರೆ, ಅವುಗಳನ್ನು ಮೀರಿದ (ಅತಿಕ್ರಮಿಸಿ) ಗುಣರೂಪಕ್ರಿಯಾ ವಿಶೇಷಗಳನ್ನು ಉಪಾಸನಮಾಡುವ ಕಾಲದಲ್ಲಿ ನಾನಾವಿಧವಾದ (ಬಗೆ ಬಗೆಯ), ಹೊಸಹೊಸದಾಗಿರುವ (ನೂತನವ), ಎಂದರೆ ಗುಣತಃ ಅಸಮ ರಾದ್ದರಿಂದ. ಅಸಮನಾದ ಶ್ರೀಪರಮಾತ್ಮನ ಗುಣೋಪಾಸನೆ ಸದಾ ಇರು ವುದಿಲ್ಲ. ಭಗವದನುಗ್ರಹದಿಂದ ಒಂದುಕಾಲ ಮಾತ್ರ ಇರುತ್ತದೆ. ಇದು ಸ್ವಾಖ್ಯಪ್ರದೇಶ. ಈ ಸ್ವಾಖ್ಯಪ್ರದೇಶದಲ್ಲಿ ವಿದ್ಯಮಾನವಾದ ಪರಮಾತ್ಮನ ಗುಣರೂಪಕ್ರಿಯಾವಿಶೇಷಗಳು ವೇದತತಿಗಳಲ್ಲಿ ಉಕ್ತವಾಗಿಲ್ಲ. ವೇದಾತೀತ ವಿಷಯಗಳವು. ಅಲ್ಲಿನ ವೈಚಿತ್ರ್ಯವೇ ಬೇರೆ. ಇದು ಶ್ರೀರಮಾದೇವಿಯರಿಗೆ ನೂತನವು. ಇಹುವರೆವಿಗೆ ಕಂಡಿದ್ದಿಲ್ಲ. ಆ ಕ್ರಿಯಾವಿಶೇಷಗಳನ್ನು ನಿತ್ಯ ನೂತನವಾಗಿ ಆಲೋಚನೆಯಿಂದ ನೋಡುತ್ತಾ (ಕಾಣುತ), ಆಶ್ಚರ್ಯದಿಂದ, ತನ್ನ ಯೋಗ್ಯತೆಯನ್ನು ಮೀರಿದ ಆನಂದದಿಂದ (ಮಿಗೆ ಹರುಷದಿಂ),ಸ್ತೋತ್ರ ಮಾಡಿ, ಪರಮಾನಂದದಿಂದ ಮೈಮರೆತು, ಉಬ್ಬಿ ಹೋಗಿ, (ಪೊಗಳಿ ಹಿಗ್ಗುವ) ಜಗದುಪಾದಾನವಾದ ತ್ರಿಗುಣಗಳಿಗೆ (ಅಂದರೆ ಶ್ರೀ ಹರಿಯು ಜಗತ್ತಿನ ಸೃಷ್ಟಿ ಕಾರ್ಯದಲ್ಲಿ ಸತ್ವರಜಸ್ತಮೋಗುಣಾತ್ಮಕವಾದ ಮೂಲಪ್ರಕೃತಿಯನ್ನು ಉಪಾದಾನಕಾರಣವನ್ನಾಗಿ ಮಾಡಿಕೊಳ್ಳುತ್ತಾನೆ) ಅಭಿಮಾನಿಯಾದ (ತ್ರಿಗುಣ

ಮಾನಿ(, ಬ್ರಹ್ಮಾದಿಗಳಿಗಿಂತಲೂ ಶ್ರೇಷ್ಠಳಾದ **ಶ್ರೀಲಕ್ಷ್ಮೀದೇವಿಯು** (ಮಹಾಲಕುಮಿ) (ಲಕ್ಷ್ಮೀ-ತತ್ಸಮ; ಲಕುಮಿ–ತದ್ಭವ) ನಮ್ಮಗಳನ್ನು ಪ್ರತಿ ದಿನದಲ್ಲಿಯೂ (ಅನುದಿನವು) ಸಂರಕ್ಷಿಸಲಿ (ಸಂತೈಸಲಿ) ಎಂದು ಲಕ್ಷ್ಮೀ ದೇವಿಯನ್ನು ಸ್ತೋತ್ರಮಾಡಿದ್ದಾರೆ.

(೨) **ಶಾಬ್ದ ಪರ್ಣೀಯವ್ಯಾಖ್ಯಾನ :—** ಈ **ವಿಶ್ವವು** ಚೇತನ ಹಾಗೂ ಅಚೇತನಗಳಿಂದ ಯುಕ್ತವಾದದ್ದು. ಇಂತಹ ವಿಶ್ವವು ಯಾವಾತನ ಉದರದಲ್ಲಿ ಇರವುದೋ, ಆ ಪರಮಾತ್ಮನೇ **ಜಗದುದರನು.** (ಚೇತನಾ ಚೇತನಾತ್ಮಕಂ ಜಗತ್ ಉದರೇ ಯಸ್ಯ ಸಃ– ಜಗದರಃ) **ಯತ್ತ್ವಯಂಶಿ** ಎಂಬ ಶ್ರುತಿವಾಕ್ಯವೂ **ತವೋದರೇ ನೂನಂ ಹರೇ ಸದಾ ಸ ವಿಶ್ವಗರ್ಭ** ಇತ್ಯಾದಿ ಶ್ರುತಿಸ್ಮೃತಿವಚನಗಳೂ ಪರಮಾತ್ಮನು ಜಗದುದರ ಎಂಬ ವಿಷಯ ದಲ್ಲಿ ಪ್ರಮಾಣಗಳು. ಶ್ರೀಹರಿಯ ಗುಣವಿಶೇಷಗಳು ದುಃಖಸಂಪರ್ಕವಿಲ್ಲದೆ ಅತ್ಯಂತ ನಿರ್ದುಷ್ಟವಾಗಿರುವುವು (ಅತಿವಿಮಲ). ಜ್ಞಾನ ಆನಂದಾದಿಗಳೇ ಅತಿಶುದ್ಧವಾದ, ಅಪ್ರಾಕೃತವಾದ, ಪರಿಪೂರ್ಣವಾದ ಗುಣವಿಶೇಷಗಳು. ಭೇದಭೇದಗಳಿಲ್ಲದ ಅನಾದ್ಯನಂತಕಾಲದಲ್ಲಿ ಇರುವ ನಾರಾಯಣಾದಿ ಶತ ರೂಪಗಳು, ವಿಶ್ವಾದಿ ಸಹಸ್ರರೂಪಗಳು, ಅಜಿತಾದಿ ಅನಂತರೂಪಗಳು ಅನಾದಿ ನಿತ್ಯವಾದುವು. ಶ್ರೀರಮಾದೇವಿಯರೂ ಸಹ ಆಯಾಯಾರೂಪಗಳಿಗೆ ಅನುಗುಣವಾಗಿ ಪತ್ನಿಯಾಗಿ ಅವತರಿಸಿ, ಭಗವಂತನ ಗುಣ ಮತ್ತು ರೂಪಾತಿ ಶಯಗಳನ್ನು ನಿರಂತರವಾಗಿ ಧ್ಯಾನದಿಂದ ಚಿಂತಿಸುತ್ತಿದ್ದರೂ, **ಅವುಗಳ** ಅಂತ್ಯ ವನ್ನು ಸಾಕಲ್ಯೇನ ಕಾಣಲು ಸಾಧ್ಯವಾಗಿಲ್ಲ.

**ಪ್ರಮಾಣ : ಸಕೃದ್ಧೋಲ್ಕಾದಿಪಂಚಾತ್ಮಾ ವಿಶ್ವಾದ್ಯಷ್ಟ ತನು ರ್ಹರಿಃ। ವಿಮಲಾದಿನವಾತ್ಮಭೂತ್ ಸನುತ್ಸಾದಿ ದಶಾಕೃತಿಃ। ಶಕ್ತ್ಯಾದಿ ದ್ವಾದಶಾತ್ಮಾಭೂತ್ ಸ್ವಾದಿಷೋಡಶರೂಪವಾನ್।ಆನಂದಾದಿ ತ್ರಯೋ ವಿಂಶದ್ರೂಪ ಆಸೀತ್ಪರಾತ್ಪರಃ । ಕೇಶವಾದಿ ಚತುರ್ವಿಂಶದ್ರೂಪವಾನ್ ಭಗವಾನ್ ಹರಿಃ। ಅಜಾದಿ ಪಂಚಾಶದ್ರೂಪಸ್ತತೋಭೂತ್ ಪುರು ಷೋತ್ತಮಃ । ನಾರಾಯಣಾದಿ ಶತಕಃ ಸವಿಶ್ವಾದಿಸಹಸ್ರಕಃ । ಪರಾದ್ಯ ನಂತ ರೂಪೋ ಭೂದಾತ್ಮ ಭೇದವಿವರ್ಜಿತಃ। ತದಾಜ್ಞಯೈವಾಸ ತದಾ ರಮಾಪಿ ಬಹುರೂಪಿಣೀ। ಸಾಪಿ ತದ್ಗುಣರೂಪಾಣಿ ಚಿಂತಯಂತೀ**

**ನಿರಂತರನ್ । ತದಾ ತದ್ಗುಣರೂಪಾಣಾಮನಂತಂ ನಾಪಾಖಿಳಾತ್ಮನಃ** ಎಂದು ಪ್ರಕಾಶಸಂಹಿತೆಯ ಪ್ರಮಾಣ.

**ಯದಿಹಾಸ್ತಿ** ಎಂಬ ಪ್ರಮಾಣವಾಕ್ಯಗಳಿಂದ ಶ್ರೀಮನ್ಮಹಾಭಾ ಗ್ರಂಥವು ಪ್ರಸಿದ್ಧಿಯಾಗಿದೆ, ಇದರಲ್ಲಿ ಹೇಳಲ್ಪಟ್ಟ ಹಾಗೂ ಹೇಳಲ್ಪಡದಿರು ಮತ್ತು ವೇದಸಮೂಹಗಳಲ್ಲಿ ಉಕ್ತವಾಗಿರುವ ಹಾಗೂ ಹೇಳಲ್ಪಡದಿರು ಶ್ರೀಹರಿಯ ಗುಣರೂಪಕ್ರಿಯಾವಿಶೇಷಗಳು ಅನಂತ ಹಾಗೂ ಅಪಾರ. ಇ ಶ್ರೀಹರಿಯ ಸ್ವರೂಪಭೂತಧರ್ಮಗಳೇ. ಆದರೆ, ಪ್ರಸಂಗವಿಶೇಷದಿ ಪ್ರತ್ಯೇಕವಾಗಿ ವ್ಯವಹರಿಸಲ್ಪಡುವ ಅಚಿಂತ್ಯಾದ್ಭುತಶಕ್ತಿವಿಶಿಷ್ಟನಾದ ಶ್ ಹರಿಯ "ಅಣೋರಣೀಯಾನ್ ಮಹತೋಮಹೀಯಾನ್" ಎಂಬ ಕ್ರಿ ವಿಶೇಷಗಳನ್ನು (ಭಾರತನಿಗಮತತಿಗಳತಿಕ್ರಮಿಸಿ ಕ್ರಿಯಾವಿಶೇಷಗಳ) ಎಂ ತಾತ್ಪರ್ಯ. ಶ್ರೀಹರಿಯ ಈ ನೂತನರೂಪಗಳು ಬಹು ಚಿತ್ರವಿಚಿತ್ರವ ವೈವಿಧ್ಯಗಳಿಂದ ಯುಕ್ತವಾದದ್ದು.

ಪ್ರಮಾಣ : **ಯತ್ಪಾದಸ್ಯ ನಖಾಗ್ರೇಣ ಜಗತ್ಸೃಷ್ಟ್ಯಾದಿ ಕಾನಿ ದೃಷ್ಟ್ವಾ ಶ್ರೀರ್ನೈವ ಜಾನಾತಿ ಹ್ಯನಂತಾಪಿ ವಿಚಿತ್ರತಾಂ। ನೂತನಾನ್ಯೇ ಸಂದೃಷ್ಟ್ವಾ ಗುಣಕಾರ್ಯಾಣಿ ಸರ್ವಶಃ ।** ಹೀಗೆಂದು ತತ್ವನಿರ್ಣ ಪ್ರಮಾಣ.

ಹೀಗೆ ಚಿತ್ರ ವಿಚಿತ್ರವಾದ ಶ್ರೀಹರಿಯ ಕ್ರಿಯಾವಿಶೇಷಗಳು ಶ್ರೀರವ ದೇವಿಯರಿಗ ನೂತವಾಗಿ (ಕ್ಷಣಕ್ಷಣಕ್ಕೂ ಹೊಸಹೊಸದಾಗಿ) ಕಾಣಿಸುತ್ತಿ ವುವು. (ಬಗೆಬಗೆಯ ನೂತನವ ಕಾಣುತ). ಈ ನಿತ್ಯನೂತನರೂಪಗಳನ ಕಾಣುತ್ತಾ, ಶ್ರೀ ರಮಾದೇವಿಯರು ಆನಂದೋದ್ರೇಕದಿಂದ ಸ್ತುತಿಸಿ, ಹರು ಯುಕ್ತರಾಗಿ ಹಿಗ್ಗುತ್ತಾ (ಮಿಗೆಹರುಷದಿಂ ಪೊಗಳಿ ಹಿಗ್ಗುವ) ಇರುವರ ಶ್ರೀರಮಾದೇವಿಯರು ತ್ರಿಗುಣಾಭಿಮಾನಿಗಳು (ತ್ರಿಗುಣಮಾನಿ).

ಪ್ರಮಾಣ : **ಸತ್ವಾಭಿಮಾನಿನೀ ಶ್ರೀ ರೂಪಾ ಭೂ ರೂಪಾ ರ ಸಶ್ಚನೈ । ತಮೋಭಿಮಾನಿನೀ ದುರ್ಗಾಭ್ಯಾ ರೂಪತ್ರಯಯು**

ರಮಾ || ಶುಭ್ರೇಷು ಮುಕ್ತ್ಯಯೋಗ್ಯೇಷು ಶುಭ್ರಾ ಶ್ರೀರಮಾಭಿಮಾನಿನೀ ರಕ್ತೇಷು ಸರ್ವಬದ್ಧೇಷು ರಕ್ತಾ ಭೂರಭಿಮಾನಿನೀ || ನೀಲೇಷ್ವಯೋಗ. ಜೀವೇಷು ನೀಲಾ ದುರ್ಗಾಭಿಮಾನಿನೀ |–ಹೀಗೆಂದು ಪ್ರಕಾಶಸಂಹಿತೆಯ ಪ್ರಮಾಣವಿದೆ. ಅಂದರೆ, (೧) ಶ್ರೀ ರೂಪವು ಸತ್ವಗುಣಕ್ಕೆ ಅಭಿಮಾನಿ ಯಾದುದು. ಮುಕ್ತಿಯೋಗ್ಯರಾದ ಸಾತ್ವಿಕಚೇತನರಲ್ಲಿ ಶುಭ್ರವಾದ (ಬಿಳಿಯ ಬಣ್ಣ) ಶ್ರೀ ರೂಪದಿಂದ ಶ್ರೀರಮಾದೇವಿಯರು ವಿರಾಜಮಾನರಾಗಿದ್ದಾರೆ, (೨) ಭೂ ರೂಪದಿಂದ ರಜೋಗುಣಕ್ಕೆ ಅಭಿಮಾನಿಗಳು. ಮಿಶ್ರಜೀವರು ರಜೋಗುಣದಿಂದ ಯುಕ್ತರು. ಇವರಲ್ಲಿ ರಕ್ತವರ್ಣದಿಂದ ಭೂ ರೂಪರಾಗಿ ದ್ದಾರೆ. (೩) ತಮೋಯೋಗ್ಯರಲ್ಲಿ ನೀಲವರ್ಣದಿಂದ ದುರ್ಗಾರೂಪದಿಂದ ತಮೋಗುಣಕ್ಕೆ ಅಭಿಮಾನಿಗಳಾಗಿದ್ದಾರೆ.

(೩) ಭಾವಪ್ರಕಾಶಿಕಾ ವ್ಯಾಖ್ಯಾನ : ಶ್ರೀಲಕ್ಷ್ಮೀದೇವಿಯು ಸತ್ವ ಗುಣ, ರಜೋಗುಣ ಮತ್ತು ತಮೋಗುಣಗಳೆಂಬ ಮೂರುಗುಣಗಳಿಗೆ ಅಭಿಮಾನಿಗಳಾಗಿ ಕ್ರಮವಾಗಿ ಶ್ರೀ, ಭೂ, ದುರ್ಗಾ ಎಂಬ ಮೂರು ರೂಪ ಗಳಿಂದ ಶ್ರೀಹರಿಯನ್ನು ಸೃಷ್ಟಿ ಕಾಲದಲ್ಲಿಯೂ, ಸಂರಕ್ಷಣೆಯ ಕಾಲದಲ್ಲಿಯೂ ಮತ್ತು ಜಗತ್ತನ್ನು ತನ್ನ ಉದರದಲ್ಲಿ ಇಟ್ಟುಕೊಂಡು ಮಲಗಿರುವ ಪ್ರಳಯ ಕಾಲದಲ್ಲಿಯೂ, ಕ್ಷಣಮಾತ್ರವೂ ಬಿಡದೆ ಶ್ರೀಹರಿಯನ್ನು ಸೇವಿಸುತ್ತಿರುವರು. ಪರಮಾತ್ಮನು ಸ್ವರೂಪಭೂತವಾದ ಅವತಾರರೂಪಗಳಿಂದಲೂ (ರಾಮ ಕೃಷ್ಣಾದಿ), ಮೂಲರೂಪದಿಂದಲೂ (ನಾರಾಯಣ), ಯಾವಯಾವ ವ್ಯಾಪಾರ ವಿಶೇಷಗಳನ್ನು ಮಾಡುತ್ತಿರುವನೋ, ಆಯಾಯಾ ಕಾರ್ಯವಿಶೇಷಗಳನ್ನೂ ಮತ್ತು ಗುಣರೂಪಗಳನ್ನೂ ಆಲೋಚನೆಯಿಂದ ತಿಳಿಯುತ್ತಾ, ಇನ್ನೂ ಭಾರತ ದಲ್ಲಿಯೂ, ವೇದರಾಶಿಗಳಲ್ಲಿಯೂ ಹೇಳದಿರುವ ಹೊಸ ಹೊಸದಾದ ಭಗವನ್ಮ ಹಿಮೆಗಳನ್ನೂ ಮತ್ತು ಗುಣರೂಪಗಳನ್ನೂ ಅಪಾರವಾಗಿ ಕ್ಷಣಕ್ಷಣದಲ್ಲಿಯೂ ಕಾಣುತ್ತಾ, ಶ್ರೀಹರಿಯನ್ನು ಕೊಂಡಾಡಿ, ಆನಂದದಿಂದ ಹಿಗ್ಗುತ್ತಿರುವರೋ; ಅಂತಹ ಶ್ರೀ ಲಕ್ಷ್ಮೀದೇವಿಯು ನಮ್ಮೆಲ್ಲರನ್ನು ಸಲಹಲಿ. ಶ್ರೀ ಪರಮಾತ್ಮನ ಅನುಗ್ರಹಪಡೆಯಬೇಕಾದರೂ, ಹಾಗೆಯೇ, ಅಪರೋಕ್ಷದಲ್ಲಿ ಪರಮಾತ್ಮನಬಿಂಬ ದರ್ಶನವಾಗಬೇಕಾದರೂ ಶ್ರೀ ಲಕ್ಷ್ಮೀದೇವಿಯರ ಅನುಗ್ರಹವು ಅತ್ಯಾವಶ್ಯಕ. ಪ್ರಳಯಕಾಲದಲ್ಲಿ ಬ್ರಹ್ಮಾದಿ ಯಾವ ದೇವತೆಗಳೂ ಇರುವುದಿಲ್ಲ. ಶ್ರೀ ರಮಾ

ದೇವಿಯರು ಶ್ರೀ,ಭೂ ಮತ್ತು ದುರ್ಗಾಎಂಬ ಮೂರುರೂಪಗಳಿಂದಕ್ರಮವಾ ಸತ್ವ, ರಜ ಮತ್ತು ತಮೋಗುಣಗಳಿಗೆ ಅಭಿಮಾನಿಗಳಾಗಿ ಶ್ರೀ ಪರಮಾತ್ಮ ಸೇವಾ ಮಾಡುತ್ತಿರುವರು. ಪ್ರಮಾಣ : **ಶ್ರೀರ್ಭೂಮಿರಿತಿ ರೂಪಾಭ್ಯಾಂ ಪ್ರಕೃತಿರ್ವಿಷ್ಣುನಾ ಸಹ। ಶೇತೇ ಶ್ರುತಿ ಸ್ವರೂಪೇಣ ಸ್ತೌತಿ ಬ್ರಹ್ಮಲಯೇ ಹರಿವ್।**—ಎಂದು **ಭಾಗವತ ದಶಮಸ್ಕಂಧ ತಾತ್ಪರ್ಯ ನಿರ್ಣಯ** ವಚ ವಿದೆ. ಅಂದರೆ, ಪ್ರಳಯಕಾಲದಲ್ಲಿ ಭೂ ದೇವಿಯು ಶಯ್ಯಾರೂಪಳಾಗಿ ವಟ ಪತ್ರವಾಗುವಳು. ಶ್ರೀ ದೇವಿಯು ಪರಮಾತ್ಮನೊಡನೆ ಶಯನಮಾಡುವಳು. ದುರ್ಗಾದೇವಿಯು ಪರಮಾತ್ಮನನ್ನು ಶ್ರುತಿರೂಪಳಾಗಿ ಸ್ತೋತ್ರಮಾಡುತ್ತಿರು ವಳು.

**ನ ಘಟೇತ ಉದ್ಭವಃ ಪ್ರಕೃತಿ ಪುರುಷಯೋರಜಯೋಃ** ಎಂದು **ಶ್ರುತಿಗೀತೆಯ** ವಚನ. ಅಂದರೆ, ಪ್ರಕೃತಿಪುರುಷನಾಮಕರಾದ ಲಕ್ಷ್ಮೀ ನಾರಾಯಣರಿಬ್ಬರೂ ಉತ್ಪತ್ತಿಶೂನ್ಯರು. ಅವರಿಬ್ಬರೂ ಪ್ರಳಯಕಾಲ ದಲ್ಲಿಯೂ ಸಹ ಇದ್ದೇಇರುವರು.

**ಉಭಯ ಯಜೋರ್ಭಂತ್ಯಸುಭೃತೋ ಬಲಬುದ್ಬುದವತ್**–ಎಂದು **ಅದೇ ಶ್ರುತಿಗೀತೆಯ** ವಚನ. ಅಂದರೆ, ಬ್ರಹ್ಮಾದಿಜೀವರೆಲ್ಲರೂ ಇವರೀರ್ವರ ಸಂಬಂಧದಿಂದಲೇ ನೀರಿನೊಳಗೆ ನೀರು ಬೀಳಲು ಗುಳ್ಳೆಗಳು ಏಳುವಂತೆ, ಸೃಷ್ಟಿ ಯನ್ನು ಹೊಂದುವರು ಎಂದು ತಾತ್ಪರ್ಯ. ಈ ರೀತಿಯಲ್ಲಿ ಶ್ರುತಿಗಳು "ಯಾವಕಾರಣದಿಂದ ಜ್ಞಾನಿಗಳಾದ ಬ್ರಹ್ಮದೇವರು ನಿನ್ನಿಂದ ಸೃಷ್ಟಿ ಸಲ್ಪಟ್ಟರೋ ಅವರನ್ನು ಅನುಸರಿಸಿ ಆಯಾಯಾ ಪದವಿಗಳಿಗೆ ಬರುವ ದೇವತಾ ಗಣವು ಸೃಷ್ಟಿಯಾಯಿತೋ, ಆ ಕಾರಣದ ದೆಶೆಯಿಂದಲೇ ಈ ಜಗತ್ತಿನಲ್ಲಿ ಉತ್ಪತ್ತಿ ಮತ್ತು ನಾಶವುಳ್ಳ "ಕ್ಷರ" ವರ್ಗಕ್ಕೆ ಸೇರಿದ ಚೇತನರು ಉತ್ಪತ್ತಿ ನಾಶರಹಿತನಾದ ನಿನ್ನ ಮಹಿಮಾವಿಶೇಷಗಳನ್ನು ತಿಳಿಯಲಾರರು. ನಿನ್ನ ಮಹಿಮೆಯನ್ನು ಸಾಕಲ್ಯವಾಗಿ ನೀನೊಬ್ಬನೇ ಬಲ್ಲೆ" ಎಂದು ಕೊಂಡಾಡಿದೆ. ಪ್ರಳಯಕಾಲದಲ್ಲಿ ಶ್ರೀಪರಮಾತ್ಮನ ಸೇವಾ ಮಾಡುತ್ತಾ ಲಕ್ಷ್ಮೀದೇವಿಯರು ಮಾತ್ರ ಇರುವರೇ ಹೊರತು, ಬ್ರಹ್ಮಾದಿಗಳು ಯಾರೂ ಇರುವುದಿಲ್ಲ.

**ಜಗದುದರನ** ಎಂಬ ವಿಶೇಷಣವೂ ಪರಮಾತ್ಮನ ಪ್ರಳಯಕಾಲದ ಸ್ಥಿತಿಯನ್ನು ತೋರಿಸುವುದು. **ಸಂಶಾಂತ ಸಂವಿದಖಿಲಂ ಜಠರೇ ನಿಧಾಯ ಲಕ್ಷ್ಮೀ ಭುಜಾಂತರಗತಃ ಸ್ವರತೋಪಿಚಾಗ್ರೇ**—ಎಂಬ **ಭಾರತ ತಾತ್ಪರ್ಯ ನಿರ್ಣಯ** ವಚನವಿದೆ. ಅಂದರೆ, ಪರಮಾತ್ಮನು ಪ್ರಳಯ ಕಾಲದಲ್ಲಿ ಸಮಸ್ತ ಜಗತ್ತನ್ನೂ ತನ್ನ ಉದರದಲ್ಲಿಟ್ಟುಕೊಂಡು, ಲಕ್ಷ್ಮಿಯಿಂದ ಆಲಂಗಿತನಾಗಿ ಇರುತ್ತಾನೆ ಎಂಬ ತಾತ್ಪರ್ಯ.

**ತಸ್ಯೋಧರಸ್ಥ ಜಗತಃ**—ಎಂಬ ನಿರ್ಣಯಶ್ಲೋಕದಿಂದ ಶ್ರೀಪರಮಾತ್ಮನು ಪ್ರಳಯಕಾಲದಲ್ಲಿ ತನ್ನ ಉದರದಲ್ಲಿದ್ದ ಜೀವಗಣಗಳನ್ನು ಸೃಷ್ಟಿಗೆ ತಂದು, ಆವರವರ ಯೋಗ್ಯತಾನುಸಾರ ಸಾಧನಗಳನ್ನು ಮಾಡಿ ಮಾಡಿಸಿ, ತಕ್ಕ ಫಲಗಳನ್ನು ಕೊಟ್ಟು ಉದ್ಧರಿಸಬೇಕೆಂದು ಪ್ರಳಯಾವಸಾನಕಾಲದಲ್ಲಿ ಸಂಕಲ್ಪಿಸಿದನು ಎಂದು ಉಕ್ತವಾಗಿದೆ. ಇದರಿಂದ ಬ್ರಹ್ಮಾದಿಗಳು ಇಲ್ಲದ ಆ ಪ್ರಳಯ ಕಾಲದಲ್ಲಿ ಭಗವದ್ವ್ಯಾಪಾರಗಳ ವಿಷಯವನ್ನು ಬ್ರಹ್ಮಾದಿಗಳು ಅರಿಯರು. ಆಗ ಶ್ರೀಭೂದುರ್ಗಾ ರೂಪಗಳಿಂದ ಪರಮಾತ್ಮನನ್ನು ಸೇವಿಸುತ್ತಿದ್ದ ತ್ರಿಗುಣಾಭಿಮಾನಿಗಳಾದ ಶ್ರೀ ರಮಾದೇವಿಯರು, ಅಪಾರವಾದ ಭಗವನ್ಮಹಿಮೆಗಳನ್ನು ಎಡಬಿಡದೆ ನೋಡುತ್ತಿರುವರು. ಅತಏವ, ಮಹಾಮಹಿಮೋಪೇತರು. ಶ್ರೀ ಲಕ್ಷ್ಮೀದೇವಿಯ ಜ್ಞಾನದಲ್ಲಿ ಲೇಶಾಂಶವಾದರೂ ಬಹ್ಮಾದಿಗಳಿಗೆ ಇಲ್ಲವೆಂಬು ಸ್ಪಷ್ಟವಾಯಿತು. ಬ್ರಹ್ಮದೇವರು ಜಗದ್ವಿಷಯವನ್ನು ಆಲೋಚಿಸಿದರೆ (ಅಂದರೆ ಜಗದ್ವಿಷಯಕವಾದ ಭಗವಂತನ ಗುಣರೂಪಕ್ರಿಯಾವಿಶೇಷಗಳನ್ನು ಧ್ಯಾನಿಸಿದರೆ), ಅಂಗೈಸಲ್ಲಿರುವ ನೆಲ್ಲೀಕಾಯಿಯಂತೆ (ಕರತಲಾಮಲಕ) ಸ್ಪಷ್ಟವಾಗಿ ತಿಳಿದುಕೊಳ್ಳುವರು. ಆದರೆ ಜಗದ್ವಿಷಯಕವಾದ ಈ ಜ್ಞಾನದಲ್ಲಿ ಶ್ರೀ ರಮಾದೇವಿಯರಿಗೆ ಆಲೋಚನೆ ಇಲ್ಲ. ಅನಾಲೋಚನೆಯಾ ತಿಳಿಯಬಲ್ಲರು. ಆದರೆ ಶ್ರೀ ಪರಮಾತ್ಮನ ಅತಿವಿಮಲಗುಣರೂಪಗಳನ್ನು ಮತ್ತು ಮೂಲರೂಪ ಹಾಗೂ ಅವತಾರರೂಪಗಳಿಂದ ಮಾಡುವ ಕ್ರಿಯಾವಿಶೇಷಗಳನ್ನೂ ಆಲೋಚಿಸುತ್ತಾ, ಭಾರತಾದಿಗಳಲ್ಲಿಯೂ ಹೇಳದಿರುವ ವಿಷಯಗಳನ್ನು (ಭಾರತ ನಿಗಮತತಿಗಳತಿಕ್ರಮಿಸಿ) ಅತ್ಯಧಿಕವಾಗಿ ತಿಳಿಯುವರು. ಆದರೆ ಸಾಕಲ್ಯೇನ ಭಗವನ್ಮಹಿಮೆಗಳನ್ನು ತಿಳಿಯಲು ಎಷ್ಟು ಆಲೋಚಿಸಿದರೂ ಶ್ರೀರಮಾದೇವಿಯರಿಗೆ ಸಾಧ್ಯವಾಗುವಂತಿಲ್ಲ,

**ಪ್ರಮಾಣ : ನನಾಮರೂಪೇ ಗುಣಕರ್ಮ ಜನ್ಮಭಿರ್ನಿರೂಪಿತ ವ್ಯೈತವತಸ್ಯ ಸಾಕ್ಷಿಣಃ ॥ ಮನೋವಚೋಭ್ಯಾಮನುಮೇಯ ವರ್ತ್ಮನೋ ದೇವ ಕ್ರಿಯಾಯಾಃ ಪ್ರತಿಯಂತ್ಯಥಾಪಿಹಿ ॥**—ಎಂದು **ಭಾಗವತದಶಮಸ್ಕಂಧ** ವಚನವಿದೆ. ಈ ಶ್ಲೋಕವು ದೇವಕೀಗರ್ಭದಲ್ಲಿರುವ ಪರಮಾತ್ಮನನ್ನು ಬ್ರಹ್ಮದೇವರು ಸ್ತೋತ್ರ ಮಾಡುವ ಪ್ರಕರಣವನ್ನು ಪ್ರತಿಪಾದಿಸುವುದು. "ಎಲೈ ದೇವದೇವನೆ, ನಿನ್ನ ನಾಮರೂಪಾದಿ ವಿಶೇಷಗಳನ್ನು ಕರ್ಮದಿಂದಲಾಗಲೀ, ಜನ್ಮದಿಂದಲಾಗಲೀ, ಗುಣಗಳಿಂದಲಾಗಲೀ ಕಾಣಲು ಸಾಧ್ಯವಿಲ್ಲ. ನಿನ್ನ ಸ್ವರೂಪವನ್ನು ಕಾಣಲು ಯಾರಿಂದಲೂ ಶಕ್ಯವಿಲ್ಲ. ನಿನ್ನ ಗುಣರೂಪಗಳನ್ನು ಸಾಕ್ಷೀಭೂತನಾಗಿ ನಿನಗೆ ನೀನೇ ನೋಡುತ್ತಿರುವೆ" ಎಂದು ಬ್ರಹ್ಮದೇವರೇ ಸ್ತೋತ್ರ ಮಾಡಿದ್ದಾರೆಂದಮೇಲೆ ಇತರರ ಪಾಡೇನು ? ಬ್ರಹ್ಮಾದಿಗಳು ವೇದೋಕ್ತವಾಗಿರುವ ಭಗವನ್ಮಹಿಮೆಗಳನ್ನು ಅವೆಷ್ಟಿರುವುವೋ ಅಷ್ಟು ಪರಿಮಿತವಾಗಿ ತಿಳಿದು, ಆನಂದಪರವಶರಾಗುವರು. ಶ್ರೀರಮಾದೇವಿಯರು ಬ್ರಹ್ಮಾದಿಗಳಿಗಿಂತಲೂ ಮತ್ತು ವೇದಾದಿಗಳಲ್ಲಿ ಹೇಳಿರುವುದಕ್ಕಿಂತಲೂ ಅತ್ಯಧಿಕವಾಗಿ ತಿಳಿದಿದ್ದರೂ, ಸಾಕಲ್ಯೇನ ಪೂರ್ಣವಾಗಿ ತಿಳಿಯಲಾರರು. ಬ್ರಹ್ಮಾದಿಗಳು ವೇದಾದಿಗಳಲ್ಲಿ ಹೇಳಿರುವ ಭಗವನ್ಮಹಿಮೆಗಳನ್ನೇ ಅಪಾರವಾಗಿ ಕಾಣುವರು. ಇವರಿಗಿಂತ ಅತ್ಯಧಿಕವಾಗಿ ತಿಳಿಯ ಬಲ್ಲ ಶ್ರೀರಮಾದೇವಿಯರೂ ಭಗವನ್ಮಹಿಮೆಗಳನ್ನು ಹೊಸಹೊಸದಾಗಿ ನೋಡುತ್ತಾ ಚಂಚಲವನ್ನೈದುವರು. ಶ್ರೀ ಪರಮಾತ್ಮನ ಪಾದಾಂಗುಷ್ಟದ ಅಪಾರಮಹಿಮಾ ವಿಶೇಷಗಳು ಇನ್ನೂ ಗೋಚರವಾಗದೇ, ಅಪಾರವಾಗಿದ್ದು, ಇನ್ನೂ ಆತನ ಗುಣಾತಿಶಯಗಳನ್ನು ಎಣಿಸುತ್ತಲೇ ಇರುವರು. ಶ್ರೀ ರಮಾದೇವಿಯರ ಆಲೋಚನೆಗೂ ನಿಲುಕದ ಮಹಾಮಹಿಮೆಗಳುಳ್ಳ ಶ್ರೀ ಪರಮಾತ್ಮನ ಅದೆಂತಹ ಅಚಿಂತ್ಯಾದ್ಭುತಮಹಿಮ !

**ಪ್ರಮಾಣ: ವಿಷ್ಣೋರ್ಗುಣಾನಾನಂತಾಶ್ಚ ದ್ರಷ್ಟುಂ ಶಕ್ತಾಪಿ ಹಿ ಸ್ಫುಟಂ । ಕ್ಷಣೇಕ್ಷಣೇ ನವನವ ಸುವಿಶೇಷೋನಲಂಭತಃ ॥** ಎಂದು ಸತ್ತತ್ವರತ್ನಮಾಲಾ ಗ್ರಂಥದ ವಚನ.

**(೪) ಭಾವದರ್ಪಣಟೀಕಾ-ಶ್ರೀ ಕಮಲಾಪತಿದಾಸರ ವ್ಯಾಖ್ಯಾನ:-** ಈ ಪದ್ಯದಲ್ಲಿ, ಶ್ರೀ ಜಗನ್ನಾಥದಾಸವರ್ಯರು. ವಾಙ್ಮನೋವ್ಯಾಪಾರರೂಪ

ವಾದ ಗ್ರಂಥೋಪಕ್ರಮದಲ್ಲಿ ಸಕಲಿ ವಾಙ್ಮಮನೋಭಿಮಾನಿಗಳಾದ ಶ್ರೀ ಲಕ್ಷ್ಮೀ ದೇವಿಯರ ವಂದನವು ಪರಮ ಅವಶ್ಯಕವಾದ್ದರಿಂದ ಶ್ರೀದೇವಿಯರನ್ನು "ಪಾಲಿಸಲಿ" ಎಂದು ಪ್ರಾರ್ಥಿಸುತ್ತಾರೆ.

ಜಗತ್ತನ್ನೇ ಉದರದಲ್ಲಿ ಉಳ್ಳ ಪರಮಾತ್ಮನ, ಅನಂತಾನಂತವೇದ ರಾಶಿಗಳಲ್ಲಿ ಕುಡಂಥ ಗುಣಗಳನ್ನು ಸ್ತುತಿಸಿ, ಆತನ ಗುಣಗಳನ್ನು ಯಾವತ್ತೂ ತಿಳಿಯದೇ, ಭಾರತ ವೇದಾದಿ ಗ್ರಂಥಗಳನ್ನು ಆಕ್ರಮಿಸಿ, ಅತ್ಯಂತ ಸ್ತೋತ್ರ ಮಾಡಲು, ಒಂದೊಂದು ಗುಣದಲ್ಲಿ ಶ್ರೀಹರಿಯ ಗುಣಾನಂತ್ಯವನ್ನು ಕಂಡು ಗಣನೆಗೆ ಬಾರದೇ, ಅಪರಿಮಿತ ಹರುಷಾಬ್ಧಿಯಲ್ಲಿ ಮುಳುಗುತ್ತಾರೆ. ಇದಕ್ಕೆ ಪ್ರಮಾಣ : **ಕ್ಷಣಸ್ಯಾನಂತ ಭಾಗಾನಾಂ ಏಕೈಕಸ್ಯಾಂಶಕೇಪಿಚ । ವಿಷ್ಣೋರ್ಗುಣಾನನಂತಾಶ್ಚ ದ್ರಷ್ಟುಂ ಶಕ್ತಾಪಿ ಹಿ ಸ್ಫುಟಿವ್ ॥ ಕ್ಷಣೇ ಕ್ಷಣೇ ನವನವ ಸುವಿಶೀಷೋಪಲಂಭತಃ । ತತ್ರತ್ಕಾಲೇ ಗ್ರಾಹ ಮಾನಾ ಕೌತೂಹಲ ಮಹಾರ್ಣವೇ। ಪರಮಾನಂದಸಂದೋಹ ಸಾಂದ್ರಾ ಧ್ಯಾಯತಿ ತಾನ್ಪುನಃ । ಪುನರಾಶ್ಚರ್ಯಮುಕ್ತಾ ಸಾ ಪುನರದ್ಭುತದರ್ಶನಾ ॥ ವಿಷ್ಣೋರ್ಗುಣಾಂಶಲೇಶಂ ವಾ ನ ಜಾನಾತಿ ತಥಾಪಿ ತು ॥** ಎಂದು ಸತ್ತತ್ವರತ್ನಮಾಲಾ ಗ್ರಂಥದವಚನ. ಶ್ರೀರಮಾ ದೇವಿಯರು ತ್ರಿಗುಣಾಭಿಮಾನಿಗಳು ಮತ್ತು ಸಕಲಜೀವರುಗಳಿಗೂ ಉತ್ತಮ ರಾಗಿರುವ ಬ್ರಹ್ಮವಾಯುಗಳಿಗೆ ಪರಮೋತ್ತಮರಾಗಿದ್ದಾರೆ. ಈ ವಿಷಯದಲ್ಲಿ ಪ್ರಮಾಣ : **ಏತೇಭ್ಯೋ ಶ್ರೀಸ್ತು ಮುಕ್ತೇಭ್ಯೋ ಗುಣೈಃ ಕೋಟಿ ಗುಣೋತ್ತರಾ ।** ಎಂದು ಬೃಹದ್ಭಾಷ್ಯ ಪ್ರಮಾಣವಿದೆ.

**ಯಂ ಕಾಮಯೇ ತಂ ತಮುಗ್ರಂ ಕರೋಮಿ ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ ।** ಎಂದು ಶ್ರೀಅಂಭೃಣೀಸೂಕ್ತ ವಚನವಿದೆ, **ವಿರಿಂಚಾದೀಂಸ್ತುಣೀಕರ್ತುಂ ತೃಣಮಪ್ಯುತ್ತಮಂ ಸಾ॥** ಎಂದು ಸ್ತತ್ವ ರತ್ನಮಾಲಾ ಗ್ರಂಥದ ಪ್ರಮಾಣ **ಸೈವಸ್ಯಾತ್ಸರ್ವಕರ್ತ್ರೀ ಚ ಸದಾ ಸರ್ವತ್ರ ಸಂಸ್ಥಿತಾ । ಯೋಜಕ್ಷತಿ ಪ್ರಾಣತಿ ವಾ ಶೃಣೋತಿ ಚ ವಿಪಸ್ಯತಿ। ವಕ್ತಿ ಸ್ಪೃಶತಿ ಯತ್ಕಿಂಚಿದಾ ದದಾತಿ ಚ ಗಚ್ಛತಿ ॥ ಇತ್ಯಾದಿ ಸರ್ವಂ**

**ರಮಯಾ ತಾಂ ವಿನಾ ನಹಿ ಕಿಂಚನ** ॥ ಎಂದು **ಸತ್ತತ್ವರತ್ನಮಾಲಾ** ಗ್ರಂಥದ ಪ್ರಮಾಣವಾಕ್ಯ. **ಪಾರನೇಷ್ಟ್ಯಾದಿಕೈಶ್ವರ್ಯ ಭೋಗಾನ್ಸರ್ವ ಜಗದ್ಗತಾನ್॥ ಜ್ಞಾನಭಕ್ತ್ಯಾಧಿಕಾನ್ ಭರ್ವಾನ್ಮುಕ್ತಿಚಾನಂದ ಸಂತತಿಂ। ಅನಾದ್ಯನಂತಕಾಲೇಪಿ ಯಥಾಯೋಗ್ಯಂ ಪೃಥಕ್ ಪೃಥಕ್॥ ಪ್ರಾಪ್ನುವಂತಿ ಮಹಾಲಕ್ಷ್ಮ್ಯಾ ಅಪಾಂಗಲವ ಮಾತ್ರತಃ** ॥ ಎಂದು **ಸತತ್ತ್ವರತ್ನಮಾಲಾ** ಗ್ರಂಥದವಾಕ್ಯ. ಇತ್ಯಾದಿ ಪ್ರಮಾಣಗಳಿಂದ ಬ್ರಹ್ಮಾದಿ ತೃಣಾಂತಜೀವರ ಯೋಗ್ಯತಾನುಸಾರ:ಜ್ಞಾನೈಶ್ವರ್ಯಪ್ರದಾತೃತ್ವ ಶಕ್ತಿ ಶ್ರೀಲಕ್ಷ್ಮೀದೇವಿಗೆ ಸಿದ್ಧವಾದ ಪ್ರಯುಕ್ತ, ಬ್ರಹ್ಮಾದಿಗಳಿಗಿಂತ ಶ್ರೀದೇವಿಗೆ ಉತ್ತಮತ್ವ ಸಿದ್ಧವಾದಂತಾಯಿತು. ಇಂತಹ ಶ್ರೀರಮಾದೇವಿಯರ ಕರ ಕಮಲಗಳಿಂದ ಅರ್ಚಿತನಾದ ಪ್ರಯುಕ್ತ, ಶ್ರೀಪರಮಾತ್ಮನಿಗೆ ಮಹಾ ಮಹಾತ್ಮ್ಯವೂ ತಾನೇತಾನಾಗಿ ಘಟನವಾಯಿತು ಎಂದು ದಾಸಾರ್ಯರ ಹೃದಯ.

**(೫) ಗುರುಹೃದಯ ಪ್ರಕಾಶಿಕಾ ವ್ಯಾಖ್ಯಾನ :** ಈ ಪದ್ಯದಲ್ಲಿ ವಿಷ್ಣುವಿನ ಆಧೀನರು ರಮಾದೇವಿಯರು ಎಂದು ಸ್ತುತಿಸುತ್ತಾರೆ. ಪ್ರಪಂಚ ವನ್ನು **ಹೊಟ್ಟೆಯಲ್ಲಿಟ್ಟು** ರಕ್ಷಿಸುವ ಈ ದೇವರ ಅತಿವಿಮಲಗುಣರೂಪಗಳ ಅಂದರೆ, ಪ್ರಾಕೃತವಲ್ಲದ್ದರಿಂದ, ಅತಿಶುದ್ಧಜ್ಞಾನಾನಂದಾದಿ ಗುಣಗಳನ್ನೂ, ರೂಪಗಳನ್ನೂ, ಭಾರತನಿಗಮತತಿಗಳತಿಕ್ರಮಿಸಿ ಎಂದರೆ. ಭಾರತವೇದಾದಿಗಳಲ್ಲಿ ಹೇಳಿರುವುದನ್ನೇ ತಿಳಿದಿರುವುದಲ್ಲದೆ, ಇನ್ನೂ ಹೆಚ್ಚಾಗಿ ಬುದ್ಧಿಬಲದಿಂದ ಆಲೋಚಿಸಿ, ತಿಳಿದು, ಕ್ರಿಯಾವಿಶೇಷಗಳೆಂಬ ಪರಮಾತ್ಮನ ಚರಿತ್ರೆಯ ಅತಿಶಯ ಗಳನ್ನು ಬಹು ಪರಿಯಿಂದ ಹೊಸಹೊಸದಾಗಿ ಕಾಣುತ್ತಾ, ಹೆಚ್ಚಾದ ಸಂತೋಷ ದಿಂದ ಸ್ತುತಿಸಿ, ಮುಖವಿಕಾಸಹೊಂದುವ, ಸತ್ವರಜಸ್ತಮೋಗುಣಗಳ ಅಭಿ ಮಾನಿಗಳಾದ ಮಹಾಲಕ್ಷ್ಮಿಯು ನಮ್ಮನ್ನು ಸದಾ ಹರುಷಪಡಿಸಲಿ. ಇಲ್ಲಿ ಅಮ್ಮನವರ ಜ್ಞಾನವಿಚಾರದಲ್ಲಿ **ಈಶಾದನ್ಯತ್ರ ಜಗತಿ ಅನಾಲೋಚನ ಯ್ಯೈವತು**–ಎಂಬ ಶಾಸ್ತ್ರಾರ್ಥ ವಿವರಿಸಲ್ಪಟ್ಟಿತು.

**(೬) ಜಂಮಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ:**

**ಮಯಾಸೋ ಅನ್ನಮತ್ತಿ** ಎಂಬುದು **ಅಂಭ್ರಣೀಸೂಕ್ತದ** ವಚನವು-

ಇದರಿಂದ ಸಮಸ್ತಚೇತನರೂ ಮಾಡುವ ವ್ಯಾಪಾರಗಳು ಶ್ರೀಲಕ್ಷ್ಮೀದೇವಿಯರ ಅಧೀನವೆಂದು ತಾತ್ಪರ್ಯ. ಈ ಅಭಿಪ್ರಾಯವನ್ನೇ ಶ್ರೀಅಂಭ್ರಣೀ ಸೂಕ್ತದಲ್ಲಿ ಪ್ರತಿಪಾದಿಸಿರುವ ಪರಮಾತ್ಮನ ಪತ್ನಿಯಾದ ಶ್ರೀರಮಾದೇವಿಯರನ್ನು ಪರಮಾದರದಿಂದ ಪ್ರಾರ್ಥಿಸುತ್ತಾರೆ. ತಮ್ಮನ್ನು ಸಂರಕ್ಷಿಸಲಿ-ಎಂದು ಬೇಡಿಕೊಳ್ಳುತ್ತಾರೆ, ಜ್ಞಾನಿವರೇಣ್ಯರಾದ ದಾಸರಾಯರು.

ಶ್ರೀಹರಿಯು "ಜಗದುದರನು". ಅಂದರೆ, ವೈಕುಂಠವರ್ಣನದಲ್ಲಿ ಹೇಳಿರುವಂತೆ, ಬ್ರಹ್ಮಾಂಡೋದರನು ಎಂದು ತಾತ್ಪರ್ಯ. ವೇದಸಮೂಹಗಳನ್ನು ಮೀರಿ (ನಿಗಮತತಿಗಳನು ಅತಿಕ್ರಮಿಸಿ), ಅಂದರೆ, ವೇದರಾಶಿಗಳಲ್ಲಿ ಹೇಳಲ್ಪಡದಂಥ ಗುಣಾತಿಶಯಗಳನ್ನು. ಪರಮಾತ್ಮನು ಅವತಾರಮಾಡಿ ತೋರಿಸಿದ ತ್ರಿವಿಕ್ರಮಾವತಾರ ಮುಂತಾದಮಹಿಮಾವಿಶೇಷಗಳನ್ನು, (ಕ್ರಿಯಾವಿಶೇಷಗಳ) ಇವುಗಳಲ್ಲಿಯೂಸಹ ಹೊಸತನವನ್ನು ಅಂದರೆ, ಹಯಗ್ರೀವ, ಮಹಿದಾಸ ಮುಂತಾದ ಭಗವದ್ರೂಪಗಳ ಉಪದೇಶಾತ್ಮಕವಾದ ನೂತನವಾದ ಜ್ಞಾನ ಸ್ಫೂರ್ತಿಯನ್ನು ಎಂದು ಭಾವ.

**ಪುನರಾಶ್ಚರ್ಯಯುಕ್ತಾ ಸಾ**— ಎಂಬ ಪ್ರಮಾಣವಾಕ್ಯಗಳಂತೆ ಬ್ರಹ್ಮಾದಿಗಳಿಗೆ ನೂತನತ್ವೇನ (ಆಗಂತುಕಭಾವದಿಂದ) ಜ್ಞಾನಪ್ರಾಪ್ತಿ ಶ್ರೀರಮಾದೇವಿಯರಿಗೆ ಪೂರ್ವದಲ್ಲಿಯೇ ತಿಳಿಯಲ್ಪಟ್ಟ (ಜ್ಞಾನ) ಗುಣ ಕ್ರಿಯಾವಿಶೇಷಗಳ ಬಗ್ಗೆ ವಿಶೇಷಸ್ಫೂರ್ತಿಯು ಉಂಟಾಗುವುದು. ಇದು ಭಗವಂತನ ಉಪದೇಶದಿಂದ ಅಭಿವ್ಯಕ್ತವಾಗುವುದು. ಈ ತತ್ತ್ವವಿಷಯಗಳು ವಿಷ್ಣುಸ್ತುತಿಪ್ರಕರಣದಲ್ಲಿ (**ಸತ್ತತ್ವರತ್ನಮಾಲಾ**) ವರ್ಣಿಸಲ್ಪಟ್ಟಿವೆ, ಲಕ್ಷ್ಮೀದೇವಿಯರು "ಜಡಪ್ರಕೃತಿದೇವತೆ" ಎಂದು **ಗೀತಾತಾತ್ಪರ್ಯ** ವಚನವಿದೆ. ಇದರ ಪ್ರಕಾರ "ತ್ರಿಗುಣಾಭಿಮಾನಿ" ಎಂದು ಹೇಳಿದ್ದಾರೆ. ಅನಂತರ ಶ್ರೀಲಕ್ಷ್ಮೀದೇವಿಯು ನಮ್ಮನ್ನು ಪ್ರತಿದಿನವೂ ಸಂರಕ್ಷಿಸಲಿ (ಸಂತೈಸಲನುದಿನವು) ಎಂದು ಪ್ರಾರ್ಥಿಸಿದ್ದಾರೆ.

**(೬) ಇತರ ವ್ಯಾಖ್ಯಾನಗಳ ಸಾರಸಂಗ್ರಹ :**

(೧) "ಜಗದುದರನ" ಎಂದರೆ, ಜಗತ್ತನ್ನು ತನ್ನ ಉದರದಲ್ಲಿ ಉಳ್ಳವನು

ಎಂದರ್ಥ. ಇದಕ್ಕೆ ಪ್ರಮಾಣ : **ಪಾತಾಲಮೇತಸ್ಯಹಿ ಪಾದಮೂಲಂ.** ಎಂದು **ಭಾಗವತ** ಪ್ರಮಾಣವಚನ. ಬ್ರಹ್ಮಾಂಡಾಂತರ್ಗತವಾದ ಹದಿನಾಲ್ಕು ಲೋಕಗಳನ್ನು ಪರಮಾತ್ಮನು ತನ್ನ ಅಂಗಗಳಲ್ಲಿ ಧರಿಸಿದ್ದಾನೆ. ಆತನ ಪಾದ ಮೂಲವೇ ಪಾತಾಳಲೋಕವು. ಪರ್ವತಗಳು ಪರಮಾತ್ಮನ ಅಸ್ಥಿಸಂಧಿಗಳು. ಜಗತ್ತಿನಲ್ಲಿರುವ ನದೀ ಮೊದಲಾದುವೆಲ್ಲಾ ಅವನ ಅಂಗವೆಂದು ಕರೆಯಿಸಿ ಕೊಳ್ಳುತ್ತವೆ. ಆದರೆ ಪರಮಾತ್ಮನು ಇವುಗಳಲ್ಲಿ ವ್ಯಾಪ್ತನಾಗಿದ್ದು, ಅವುಗಳಿಗೆ ಆಶ್ರಯನಾಗಿ, ತಾನು ಮಾತ್ರ ಅವುಗಳಿಂದ ವಿಲಕ್ಷಣ(ಭಿನ್ನ)ನಾಗಿದ್ದಾನೆ; ಆದರೆ ಜಗದ್ಭಿನ್ನನು. ಇದಕ್ಕೆ ಪ್ರಮಾಣ: **ನಾಸ್ತಿ ನಾರಾಯಣ ಸಮಂ ನ ಭೂತೋ ನ ಭವಿಷ್ಯತಿ** ಎಂಬ ವಚನದಂತೆ, ಪರಮಾತ್ಮನು ಜಗದಾಶ್ರಯನು. ಆತನಿಗೆ ಸಮರಾರೂ ಇಲ್ಲವೇ ಇಲ್ಲ. ಹಿಂದೆ ಆಗಿಹೋದ ಜಗತ್ತಿನಲ್ಲಿಲ್ಲ. ಮುಂದೆ ಬರುವಂಥ ಜಗತ್ತಿನಲ್ಲಿಯೂ ಇಲ್ಲ. ವರ್ತಮಾನಕಾಲ ಜಗತ್ತಿನಲ್ಲಿಯೂ ಇಲ್ಲವೇ ಇಲ್ಲ ಎಂದು ಸಿದ್ಧವಾಯಿತು. ಇನ್ನು **ಲಕ್ಷ್ಮೀಕಾಂತ ಸಮಂತತೋಪಿ ನಿಕಲಯನ್....ದೂರತಃ ಅಸ್ಸಾಸ್ತಂ ಅಷ್ಟಮರಸ ಇವ ನೈವಪಶ್ಯಾಮಿ.** ಎಂಬ ಶ್ರೀಮದಾಚಾರ್ಯರ **ನಖಸ್ತುತಿ**ಯಲ್ಲಿ "ಜಗತ್ತಿನಲ್ಲಿ" ಷಡ್ರಸಗಳೆಂದೇ (ಆರು ರಸಗಳು) ಪ್ರಸಿದ್ಧಿ, ಏಳನೆಯರಸದ ಪ್ರಸ್ತಾಪವೇ ಇಲ್ಲ. ಇನ್ನು ಎಂಟನೆಯ ರಸ ಹೇಗೆ ಸಿದ್ಧವಾಗುವುದು ? ಎಂದು ಶ್ರೀಹರಿಯಸರ್ವೋತ್ತಮ ತ್ವವನ್ನು ಜಗತ್ತಿಗೆ ಸಾರಿ ಹೇಳಿದ್ದಾರೆ. "ರಸ" ಶಬ್ದದಿಂದ "ಶ್ರೇಷ್ಠತ್ವ" ಎಂದರ್ಥಮಾಡಬೇಕು.

(2) ಸಕಲ ಬ್ರಹ್ಮಾಂಡ ಪಿಂಡಾಂಡಕ್ಕೆ ಶ್ರೀಮನ್ನಾರಾಯಣನ ಉದರ ದಿಂದ ಸೃಷ್ಟಿ ಮತ್ತು ಸ್ಥಿತಿಗಳು. ಸರ್ವಜಗತ್ತು ಸೂಕ್ಷ್ಮವಾಗಿ ಲಯವನ್ನು ಹೊಂದಿ, ಪರಮಾತ್ಮನ ಉದರದಲ್ಲಿ ಪ್ರವೇಶವಾಗುವುದು. ಬ್ರಹ್ಮ ರುದ್ರೇಂದ್ರಾದಿ ಸಮಸ್ತದೇವತೆಗಳನ್ನೂ ಪರಮಾತ್ಮನು ತನ್ನ ಅವಯವ ಗಳಿಂದ ಸೃಷ್ಟಿಮಾಡುತ್ತಾನೆ. **(ಪ್ರಮಾಣ : ಪುರುಷಸೂಕ್ತ)** ಬ್ರಹ್ಮಾದಿ ಸಮಸ್ತ ದೇವತಾವರ್ಗ, ತ್ರಿವಿಧಜೀವರು, ಸ್ಥಾವರ ಮತ್ತು ಜಂಗಮಜೀವರು ಜಡಗಳು ಸೂಕ್ಷ್ಮರೂಪದಲ್ಲಿ ಶ್ರೀಲಕ್ಷ್ಮೀಕಾಂತನ ಉದರದಲ್ಲಿ ಆವಾಸ ಮಾಡಿಕೊಂಡಿರುತ್ತಾರೆ. ಪರಮಾತ್ಮನಾದರೋ ಜಗದುದರನು. ಅತಳ, ವಿತಳ, ಸುತಳ, ತಳಾತಳ, ರಸಾತಳ, ಮಹಾತಳ ಮತ್ತು ಪಾತಾಳಾದಿ ಅಧೋಲೋಕ

ಗಳು, ಮತ್ತು ಭೂಲೋಕ, ಭುವರ್ಲೋಕ, ಸುವರ್ಲೋಕ. ಮಹರ್ಲೋಕ ಜನೋಲೋಕ, ತಪೋಲೋಕ ಮತ್ತು ಸತ್ಯಲೋಕಗಳೆಂಬ ಏಳು ಊರ್ಧ್ವ ಲೋಕಗಳು ಸೇರಿ ಚತುರ್ದಶಭುವನಾತ್ಮಕವಾದ ಈ ವರ್ತಮಾನ ಬ್ರಹ್ಮಾಂಡ ವಲ್ಲದೆ, ಇಂತಹ ಅನಂತಾನಂತಬ್ರಹ್ಮಾಂಡಗಳನ್ನು ತನ್ನ ಉದರದಲ್ಲಿಟ್ಟು ಸಂರಕ್ಷಿಸುವುದರಿಂದ,ಮಹಾಮಹಿಮನಾದ ಪರಮಾತ್ಮನಿಗೆ ಬ್ರಹ್ಮಾಂಡೋದರ ನೆಂದು ಅನಂತವೇದಗಳಲ್ಲಿ ಉಕ್ತವಾಗಿದೆ. ಇಂತಹ ಮಹಿಮೋಪೇತನಾದ ವಿರಾಡ್ರೂಪಿಯೂ ಚತುರ್ದಶಭುವನಾಧಿಪತಿಯೂ ಆದ ಶ್ರೀಮನ್ನಾರಾಯಣನ ನಿರ್ಮಲವಾದ ರೂಪಗಳನ್ನು ಶ್ರೀಲಕ್ಷ್ಮೀದೇವಿಯರು ಸದಾ ಧ್ಯಾನಿಸುತ್ತಲೇ ಇರುತ್ತಾರೆ. ಶ್ರೀರಮಾದೇವಿಯರಾದರೋ ಸತ್ವ, ರಜ ಮತ್ತು ತಮ ಎಂಬ ತ್ರಿವಿಧಜೀವರಿಗೂ ಮತ್ತು ಆ ತ್ರಿಗುಣಗಳಿಗೂ, ತ್ರಿಗುಣಾತ್ಮಕವಾದ ಜಡವಸ್ತು ಗಳಿಗೂ ಅಭಿಮಾನಿಗಳು. ಅವ್ಯಕ್ತಾದಿಚತುರ್ವಿಂಶಂತಿತತ್ವೇಶರಿಗೆ ನಿಯಾಮ ಕರು. ಇಂತಹ ಮಹಿಮೋಪೇತರಾದ ನಿತ್ಯಮುಕ್ತರಾದ ಶ್ರೀ ರಮಾದೇವಿ ಯರು ಕೇವಲ ಮಹಾಜ್ಞಾನಪೂರ್ವಕ ಶ್ರೀಹರಿಯ ಗುಣರೂಪಗಳನ್ನು ಚಿಂತನಮಾಡುತ್ತಾ (ಆಲೋಚನದಿ), ಭಾರತ ಹಾಗೂ ಅನಂತಾನಂತ ವೇದ ಸಮೂಹಗಳಿಗೆ ಅಗೋಚರವಾದ ಶ್ರೀಹರಿಯ ಗುಣರೂಪಕ್ರಿಯೆಗಳನ್ನು (ಭಾರತ ನಿಗಮತತಿಗಳತಿಕ್ರಮಿಸಿ ಕ್ರಿಯಾವಿಶೇಷಗಳ) ನಿತ್ಯನೂತನರೂಪ ದಲ್ಲಿ ಜ್ಞಾನದೃಷ್ಟಿಯಿಂದ ನೋಡುತ್ತಾ, ಅನಂತಾನಂತಕೋಟಿಸೂರ್ಯ ಪ್ರಕಾಶನಾದ, ಅನಂತಾನಂತಬ್ರಹ್ಮಾಂಡಕ್ಕೆ ಒಡೆಯನಾದ ಸರ್ವತ್ರವ್ಯಾಪ್ತ ನಾದ ಶ್ರೀಮನ್ನಾರಯಣನ ಮಂಗಳರೂಪಗಳನ್ನು ನೋಡಿ, ಹರುಷೋದ್ರೇಕ ದಿಂದ ಹಿಗ್ಗುತ್ತಾ, ಹಸನ್ಮುಖಳಾಗಿ, ಸ್ತೋತ್ರಮಾಡುತ್ತಿರುವ ಜಗನ್ಮಾತೆ, ತ್ರಿಗುಣಾಭಿಮಾನಿ ಶ್ರೀ ಹರಿಯ ವಕ್ಷಸ್ಥಲ ನಿವಾಸಿನಿಯಾದ ಶ್ರೀಲಕ್ಷ್ಮೀದೇವಿ ಯರು ನಿತ್ಯದಲ್ಲಿ ನಮ್ಮೆಲ್ಲರನ್ನು ಸಂರಕ್ಷಿಸಲಿ —ಎಂದು ದಾಸರಾಯರು ಪ್ರಾರ್ಥಿಸಿದ್ದಾರೆ. ಲಿಂಗದೇಹವು ತ್ರಿಗುಣಾತ್ಮಕವಾದದ್ದು, ಇದರಲ್ಲಿ ಶ್ರೀ ರಮಾದೇವಿಯರು ವ್ಯಾಪ್ತರಾಗಿದ್ದಾರೆ. ತ್ರಿಗುಣಗಳಿಂದ ಬದ್ಧನಾದ ಜೀವ ನನ್ನು ಮುಕ್ತನನ್ನಾಗಿಸಲು ಶ್ರೀ ಲಕ್ಷ್ಮೀದೇವಿಯರ ಪರಮಾನುಗ್ರಹ ಅತ್ಯಾವಶ್ಯಕ. ಸದಾನಿತ್ಯವಾದ ಮುಕ್ತಾವಸ್ಥೆಯಲ್ಲಿಯೂ ಸಹ ಜ್ಞಾನಾನಂದ ಉನ್ನಾಹಗೈಸಿ (ಅನುದಿನ ಎಂಬ ಪದದಿಂದ ಈ ಅರ್ಥ) ಸಂರಕ್ಷಿಸಲಿ.

# ಪದ್ಯ (೩)

ನಿರುಪಮಾನಂದಾತ್ಮಭವ ನಿ ।
ರ್ಜರಸಭಾಸಂಸೇವ್ಯ ಋಜುಗಣ ।
ದರಸೆ ಸತ್ತ್ವಪ್ರಚುರ ವಾಣಿಮುಖಸರೋಜೇನ ॥
ಗರುಡ ಶೇಷ ಶಶಾಂಕದಳ ಶೇ ।
ಖರರ ಜನಕ ಜಗದ್ಗುರುವೇ ತ್ವ ।
ಚ್ಚರಣಗಳಿಗಭಿವಂದಿಸುವೆ ಪಾಲಿಪುದು ಸನ್ಮತಿಯ ॥ ೩ ॥

**ಅವತರಿಣಿಕೆ :**

ಸರ್ವೋತ್ತಮನಾದ ಶ್ರೀ ಹರಿಯ ಸ್ತುತಿಯನ್ನು ಮಾಡಿ, ನಂತರ ಈಶ ಕೋಟಿಪ್ರವಿಷ್ಟರಾದ ಶ್ರೀ ರಮಾದೇವಿಯರನ್ನು ಸ್ತುತಿಸಿ, ಈಗ ಈ ಪದ್ಯದಲ್ಲಿ ದೇವತಾಗಣದಲ್ಲಿ ಶ್ರೇಷ್ಠರಾದ, ಜೀವೋತ್ತಮರಾದ ಶ್ರೀ ಬ್ರಹ್ಮದೇವರ ಸ್ತೋತ್ರವನ್ನು ಮಾಡುತ್ತಾರೆ.

**ಪ್ರತಿಪದಾರ್ಥ :**

**ನಿರುಪಮ**—ಜೀವಕೋಟಿಯಲ್ಲಿ ಉಪಮಾನರಹಿತರಾದ **ಆನಂದ**= ಅಸುರಾವೇಶ, ಭಾವರೂಪ ಅಜ್ಞಾನ, ಅಪರೋಕ್ಷ ತಿರೋಧಾನಾದಿ ದೋಷ ರಹಿತವಾದ ಆನಂದವುಳ್ಳ (ಶತಾನಂದವುಳ್ಳ) **ಆತ್ಮಭವ**=ಶ್ರೀ ಪರಮಾತ್ಮನ ಪುತ್ರರಾದ (ಪದ್ಮನಾಭರೂಪಿ ಪರಮಾತ್ಮನ ನಾಭಿಕಮಲದಲ್ಲಿ ಉತ್ಪನ್ನ ರಾದ), ಇದರ ಅರ್ಥವನ್ನು ಶ್ರೀಹರಿಯ ವಿವಿಕ್ಷಾ ಮಾಡಬಹುದು. ಶ್ರೀಹರಿಯು ಅಸದೃಶಾನಂದವುಳ್ಳವನು (ನಿರುಪಮಾನಂದ). ಅನಂತಾನಂತಆನಂದಾದಿ ಗುಣಗಳಿಂದ ಪರಿಪೂರ್ಣನು. ಈತನೇ ಆತ್ಮಶಬ್ದವಾಚ್ಯನು. ಏತಾದೃಶ

ಮಹಿಮೋಪೇತನಾದ ಶ್ರೀಹರಿಯಜ್ಯೇಷ್ಠ ಪುತ್ರರೇ ಶ್ರೀಬ್ರಹ್ಮದೇವರು. **ನಿರ್ಜರಸಭಾ**=ಗರುಡಶೇಷರುದ್ರಾದಿ ದೇವತಾಗಣದಿಂದ **ಸಂಸೇವ್ಯ**= ಚೆನ್ನಾಗಿ ಸೇವಿಸಲ್ಪಡುವ **ಋಜುಗಣದರಸೇ**=ಅಜ್ಞಾನದಿದೋಷಗಳಿಲ್ಲದವರೇ "ಋಜು"ಗಳು ವಕ್ರಮಾರ್ಗರಹಿತರು. ಭಗವದ್ವಿಷಯದಲ್ಲಿ ನೇರವಾದ (ನಿರ್ದುಷ್ಟವಾದ) ಮಾರ್ಗವುಳ್ಳವರು. "ಋಜು" ಎಂಬ ಶಬ್ದಕ್ಕೆ "ನೇರ" ಎಂದರ್ಥ. ಇಂತಹ ಋಜುಗುಣಸ್ಥರು ಇನ್ನೂರು ಮಂದಿ ಇದ್ದಾರೆ. ಇವರೆಲ್ಲರೂ ಬ್ರಹ್ಮಪದವಿಗೆ ಬರುವವರೇ. ಇಂತಹ ಋಜುಗಳಲ್ಲಿ ಪಕ್ವಸಾಧನ ಲಕ್ಷಣದಿಂದ ಶ್ರೇಷ್ಠರಾದ (ಅರಸೇ) **ಸತ್ವಪ್ರಚುರ**=ಶ್ರೀ ಬ್ರಹ್ಮದೇವರ ಶರೀರವು ಮಹತತ್ತ್ವಾತ್ಮಕವಾದದ್ದು. ಇಂತಹ ಮಹತ್ತತ್ವವು ಸತ್ವಗುಣಾಂಶವನ್ನೇ ಅತ್ಯಧಿಕಪ್ರಮಾಣದಲ್ಲಿ ಉಳ್ಳದು, ಇದರಿಂದ ಸತ್ವಪ್ರಚುರವಾದದ್ದು. **ವಾಣೀ**=ವಾಗಾಭಿಮಾನಿಗಳಾದ ಶ್ರೀಸರಸ್ವತೀದೇವಿಯರ **ಮುಖಸರೋಜ** =ಮುಖವೆಂಬ ಕಮಲಕ್ಕೆ (ಉಪಮಾಲಂಕಾರ-ಮುಖವನ್ನು ಕಮಲಕ್ಕೆ ಹೋಲಿಸುವುದು ಕವಿಗಳ ವೈಶಿಷ್ಟ್ಯ) **ಇನೆ**=ಸೂರ್ಯನಂತೆ ಇರುವ, ಅಂದರೆ, ಸೂರ್ಯನ ಪ್ರಕಾಶದಿಂದ ಕಮಲಗಳು ಅರಳುತ್ತವೆ, ಅಂತೆಯೇ ಶ್ರೀಬ್ರಹ್ಮದೇವರು ತಮ್ಮ ನೀತಪತ್ನಿಯರಾದ ಶ್ರೀ ಸರಸ್ವತೀದೇವಿಯರ ವದನ ಕಮಲಕ್ಕೆ ಸೂರ್ಯರಂತಿದ್ದಾರೆ ಎಂದು ತಾತ್ಪರ್ಯ. **ಗರುಡ**=ಶ್ರೀಗರುಡದೇವರು. **ಶೇಷ**=ಶ್ರೀ ಶೇಷದೇವರು **ಶಶಾಂಕದಳಶೇಖರರ**=ಮೊಲ(ಶಶಿ)ದ ಚಿಹ್ನೆಯುಳ್ಳ (ಅಂಕ) ಚಂದ್ರನ ಷೋಡಶಕಳೆಗಳಲ್ಲಿ ಒಂದು ಕಳಾವಿಶೇಷವನ್ನು (ದಳ)ತಮ್ಮ ಶಿರದಲ್ಲಿ ಉಳ್ಳ(ಶೇಖರ)ಶ್ರೀ ಮಹಾರುದ್ರದೇವರು ಅಂದರೆ ಚಂದ್ರಶೇಖರ (ಚಂದ್ರಚೂಡ) ಎಂದು ಪ್ರಖ್ಯಾತರಾಗಿರುವ ಶ್ರೀರುದ್ರದೇವರ **ಜನಕ**=ತಂದೆಯಾದ-ಶ್ರೀ ಬ್ರಹ್ಮದೇವರು ಗರುಡ ಶೇಷ ರುದ್ರಾದಿಗಳಿಗೆ ಪಿತೃಸ್ಥಾನಾಪನ್ನರು. **ಜಗದ್ಗುರುವೇ** = ಮೂರುಲೋಕಗಳಿಗೂ ಗುರುಗಳಾದ (ಮುಕ್ತಿಯೋಗ್ಯಜೀವರಿಗೆ ಶ್ರೀಬ್ರಹ್ಮದೇವರೆ ಮೂಲಗುರುಗಳು) **ತ್ವಚ್ಚರಣಗಳಿಗೆ**=ನಿಮ್ಮ ಪಾದದ್ವಯಗಳಿಗೆ **ಅಭಿ**=ಸಾಷ್ಟಾಂಗಪೂರ್ವಕವಾಗಿ, **ವಂದಿಸುವೆ**=ನಮಸ್ಕರಿಸುತ್ತೇನೆ **ಸನ್ಮತಿಯ**=ದಿವ್ಯಜ್ಞಾನಯುಕ್ತವಾದ ಬುದ್ಧಿಯನ್ನು **ಪಾಲಿಸುವುದು**=ಕೊಟ್ಟು ಸಂರಕ್ಷಿಸಿ. ॥ ೩ ॥

**ತಾತ್ಪರ್ಯ :**

ಈ ಪದ್ಯದಲ್ಲಿ ಶ್ರೀಜಗನ್ನಾಥದಾಸವರ್ಯರು ಶ್ರೀಬ್ರಹ್ಮದೇವರನ್ನು ಸ್ತುತಿಸಿದ್ದಾರೆ. ಶ್ರೀ ಬ್ರಹ್ಮದೇವರು ಜೀವೋತ್ತಮರು. ಶ್ರೀಹರಿಯು ಇವರಲ್ಲಿ ಅಧಿಷ್ಠಿತನಾಗಿದ್ದುಕೊಂಡು. ಸೃಷ್ಟ್ಯಾದಿವ್ಯಾಪಾರಗಳನ್ನು ಮಾಡು ವನು. "ಬ್ರಹ್ಮ" ಎಂಬ ಶಬ್ದಕ್ಕೆ "ಪೂರ್ಣ" ಎಂದರ್ಥ. ಸಮಸ್ತಜೀವ ರಾಶಿಗಳಲ್ಲಿ ಅತ್ಯುತ್ತಮರು. ಎಲ್ಲಾ ಜೀವರುಗಳಿಗಿಂತಲೂ (ಕ್ಷರವರ್ಗಕ್ಕೆ ಸೇರಿದ) ಇವರಲ್ಲಿ ಜ್ಞಾನಾನಂದಾದಿಗುಣಗಳು ಹೆಚ್ಚಾಗಿರುವುವು. "ಬ್ರಹ್ಮ" ಎಂದು ಕರೆಯಿಸಲ್ಪಡುತ್ತಾರೆ, ಇವರು ಬ್ರಹ್ಮರಾದರೆ, ಶ್ರೀಹರಿಯು "ಪರ ಬ್ರಹ್ಮ"ನು ಮಹಾಪ್ರಳಯಕಾಲದಲ್ಲಿಯೂ ಭಗವದ್ವಿಷಯದಲ್ಲಿ ಅಜ್ಞಾನಾದಿ ದೋಷಗಳು ಇವರಲ್ಲಿ ಇಲ್ಲ. ನಿತ್ಯಾಪರೋಕ್ಷಿಗಳಾದ ಇಂತಹ ಸಮೂಹಕ್ಕೆ "ಋಜುಗಣ" ಎಂದು ಹೆಸರು. ಇವರ ಸಂಖ್ಯಾ ೨00 ಇಂತಹ ಋಜುಗಣಸ್ಥರಲ್ಲಿ ೧00 ಕಲ್ಪಸಾಧನೆ ಮಾಡಿ ವಾಯುಪಟ್ಟದಿಂದ ಈಗ ಬ್ರಹ್ಮಪದವಿಗೆ ಬಂದಿರುವ ಇವರಿಗೆ "ಶತಾನಂದ" ರೆಂದು ಹೆಸರು. ಬ್ರಹ್ಮಾಂಡವೇ ಇವರ ಶರೀರ. ಇದು ಮಹತ್ತತ್ತ್ವದಿಂದ ಹುಟ್ಟಿದ. ಮಹತ್ತತ್ತ್ವವಾದರೋ ತ್ರಿಗುಣಗಳಲ್ಲಿ ಸತ್ವಗುಣಾಧಿಕ್ಯವಾದದ್ದು. ರಜೋಗುಣ ಅಲ್ಪ; ತಮೋಗುಣವಂತೂ ಅತ್ಯಲ್ಪ. ಇದರಿಂದಲೇ, ಸತ್ವಪ್ರಾಚುರ್ಯವಾದದ್ದು, ಬ್ರಹ್ಮದೇವರ ನೀತಪತ್ನಿಯರೇ ಶ್ರೀ ಸರಸ್ವತಿದೇವಿಯರು. ಇವರು ವಾಗಾಭಿಮಾನಿಗಳು. ಸಕಲ ಸಚ್ಛಾಸ್ತ್ರಗಳ ಶಬ್ದೋಚ್ಚಾರಣೆ ಮತ್ತು ಅರ್ಥಾನ್ವಯ ಇವರ ಅನುಗ್ರಹದಿಂದಲೇ ಸಾಧ್ಯ. ಇಂತಹ ಸರಸ್ವತೀದೇವಿಯರಿಗೆ ನಿತ್ಯಆನಂದದಾಯಕರು ಶ್ರೀಬ್ರಹ್ಮದೇವರು. ಗರುಡಶೇಷ ಮತ್ತು ರುದ್ರರು ಅಹಂಕಾರತತ್ತ್ವಕ್ಕೆ ಅಭಿಮಾನಿಗಳು. ಇಂತಹ ಅಹಂಕಾರ ತತ್ತ್ವವು ಮಹತ್ತತ್ವದಿಂದ ಜನ್ಯವಾದ್ದರಿಂದ, ಶ್ರೀಬ್ರಹ್ಮದೇವರು, ಇವರಿಗೆ ತಂದೆಯು. ಶ್ರೀಹರಿಯ ಪ್ರಥಮಾಂಗಭೂತರೂ ಮತ್ತು ಜ್ಯೇಷ್ಠಪುತ್ರರೂ ಆದ ಬ್ರಹ್ಮದೇದರು ಇಡೀ ಬ್ರಹ್ಮಾಂಡಕ್ಕೆ ಗುರುಸ್ಥಾನಾಪನ್ನರು. ತ್ರೈಲೋಕ್ಯಾಚಾರ್ಯರು. ಅವರೇ ನಮಗೆ ಸಚ್ಛಾಸ್ತ್ರಗಳ ಮೂಲಕ ದಿವ್ಯಜ್ಞಾನವನ್ನು ದಯಪಾಲಿಸಿ, ಸತ್ಸಾಧನವಮಾಡಿಸಿ, ಉದ್ಧಾರಮಾಡುವ ಪರಮಾಪ್ತರು. ಅಂತಹ ಬ್ರಹ್ಮದೇವರ ಪಾದಕಮಲಗಳಿಗೆ ಸಾಷ್ಟಾಂಗಪೂರ್ವಕ ಅತ್ಯಂತ ಭಕ್ತಿಯಿಂದ ನಮಿಸಿ, ಸ್ತೋತ್ರಮಾಡಿದ್ದಾರೆ.

ವ್ಯಾಖ್ಯಾನಗಳು :—

(೧) ಶ್ರೀ ಸಂಕರ್ಷಣ ಒಡೆಯರವ್ಯಾಖ್ಯಾನ :—

ಶ್ರೀಬ್ರಹ್ಮದೇವರು ಜೀವಕೋಟಿಯಲ್ಲಿ ಉಪಮಾನರಹಿತರು, ಜೀವೋತ್ತಮರು. ಉಪಲಕ್ಷಣಯಾ ೨೦೦ ಮಂದಿ ಋಜುಗಳು ಗ್ರಾಹ್ಯರು. ಬ್ರಹ್ಮದೇವರಿಗೆ ಅಸುರಾವೇಶ, ಭಾವರೂಪ ಅಜ್ಞಾನ, ಅಪರೋಕ್ಷ ತಿರೋಧಾನ ಮುಂತಾದ ದೋಷಗಳಿಲ್ಲ. ಇದರಿಂದ ಸತ್ತ್ವರೂಪವಾದ ಆನಂದವುಳ್ಳವರು. ನಿರುಪಮಾನಂದಾತ್ಮಕನಾದ ಶ್ರೀಮನ್ನಾರಾಯಣನ ಪುತ್ರರು. ದೇವತಾಗಣಕ್ಕೆ ಜ್ಯೇಷ್ಠರು ಹಾಗೂ ಅಧಿಪತಿಗಳು. ರುದ್ರಾದಿಗಳಿಂದ ಸಂಸೇವಿತರು ಅಜ್ಞಾನಾದಿದೋಷಗಳೆಂಬ ವಕ್ರಮಾರ್ಗರಹಿತರು. ಭಗವದ್ವಿಷಯದಲ್ಲಿ ನೇರವಾದ, ನಿರ್ದುಷ್ಟಮಾರ್ಗವುಳ್ಳವರು. ಇದರಿಂದಲೇ ಇವರಿಗೆ "ಋಜು"ಗಳು ಎಂದು ಪ್ರಸಿದ್ಧಿ. ಬ್ರಹ್ಮಪದವಿಗೆ ಯೋಗ್ಯರಾದ ೨೦೦ ಮಂದಿ ಋಜುಗಣಸ್ಥರಲ್ಲಿ ಪಕ್ವಸಾಧನೆಯ ದೃಷ್ಟಿಯಿಂದ ಶ್ರೇಷ್ಠರಾದವರು. ರುದ್ರಾದ್ಯಪೇಕ್ಷಯಾ ಸತ್ವಗುಣಪ್ರಚುರ ಬಹುವಾಗಿವುಳ್ಳ ಮಹತ್ತತ್ವಾತ್ಮಕಶರೀರವುಳ್ಳವರು. ಸರಸ್ವತೀದೇವಿಯರ ಮುಖವೆಂಬ ಕಮಲಕ್ಕೆ ಸೂರ್ಯದೃಶರಾದವರು. ಬ್ರಹ್ಮದೇವರಿಗೂ ಮತ್ತು ಸರಸ್ವತೀದೇವಿಯರಿಗೂ ನೀತದಾಂಪತ್ಯವಿದೆ. ರುದ್ರಾದಿಗಳಲ್ಲಿ ಇಂಥಾದ್ದು ಇಲ್ಲ. ಕದಾಚಿತ್ ದಾಂಪತ್ಯವಿದೆ. ಈ ವಿಷಯದಲ್ಲಿಯೂ ಬ್ರಹ್ಮದೇವರು ಉಪಮಾನರಹಿತರು ಎಂದರ್ಥ. ಗರುಡ ಮತ್ತು ಶೇಷದೇವರಿಗೆ ಪಿತೃಸ್ಥಾನಾಪನ್ನರು. ಚಂದ್ರನಲ್ಲಿ ಮೃಗದ ಚಿಹ್ನೆಯುಂಟು (ಶಶಾಂಕ) ಇದರಿಂದ ಚದ್ರನಿಗೆ "ಶಶಿ" ಎಂದು ಹೆಸರು. ಚಂದ್ರನಿಗೆ ೧೬ ಕಲೆಗಳಿವೆ. ಈ ಕಲೆಗಳಲ್ಲಿ ಒಂದು ಕಳಾವಿಶೇಷವನ್ನ ಶ್ರೀರುದ್ರದೇವರು ತಲೆಯಲ್ಲಿ ಧರಿಸಿದ್ದಾರೆ. **ಚಂದ್ರಮಾ ಮನಸೋ ಜಾತಃ** ಎಂಬ **ಶ್ರೀಪುರುಷಸೂಕ್ತ**ದ ಪ್ರಮಾಣದಂತೆ, ಪುರುಷರೂಪೀಪರಮಾತ್ಮನ ಮನಸ್ಸಿನಿಂದ ಚಂದ್ರನು ಉತ್ಪನ್ನನಾದನು. ಇದರ ಪ್ರತೀಕವಾಗಿ ಶ್ರೀರುದ್ರದೇವರು ಮನೋಭಿಮಾನಿಗಳಾದ್ದರಿಂದ, ಚಂದ್ರಶೇಖರರೆಂದು ಪ್ರಸಿದ್ಧರಾಗಿದ್ದಾರೆ. ಬ್ರಹ್ಮದೇವರು ಮಹತತ್ವಕ್ಕೆ ಅಭಿಮಾನಿಗಳು. ಅಹಂಕಾರ ತತ್ತ್ವವು ಮಹತ್ತತ್ವದಿಂದ ಹುಟ್ಟಿದೆ. ಗರುಡ, ಶೇಷ ಮತ್ತು ರುದ್ರರು ಈ ಅಹಂಕಾರ

ತತ್ತ್ವಕ್ಕೆ ಅಭಿಮಾನಿಗಳು. ಈ ಕಾರಣದಿಂದ ಬ್ರಹ್ಮದೇವರು ಗರುಡ, ಶೇಷ ಮತ್ತು ರುದ್ರರ ಜನಕ ಎಂದು ಸಂಭೋದಿಸದ್ದಾರೆ. ಇದಕ್ಕೆ **ಪ್ರಮಾಣ: ಪ್ರಕೃತ್ಯಾ ಪುರುಷಾಜ್ಜೀವಾಃ ಕಾಲೋ ವಾಗ್ವಾಯುಯೋಗತಃ || ಸರ್ಪಾಕಾರೋಭವಜ್ಜೀವಃ ಕಾಲೋಭೂತ್ಪಕ್ಷಿರೂಪಧೃಕ್ || ಚತುರ್ಮುಖಾಂಶ್ಚತುರಃ ಕುಮಾರಾನ್ ಸಾ ದ್ರೌಪದೀ ನಾಮ ಬಭೂವ ಭೂಮೌ ವೈಕಾರಿಕೋ ಬ್ರಹ್ಮಜಸ್ತು ||** ಇತ್ಯಾದಿ ವಚನಗಳು ಪ್ರಮಾಣ.

ಮುಕ್ತಿಯೋಗ್ಯಜೀವರಿಗೆ ಮೂಲಗುರುವಾದ್ದರಿಂದ (ಜಗದ್ಗುರುವೆ) ಮಹರಾದಿ ಲೋಕಗತ ಜೀವನ್ಮುಕ್ತರಾದ, ಬ್ರಹ್ಮಾಂತರ್ಗತ ಉಪಾಸನೆ ಮಾಡುವ, ತನ್ನ ಸಂಗಡ ಮುಕ್ತರಾಗತಕ್ಕ ಜೀವರಿಗೆ ಮೂಲಗುರುಗಳು ಎಂದು ಕರೆಯಿಸಿಕೊಳ್ಳುತ್ತಾರೆ. ಜೀವನ್ಮುಕ್ತರಲ್ಲದ ಅಪಕ್ವರಾದವರಿಗೆ ಶ್ರೀವಾಯುದೇವರು ಗುರುಗಳು. ಆ ಜೀವರು ವಾಯ್ವಂತರ್ಗತ ಪರಮಾತ್ಮನ ಉಪಾಸನೆ ಮಾಡುವರೆಂದರ್ಥ. ಜಗದ್ಗುರುತ್ವವು ಬ್ರಹ್ಮ ಮತ್ತು ವಾಯುಗಳಿಗೆ ಈ ರೀತಿ ಇರುವುದು. ಅಂತಹ ಮಹಾಮಹಿರಾದ ಬ್ರಹ್ಮದೇವರ ಪಾದಪದ್ಮಗಳಿಗೆ ಸಾಷ್ಟಾಂಗಪೂರ್ವಕ ನಮಸ್ಕರಿಸುತ್ತಾರೆ. ಬೇರಿಗೆ ನೀರೆರೆದರೆ, ಅದು ವೃಕ್ಷದ ಶಾಖೋಪಶಾಖೆಗಳಿಗೆ ಸೇರುವಂತೆ, ಬೇರಿನ ಸಾದೃಶ್ಯವುಳ್ಳ ಪಾದಕ್ಕೆ ವಂದಿಸುವುದರಿಂದ, ಸರ್ವಾವಯವಗಳಿಗೂ ವಂದಿಸಿದಂತಾಯಿತು ಎಂದು ತಾತ್ಪರ್ಯ. ದಿವ್ಯಜ್ಞಾನಭಕ್ತ್ಯಾದಿಗಳಿಂದ ಯುಕ್ತವಾದ ಚಿಹ್ನೆಯನ್ನು (ಸನ್ಮತಿಯ) ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತಾರೆ.

### (೨) ಭಾವಪ್ರಕಾಶಿಕಾ ವ್ಯಾಖ್ಯಾನ :

ಶ್ರೀಹರಿಯು ಆನಂದಸ್ವರೂಪನು. ಆತನ ಆನಂದವು ಉಪಮಾನ ರಹಿತವಾದದ್ದು (ಅನುಪಮ) ಇಂತಹ ಪರಮಾತ್ಮನ ಸಾಕ್ಷಾತ್ಪುತ್ರರೇ ಶ್ರೀಬ್ರಹ್ಮದೇವರು. ಜೀವಕೋಟಿಪ್ರವಿಷ್ಟರು. ಜೀವೋತ್ತಮರಾದ್ದರಿಂದ ಸಮಸ್ತದೇವತೆಗಳಿಂದಲೂ ವಂದ್ಯರು. ಅವರ ಸ್ವರೂಪವೇ ವಿಶುದ್ಧವಾದ ಸತ್ವಾತ್ಮಕವಾದದ್ದು (ಸತ್ವಪ್ರಚುರ). ಸಾಮಾನ್ಯವಾಗಿ ಮನಸ್ಸು, ಬುದ್ಧಿ ಮತ್ತು ಚಿತ್ತ ಈ ಮೂರನ್ನೂ ವ್ಯವಹಾರದಲ್ಲಿ ಒಂದೇ ಅರ್ಥದಲ್ಲಿ ಹೇಳುತ್ತೇವೆ ಆದರೆ ಅವುಗಳಿಗೆ ಸರಸ್ಪರ ಪ್ರಭೇದವಿದೆ. (೧) ಮನಸ್ಸೆಂದರೆ ಮೊಟ್ಟಮೊದಲು

ಹುಟ್ಟುವ ಚಂಚಲವೃತ್ತಿಯು. (೨) ಬುದ್ಧಿ ಎಂದರೆ ಆದನ್ನು ನಿಶ್ಚಯ ಮಾಡುವ ನಿಶ್ಚಲವೃತ್ತಿಯು. (೩) ಚಿತ್ತವೆಂದರೆ ಸ್ಮೃತ್ರಿವೃತ್ತಿಯು. ಚಂದ್ರನು ಮನೋಭಿಮಾನಿ. ಬೃಹಸ್ಪತಿ ಮತ್ತು ಉಮಾದೇವಿಯರು ಬುದ್ಧಿಗೆ ಅಭಿಮಾನಿಗಳು. ಚಿತ್ತಾಭಿಮಾನಿಗಳು ಬ್ರಹ್ಮ ಮತ್ತು ವಾಯುಗಳು. ಇಂದಿನ ವಾಯುದೇವರೇ ಮುಂದಿನ ಕಲ್ಪದಲ್ಲಿ ಬ್ರಹ್ಮಪದವಿಗೆ ಬರುವರು. ಭಾವೀ ಬ್ರಹ್ಮರು. ಆದರೂ ಬ್ರಹ್ಮದೇವರಿಗೆ ಪದವಿಯಿಂದ, ವಾಯುದೇವರಿಗಿಂತಲೂ ಕಿಂಚಿದಾಧಿಕ್ಯವಿರುವುದರಿಂದ ಪ್ರಥಮತಃ ಬ್ರಹ್ಮದೇವರನ್ನು ವಂದಿಸಿದ್ದಾರೆ. ಬ್ರಹ್ಮದೇವರಿಗೆ ಜಗದ್ಗುರುತ್ವದಲ್ಲಿ ಪ್ರಮಾಣ : **ಜಗದ್ಗುರುತ್ವಮಾದಿಷ್ಟಂ ಮಯಾತೇ ಕಮಲೋದ್ಭವ** ಎಂದು **ತಾತ್ಪರ್ಯನಿರ್ಣಯದ (೯ನೆಯ ಅಧ್ಯಾಯ)** ಪ್ರಮಾಣವಿದೆ. "ನನ್ನಿಂದ ಕಮಲೋದ್ಭವನಾದ ಬ್ರಹ್ಮ ದೇವನಿಗೆ ಜಗದ್ಗುರುತ್ವವು ಕೊಡಲ್ಪಟ್ಟಿದೆ" ಎಂದು ಪರಮಾತ್ಮನ ವಾಕ್ಯ ಅಂತೆಯೇ, ಅದೇ ನಿರ್ಣಯದಲ್ಲಿಯೇ ನೀತಗುರುವಿನಲ್ಲಿ ೩೨ ಲಕ್ಷಣಗಳು (ದ್ವಾತ್ರಿಂಶತಿಲಕ್ಷಣೋಪೇತರಾಗಿ) ಇರಬೇಕು ಪ್ರಮಾಣವಚನವಿದೆ. ಇಂತಹ ಸಂಪೂರ್ಣಗುರುಲಕ್ಷಣಗಳಿಂದ ಕೂಡಿದವರು ಬ್ರಹ್ಮ ಮತ್ತು ವಾಯು ಗಳೇ ಹೊರತು ಅನ್ಯರಲ್ಲ. ಪರಮಾತ್ಮನ ನಾಭೀಕಮಲದಿಂದ ಜನಿಸಿದವರಾದ್ದ ರಿಂದ "ನಿರುಪಮಾನಂದಾತ್ಮಭವ" ಎಂದು ಸ್ತುತಿಸಿದ್ದಾರೆ. ಮನ್ಮಥನೂ ಪರಮಾತ್ಮನ ಪುತ್ರನೇ. ದೇವೇಂದ್ರನೂ ಸಹ ದೇವಗಣದಿಂದ ವಂದ್ಯನು. **ಮುಖಾಂದಿಂದ್ರಾಶ್ಚಾಗ್ನಿಶ್ಚ** ಎಂಬ **ಪುರುಷಸೂಕ್ತ** ವಚನದಂತೆ, ಇಂದ್ರನೂ ಸಹ ಪರಮಾತ್ಮನ ಪುತ್ರನೇ, "ಋಜುಗಣದರಸೆ" ಎಂಬ ಶಬ್ದಪ್ರಯೋಗ ದಿಂದ ಇವರೆಲ್ಲರಿಗಿಂತಲೂ ಬ್ರಹ್ಮದೇವರಿಗೆ ಶ್ರೇಷ್ಠತ್ವವನ್ನು ಹೇಳಿದ್ದಾರೆ. ರುದ್ರಾದಿ ದೇವತೆಗಳಲ್ಲಿ ರಜೋಗುಣವು ಹೆಚ್ಚು **ವಿಶುದ್ಧಸತ್ವಂ ಬ್ರಹ್ಮಾಖ್ಯಂ** ಎಂಬ **ಭಾಗವತ** ವಾಕ್ಯದಿಂದ ಸತ್ವಗುಣಪ್ರಾಚುರ್ಯವುಳ್ಳವರೆಂದು ತೋರಿಸಿ ರುದರು. ಇದರಿಂದ ಬ್ರಹ್ಮದೇವರಿಗೆ ಅಸುರಾವೇಶವಾಗಲೀ, ಅಜ್ಞಾನಾದಿ ದೋಷಗಳಾಗಲೀ ಇಲ್ಲವೆಂದು ಸಿದ್ಧವಾಯಿತು. ಬ್ರಹ್ಮ ಮತ್ತು ಸರಸ್ವತೀ ದೇವಿಯರಲ್ಲಿ ಅನುಕೂಲ ದಾಂಪತ್ಯವಿರುವುದರಿಂದ, ಶ್ರೀ ಸರಸ್ವತೀದೇವಿಯರ ದ್ವಾರವೇ ಬ್ರಹ್ಮದೇವರ ಅನುಗ್ರಹ ಪ್ರಾಪ್ತಿ. ಶ್ರೀಬ್ರಹ್ಮದೇವರು ಗರುಡ, ಶೇಷ ಮತ್ತು ರುದ್ರರ ತಂದೆ (ಗರುಡಶೇಷಶಶಾಂಕದಳಶೇಖರರಜನಕ) ಎಂಬುದಕ್ಕೆ ಪ್ರಮಾಣ : **ವ್ಯೂಢಕ್ಷತುರ್ಧಾ ಭಗವಾನ್** ಎಂಬ ೯ ನೆಯ

**ಶ್ಲೋಕ ಪ್ರಾರಂಭಿಸಿ, ತೌವಾಸಂ ಶಯನಂಚೈವ ವಿಷ್ಣೋಃ** ಎ
೧೩ನೆಯ ಶ್ಲೋಕದವರೆಗೂ ಮಹಾಭಾರತ ತಾತ್ಪರ್ಯನಿರ್ಣಯದ (೩ನೆ
ಅಧ್ಯಾಯ) ವಚನವಿದೆ. ಇದರ ವಿವರವೇನೆಂದರೆ; ಶ್ರೀಪರಮಾತ್ಮನು ವಾ
ದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ೪ ರೂಪಗಳ
ಧರಿಸಿದನು, ಅದಕ್ಕನುಸಾರವಾಗಿ ಶ್ರೀಲಕ್ಷ್ಮೀದೇವಿಯರೂ ಸಹ ಕ್ರಮಃ
ಮಾಯಾ, ಜಯಾ, ಕೃತಿ ಮತ್ತು ಶಾಂತಿ ಎಂಬ ೪ ರೂಪಗಳನ್ನು ಪಡೆದ
ವಾಸುದೇವನಾಮಕನಾದ ಶ್ರೀ ಪರಮಾತ್ಮನ ದೆಸೆಯಿಂದ ಮಾಯಾದೇವಿ
"ಪುರುಷ"ನನ್ನು ಪಡೆದಳು. ಸಂಕರ್ಷಣನ ದೆಸೆಯಿಂದ ಜಯಾದೇವಿ
"ಸೂತ್ರ"ನನ್ನು ಪಡೆದಳು.

**ಸೂತ್ರಂ ಸ ವಾಯುಃ ಪುರುಷೋ ವಿರಿಂಚಿಃ-** ಎಂಬ ಪ್ರಮಾಣದ
ಆ ಪುರುಷನೇ ಬ್ರಹ್ಮನು ಮತ್ತು ಸೂತ್ರನೇ ವಾಯುವು. ಪ್ರದ್ಯುಮ್ನನ
ಯಿಂದ ಕೃತಿದೇವಿಯಲ್ಲಿ ಇಬ್ಬರು ಹೆಣ್ಣು ಮಕ್ಕಳು ಜನಿಸಿದರು. ಅ
(೧) ಪ್ರಕೃತಿ ಮತ್ತು (೨) ಶ್ರದ್ಧಾ. ಇವರಿಬ್ಬರೇ ಸರಸ್ವತೀ ಮತ್ತು ಭಾ
ದೇವಿಯರು. ಬ್ರಹ್ಮದೇವರು ಸರಸ್ವತಿಯಲ್ಲಿ "ಜೀವ"ನನ್ನೂ ಮತ್ತು ವಾ
ದೇವರು ಭಾರತೀದೇವಿಯರಲ್ಲಿ "ಕಾಲ"ನನ್ನೂ. ಪಡೆದರು ಅವರಲ್ಲಿ ಜೀ
ಶೇಷನು; ಕಾಲನೇ ಗರುಡನು. ಶೇಷದೇವರು ಪರಮಾತ್ಮನಿಗೆ ಹಾ
ಯಾದರು ಮತ್ತು ಗರುಡದೇವರು ವಾಹನವಾದರು. ಇವಿಷ್ಟೂ ಆ ನಿರ್ಣ
ವಾಕ್ಯದ ಸಾರಾಂಶ. ಇದಕ್ಕೆ **ವಿಷ್ಣುರಹಸ್ಯವೂ** ಆಧಾರವಾಗಿದೆ.
ಅಭಿಪ್ರಾಯದಿಂದಲೇ, ದಾಸರಾಯರು ಗರುಡ, ಶೇಷ ಮತ್ತು ರುದ್ರರು ಬ್ರ
ದೇವರು ಮಕ್ಕಳು ಎಂದು ಸ್ತುತಿಸಿದ್ದಾರೆ.

### (೩) ತಾಮ್ರಪರ್ಣೀಯ ವ್ಯಾಖ್ಯಾನ :

ಪರಮಾತ್ಮನು ಅಸದೃಶವಾದ ಆನಂದಮಯ ದೇಹವುಳ್ಳವನು ಆತನ
ಉತ್ಪನ್ನರಾದ ಬ್ರಹ್ಮದೇವರನ್ನು "ನಿರುಪಮಾನಂದಾತ್ಮಭವ" ಎಂದು ಸ್ತು
ದ್ದಾರೆ. ನಿರ್ಜರ ಎಂದರೆ ಮುಪ್ಪಿಲ್ಲದವರಾದ ದೇವತೆಗಳು "ನಿರ್ಗತಾ
ವಿಷಾಂತೇ ನಿರ್ಜರಾಃ-ದೇವಾಃ" ಎಂದು ವಿಗ್ರಹವಾಕ್ಯ- ಬ್ರಹ್ಮದೇವರು.

ದೇವತಾಸಮೂಹದಿಂದ ಸೇವ್ಯಮಾನರು. ಋಜುಗಳು ೨೦೦ ಮಂದಿ. ಋಜು ಗಣಸ್ಥರಲ್ಲಿ ಶ್ರೇಷ್ಠರಾದ ಕಾರಣದಿಂದ ಋಜುಪುಂಗವರು. (ಋಜುಗಣದರಸೇ) ಅವರ ಶರೀರವಾದರೋ ಶುದ್ಧಸತ್ವಾತ್ಮಕವಾದದ್ದು (ಸತ್ವಪ್ರಚುರ). ಸೃಷ್ಟಿ ಕ್ರಮದಲ್ಲಿ ತ್ರಿಗುಣಗಳ ಮಿಶ್ರಣ (ಗುಣವೈಷಮ್ಯವಿಚಾರ)ದ ವಿವರ ಹೀಗಿದೆ:

| | |
|---|---|
| ೧ ಭಾಗ ತಮಸ್ಸು | ೧ ಭಾಗ ತಮೋಗುಣ |
| ೨ ಭಾಗ ರಜೋಗುಣ | ೧೦ ಭಾಗ ರಜೋಗುಣ |
| ೪ ಭಾಗ ಸತ್ವಗುಣ | ೧೦೦ ಭಾಗ ಸತ್ವಗುಣ |
| ಒಟ್ಟು ೭ ಭಾಗಗಳ ಮಿಶ್ರಣ | ಒಟ್ಟು ೧೧೧ ಭಾಗಗಳು |

ಮೂಲ ಜಡಪ್ರಕೃತಿಯಿಂದ ತೆಗೆದುಕೊಂಡ ಸಮ್ಮಿಳನ ಪ್ರಮಾಣದಲ್ಲಿ ತಮೋ ಗುಣದ ೪ ರಷ್ಟು ಹೆಚ್ಚಾಗಿ ಸತ್ವಗುಣವಿರುವುದು. ಪುನಃ ಮಹತ್ತತ್ವಸೃಷ್ಟಿ ಕ್ರಮದಲ್ಲಿ ೧ ಭಾಗ ತಮೋಗುಣಕ್ಕೆ ೧೦೦ರಷ್ಟು ಸತ್ವಗುಣವು ಅಧಿಕವಾಗಿರು ವುದರಿಂದ, ಸತ್ವಗುಣದಪ್ರಾಚುರ್ಯ ಉಂಟಾಯಿತು.

**ಮಹತಸ್ತು ವಿಕುರ್ವಾಣಾತ್ ರಜಃ ಸತ್ವೋಪಬೃಂಹಿತಾತ್** ಎಂದು **ಭಾಗವತ (ದ್ವಿತೀಯಸ್ಕಂಧ)** ಪ್ರಮಾಣದಂತೆ, ಮಹತ್ತತ್ವದಲ್ಲಿ ವಿಶೇಷವಾಗಿ ಸತ್ವಬಿಂದುಗಳೇ ಹೆಚ್ಚಿದ್ದ ಕಾರಣ ಸತ್ವಪ್ರಚುರವೆನಿಸಿತು.

"ವಾಣೀ" ಎಂದರೆ, ಸರಸ್ವತೀದೇವಿಯರು. ಗೀರ್ವಾಗ್ವಾಣೀ ಸರ ಸ್ವತೀ" ಎಂದು ಅಮರಕೋಶ. "ಶಶಾಂಕದಳಶೇಖರ" ಎಂದರೆ, "ಶಶಾಂಕ ದಳಃ ಬಾಲಚಂದ್ರಃ-ಶೇಖರೇ ಮುಕುಟೇ-ಶೇಖರಂ ಶಿರಭೂಷಣಮಿತ್ಯಭಿ ಧಾನಾತ್- ಕಿರೀಟೇ ಯಸ್ಯ ಸಃ ತಥೋಕ್ತಃ -ರುದ್ರಶ್ಚ" ಎಂಬ ಪದಪರಿಷ್ಕಾರ ದಿಂದ, ಚಂದ್ರಶಕಲವು ಯಾವಾತನ ತಲೆಯಲ್ಲಿ (ಮುಕುಟ) ವಿರಾಜಮಾನ ವಾಗಿದೆಯೋ. ಅಂತಹ ಶ್ರೀರುದ್ರ ದೇವರು ಎಂದರ್ಥ.

ಮಹತ್ತತ್ವದಿಂದ (೧) ವೈಕಾರಿಕ, (೨) ತೈಜಸ ಮತ್ತು (೩) ತಾಮಸ ಗಳೆಂದು ಮೂರುಪ್ರಭೇದಗಳಿಂದ ಯುಕ್ತವಾದ ಅಹಂಕಾರತತ್ತ್ವವು

ಹುಟ್ಟಿತು ಈ ಅಹಂಕಾರತ್ರಯಗಳಿಗೆ ಕ್ರಮವಾಗಿ ಗರುಡ, ಶೇಷ, ರುದ್ರ ಅಭಿಮಾನಿಗಳು. ಈ ಕಾರಣದಿಂದ ಚತುರ್ಮುಖಬ್ರಹ್ಮದೇವರು ಇವ ಜನಕರಾಗಿದ್ದಾರೆ. **ಮಹತತ್ತ್ವಾದಹಂಕಾರಂ** ಎಂಬ ವಿಷ್ಣುರಹ ವಾಕ್ಯವು ಇದಕ್ಕೆ ಪ್ರಮಾಣ. ಪ್ರಕೃತಿಯಲ್ಲಿ ಪುರುಷನಾಮಕನಾದ ಚ ರ್ಮುಖನು ಉತ್ಪನ್ನನಾದನು. ಆತನಿಂದ ಜೀವಾಭಿಮಾನಿಯಾದ ಶೇಷನ ಕಾಲಾಭಿಮಾನಿಯಾದ ಗರುಡನೂ, ನಂತರ ರುದ್ರನೂ ಹುಟ್ಟಿದರು. ಇ ಪ್ರಮಾಣ **ಪ್ರಕೃತ್ಯಾಂ ಪುರುಷೋ ಜೀವಃ ಕಾಲೋ ವಾಗ್ಸ್ಯಾಂ ಯೋಗಃ। ಸರ್ಪಾಕಾರೋ ಭವಜ್ಜೀವಃ ಕಾಲೋಭೂತ್ ಪಕ್ಷಿರು ಧೃಕ್। ತತೋ ಬ್ರಹ್ಮಸುತಃ ಶಿವಃ** ಎಂದು **ವಿಷ್ಣುರಹಸ್ಯ** ಪ್ರಮ ವಚನ.

ಬ್ರಹ್ಮದೇವರು ಪ್ರಳಯಕಾಲದಲ್ಲಿಯೂ ಸಹ ಪರಮಾತ್ಮನನ್ನು ಕ ವಂತಹ ಶಕ್ತಿಸಾಮರ್ಥ್ಯವುಳ್ಳವರು, ಸರ್ವಜ್ಞರು. ಜಗತ್ತಿಗೆ ಉಪದೇಶಕ ಸ್ವರೂಪೋದ್ಧಾರಕರು. ಈ ಕಾರಣದಿಂದ "ಜಗದ್ಗುರುವೇ" ಎಂದು ರಾಯರು ಸ್ತುತಿಸಿದ್ದಾರೆ. ಪರಿತತ್ವವನ್ನು ವಿಷಯೀಕರಿಸುವ ಸದ್ಬುದ್ಧಿಯ (ಸನ್ಮತಿಯು) ಅನುಗ್ರಹಿಸಲಿ ಎಂದು ಪ್ರಾರ್ಥಿಸಿಕೊಂಡಿದ್ದಾರೆ.

**(೪) ಭಾವದರ್ಪಣ ಟೀಕಾ :**

ಈ ಪದ್ಯದಲ್ಲಿ ವಿರಜಾನದಿ ಸ್ನಾನಮಾಡುವಂತಹ ಅಧಿಕಾರಿಗಳು (ವ ಯೋಗ್ಯಚೇತನವರ್ಗ) ಯಾವಾತನ ಉಪದೇಶದ್ವಾರಾ ಶ್ರೀಧಾಮನ ನಿಕ ವನ್ನು (ವೈಕುಂಠಾದಿಲೋಕಗಳನ್ನು) ಹೊಂದುವರೋ, ಅಂತಹ ಚತುರ್ಮು ಬ್ರಹ್ಮದೇವರನ್ನು ಗುಣವಿವರಣಪೂರ್ವಕ ಸಮೀಚೀನವಾದ ಬುದ್ಧಿಯ ಕೊಡಲೆಂದು ಪ್ರಾರ್ಥಿಸುತ್ತಾರೆ.

"ನಿರ್ಗತಾ ಉಪಮಾ ಯಸ್ಯ ಸಃ ನಿರುಪಮಃ" ಅಂದರೆ, ಯಾ ಉಪಮಾ (ಹೋಲಿಕೆ) ಇಲ್ಲವೋ, ಆತನು ನಿರುಪಮನು ಉಪಮಾನರಹಿ

"ನಿರುಪಮಶ್ಚಾಸೌ ಆನಂದಶ್ಚ = ನಿರುಪಮಾನಂದಃ" ಅಂದರೆ ಉಪಮಾನ ರಹಿತವಾದ ಆನಂದವುಳ್ಳವನು-ಯಾರ ಆನಂದಕ್ಕೆ ಉಪಮಾನವೇ ಇಲ್ಲವೋ ಆವಾತನು. "ನಿರುಪಮಾನಂದ ಏವ ಆತ್ಮಾ (ಸ್ವರೂಪಂ) ಯಸ್ಯಸ ನಿರುಪಮಾನಂದಾತ್ಮಾ" ಯಾವಾತನು ಅನುಪಮವಾದ ಆನಂದವನ್ನೇ ಸ್ವರೂಪ (ಆತ್ಮಾ)ವನ್ನಾಗಿ ಉಳ್ಳವನೋ ಆತನೇ ಸರ್ವೋತ್ತಮನಾದ ಶ್ರೀ ಹರಿಯು. **ಆತ್ಮಾ ದೇಹೇ ಧೃತೌ ಜೀವೇ ಸ್ವಭಾವೇ ಪರಮಾತ್ಮನಿ**-ಹೀಗೆಂದು ಅಭಿಧಾನವು. ಸಾದೃಶ್ಯರಹಿತವಾದ ಆನಂದವೇ ಸ್ವರೂಪವನ್ನಾಗಿ ಉಳ್ಳ ಪರಮಾತ್ಮನ ದೆಶೆಯಿಂದ ಉತ್ಪನ್ನನಾದ "ಬ್ರಹ್ಮ"ನೇ ಎಂದರ್ಥ (ನಿರುಪಮಾನಂದಾತ್ಮಭವ). ಇಂತಹ ಬ್ರಹ್ಮದೇವರು "ನಿರ್ಜರಸಭಾಸಂಸೇವ್ಯ"ರು "ನಿರ್ಗತಾ ಜರಾ ಏಭ್ಯಸ್ತೇ-ನಿರ್ಜರಾಃ" ಯಾರಿಗೆ ಮುಪ್ಪು (ಜರಾ) ಇಲ್ಲವೊ ಅವರೇ ನಿರ್ಜರರು. ಅಂದರೆ ದೇವತೆಗಳು. ಅವರ ಸಮೂಹ ಅಥವಾ ಗಣದಿಂದ (ಸಭಾ), ಚೆನ್ನಾಗಿ ಸೇವಿಸಿಕೊಳ್ಳಲ್ಪಡುವ (ಸಂಸೇವ್ಯ). "ಸಮ್ಯಕ್ ಸೇವ್ಯಃ-ಸಂಸೇವ್ಯಃ" ಏಕೋನದ್ವಿಶತ ಋಜುಗಳಿಗೆ (ದ್ವಿಶತ = ೨೦೦, ಅದಕ್ಕೆ ಏಕೋನ ಅಂದರೆ ೧ ಕಡಿಮೆ ಅಂದರೆ. ೧೯೯) ಶ್ರೇಷ್ಠರಾದ ಬ್ರಹ್ಮದೇವರು (ಋಜುಗಣದರಸೇ) ೨೦೦. ಮುಂದಿ ಋಜುಗಣಸ್ಥರಲ್ಲಿ ಬ್ರಹ್ಮದೇವರು ಉಳಿದ ೧೯೯ ಸ್ವಗಣದಲ್ಲಿ ಶ್ರೇಷ್ಠರು. ಸರಸ್ವತೀದೇವಿಯರ ಮುಖಕಮಲಕ್ಕೆ ಸೂರ್ಯನಂತೆ ಆನಂದದಾಯಕರು (ವಾಣೀಮುಖಸರೋಜೇನ). ಸತ್ವಗುಣವೇ ಅಧಿಕ್ಯವಾಗಿ ಉಳ್ಳ ಮಹತ್ತತ್ತ್ವಾತ್ಮಕ ಶರೀರವುಳ್ಳವರು (ಸತ್ವಪ್ರಚುರ). "ಪ್ರಭೂತಂ ಪ್ರಚುರಂ ಪ್ರಾಜ್ಯಮದಭ್ರಂ ಬಹುಳಂ ಬಹು" ಎಂಬ ಅಮರ ಕೋಶರೀತ್ಯಾ. "ಪ್ರಚುರ" ಎಂದರೆ "ಬಹುಳವಾದ" (ಆಧಿಕ್ಯವುಳ್ಳ) ಎಂಬರ್ಥ. ಗರುಡ, ಶೇಷ, ಶಶಾಂಕದಳಶೇಖರ ಈ ಮೂವರಿಗೆ ತಂದೆ ಎಂದರ್ಥ (ಗರುಡ ಶೇಷಶಶಾಂಕದಳಶೇಖರರಜನಕ). ಬ್ರಹ್ಮದೇವರು "ಜಗದ್ಗುರುಗಳು": "ಜಗತ್" ಶಬ್ದವನ್ನು ಜೀವಪರ ಮಾಡಬೇಕು. ಸಮಸ್ತಜೀವರಿಗೂ ಮುಖ್ಯ ಗುರುವಾದಂಥ ಬ್ರಹ್ಮದೇವರೇ ಎಂದು ತಾತ್ಪರ್ಯ. ನಿನ್ನ ಪಾದಕ್ಕೆ ನಮ್ರತೆಯಿಂದ ನಮಿಸುತ್ತೇನೆ. (ತ್ವಚ್ಚರಣಗಳಿಗಭಿವಂದಿಸುವೆ) ಸಮೀಚೀನವಾದ

ಬುದ್ಧಿಯನ್ನು ಕೊಡು (ಪಾಲಿಪುದು ಸನ್ಮತಿಯು) ಎಂದು ಚತುರ್ಮುಖಬ್ರಹ್ಮ ದೇವರನ್ನು ಪ್ರಾರ್ಥಿಸುತ್ತಾರೆ.

## (೫) ಗುರುಹೃದಯಪ್ರಕಾಶಿಕಾ ವ್ಯಾಖ್ಯಾನ :

ಈ ಪದ್ಯದಲ್ಲಿ ಶ್ರೀಹರಿ ಮತ್ತು ಶ್ರೀರಮಾದೇವಿಯರ ಅಧೀನರಾದ ಚತುರ್ಮುಖಬ್ರಹ್ಮದೇವರನ್ನು ಸ್ತುತಿಸುತ್ತಾರೆ. ಬ್ರಹ್ಮದೇವರು ಅಸದೃಶಾನಂದವೇ ಶರೀರವಾಗುಳ್ಳ ವಿಷ್ಣುವಿನ ಪುತ್ರರು (ನಿರುಪಮಾನಂದಾತ್ಮಭವ). ದೇವತೆಗಳ ಸಭೆಯಲ್ಲಿ ಆರಾಧಿತರು (ನಿರ್ಜರಸಭಾಸಂಸೇವ್ಯ). ಬ್ರಹ್ಮಪದಯೋಗ್ಯಋಜುಗಣವೆಂಬ ಜೀವರ ಅರಸರು (ಋಜುಗಣದರಸೇ). ಅಧಿಕಸತ್ವಗುಣವುಳ್ಳವರು (ಸತ್ವಪ್ರಚುರ). ಸರಸ್ವತೀಮುಖವೆಂಬ ಕಮಲಕ್ಕೆ ಸೂರ್ಯನಂತೆ ಪ್ರಕಾಶಕರು (ವಾಣೀಮುಖಸರೋಜೇನ). ಗುರುಡಶೇಷ ರುದ್ರರಜನಕರು. (ಗರುಡಶೇಷ ಶಶಾಂಕದಳಶೇಖರರಜನಕ). ಜಗದ್ಗುರುಗಳಾದ (ಜಗದ್ಗುರುವೇ) ಬ್ರಹ್ಮದೇವರೇ ನಿಮ್ಮ ಪಾದಗಳಿಗೆ ನಮಸ್ಕರಿಸುವೆ (ತ್ವಚ್ಚರಣಗಳಿಗಭಿವಂದಿಸುವೆ). ಸದ್ಬುದ್ಧಿಯನ್ನು ಕೊಟ್ಟು ಕಾಪಾಡಿ (ಪಾಲಿಸುವುದು ಸನ್ಮತಿಯ).

**ವಿಶೇಷಾರ್ಥ :** ಬ್ರಹ್ಮದೇವರು ಮಹತ್ತತ್ವಕ್ಕೆ ಅಭಿಮಾನಿಗಳು. ಅಹಂಕಾರತತ್ವವು ಮಹತ್ತತ್ವದಿಂದ ಹುಟ್ಟಿತು. ಗರುಡ ಶೇಷ ರುದ್ರರು ಅಹಂಕಾರತತ್ವಕ್ಕೆ ಅಭಿಮಾನಿಗಳು. ಈ ಕಾರಣದಿಂದ ಈ ಮೂರು ಮಂದಿಯು ಬ್ರಹ್ಮಪುತ್ರರೆಂದಭಿಪ್ರಾಯ. "ಪ್ರಕೃತ್ಯಾ.........ಬಭೂವ ಭೂವೌ।" ಇತ್ಯಾದಿ ಪ್ರಮಾಣಗಳನ್ನು ಹಿಂದಿನ ವ್ಯಾಖ್ಯಾನಗಳಲ್ಲಿ ಉದಹರಿಸಿದೆ. **ವೈಕಾರಿಕೋ ಬ್ರಹ್ಮಜಸ್ತು** ಇತ್ಯಾದಿ ಪ್ರಮಾಣಗಳಲ್ಲಿ ಗರುಡದೇವರು ವಾಯುದೇವರ ಪುತ್ರರೆಂದೂ ವೈಕಾರಿಕ-ತೈಜಸ-ತಾಮಸವೆಂಬ ಮೂರು ರುದ್ರರೂಪಗಳು ಬ್ರಹ್ಮವಾಯುಶೇಷಪುತ್ರರೆಂದು ಹೇಳುವುದು ರೂಪಾಂತರ ವಿವಕ್ಷೆ.

## ೬) ಜಮುಖಂಡೀ ವಾದಿರಾಜಾಚಾರ್ಯರ ವ್ಯಾಖ್ಯಾನ :

ಈ ಪದ್ಮದಲ್ಲಿ ಚತುಮುಖಬ್ರಹ್ಮದೇವರನ್ನು ಸಮಾಚೀಜ್ಞಾನ

ಪ್ರಾಪ್ತಿಗಾಗಿ ಜ್ಞಾನಿಗಳಾದ ಶ್ರೀಜಗನ್ನಾಥದಾಸವರ್ಯರು ಪ್ರಾರ್ಥಿಸುತ್ತಾರೆ. "ಬ್ರಹ್ಮದೇವರೇ ಜಗದ್ಗುರುಗಳು" ಎಂದು **ಶೃತಿಗೀತಾತಾತ್ಪರ್ಯ**ದಲ್ಲಿ ಪ್ರಮಾಣವಿದೆ. ಪರಮಾತ್ಮನು ಅಸದೃಶವಾದ ಆನಂದವುಳ್ಳವನು. ಆತನ ತನಯನೇ ಬ್ರಹ್ಮದೇವರು. **ಋಜುವ್ಯೋನಾಮ**-ಎಂಬ ಪ್ರಮಾಣದಿಂದ ಬ್ರಹ್ಮಪದವಿಗೆ ಬರುವವರೇ ಋಜುಗಳು. ಈ ಋಜುಗಣದಲ್ಲಿ ಬ್ರಹ್ಮದೇವರು ಶ್ರೇಷ್ಠರು. "ಸತ್ವ" ಎಂದರೆ, ಬಲ ಮತ್ತು ಜ್ಞಾನ ಸಮ್ಮೇಲನವುಳ್ಳವರು ಎಂದರ್ಥ (ಬಲಜ್ಞಾನಮೇಲನವಾನ್) ಸರಸ್ವತಿದೇವಿಯರಿಂದಲೂ ಶ್ರೇಷ್ಠವಾದ ಸತ್ವಶರೀರವುಳ್ಳವರು. ಸತ್ವಗುಣದಲ್ಲಿ ೧) ಸತ್ವ-ಸತ್ವ, ೨) ಮಹಾಸತ್ವ ಮತ್ತು ೩) ಸೂಕ್ಷ್ಮ ಸತ್ವ ಎಂಬ ಪ್ರಭೇದಗಳಲ್ಲಿ ಚತುರ್ಮುಖಬ್ರಹ್ಮ ದೇವರು "ಸೂಕ್ಷ್ಮತತ್ವ" ಶರೀರವುಳ್ಳವರು.

**ಸೂಕ್ಷ್ಮಸತ್ವಶ್ಚತುರ್ಮುಖಃ** ಎಂದು **ಗೀತಾತಾತ್ಪರ್ಯ**ದಲ್ಲಿ ಪ್ರಮಾಣ. ದೇವತಾತಾರತಮ್ಯದಲ್ಲಿ (೧) ತತ್ವಾಭಿಮಾನಿ ದೇವತೆಗಳು ಸ್ತ್ವರು (ಸಾತ್ವಿಕಸಾತ್ವಿಕರು) (೨) ಗರುಡ, ಶೇಷ, ರುದ್ರರು ಸತ್ವಸತ್ವರು (ತತ್ವೇಶರಿಗಿಂತ ಸತ್ವಾಧಿಕ್ಯವುಳ್ಳವರು) (೩) ಬ್ರಹ್ಮಪತ್ನಿಯಾದ ಸರಸ್ವತೀ ದೇವಿಯು ಮಹಾಸತ್ವಸ್ವರೂಪರು (ಗರುಡಾದಿಗಳಿಗಿಂತಲೂ ಹೆಚ್ಚಿನ ಸತ್ವ ಗುಣವುಳ್ಳವರು. (೪) ಚತುರ್ಮುಖಬ್ರಹ್ಮದೇವರು ಸೂಕ್ಷ್ಮಸತ್ವಸ್ವರೂಪರು (ಸರಸ್ವತಿಯರಿಗಿಂತ ಅಧಿಕಸತ್ವವುಳ್ಳವರು.) ಪೂರ್ಣಸೂಕ್ಷ್ಮತತ್ವಮಯ ಶರೀರವುಳ್ಳವರು. (ಸತ್ವಪ್ರಚುರ). "ದಲ" ಎಂದರೆ "ಖಂಡ" ಎಂಥರ್ಥ. ಶಶಾಂಕದಲ ಎಂದರೆ ಚಂದ್ರನಖಂಡ (ಶಕಲ). ಇದನ್ನು ತಮ್ಮ ತಲೆಯಲ್ಲಿ ಧರಿಸಿರುವುದರಿಂದ ರುದ್ರದೇವರು "ಚಂದ್ರಶೇಖರ"ರೆನಿಸುತ್ತಾರೆ. ಬ್ರಹ್ಮ ದೇವರು ಗರುಡ ಶೇಷ ರುದ್ರರಿಗೆ ಜನಕರು ಎಂಬ ವಿಷಯದಲ್ಲಿ ಪ್ರಮಾಣ : **ಚಂದ್ರಶೇಖರ ಮುಖಾನಾಂ ಅಜೋತ್ಪತ್ತೌ ಮಾನಂ ಚ ತತೋ ಮಹತ್ತತ್ವತನುರ್ವಿರಿಂಚಿಃ ಸ್ಥೂಲಾತ್ಮ ನೈವಾಜನಿ ವಾಕ್ ಚ ದೇವೀ ॥ ತಸ್ಯಾಮಹಂಕಾರತನುಂ ಸ ರುದ್ರಂ ಸ ಸರ್ಜೇತಿ** ಎಂದು **ತಾತ್ಪರ್ಯ ನಿರ್ಣಯ**ದ ಪ್ರಮಾಣವು. ಅಂದರೆ, ಪರಮಾತ್ಮನ ದೆಶೆಯಿಂದ ಮಹತ್ತತ್ವ ಶರೀರನಾದ ಬ್ರಹ್ಮನು ಜನಿಸಿದನು. ಆವನಿಂದ ಸರಸ್ವತೀದೇವಿ, ಅವಳಲ್ಲಿ

ಅಹಂಕಾರಶರೀರನಾದ ರುದ್ರನು ಹುಟ್ಟಿದನು ಎಂದು ತಾತ್ಪರ್ಯ. **ತತೋ ಮಹತ್ತತ್ವತನುಃ** ಎಂಬ **ತಾತ್ಪರ್ಯನಿರ್ಣಯದಲ್ಲಿರುವ** ಶ್ಲೋಕವೇ ಪ್ರಮಾಣವು. **(ಅಧ್ಯಾಯ ೩-ಶ್ಲೋಕ ೧೬)**

**೭) ಇತರ ವ್ಯಾಖ್ಯಾನಗಳು :**

ಪೂರ್ವೋಕ್ತಪದ್ಯದಲ್ಲಿ ಅವ್ಯಕ್ತತತ್ವಾಭಿಮಾನಿಗಳಾದ ಶ್ರೀಲಕ್ಷ್ಮೀದೇವಿಯರನ್ನು ಸ್ತೋತ್ರಮಾಡಿ, ಅನುಗ್ರಹಪಡೆದು, ಈ ಪದ್ಯದಲ್ಲಿ ಮಹತ್ತತ್ವಾಭಿಮಾನಿಗಳಾದ ಚತುರ್ಮುಖಬ್ರಹ್ಮದೇವರ ಸ್ತೋತ್ರಮಾಡುತ್ತಾರೆ. ಶ್ರೀಮನ್ನಾರಾಯಣನು ಉಪಮಾರಹಿತ. ಈತನಿಗೆ ಸಮರೂ ಇಲ್ಲ-ಅಧಿಕರ್‍ಯಾರೂ ಇಲ್ಲ. ಸಮಾಭ್ಯಧಿಕಶೂನ್ಯನು. ಅಕ್ಷರಳಾದ ಶ್ರೀರಮಾದೇವಿ ಹಾಗೂ ಕ್ಷರರಾದ ಬ್ರಹ್ಮರುದ್ರೇಂದಾದಿಗಳ್ಯಾರೂ ಈತನಿಗೆ ಸದೃಶರಲ್ಲ. ಆತ ಏವ ಶ್ರೀ ಹರಿಯು ಸರ್ವೋತ್ತಮನು. ಅನಂತಾನಂತಗುಣಪೂರ್ಣನು ಹಾಗೂ ಅನಂತಾನಂತರೂಪಾತ್ಮನು. 'ನಿರುಪಮಾನಂದ' ಎಂಬ ಪದ ಪ್ರಯೋಗದಿಂದ 'ನಿರುಪಮ ಸಮಾಧಿಕ ಶೂನ್ಯ' ನೆಂದು ಶ್ರುತಿ ಸ್ಮೃತಿಗಳಲ್ಲಿ ಉಕ್ತವಾದ ಅಭಿಪ್ರಾಯವನ್ನೇ ಪ್ರತಿಪಾದಿಸಿದ್ದಾರೆ.

**"ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।"** ಎಂಬ **ಗೀತಾ** ವಚನದಂತೆ, ಕ್ಷರಾಕ್ಷರರಲ್ಲಿ ಉತ್ತಮನು. ಆನಂದಾತ್ಮನು. ಪೂರ್ಣಜ್ಞಾನನಂದಶರೀರವುಳ್ಳವನು. ಸಮಸ್ತಷಡ್ಗುಣೈಶ್ವರ್ಯಾದಿ ಗುಣ ಸಂಪತ್ತುಉಳ್ಳವನು. (ಭಗವಂತ). ಬ್ರಹ್ಮಾದಿದೇವತೆಗಳಾದರೋ ಕ್ಷುದ್ರಾನಂದವುಳ್ಳವರು. **"ನಾರಾಯಣಂ ಗುಣೈಃ ಸರ್ವೈರುದೀರ್ಣಂ ದೋಷ ವರ್ಜಿತಂ"** ಎಂಬ ಶ್ರೀಮದಾಚಾರ್ಯರ **ಬ್ರಹ್ಮಸೂತ್ರಭಾಷ್ಯ** ವಚನಾನುಸಾರ ಶ್ರೀಹರಿಯು ಸಮಸ್ತಗುಣಗಣಪರಿಪೂರ್ಣನು. ಸಕಲದೋಷ ದೂರನು. ಮಹಾಮಹಿಮೋಪೇತನು. ಓಂ ಕಾರಪ್ರತಿಪಾದ್ಯನು ಚತುರ್ಮುಖಬ್ರಹ್ಮದೇವರು ಉಪಮಾರಹಿತನಾದ ಪರಮಾತ್ಮನ ನಾಭಿಕಮಲೋದ್ಭವನು. ಬ್ರಹ್ಮದೇವರು ಗರುಡ ಶೇಷ ಭವ ಇಂದ್ರಾದಿ ದೇವತಾಗಣಗಳಿಂದ ಸೇವ್ಯಮಾನರು. ಋಜುಗಣಸ್ಥರಾದ ೧೯೯ ಮಂದಿಯಲ್ಲಿ ಶ್ರೇಷ್ಠರು.

ಇಂತಹ ಬ್ರಹ್ಮದೇವರ ವರ್ಣನೆ ಶೇಷದೇವರಿಗೂ ಸಾಧ್ಯವಿಲ್ಲ. ವಿಶೇಷತಃ ಸತ್ವಗುಣಪ್ರಾಚುರ್ಯವುಳ್ಳವರು. ಕಮಲಮಿತ್ರ ಸೂರ್ಯನಂತೆ ಸರಸ್ವತೀ ದೇವಿಯರ ವದನಾರವಿಂದಕ್ಕೆ ಸದಾ ಸಂತೋಷಪ್ರದರು. ಬ್ರಹ್ಮದೇವರು ಪರಮಾತ್ಮನ ವಾಹನರಾದ ಶ್ರೀಗರುಡದೇವರಿಗೂ, ಪರ್ಯಂಕರೂಪಾಗಿ ಸೇವಿಸುವ ಶ್ರೀಶೇಷದೇವರಿಗೂ, ಮತ್ತು ಶಶಿಭೂಷಣರಾದ ಶ್ರೀರುದ್ರದೇವ ರಿಗೂ ಜನಕರು. ಸಮಸ್ತದೇವತೆಗಳೂ ಶ್ರೀಮನ್ನಾರಾಯಣನ ಅವಯುವ ಗಳಿಂದ ಸೃಷ್ಟರಾಗಿದ್ದಾರೆ. ಶ್ರೀರಮಾಕಾಂತನೇ ಮುಖ್ಯವೃತ್ತಿಯಿಂದ ಸಮಸ್ತ ಜಗತ್ತಿಗೆ ಪಿತೃಸ್ಥಾನೀಯನು. ಪರಲೋಕಬಂಧುವು. ಜ್ಞಾನಪ್ರದನು. ಸೃಷ್ಟ್ಯಾ ದ್ಯಷ್ಟಕರ್ತ. ಇಂತಹ ಮಹಿಮೋಪೇತನಾದ ಶ್ರೀಹರಿಯೇ ಬ್ರಹ್ಮದೇವರಲ್ಲಿ ಸ್ಥಿತನಾಗಿ ಬ್ರಹ್ಮನದ್ವಾರಾ ಜಗತ್ತನ್ನು ಸೃಷ್ಟಿಮಾಡುತ್ತಾನೆ. ಅಮುಖ್ಯ ವೃತ್ತಿಯಿಂದ ಬ್ರಹ್ಮದೇವರು ಗರುಡಶೇಷಭವಾದ್ಯರಿಗೆ ಜನಕ ಎಂದು ಕರೆ ಯಿಸಲ್ಪಡುತ್ತಾರೆ. ಅನಂತಾನಂತ ಬ್ರಹ್ಮಾಂಡಗಳನ್ನೂ ಅನಂತಾನಂತ ಬ್ರಹ್ಮಾದಿ ಸಮಸ್ತ ಚೇತನರಸೃಷ್ಟಿಕಾರ್ಯವನ್ನು ಶ್ರೀ ರಮಾದೇವಿಯರ ಅಂತರ್ಗತನಾಗಿ. ಮೂಲಪ್ರಕೃತಿಯನ್ನು ಉಪಾದಾನಕಾರಣಮಾಡಿಕೊಂಡು ಬ್ರಹ್ಮನದ್ವಾರಾ ಜಗತ್ತಿನ ಸೃಷ್ಟಿ, ಸಮಸ್ತಜೀವರಸೃಷ್ಟಿ ಮಾಡುತ್ತಾನೆ. ಸೂಕ್ಷ್ಮಸೃಷ್ಟಿಯಲ್ಲಿ. ಪದ್ಮಾದಿಸೃಷ್ಟಿಯಲ್ಲಿ ಗರುಡಾದಿದೇವತೆಗಳನ್ನು ಬ್ರಹ್ಮ ದೇವರದ್ವಾರಾ ಸೃಷ್ಟಿಮಾಡಿಸುತ್ತಾನೆ. ಮೂಲಸೃಷ್ಟಿಗೆ ಮುಖ್ಯಕರ್ತ ಶ್ರೀಮನ್ನಾರಾಯಣನೇ. ಅನಂತರ ಶ್ರೀ ರಮಾ ಕಾರಣಳು. ತರುವಾಯ ಶ್ರೀರಮಾ ಅನುಗ್ರಹದಿಂದ ಬ್ರಹ್ಮ ಕಾರಣ. ಇವಿಷ್ಟು ಸೃಷ್ಟಿರಹಸ್ಯವು **ಮಹಾಭಾರತ ತಾತ್ಪರ್ಯ ನಿರ್ಣಯದ (ಮೂರನೆಯಅಧ್ಯಾಯ)**ಲ್ಲಿಯೂ ಮತ್ತು **ಅಂಭ್ರಣೀಸೂಕ್ತ**ದಲ್ಲಿಯೂ ಉಕ್ತವಾಗಿದೆ. ಜಗದ್ಗುರುಗಳಾದ ಬ್ರಹ್ಮದೇವರ ಚರಣಗಳಿಗೆ ವಂದನಮಾಡುವುದರಿಂದ, ಸಮೀಚೀನವಾದ ಬುದ್ಧಿ. ಸರ್ವೋತ್ತಮಜ್ಞಾನ. ಪಂಚಭೇದ ತಾರತಮ್ಯಜ್ಞಾನ. ಹರಿಭಕ್ತರ ಚರಣಾರವಿಂದಗಳಲ್ಲಿ ಭಕ್ತಿ ವಿಷಯದಲ್ಲಿ ವೈರಾಗ್ಯಭಾವ ತದ್ವಾರಾ ಶ್ರೀಲಕ್ಷ್ಮೀ ಪತಿಯನ್ನು ಕೊಂಡಾಡುವ ಸನ್ಮತಿ ಇತ್ಯಾದಿ ದೈವೀಸಂಪತ್ತುಗಳನ್ನು ಪಾಲಿಸಲಿ ಎಂದು ಮಹತ್ತತ್ವಾಧಿಪತಿಗಳಾದ ಸರಸ್ವತೀಶರಾದ ಬ್ರಹ್ಮದೇವರನ್ನು ಸ್ತೋತ್ರಮಾಡಿದ್ದಾರೆ.

## ಪದ್ಯ (೪)

ಆರುಮೂರೆರಡೊಂದು ಸಾವಿರ ।
ಮೂರೆರಡು ಶತಶ್ವಾಸ ಜಪಗಳ ।
ಮೂರುವಿಧ ಜೀವರೊಳಗಬ್ಜಜಕಲ್ಪ ಪರಿಯಂತ ॥
ತಾ ರಚಿಸಿ ಸಾತ್ತ್ವರಿಗೆ ಸುಖ ಸಂ ।
ಸಾರಮಿಶ್ರರಿಗಧಮಜನರಗ ।
ಪಾರದುಃಖಗಳೀವ ಗುರುಪವಮಾನ ಸಲಹೆಮ್ಮ ॥೪॥

**ಅವತರಣಿಕೆ :**

ಈ ಪದ್ಯದಲ್ಲಿ ಸ್ವರೂಪತಃ ಬ್ರಹ್ಮದೇವರಿಗೆ ಸಮಾನರಾದ (ಗುಣತಃ ಸಮರು), ಪಕ್ಷಸಾಧನದಲ್ಲಿ ಪದವಿದೃಷ್ಟಿಯಿಂದ ಬ್ರಹ್ಮದೇವರಿಗೆ ಕಿಂಚಿತ್ ಅವರರಾದ ಶ್ರೀ ವಾಯುದೇವರನ್ನು ಪ್ರಾರ್ಥಿಸುತ್ತಾರೆ.

**ಪ್ರತಿಪದಾರ್ಥ :**

**ಆರುಮೂರೆರಡೊಂದು ಸಾವಿರ**＝೬×೩＝೧೮ (ಆರುಮೂರು) ; ೨＋೧＝೩ (ಎರಡೊಂದು)－ ಅಂದರೆ ೧೮＋೩＝೨೧ ಎಂದು ಸಂಖ್ಯಾಗಣತಿ ಬರುವುದು. ಅಂದರೆ. ಇಪ್ಪತ್ತೊಂದು ಸಾವಿರ (೨೧೦೦೦) ಎಂದಾಯಿತು. **ಮೂರೆರಡು ಶತ**＝೩×೨＝೬ (ಮೂರೆರಡು)–ಶತ, ಅಂದರೆ ನೂರು ಎಂದರ್ಥ. ಅಲ್ಲಿಗೆ ೬×೧೦೦＝೬೦೦ ಆಯಿತು. ಒಟ್ಟಿನಲ್ಲಿ ೨೧೬೦೦ (ಆರುಮೂರೆರಡೊಂದುಸಾವಿರಮೂರೆರಡು ಶತ) ಆಯಿತು. **ಶ್ವಾಸಜಪಗಳ**＝ ಇಂತಹ ಇಪ್ಪತ್ತೊಂದುಸಾವಿರದಆರನೂರು ಸಂಖ್ಯಾಕವಾದ, ನಾಸಿಕಾದ್ವಾರ ದಿಂದ ನಡೆಯತಕ್ಕ ಶ್ವಾಸಕಾರ್ಯರೂಪವಾದ ಜಪಗಳನ್ನು (ಆವರ್ತನ ಗಳನ್ನು). ಈ ಶ್ವಾಸಕ್ರಿಯೆಯು ಎರಡು ವಿಧವಾಗಿರುವುದು : ೧) ಉಚ್ಛ್ವಾಸ (ಹೊರಗಿನ ಗಾಳಿಯನ್ನು ಒಳಗೆ ತೆಗೆದುಕೊಳ್ಳುವುದು) ಮತ್ತು ನಿಶ್ವಾಸ (ಒಳಗಿನಿಂದ ಶ್ವಾಸ ಹೊರಗೆ ಬಿಡುವುದು). ಇವೆರಡು ಆವರ್ತನರೂಪವಾದ

ಶಾಸಕಾರ್ಯಗಳನ್ನು ಶ್ರೀವಾಯುದೇವರು ಸಮಸ್ತಜೀವರಲ್ಲಿಯೂ ಮಾಡಿಸುತ್ತಾರೆ. **ಮೂರುವಿಧಜೀವರೊಳಗೆ**= (೧) ಮುಕ್ತಿಯೋಗ್ಯರು (ಸಾತ್ವಿಕ ಚೇತನರು.), (೨) ಮಿಶ್ರಜೀವರು (ರಜೋಜೀವರು) ಮತ್ತು (೩) ತಮೋಯೋಗ್ಯರು (ತಮೋಜೀವರು)- ಈ ಮೂರುವಿಧವಾದ ಜೀವರಲ್ಲಿ **ಅಬ್ಜಜಕಲ್ಪ ಪರಿಯಂತ**= ಅಬ್ಜ ಎಂದರೆ ಕಮಲ ಎಂದರ್ಥ (ಅಪ್ = ನೀರಿನಲ್ಲಿ-ಜ= ಉತ್ಪನ್ನವಾದದ್ದು = ಕಮಲ) -ಅಬ್ಜಜ = ಪದ್ಮನಾಭರೂಪೀ ಶ್ರೀಮನ್ನಾರಾಯಣನ ನಾಭಿಯಲ್ಲಿ ಉತ್ಪನ್ನವಾದ ಕಮಲದಲ್ಲಿ ಉತ್ಪನ್ನರಾದವರೇ ಚತುಮುಖ ಬ್ರಹ್ಮದೇವರು. ಅಂದರೆ, ಅಬ್ಜಜ=ಬ್ರಹ್ಮದೇವರು. ಅಬ್ಜಜ ಕಲ್ಪ = ಒಂದು ಬ್ರಹ್ಮಕಲ್ಪ. ಪರಿಯಂತ=ಬ್ರಹ್ಮಕಲ್ಪದ (ಬ್ರಹ್ಮದೇವರ೧೦೦ ವರ್ಷಗಳ ಆಯುಃ ಪರಿಮಾಣ) ಅಂತ್ಯದವರೆಗೂ ಶ್ವಾಸಕಾರ್ಯಗಳನ್ನು ತ್ರಿವಿಧ ಜೀವರಲ್ಲಿಯೂ ಇದ್ದು, ಶ್ರೀ ವಾಯುದೇವರೇ ಮಾಡುತ್ತಾರೆ. **ತಾ ರಚಿಸಿ**= ಈ ಹಂಸಮಂತ್ರಾಖ್ಯವಾದ ಸ್ವಾಶಜಪಗಳನ್ನು ತಾವೇ ರಚನಾ ಮಾಡುತ್ತಾರೆ. ಈ ಜಪವನ್ನು ಮಾಡುವ ಅಧಿಕಾರ ಶ್ರೀ ವಾಯುದೇವರಿಗೆ ಮಾತ್ರ ಸೇರಿದ್ದು. ಅನ್ಯರಾದ ರುದ್ರಾದಿ ದೇವತೆಗಳಿಗೆ ಅಧಿಕಾರವಿಲ್ಲ. **ಸಾತ್ತ್ವರಿಗೆ ಸುಖ** = ಮುಕ್ತಿಯೋಗ್ಯರಾದ ಸಾತ್ತ್ವಿಕಜೀವರಿಗೆ ಲಿಂಗಭಂಗಾನಂತರ ವೈಕುಂಠಾದಿ ಲೋಕಗಳಲ್ಲಿ ಆನಂದವನ್ನೂ, **ಸಂಸಾರಮಿಶ್ರರಿಗೆ**= ನಿತ್ಯಸಂಸಾರಿಗಳಾದ ರಾಜಸರಿಗೆ ಸುಖ-ದುಃಖ ಮಿಶ್ರಿತವಾದ ಅನುಭವವನ್ನೂ **ಅಧಮಜನರಿಗೆ**= ಅತ್ಯಂತ ಹೀನರಾದ ತಾಮಸರಿಗೆ **ಅಪಾರದುಃಖಗಳೀವ** =ಲಿಂಗಭಂಗಾನಂತರ ದುಃಖಸ್ವರೂಪವಾದ ನಿತ್ಯದುಃಖಗಳನ್ನು ಕೊಡುವ **ಗುರುಪವಮಾನ**= ಜೀವೋತ್ತಮರಾದ ವಾಯುದೇವರೇ **ಎಮ್ಮ**=ನಮ್ಮಗಳನ್ನು **ಸಲಹು**= ದಿವ್ಯಜ್ಞಾನವನ್ನು ಕೊಟ್ಟು ಸಂರಕ್ಷಿಸಿರಿ.

**ತಾತ್ಪರ್ಯ :**

ಮೊದಲನೆಯ ಪದ್ಯದಲ್ಲಿ ಉಪಾಸ್ಯಮೂರ್ತಿಯಾದ ಶ್ರೀಲಕ್ಷ್ಮೀನರಸಿಂಹ ದೇವರನ್ನು ತಾರತಮ್ಯೋಕ್ತ ಸ್ತೋತ್ರಮಾಡಿ, ಎರಡನೆಯ ಪದ್ಯದಲ್ಲಿ ಮೂಲ ಪ್ರಕೃತಿಗೆ ಅಭಿಮಾನಿಗಳಾದ ಶ್ರೀ ಲಕ್ಷ್ಮೀದೇವಿಯರನ್ನು ಸ್ತುತಿಸಿ ತರುವಾಯ ಮೂರನೆಯ ಪದ್ಯದಲ್ಲಿ ಮಹತ್ತತ್ತ್ವಕ್ಕಭಿಮಾನಿಗಳಾದ ಋಜುಶ್ರೇಷ್ಠರಾದ ಶ್ರೀ ಬ್ರಹ್ಮದೇವರಗುಣವರ್ಣನಮಾಡಿ, ಈ ಪದ್ಯದಲ್ಲಿ ಭಗವತ್ಕಾರ್ಯಸಾಧಕರೂ

ಜೀವೋತ್ತಮರೂ ಆದ ಶ್ರೀವಾಯುದೇವರನ್ನು ಸ್ತುತಿಸಿದ್ದಾರೆ. ಶ್ರೀ ವಾಯುದೇವರು ಸಾತ್ವಿಕ, ರಾಜಸ ಮತ್ತು ತಾಮಸ ಎಂಬ ಮೂರು ವಿಧ ಜೀವರಲ್ಲಿ ಶ್ವಾಸಕಾರ್ಯವನ್ನು ಮಾಡುತ್ತಾ, ಸಾಧನಶರೀರಗತರಾಗಿ, ಆಯಾಯಾ ಜೀವರ ಯೋಗ್ಯತಾನುಸಾರ ಸಾಧನೆಗಳನ್ನು ಮಾಡಿಸುತ್ತಿರುವರು. ಈ ಭಗವತ್ಸೇವಾರೂಪವಾದ ಕಾರ್ಯವನ್ನು ಮಾಡುತ್ತಿರುವರು. ಇಂತಹ ೨೧೬೦೦ಶ್ವಾಸಜಪಗಳನ್ನು ತಾವೇ ಜೀವರ ಸ್ಥೂಲದೇಹಗತರಾಗಿ ರಚಿಸಿ, ತ್ರಿವಿಧಜೀವರಲ್ಲಿಯೂ ಬ್ರಹ್ಮಕಲ್ಪಪರ್ಯಂತ, ಅಂದರೆ ಸೃಷ್ಟಿಯಿಂದ ಪ್ರಾರಂಭಿಸಿ, ಲಿಂಗದೇಹಭಂಗಪರ್ಯಂತದವರೆಗೂ, ಶ್ವಾಸಜಪಗಳನ್ನು ಮಾಡುತ್ತಾ, ಮುಕ್ತಿಯೋಗ್ಯರಾದ ಜೀವರಿಗೆ ನಿತ್ಯಾನಂದವನ್ನೂ ರಾಜಸರಿಗೆ ಮಿಶ್ರಫಲಗಳನ್ನೂ ಮತ್ತುತಮೋಯೋಗ್ಯರಾದ ಅಧಮ ಜೀವರಿಗೆ ನಿತ್ಯದುಃಖ ವನ್ನೂ ಕೊಟ್ಟು. ಅವರವರ ನಿಜಗತಿಗಳನ್ನು ಐದಿಸುವ ತ್ರೈಲೋಕ್ಯಾಚಾರ್ಯ ರಾದ ಜೀವೋತ್ತಮರಾದ ಶ್ರೀವಾಯುದೇವರು ನಮ್ಮೆಲ್ಲರನ್ನೂ ಸಮೀಚಿನ ಜ್ಞಾನಕೊಟ್ಟು ಸಂರಕ್ಷಿಸಲಿ ಎಂದು ಸ್ತುತಿಸಿದ್ದಾರೆ.

**ವ್ಯಾಖ್ಯಾನಗಳು :**

**(೧) ಶ್ರೀ ಸಂಕರ್ಷಣ ಒಡೆಯರವ್ಯಾಖ್ಯಾನ :** ಶ್ರೀ ವಾಯು ದೇವರು ೨೧೬೦೦ ಸಂಖ್ಯಾಕವಾದ ಶ್ವಾಸಜಗಳನ್ನು ಪ್ರತಿಜೀವರಲ್ಲಿಯೂ ಇದ್ದು ಮಾಡಿಸುತ್ತಾರೆ. ಈ ಶ್ವಾಸರೂಪವಾದ ಆವರ್ತನಗಳು ಎರಡುವಿಧ: (೧) ಉಚ್ಛ್ವಾಸ ಮತ್ತು (೨) ನಿಶ್ವಾಸ ಹೊರಗಿನ ಗಾಳಿಯಲ್ಲಿ ನಾಸಿಕ ದ್ವಾರಾ ದೇಹದ ಒಳಗೆ ಸೇದಿಕೊಳ್ಳುವ ಕ್ರಿಯೆಯೇ "ಉಚ್ಛ್ವಾಸ" ವೆನಿಸುವುದು. ದೇಹದ ಒಳಗಿನ ಗಾಳಿಯನ್ನು ನಾಸಿಕ ದ್ವಾರ ಹೊರಗೆ ಬಿಡುವುದೇ "ನಿಶ್ವಾಸ"ವು. ಇವೆರಡು ಕ್ರಿಯೆಗಳೂ ಸೇರಿದರೆ ಒಂದು "ಶ್ವಾಸ"ವೆನಿಸುದು ನಿಶ್ವಾಸ ಎಂಬ ಕ್ರಿಯೆಯು. "ಹಂ" ಎಂಬ ವರ್ಣದಿಂದ ವಿಶಿಷ್ಟವಾಗಿ ಹೊರಗೆ ಬರುವುದು. ಉಚ್ಛ್ವಾಸವು "ಸ" ಎಂಬ ವರ್ಣದಿಂದ ವಿಶಿಷ್ಟವಾಗಿ ಹೋಗುವುದು. ಇವೆರಡು ವರ್ಣಗಳೂ ಸೇರಿ "ಹಂಸ" ಎಂಬ ಮಂತ್ರವಾಗು ವುದು. ಇದೇ ಶ್ವಾಸಕ್ರಿಯಾರೂಪವಾದ "ಹಂಸಮಂತ್ರ"ವು. ಏತಾದೃಶ ಮಂತ್ರವನ್ನು ಶ್ರೀ ವಾಯುದೇವರು ತ್ರಿವಿಧ ಜೀವರಲ್ಲಿಯೂ ಮಾಡುವರು.

(೧) ಬ್ರಹ್ಮದೇವರಾಂಭಮಾಡಿ ತೃಣಾಂತಮುಕ್ತಿಯೋಗ್ಯರು. (ಬ್ರಹ್ಮ ದೇವರು ಮತ್ತು ವಾಯುದೇವರಲ್ಲಿ ಶ್ರೀಹರಿಯೇ ಶ್ವಾಸಕಾರ್ಯಗಳನ್ನು ಮಾಡಿಸುತ್ತಾನೆ). (೨) ಪುರಂಜನ ಪ್ರಾರಂಭ ಮಾಡಿಕೊಂಡು ತೃಣಾಂತ ನಿತ್ಯ ಸಂಸಾರಿಗಳು ಮತ್ತು ೩) ಕಲಿ ಆರಂಭವಮಾಡಿ ತೃಣಾಂತ ತಮೋಯೋಗ್ಯರು. ಅಂತು ತ್ರಿವಿಧ ಜೀವರು. ಮುಕ್ತಿಯೋಗ್ಯಚೇತನರಲ್ಲಿ ಬ್ರಹ್ಮದೇವರು ಆರಂಭ ಮಾಡಿ ೨೦೦ ಮಂದಿ ಋಜುಗಳಲ್ಲಿ ಶ್ವಾಸಕಾರ್ಯವನ್ನು ಪರಮಾತ್ಮನೇ ವಾಯುನಾಮಕನಾಗಿ ಇದ್ದು ಮಾಡುತ್ತಾನೆ. ತದನ್ಯ ರುದ್ರಾದಿಜೀವರಲ್ಲಿ ಶ್ರೀ ವಾಯುದೇವರೇ ಸ್ಥೂಲದೇಹದಲ್ಲಿ ಇದ್ದು ಮಾಡುತ್ತಾರೆ. ಈ ಪ್ರಕಾರ ಬ್ರಹ್ಮಕಲ್ಪಪರ್ಯಂತ ಮಾಡುತ್ತಾರೆ. ತ್ರಿವಿಧರಿಗೂ!ಬ್ರಹ್ಮಣಾ ಸಹ ಮುಕ್ತಿ. ಆದರೆ ಮುಕ್ತಿಯೋಗ್ಯರಿಗೆ ರಮಾತ್ಮಕವಿರಜಾನದೀಸ್ನಾನದಿಂದ ಲಿಂಗಭಂಗ, ನಿತ್ಯಸಂಸಾರಿಗಳಿಗೆ ವಾಯುದೇವರ ಹುಂಕಾರದಿಂದ ಲಿಂಗಭಂಗ. ತಮೋ ಯೋಗ್ಯರಿಗೆ ವಾಯುದೇವರ ಗದಾಪ್ರಹಾರದಿಂದ ಲಿಂಗಭಂಗ, ವಾಯು ದೇವರು ಸಾತ್ವಿಕರಿಗೆ ಸುಖ, ರಾಜಸರಿಗೆ ಮಿಶ್ರಸುಖ ಮತ್ತು ತಾಮಸರಿಗೆ ದುಃಖ ಈ ಪ್ರಕಾರ ಕೊಡತಕ್ಕ ತ್ರಿವಿಧ ರೂಪವಾದ ಹಂಸಮಂತ್ರವನ್ನು ಜಪಿಸುತ್ತಾರೆ. ಈ ಜಪವನ್ನು ತಾವೇ ರಚನಾ ಮಾಡುತ್ತಾರೆ. ಈ ಅಧಿಕಾರವು ರುದ್ರಾದಿ ಅನ್ಯದೇವತೆಗಳಿಲ್ಲ. ಹೀಗೆ ತ್ರಿವಿಧ ಜೀವರಲ್ಲಿ ತಾವೇ ರಚಿಸಿ, ಶ್ವಾಸಜಪಗಳನ್ನು ಮಾಡಿ, ಮುಕ್ತಿಯೋಗ್ಯರಾದ ಸಾತ್ವಿಕ ಚೇತನರಿಗೆ ಲಿಂಗಭಂಗಾನಂತರ ವೈಕುಂಠಾದಿ ಮುಕ್ತಸ್ಥಾನಗಳಲ್ಲಿ ಸುಖ, ನಿತ್ಯಸಂಸಾರಿ ಗಳಾದ ರಾಜಸರಿಗೆ ಸುಖ ದುಃಖ ಕಲೆತ ಮಿಶ್ರಗತಿ ಮತ್ತು ಅಧಮರಾದ ತಾಮಸರಿಗೆ ಅಂತ್ಯರಹಿತವಾದ ನಿತ್ಯದುಃಖಗಳನ್ನು ಕೊಡುತ್ತಾರೆ. ಅಂತಹ ವಾಯುದೇವರು ತ್ರೈಲೋಕ್ಯಾಚಾರ್ಯರು (ಗುರು) ಮತ್ತು ಜೀವೋತ್ತಮರು (ಪವಮಾನ) ಹಂಸಮಂತ್ರದಲ್ಲಿ ಪ್ರಭೇದಗಳು : (೧) **ನಿತ್ಯಂ ಹೀನೋಽ ವಿಲೈಃ ದೋಷೈಃ ಸಾರರೂಪೋ ಯತೋ ಹರಿಃ** ಎಂದು ಮುಕ್ತಿಯೋಗ್ಯ ರಲ್ಲಿ ಹಂಸಮಂತ್ರ ಉಪಾಸನಾ ಮಾಡುತ್ತಾರೆ. (೨) ಇದೇ ಮಂತ್ರದಿಂದ ತಮೋಯೋಗ್ಯರು ವರ್ಣವ್ಯತ್ಯಾಸದಿಂದ–ಸೋಹಂ ಎಂತ ಉಪಾಸನಾ ಮಾಡು ತ್ತಾರೆ. (೩) ನಿತ್ಯಸಂಸಾರಿಗಳು ಸ್ವಾಹಾ ಎಂದು ಉಭಯಕ್ಕೂ ಸಂಬಂಧ ಪಡದ ಸಂದೇಹ ಜ್ಞಾನದಿಂದ ಉಪಾಸನಾ ಮಾಡುತ್ತಾರೆ. ತ್ರಿವಿಧಜೀವರ

ಸೃಷ್ಟಿಯ ಉದ್ದೇಶ್ಯವೇ ಅವರವರ ಸ್ವರೂಪದ ಅಭಿವ್ಯಕ್ತಿಗಾಗಿ. ಈ ಕಾರಣ ದಿಂದ .ಲಿಂಗಭಂಗಾನಂತರ ತ್ರಿವಿಧರಿಗೆ ತ್ರಿವಿಧಗತಿ ಆಗುತ್ತದೆ. ವಾಯು ದಶಾದಲ್ಲಿ ಜೀವನ್ಮುಕ್ತರನ್ನಾಗಿ ಮಾಡಿ, ನಂತರ ಬ್ರಹ್ಮದಶಾದಲ್ಲಿ ಲಿಂಗ ಭಂಗರನ್ನಾಗಿ ಮಾಡುತ್ತಾರೆ. ವಿರಜಾನದಿ ಸ್ನಾನದಿಂದ ಮುಕ್ತಿಯೋಗ್ಯರಿಗೆ, ವಾಯುಪದಕ್ಕೆ ಬಂದ ವಾಯುದೇವರಿಂದ ನಿತ್ಯಸಂಸಾರಿ ಮತ್ತು ತಮೋ ಯೋಗ್ಯರಿಗೆ ಲಿಂಗಭಂಗವುಂಟಾಗುವುದು. ಪ್ರಮಾಣ: **ತಮೋಯೋಗ್ಯಾನಾಂತು ಯಲ್ಲಿಂಗಂ ಗದಯಾ ವ್ಯಪೋಹತಿ । ನಿತ್ಯ ಸಂಸಾರಿಣಾಂತು ಯಲ್ಲಿಂಗಂ ಹೂಂಕಾರೇಣ ವಿನಶ್ಯತಿ ॥** —ಎಂದು **ವಾಯುಪುರಾಣದ** ವಚನ.

**(೨) ಭಾವಪ್ರಕಾಶಿಕೆ ವ್ಯಾಖ್ಯಾನ :—** ಈ ಪದ್ಯದಲ್ಲಿ ಶ್ರೀ ವಾಯು ದೇವರನ್ನು ಪ್ರಾರ್ಥಿಸುತ್ತಾರೆ. ಶ್ರೀ ವಾಯುದೇವರು ಜಗತ್ತಿಗೆ ಮುಖ್ಯ ಗುರುಗಳು ಹನುಮ, ಭೀಮ ಮತ್ತು ಮಧ್ವ ಎಂಬ ಅವತಾರತ್ರಯಗಳಿಂದ ರಾಮ ಕೃಷ್ಣ ಮತ್ತು ವೇದವ್ಯಾಸರನ್ನು ಸೇವಿಸಿದ ಭಗವತ್ಕಾರ್ಯಸಾಧಕರು. ಶ್ರೀಹರಿಯೇ ಸರ್ವೋತ್ತಮನು. ಶ್ರೀ ವಾಯುದೇವರು ಜೀವೋತ್ತಮರು. ಜಗತ್ತು ಸತ್ಯಭೂತವಾದದ್ದು, ಪಂಚಭೇದ ಮತ್ತು ತಾರತಮ್ಯಾದಿ ವಿಷಯ ಗಳನ್ನು ಜ್ಞಾನಪೂರ್ವಕ ತಿಳಿದು. ಪರಮಾತ್ಮನನ್ನು ಉಪಾಸನೆ ಮಾಡುವುದೇ ಮುಕ್ತಿಗೆ ಸಾಧನವು. ಇದಕ್ಕೆ ಭಕ್ತಿಮಾರ್ಗವೇ ಅತ್ಯಂತ ಶ್ರೇಷ್ಠ ಎಂದು ಉಪದೇಶಿಸಿ, ಜಗತ್ತನ್ನು ಉದ್ಧರಿಸಿದ ಮಹಾನುಭಾವರಾದ ಶ್ರೀ ವಾಯು ದೇವರನ್ನು ಸ್ತೋತ್ರಮಾಡುತ್ತಾರೆ,

ಹಿಂದಿನ ಪದ್ಯದಿಂದ ಬ್ರಹ್ಮದೇವರಿಗೆ ನಮಸ್ಕರಿಸಿ, ಸನ್ಮತಿಯನು ಕೊಡಲೆಂದು ಪ್ರಾರ್ಥಿಸಿ, ಈ ಪದ್ಯದಿಂದ ಶ್ರೀವಾಯುದೇವರೇ ಭಾವೀಬ್ರಹ್ಮ ರಾದುದರಿಂದ, ಬ್ರಹ್ಮಶಬ್ದದಿಂದಲೇ ವಾಯುದೇವರನ್ನು ನಮಸ್ಕರಿಸಿರುವ ರೆಂದು,ದಾಸರಾಯರ ಭಾವವು. ವಾಯುಪದವಿಯಿಂದ ಜನರನ್ನು ಉದ್ಧರಿಸುವ ಬಗೆ ಬೇರೆ. ಬ್ರಹ್ಮಪದವಿಯಿಂದ ಜಗದುದ್ಧಾರ ಕಾರ್ಯವಿಶೇಷವೇ ಬೇರೆ. ಈ ಕಾರಣದಿಂದಲೇ ಬ್ರಹ್ಮದೇವರಿಂದ ಚಿತ್ತಶುದ್ಧಿಯನ್ನು ಬೇಡಿ, ವಾಯು ದೇವರಿಂದ ಲೋಕಕ್ಕೆ ಆಗುವ ಮಹೋಪಕಾರವನ್ನು ತಿಳಿಸಿ, ಅವರಿಂದ

ತಮಗೂ ಮತ್ತು ಈ ಗ್ರಂಥವನ್ನು ಶ್ರವಣಪಠನಾದಿಗಳನ್ನು ಮಾಡುವ ಜನರಿಗೂ ಸಹ ಆಗಬೇಕಾದ ಉಪಕಾರಗಳನ್ನು ಪ್ರಾರ್ಥಿಸಿಕೊಂಡಿರುತ್ತಾರೆ. ಮುಖ್ಯಪ್ರಾಣ ದೇವರು ಜಗತ್ತಿನಲ್ಲಿ ಸಕಲ ಪ್ರಾಣಿಗಳಲ್ಲಿದ್ದು ಶ್ವಾಸಕಾರ್ಯ ಮಾಡಿಸುತ್ತಿರುವರು. ಅವರು ದೇಹದಿಂದ ಅಗಲಿದಾಗ. ಆ ಶರೀರವನ್ನು "ಶವ" ಎಂದು ಕರೆಯುವರು. ಇದೇ ಭಾವವನ್ನೇ ಶ್ರೀಪಾದರಾಜರು "ಮಧ್ವನಾಮ"ದಲ್ಲಿ— **ಕರುಣಾಭಿಮಾನಿಗಳು ಸುರರು ದೇಹವ ಬಿಡಲು । ಕುರುಡ ಕಿವುಡ ಮೂಕನೆಂದೆನಿಸುವಾ । ಪರಮಮುಖ್ಯಪ್ರಾಣ ತೊಲಗಲಾದೇಹವನು । ಅರಿತು ಪಣನೆಂದು ಪೇಳ್ವರೋ ಬುಧಜನರು ॥** ಎಂದು ಶ್ರೀ ವಾಯುದೇವರ ಮಹದುಪಕಾರವನ್ನು ಕೊಂಡಾಡಿದ್ದಾರೆ. ಪ್ರಾಣ ಧಾರರೂಪವಾದ ಈ ಶ್ವಾಸಕಾರ್ಯವು ದಿವಸ ಒಂದಕ್ಕೆ ೨೧೬೦೦ ಆಗುವುದು, ಅದರ ವಿವರ ಹೀಗಿದೆ: ಒಂದು ದಿನಕ್ಕೆ ೨೪ ಗಂಟೆಗಳು (ತಾಸು) ಅಥವಾ ೬೦ ಘಳಿಗೆಗಳು. ಒಂದು ಘಂಟೆಗೆ ೬೦ ನಿಮಿಷಗಳು. ಪ್ರತಿ ನಿಮಿಷಕ್ಕೂ ೧೫ ಆವರ್ತನ (ಉಚ್ಛ್ವಾಸ-ನಿಶ್ವಾಸ ಕಾರ್ಯ)ಗಳಂತೆ ಪ್ರತಿ ಘಂಟೆಗೂ ೧೫ × ೬೦ = ೯೦೦ ಶ್ವಾಸಕಾರ್ಯವಾಗುವುದು, ಅಂತಹ ೨೪ ಘಂಟೆಗಳಲ್ಲಿ ೯೦೦ × ೨೪ = ೨೧೬೦೦ ಶ್ವಾಸಜಪಗಳಾಗುವುವು. ಅಥವಾ ಪ್ರತಿ ಒಂದು ಘಳಿಗೆಗೂ ೩೬೦ರಂತೆ ೬೦ ಘಳಿಗೆಗಳಿಗೆ (ಒಂದು ದಿವಸ) ೩೬೦ × ೬೦ = ೨೧೬೦೦ ಆಗುವುದು. ಇವೆರಡು ಪದ್ಧತಿಗಳ ಗಣತಿಯು ಒಂದೇ ಆಗಿರುವುದು. ಹೇಗೆಂದರೆ ೬೦ ಘಳಿಗೆಗಳು = ೨೪ ಘಂಟೆಗಳ (ಒಂದುದಿನಪ್ರಮಾಣ). ಅಲ್ಲಿಗೆ ಪ್ರತಿ ಘಳಿಗೆ = ೨/೫ ಘಂಟೆ ಅಥವಾ ೨೪ ನಿಮಿಷಗಳಾಗುವುವು. ಪ್ರತಿ ನಿಮಿಷಕ್ಕೂ ೧೫ ಆವರ್ತನಗಳಂತೆ ೨೪ ನಿಮಿಷಗಳಿಗೆ ೨೪ × ೧೫ = ೩೬೦ ಶ್ವಾಸ ಜಪಗಳಾಗುವುವು. ಒಂದು ಶ್ವಾಸಕಾರ್ಯದಲ್ಲಿ ಮುಖ್ಯವಾಗಿ ಎರಡು ಪ್ರಭೇದಗಳಿವೆ: (೧) ಉಚ್ಛ್ವಾಸ ಮತ್ತು (೨) ನಿಶ್ವಾಸ ಇವುಗಳಿರುವ ಮಧ್ಯಂತರ ಕಾಲ. ಈ ಶ್ವಾಸವು ಆರು ಅಕ್ಷರಗಳಿಂದ ಕೂಡಿದ (ಷಡಕ್ಷರಾತ್ಮಕವಾದ) ಷಡಕ್ಷರೀ) ಹಂಸಮಂತ್ರ ಜಪವೆಂದೆನಿಸಿಕೊಳ್ಳುವುದು. ಶ್ವಾಸರೂಪವಾದ ಈ ಹಂಸಮಂತ್ರಜಪವನ್ನು ತ್ರಿವಿಧಜೀವರಲ್ಲಿದ್ದು, ವಾಯುದೇವರು

ತಾವು ಮಾಡಿ, ಜೀವರಿಂದಲೂ ಮಾಡಿಸುತ್ತಿರುವರು. ಈ ಹಂಸಮಂತ್ರವು (೧) ಹಂಸಃ, (೨) ಸೋಹಂ ಮತ್ತು (೩) ಸ್ವಾಹಾ ಎಂಬ ಆರು ಅಕ್ಷರಗಳಿಂದ ಯುಕ್ತವಾದದ್ದು, ಇದೇ ಹಂಸಮಂತ್ರಜಪವನ್ನು ತ್ರಿವಿಧಜೀವರಾಶಿಗಳಲ್ಲಿಯೂ ಶ್ರೀ ವಾಯುದೇವರು ಒಂದೇ ಮಂತ್ರದಿಂದ ಜಪ ಮಾಡುತ್ತಿದ್ದರೂ, ಜಪದ ಫಲವನ್ನು ಮಾತ್ರ ತ್ರಿವಿಧರಿಗೆ ಅವರವರ ಯೋಗ್ಯತಾನುಸಾರ ಕೊಡಿಸುವರು. ಮಂತ್ರದ ಉಪಾಸನಾ ಭೇದದಿಂದ ಫಲವು ಭೇದವಾಗುವುದು.

**ಪೂರ್ವೇದ್ಯುಃ ಪ್ರಾತಃ ಸೂರ್ಯೋದಯಮಾರಭ್ಯ ಅದ್ಯ ಸೂರ್ಯೋದಯ ಪರ್ಯಂತಂ ಮದ್ದೇಹಸ್ಥಿತ ಮುಖ್ಯಪ್ರಾಣಕೃತೇನ, ಮುಖ್ಯಪ್ರಾಣಪ್ರೇರಿತೇನ ಮಯಾಕೃತೇನ ಚ ಷಟ್‌ಶತಾಧಿಕಏಕವಿಶಂ ಸ್ಸಹಸ್ರಸಂಖ್ಯಾಕ ಶ್ವಾಸರೂಪ ಷಡಕ್ಷರ ಹಂಸಮಹಾಮಂತ್ರಜಪೇನ ಭಗವಾನ್ ಮುಖ್ಯಪ್ರಾಣಾಂತರ್ಗತ ಹಂಸರೂಪೀ ಶ್ರೀಲಕ್ಷ್ಮೀನಾರಾಯಣಃ ಪ್ರಿಯತಾಂ ಪ್ರಿಯತೋ ವರದೋ ಭವತು**|–ಎಂದು ತಂತ್ರಸಾರದಲ್ಲಿ ಹೇಳಲ್ಪಟ್ಟಿರುವ 72 ಮಹಾಮಂತ್ರಗಳಪೈಕಿ, ಹಂಸಮಂತ್ರವೂ ಒಂದು ಮುಖ್ಯ ಮಂತ್ರವಾಗಿರುವುದು. ಈ ಮಂತ್ರದ ಅರ್ಥವೇನೆಂದರೆ: “ನೆನ್ನೆ ಸೂರ್ಯೋದಯ ಪ್ರಾರಂಭಿಸಿ, ಇವತ್ತಿನ ಸೂರ್ಯೋದಯ ಪರ್ಯಂತ (ಒಂದು ದಿನಮಾನದಲ್ಲಿ), ಶ್ರೀ ವಾಯುದೇವರು ನನ್ನ ಸ್ಥೂಲದಲ್ಲಿದ್ದು, ಅವರೇ ರಚನಾ ಮಾಡಿ (ಮುಖ್ಯಪ್ರಾಣಕೃತೇನ), ಅವರಿಂದ ಪ್ರೇರಿತನಾಗಿ ನನ್ನಿಂದ ಮಾಡಲ್ಪಟ್ಟ (ವಾಯುದೇವರು ತಾವು ರಚಿಸಿ, ಮಾಡಿ, ಜೀವನದ್ವಾರಾ ಮಾಡಿಸುತ್ತಾರೆ). ಈ 21600 ಸಂಖ್ಯಾಕವಾದ (ಏಕವಿಂಶತಿಸಹಸ್ರ= $20+1=21$; ಏಕವಿಂಶತಿಸಹಸ್ರ$=21000$; ಷಟ್‌ಶತ$=6\times100=600$; ಷಟ್‌ವಿಂಶತಿಸಹಸ್ರ$=21000+600=21600$) ಶ್ವಾಸರೂಪವಾದ ಷಡಕ್ಷರೀ (ಆರು ಅಕ್ಷರಾತ್ಮಕವಾದ) ಹಂಸಮಂತ್ರದಿಂದ ಭಾರತೀರಮಣಮುಖ್ಯಪ್ರಾಣಾಂತರ್ಗತನಾದ ಷಡ್ಗುಣೈಶ್ವರ್ಯಸಂಪನ್ನನಾದ (ಭಗವಾನ್) ಶ್ರೀ ಲಕ್ಷ್ಮೀಪತಿಯಾದ ನಾರಾಯಣನು ಪ್ರೀತನಾಗಲಿ” ಎಂದು ಅರ್ಥಾನುಸಂಧಾನಪೂರ್ವಕ ಸಂಕಲ್ಪ ಮಾಡಬೇಕು. ಈ ಅರ್ಥಾನುಸಂಧಾನಪೂರ್ವಕ ಬಿಟ್ಟ ಶ್ವಾಸಜಪಗಳನ್ನು ಪರಮಾತ್ಮನಿಗೆ ಅರ್ಪಿಸಿ, ಆ ಅರ್ಪಣಭಾವ

ದಿಂದ ಈ ಶ್ಲೋಕವನ್ನು ಹೇಳುವರು : **ಮುಖ್ಯಪ್ರಾಣೇನ ಮದ್ದೇಹೇ ಮಂತ್ರತ್ರಯಜಪಸ್ಸದಾ। ಅನುಗ್ರಹಾಯ ಮೇ ವಿಷ್ಣುಪ್ರಿಯತೇ ಕ್ರಿಯತೇ ಹಿ ಸಃ ॥ ಏಕವಿಂಶತ್ಸಹಸ್ರಾತ್ಮಾ ಸಷಟ್ಛತಮರ್ನಿಶಂ । ತತ್ಸರ್ವಂ ವಿಷ್ಣುಪೂಜಾಸ್ತು ಪ್ರಿಯತಾಂ ಪ್ರಾಣಮಾಪತಿಃ ॥**

ಈ ಮಂತ್ರದ ಅರ್ಥ : "ಮುಖ್ಯಪ್ರಾಣದೇವರು ನನ್ನ ದೇಹದೊಳಗಿದ್ದು ಹಂಸಃ, ಸೋಹಂ ಮತ್ತು ಸ್ವಾಹಾ ಎಂಬ ಮೂರು ಮಂತ್ರಗಳ ಜಪಗಳನ್ನು (ಮಂತ್ರತ್ರಯಜಪ) ನನಗೆ ಅನುಗ್ರಹ ಮಾಡುವುದಕ್ಕಾಗಿಯೂ, ವಿಷ್ಣು ಪ್ರೀತ್ಯರ್ಥವಾಗಿಯೂ ಮಾಡಿಸುತ್ತಿರುವರು. ಹೀಗೆ ಹಗಲು ರಾತ್ರಿಗಳಲ್ಲಿ (ಅಹರ್ನಿಶ) ಮಾಡುವ 21600 ಶ್ವಾಸರೂಪಗಳಾದ ಜಪಗಳೆಲ್ಲವೂ ವಿಷ್ಣು ಪೂಜೆಯಾಗಲಿ, ಇದರಿಂದ ಪ್ರಾಣದೇವರಿಗೂ ಮತ್ತು ಲಕ್ಷ್ಮೀದೇವಿಯರಿಗೂ ಪಾಲಕನಾದ (ಪ್ರಾಣಮಾಪತಿಃ) ಪರಮಾತ್ಮನು ಪ್ರೀತನಾಗಲಿ". ಇದು ಉಪಸಂಹಾರಮಂತ್ರ. ದೇಹಸ್ಥಿತರಾಗಿ ಪ್ರಾಣನಾಮಕವಾಯುದೇವರು ಮತ್ತು ಅಪಾನನಾಮಕ ವಾಯುದೇವರ ಪ್ರೇರಣೆಯಿಂದಲೂ ಮತ್ತು ಧ್ಯಾನ ಯೋಗದಿಂದಲೂ ಈ ಶ್ವಾಸರೂಪಹಂಸಮಂತ್ರಜಪಕಾರ್ಯವು ನಡೆಯುತ್ತದು. ಅದರಿಂದ ಹಂಸರೂಪೀ ಪರಮಾತ್ಮನು ಸುಪ್ರೀತನಾಗುವನು, ಇದೇ ಈ ಮಂತ್ರದ ಅರ್ಥ. ಈ ಹಂಸಮಂತ್ರದ ಅರ್ಥವನ್ನು ತ್ರಿವಿಧರು ತಮ್ಮ ಯೋಗ್ಯತೆಗನುಗುಣವಾಗಿ ತಿಳಿದು ಉಪಾಸನಾ ಮಾಡುವರು (೧) ದುಃಖಂ ಸರ್ವಂ ಹನ್ತೀತಿ – ಹಂಸಃ ಎಂಬ ಪರಿಷ್ಕಾರಕ್ರಮದಿಂದ ಸಕಲ ದುಃಖಗಳನ್ನೂ ನಾಶಗೊಳಿಸುವನಾದ್ದರಿಂದ ಪರಮಾತ್ಮನಿಗೆ **ಹಂಸ** ಎಂದು ಹೆಸರು. ಮುಕ್ತಿಯೋಗ್ಯರಾದ ಸಾತ್ವಿಕ ಚೇತನರು ಅಂತಹ ಹಂಸನಾಮಕ ಪರಮಾತ್ಮನನ್ನು ಉಪಾಸನೆ ಮಾಡುವರು, **ಸೋಽಹಂ** ಎಂದರೆ ಆ ಹಂಸ ನಾಮಕ ಪರಮಾತ್ಮನ ಪ್ರತಿಬಿಂಬನೇ ನಾನು ಎಂದು ಬಿಂಬ-ಪ್ರತಿಬಿಂಬ ಭಾವ ದಿಂದ ತಿಳಿಯುವರು. ಈ ಪ್ರಕಾರ ಸಾತ್ವಿಕರು. ಉಪಾಸನೆ ಮಾಡುವುದರಿಂದ ಸುಖಸ್ವರೂಪವಾದ ಮುಕ್ತಿಯನ್ನು ಹೊಂದುವರು, (೨)ಅಧಮರಾದ ತಮೋ ಯೋಗ್ಯಜೀವರು ಇದಕ್ಕೆ ವಿರುದ್ಧವಾದ ಅರ್ಥವನ್ನು ಮಾಡಿ, ಅಂದರೆ

ಉಪಾಸಿಸುವರು, **ಯೋಽಹಂಸಃ** ಯಾವನು ಹಂಸನೆಂದು ಕರೆಯಲ್ಪಡು ತ್ತಾನೋ ಅವನೇ ನಾನು (**ಸೋಽಹಂ**) ಎಂದು ಐಕ್ಯಭಾವವನ್ನು ತಿಳಿಯು ತ್ತಾರೆ. ಸ್ವಾಹಾ ಎಂಬ ಶಬ್ದವು ನಮಸ್ಕಾರಸೂಚಕವು. ತಾಮಸರು ಈ ಶಬ್ದವನ್ನೂ ಹಿಂದಿನಂತೆಯೇ ತಿಳಿದು, ಪರಮಾತ್ಮನೇ ತಾನೆಂದು ಉಪಾಸನಾ ಮಾಡುತ್ತಾರೆ. ಇದರಿಂದ ದುಃಖಿಸ್ವರೂಪವಾದ ಅಂಧತಮಸ್ಸನ್ನು ಹೊಂದು ವರು. (೩) ನಿತ್ಯಸಂಸಾರಿಗಳಾದ ರಾಜಸರು ಈ ಮಂತ್ರದ ಸರಿಯಾದ ಅರ್ಥ ವನ್ನು ತಿಳಿಯದೆ, ಸಂಶಯಗ್ರಸ್ತರಾಗಿ ಸುಖದುಃಖಮಿಶ್ರವಾದ ನಿತ್ಯ ಸಂಸಾರಕ್ಕೆ ಗುರಿಯಾಗುವರು. ಹೀಗೆ ತ್ರಿವಿಧಜೀವರಿಗೂ ಅನುಸಂಧಾನಭೇದದಿಂದ ಫಲ ಭೇದವನ್ನು ಕೊಡುವ ಗುರುಸ್ಥಾನಾಪನ್ನರಾದ ಪವಮಾನದೇವರು, ನಮ್ಮ ಲ್ಲಿರುವ ರಾಜಸ ಮತ್ತು ತಾಮಸ ಬುದ್ಧಿಗಳನ್ನು ಬಿಡಿಸಿ, ಸಾತ್ವಿಕಭಾವದಿಂದ ಉಪಾಸನಾ ಮಾಡುವಂತೆ ಸಮೀಚೀನವಾದ ಜ್ಞಾನವನ್ನು ಪಾಲಿಸಿ, ತನ್ಮೂಲಕ ಸದ್ಗತಿಯನ್ನು ಕೊಟ್ಟು ನಮ್ಮಗಳನ್ನು ಉದ್ಧರಿಸಲಿ ಎಂದು ದಾಸರಾಯರು ಶ್ರೀ ವಾಯುದೇವರಲ್ಲಿ ಪ್ರಾರ್ಥಿಸುತ್ತಾರೆ.

## (೩) ತಾಮ್ರಪರ್ಣೀಯ ವ್ಯಾಖ್ಯಾನ :

ವಾಯುದೇವರು ೨೧೬೦೦ ಶ್ವಾಸರೂಪವಾದ ಹಂಸಮಂತ್ರವನ್ನು ಸಾತ್ವಿಕ, ರಾಜಸ ಮತ್ತು ತಾಮಸರೆಂಬ ತ್ರಿವಿಧ ಜೀವರುಗಳಲ್ಲಿ ಇದ್ದು "ಭೂ ಅಭೂ-ಭೂರಭೂ" ಎಂದು ಬ್ರಹ್ಮಕಲ್ಪಪರ್ಯಂತ ಸ್ವತಃ ತಾವೇ ರಚಿಸಿ ಬ್ರಹ್ಮನಿಂದ ಆರಂಭಿಸಿ, ತೃಣಜೀವಪರ್ಯಂತ ಮುಕ್ತಿಯೋಗ್ಯರಾದ ಸುಜೀವ ರಿಗೆ ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷವನ್ನು ಕೊಡುತ್ತಾರೆ.

**ಸ ಏನಾನ್ ಬ್ರಹ್ಮಗಮಯತೀತಿ ಶ್ರುತೇಃ । ವಿಷ್ಣುರ್ಹಿದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯೇತಿ-ಸ್ಮೃತೇಶ್ಚ ವಾಯೋಃ ಮೋಕ್ಷ ದಾತೃತ್ವಮಸ್ತೀತ್ಯರ್ಥಃ**-ಎಂಬ ಪ್ರಮಾಣದಂತೆ. ಪರಮಾತ್ಮನ ಅಜ್ಞೆ ಯಿಂದ ವಾಯುದೇವರಿಗೂ ಮೋಕ್ಷದಾತೃತ್ವವಿದೆ ಎಂದು ಶ್ರುತಿಸ್ಮೃತಿಗಳಿಂದ ತಿಳಿದುಬರುವುದು. ನಿತ್ಯಸಂಸಾರಿಕರಾದ ರಾಜಸಜೀವರಿಗೆ ತ್ರಿ ದಿವನಿರಯ

ಭೂಗೋಚರಾನ್ ನಿತ್ಯಬದ್ಧಾನ್-ಎಂಬ ವಾಯುಸ್ತುತಿಯ ವಚನದಂತೆ, ಸುಖದುಃಖಮಿಶ್ರವಾದ ಫಲವನ್ನು ಕೊಡುವರು, ತಮೋಜೀವಾನಾಂ ಕಲ್ಯಾದೀನಾಂ ತಮಃ ಪ್ರಾಪ್ತಿಃ ವಾಯುನೈವ ಭವಿಷ್ಯತಿ-ಎಂಬ ವಚನಾನು ಸಾರ ತಮೋಯೋಗ್ಯರಾದ ಕಲಿ ಮುಂತಾದ ದೈತ್ಯರಿಗೆ ಅಂಧಃತಮಸ್ಸೆಂಬ ನಿತ್ಯದುಃಖವನ್ನು ಕೊಡುತ್ತಾರೆ ಎಂದು ಭವಿಷ್ಯತ್ಪುರಾಣದಲ್ಲಿ ಉಕ್ತವಾಗಿದೆ. ಏತಾದೃಶಮಹಿಮೋಪೇತರಾದ ಗುರು ಪವಮಾನರು ನಮ್ಮನ್ನು ಸಲಹಲಿ ಎಂದು ದಾಸವರೇಣ್ಯರು ಪ್ರಾರ್ಥಿಸಿದ್ದಾರೆ.

## (೪) ಭಾವದರ್ಪಣಟೀಕಾ-ವ್ಯಾಖ್ಯಾನ :

ಈ ಪದ್ಯದಲ್ಲಿ ದಾಸರಾಯರು ಶ್ರೀ ವಾಯುದೇವರ ಮಹಿಮಾತಿಶಯ ಗಳನ್ನು ಸ್ತೋತ್ರಮಾಡಿದ್ದಾರೆ, ಶ್ರೀಹರಿಯಲ್ಲಿ ಮಾಡುವ ಭಕ್ತಿಯಷ್ಟೇ ಗುರುಭಕ್ತಿಯೂ ಮುಖ್ಯ. ಪುರುಷಾರ್ಥಸಾಧನೆಗೆ ಗುರುಭಕ್ತಿಯು ಅತ್ಯವಶ್ಯ ಶ್ರೀ ವಾಯುದೇವರಲ್ಲಿ ಅಂತಹ ಮಹಾ ಗುರುತ್ವವಿದೆ, ತನ್ಮಾಹಾತ್ಮ್ಯ ಪೂರ್ವಕ ಸ್ತೋತ್ರಮಾಡಿ, ಶ್ರೀ ವಾಯುದೇವರು ನಮ್ಮೆಲ್ಲರನ್ನೂ ಸಂರಕ್ಷಿಸಲಿ ಎಂದು ಪ್ರಾರ್ಥಿಸುತ್ತಾರೆ. ಇದಕ್ಕೆ ಪ್ರಮಾಣ : **ಯಸ್ಯ ದೇವೇ ಪರಾಭಕ್ತಿ ರ್ಯಥಾ ದೇವೇ ತಥಾಗುರೌ । ತಸ್ಯೈತೇ ಕಥಿತಾರ್ಹರ್ಥಾಃ ಪ್ರಕಾಶ್ಯಂತೇ ಮಹಾತ್ಮನಃ ।**-ಎಂಬ **ಭಾಷ್ಯೋದಾಹೃತ ಶ್ರುತಿ** ಪ್ರಮಾಣವಿದೆ. ವಾಯು ದೇವರು ಜೀವರುಗಳ ದೇಹಗಳಲ್ಲಿ ತಾವು ನಿಂತು, 21600 ಸಂಖ್ಯಾಕವಾದ ಶ್ವಾಸಜಪವನ್ನು ಮಾಡುತ್ತಾರೆ. ಈ ವಿಷಯದಲ್ಲಿ ಪ್ರಮಾಣ: **ಷಟ್‌ಶತಂ ಗಣನಾಥಾಯ ಷಟ್‌ಸಹಸ್ರಂತು ವೇಧಸೇ । ಷಟ್‌ಸಹಸ್ರಂ ಚ ಹರಯೇ ಗುರವೇ ತಥಾ ।** ಎಂದು **ಶ್ರೀಗರುಡಪುರಾಣ** ಪ್ರಮಾಣವಿದೆ. (ಅಧ್ಯಾಯ 15). ಈ ಉಕ್ತಿಯಪ್ರಕಾರ, ಗಣಪತಿ-600; ಬ್ರಹ್ಮ-6000; ಪರ ಮಾತ್ಮ-600; ರುದ್ರ-6000; ಜೀವಾತ್ಮ-1000; ಗುರು-1000 ಮತ್ತು ಚಿದಾತ್ಮ-1000. ಹೀಗೆ ಒಟ್ಟಿನಲ್ಲಿ 21600 ಶ್ವಾಸಜಪಗಳ ಲೆಕ್ಕ ಇದಕ್ಕೆ ಮತ್ತೊಂದು ಪ್ರಮಾಣ : **ಏಕವಿಂಶತ್ಸಹಸ್ರಾತ್ಮಾ ಸಷಟ್‌ಶತಮಹ ರ್ನಿಶಂ ಶ್ವಾಸರೂಪೋ ಜಪೇನ್ನಿತ್ಯಮ್ ।**-ಎಂದು **ತಂತ್ರಸಾರದ** ಪ್ರಮಾಣ

ಹೀಗೆ ಜಪಮಾಡಿ. (೧) ಸಾತ್ತ್ವರಿಗೆ ಸುಖ-ಅಂದರೆ, ಮೋಕ್ಷವೆಂದರ್ಥ (2) ಕನಿಷ್ಠ ಜೀವರಿಗೆ(ಅಧಮ ಜನರಿಗೆ) ತಮಸ್ಸನ್ನೂ ಮತ್ತು (೩) ಸುಖದುಃಖ ಏಕದಾ ಭೋಗಮಾಡತಕ್ಕದ್ದು ಯಾವುದೋ ಅದಕ್ಕೆ "ಸಂಸಾರ"ವೆಂದ ಹೆಸರು. ಏತಾದೃಶ ಸಂಸಾರವನ್ನು ರಾಜಸ ಜೀವರಿಗೆ ಕೊಡುತ್ತಾರೆ ಎಂದರ್ಥ ಹೀಗೆ ತ್ರಿವಿಧ ಜೀವರಿಗೂ ಫಲವನ್ನು ಕೊಡುವರು. ಸುಖದುಃಖಾತ್ಮಕವ "ಸಂಸಾರ"ವೆಂಬುದಕ್ಕೆ ಪ್ರಮಾಣ : **ಸುಖದುಃಖನೆರಡೂ ಕೂಡಿ ಇದ ಸಂಸಾರವೆಂದು ಸಕಲಬುಧರಿಗೆ ಸಮ್ಮತವು. ಪ್ರಾಕೃತಲಿಂಗದೇಹ ಹೋದ ಮ್ಯಾಲೆ ಚಿದ್ರೂಪಾಸುಖ ದುಃಖವ್ಯಕ್ತವಾಗುವುದಯ್ಯಾ । ಆದರಿಂದ ತ್ರಿವಿಧರಿಗು ತುದಿಯಲ್ಲಿ ಲಿಂಗದೇಹ ಹೋಗೋದೆ ಸಿದ್ಧ । ವಿಧುಗಳಿಗೆ ಸಮ್ಮತ ಇದನರಿಯದ ಮೂಢೇವದರಿದರನು ಫಲವಹುದು ॥**

ಇದೇ ವಿಷಯದಲ್ಲಿ ಪುರಾಣಪ್ರಮಾಣವೂ ಸಹ ಇದೆ. **ನಿತ್ಯಸಂಸಾರಿಸ್ತತ್ರ ಹುಂಕಾರೇಣೈವ ಸರ್ವಶಃ । ಲಿಂಗಭಂಗಂ ಪ್ರಾಪಯಿತ್ವಾ ದೇಹೇ ಪ್ರಾಧಾನಿಕೇ ವಿಭುಃ॥ನಿರ್ಧೂತ ಲಿಂಗದೇಹಾಸ್ತೇ ನಿತ್ಯಸಂಸಾರಿಣಸ್ಸದಾ ಯಥಾಕಾಮಂ ಮಿಶ್ರಫಲಂ ಭೋಕ್ತಾರಃ ಸ್ವರ್ಗಮಾಸ್ಥಿತಾಃ । ಪುನ ರ್ಭೂವಿಂಗತಾಸ್ತೇತು ನರಕೇಚ ಪತಂತ್ಯಹೋ ॥ ನೈಕತ್ರ ಸಂಸ್ಥಿತಾ ಸರ್ವೇ ಪುನರ್ಜನ್ಮವಿವರ್ಜಿತಾಃ । ಅಯಹೀನಾಭವತ್ಯದ್ಬದ್ಧಾ ಮಿಶ್ರ ಮೇವ ಫಲಂ ತದಾ ಏಕಸ್ಮಿನ್ನೇವ ಕಾಲೇತು ಭುಂಜಂತಃ ಕಾಮ ಚಾರಿಣಾ** ।-ಎಂದು **ಗರುಡಪುರಾಣದ** ವಚನ. ಸರ್ವಜೀವರೂ ಶ್ರೀ ಮುಖ್ಯ ಪ್ರಾಣದೇವರ ದ್ವಾರಾ ಪರಮಾತ್ಮನನ್ನು ಹೊಂದುತ್ತಾರೆ. ಈ ವಿಷಯದಲ್ಲಿ ಪ್ರಮಾಣ : **ಸರ್ವೇ ದೇವಾಃ ಪ್ರಾಣಮಾವಿಶ್ಯ ದೇವೇ ಮುಕ್ತಾಲಯಂ ಪರಮೇಯಾಂತ್ಯಚಿಂತ್ಯ** ॥ ಹೀಗೆಂದು **ಕೌಷಾರವ ಶ್ರುತಿ** ಪ್ರಮಾಣವಿದೆ ಏತಾದೃಶ ವಾಯುದೇವರು ನಮ್ಮನ್ನು ಸಂರಕ್ಷಿಸಲಿ ಎಂದು ಪ್ರಾರ್ಥಿಸಿದ್ದಾರೆ

**(೫) ಜಂಮಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ:**

ಶ್ರೀ ವಾಯುದೇವರು ಶ್ರೀ ಬ್ರಹ್ಮದೇವರಿಗಿಂತ ಪದವಿಯಲ್ಲಿ ತುಸ

ಕಡಿಮೆಯೆನಿಸುವರು, ಪದವೀ ನಿಮಿತ್ತ. ಈ ನ್ಯೂನತೆಯನ್ನು ಗಮನದಲ್ಲಿಟ್ಟುಕೊಂಡು, ಮೊದಲು ಬ್ರಹ್ಮದೇವರನ್ನು ಪ್ರಾರ್ಥಿಸಿ, ನಂತರ ಶ್ರೀವಾಯುದೇವರನ್ನು ಸ್ತೋತ್ರ ಮಾಡುತ್ತಾರೆ. ವಾಯುದೇವರು ಭಗವದಾಜ್ಞಾನುಸಾರ ಮೋಕ್ಷವನ್ನು ಕೊಡುವ ಸಾಮರ್ಥ್ಯವನ್ನು ಹೊಂದಿದ್ದಾರೆ. **ವಾಯುಶ್ಚ ಶದನುಜ್ಞಯಾ**-ಎಂಬ ಪ್ರಮಾಣದಂತೆ, ತ್ರಿವಿಧಚೇತನರಲ್ಲಿ 21600ಶ್ವಾಸ ಜಪವನ್ನು ಬ್ರಹ್ಮಕಲ್ಪಪರ್ಯಂತ ಮಾಡಿ ಸಾತ್ವಿಕರಿಗೆ ಸುಖ, ಮಿಶ್ರರಿಗೆ ಸಂಸಾರ ಮತ್ತು ತಾಮಸರಿಗೆ ಅಪಾರ ದುಃಖಗಳನ್ನು ಕೊಡುವ ಪವಮಾನ ದೇವರು ನಮ್ಮನ್ನು ಸಂರಕ್ಷಿಸಲಿ-ಎಂದು ಪ್ರಾರ್ಥಿಸುತ್ತಾರೆ.

## (೬) ಗುರುಹೃದಯ ಪ್ರಕಾಶಿಕಾ ವ್ಯಾಖ್ಯಾನ :

**ಬ್ರಹ್ಮಾದಿಮಾನುಷಾಂತಾಶ್ಚ ಜ್ಞೇಯಾಸ್ತರತಮಾಃ ಕ್ರಮಾತ್। ಜ್ಞಾತೇ ತರತಮೇ ಭಾವೇ ವಿಷ್ಣೋರ್ಮಾಹಾತ್ಮ್ಯಮಂಜಸಾ॥ಜ್ಞಾಯತೇ ನಿಷ್ಕಳಂಕಂತು ತಸ್ಮಾದೇತನ್ನಿಶಮ್ಯತಾಮ್**-ಎಂದು **ಶಾಂಡಿಲ್ಯತತ್ವದ** ವಚನಾನುಸಾರ, ಶ್ರೀ ಪರಮಾತ್ಮನ ಜ್ಞಾನಸಾಧನೆಗೆ ತಾರತಮ್ಯಜ್ಞಾನವು ಪರಮಮುಖ್ಯವೆಂದು ಹೇಳಿದೆ. ಇದರಿಂದ ಸೂಕ್ಷ್ಮವಾಗಿ ಬ್ರಹ್ಮಾದಿ ದೇವತೆಗಳನ್ನು ತಾರತಮ್ಯಕ್ರಮದಿಂದ ಸ್ತೋತ್ರಮಾಡಿ, ಗ್ರಂಥವನ್ನು ಉಪಕ್ರಮಿಸುತ್ತಾರೆ. ಬ್ರಹ್ಮಸಮ ಪ್ರಾಣದೇವರೆಂದು ಸ್ತುತಿಸುತ್ತಾರೆ 21600 ಶ್ವಾಸ ಜಪವೆಂಬ ಹಂಸಮಂತ್ರವನ್ನು ತ್ರಿವಿಧಜೀವರಲ್ಲೂ ಬ್ರಹ್ಮಶತಾಬ್ಧಪರ್ಯಂತ ಜಪ ಮಾಡುತ್ತಾರೆ. ಸಾತ್ವಿಕ ಜೀವರಿಗ ನಿತ್ಯಸುಖವೆಂಬ ಮೋಕ್ಷ, ರಾಜಸ ಜೀವರಿಗೆ ಮಿಶ್ರವೆಂದರೆ ಸುಖದುಃಖದ್ವಂದ್ವ, ಅಧಮಜೀವರಿಗೆ ನಿತ್ಯದುಃಖವೆಂಬ ತಮಸ್ಸನ್ನೂ ಸಹ ದೇವರ ಆಜ್ಞೆಯಿಂದ ಕೊಡುವ, ಗುರುವಾದ ಪ್ರಾಣ ದೇವರೆ ನಮ್ಮೆಲ್ಲರನ್ನು ರಕ್ಷಿಸಿರಿ ಎಂದು ಪ್ರಾರ್ಥಿಸುತ್ತಾರೆ.

❋

# ಪದ್ಯ (೫)

ಚತುರವದನನ ರಾಣಿ ಅತಿರೋ ।
ಹಿತ ವಿಮಲ ವಿಜ್ಞಾನಿ ನಿಗಮ ।
ಪ್ರತತಿಗಳಭಿಮಾನಿ ವೀಣಾಪಾಣಿ ಬ್ರಹ್ಮಾಣಿ ॥
ನತಿಸಿ ಬೇಡವೆ ಜನನಿ ಲಕುಮೀ ।
ಪತಿಯ ಗುಣಗಳ ತುತಿಪುದಕೆ ಸ ।
ನ್ಮತಿಯ ಪಾಲಿಸಿ ನೆಲಸು ನೀ ಮದ್ವದನ ಸದನದಲಿ ॥೫॥

**ಅವತರಿಣಿಕೆ :**

ಈ ಪದ್ಯದಲ್ಲಿ ವೇದಾಭಿಮಾನಿಗಳಾದ ಶ್ರೀಸರಸ್ವತೀ ದೇವಿಯರನ್ನು ದಾಸರಾಯರು ಸ್ತೋತ್ರರೂಪವಾಗಿ ಪ್ರಾರ್ಥಿಸುತ್ತಾರೆ.

**ಪ್ರತಿಪದಾರ್ಥ :**

**ಚತುರವದನನ** = ನಾಲ್ಕು ಮುಖಗಳನ್ನು ಹೊಂದಿರುವ, ಅಂದರೆ ಚತುರ್ಮುಖ ಬ್ರಹ್ಮದೇವರ **ರಾಣಿ** = ನೀತಪತ್ನಿಯಾದವಳೇ **ಅತಿರೋಹಿತ**- ತಿರೋಧಾನವಾಗದ, ಅಂದರೆ ಮಹಾಪ್ರಳಯಕಾಲದಲ್ಲಿಯೂ ಲುಪ್ತವಾಗದ (ನಾಶಹೊಂದದ) **ವಿಮಲ** = ಶುದ್ಧವಾದ (ನಿರ್ದೋಷವಾದ) **ವಿಜ್ಞಾನಿ** = ವಿಶೇಷವಾದ ಜ್ಞಾನವುಳ್ಳ **ನಿಗಮಪ್ರತತಿಗಳಿಗೆ** = ಅನಂತವೇದಸಮೂಹಗಳಿಗೆ **ಅಭಿಮಾನಿ** = ಅಭಿಮಾನಿಯಾಗಿರುವ **ವೀಣಾಪಾಣಿ** = ಕಚ್ಛಪೀ ಎಂಬ ಹೆಸರಿನ ವೀಣೆಯನ್ನು ಕೈಯಲ್ಲಿ ಹಿಡಿದಿರುವ **ಬ್ರಹ್ಮಾಣಿ** = ಬ್ರಹ್ಮನರಾಣಿಯಾದ ಶ್ರೀಸರಸ್ವತಿಯೇ **ನತಿಸಿ** = ನಿನ್ನನ್ನು ವಂದನಮಾಡಿ **ಬೇಡುವೆ** = ಪ್ರಾರ್ಥಿಸುತ್ತೇನೆ **ಜನನಿ** = ಲೋಕಮಾತೆಯಾದ ಸರಸ್ವತಿಯೇ **ಲಕುಮೀಪತಿಯ** = ರಮಾಪತಿಯಾದ ಶ್ರೀಮನ್ನಾರಾಯಣನ **ಗುಣಗಳ** = ಸೃಷ್ಟ್ಯಾದಿ ಅನಂತಕಲ್ಯಾಣ ಗುಣಗಳನ್ನು **ತುತಿಪುದಕೆ** = ಸ್ತೋತ್ರ ಮಾಡುವುದಕ್ಕೆ **ಸನ್ಮತಿಯ** = ಸಮೀಚೀನವಾದ ಬುದ್ಧಿಯನ್ನು **ಪಾಲಿಸಿ** = ಕರುಣಿಸಿ ಕೊಟ್ಟು

**ನೀ** = ನೀನು **ಮದ್ವದನಸದನದಲಿ** = ನನ್ನ ಮುಖವೆಂಬ ಮನೆಯಲ್ಲಿ **ನೆಲಸು** = ಆವಾಸಳಾಗಿರು.

**ತಾತ್ಪರ್ಯ**

ಶ್ರೀ ಸರಸ್ವತೀದೇವಿಯರು ಚತುರ್ಮುಖ ಬ್ರಹ್ಮದೇವರ ನೀತಪತ್ನಿಯರು. ಮಹಾಪ್ರಳಯಕಾಲದಲ್ಲಿಯೂ ಇವರ ಜ್ಞಾನಕ್ಕೆ ಚ್ಯುತಿ ಇಲ್ಲ. "ಪರಶುಕ್ಲತ್ರಯ"ರಲ್ಲಿ ಸೇರಿಸಿದವರು. ಅವರಿಗೆ ಜ್ಞಾನತಿರೋಧಾನವಿಲ್ಲ. ಅವರ ಜ್ಞಾನ ನಿರ್ದೋಷವಾದ್ದು ಹಾಗೂ ವಿಶಿಷ್ಟಪೂರ್ಣವಾದದ್ದು. ವೇದಾಭಿಮಾನಿಗಳು. ಇವರ ಅನುಗ್ರಹವಿಲ್ಲದೇ ವೇದಗಳ ನಿಜವಾದ ಅರ್ಥವಾಗುವುದಿಲ್ಲ. ಬ್ರಹ್ಮನ ರಾಣಿಯಾದ ಶ್ರೀ ಸರಸ್ವತಿಯು ತಮ್ಮ ಕೈಯಲ್ಲಿ ವಿದ್ಯಾದ್ಯೋತಕವಾದ "ಕಚ್ಛಪೀ" ಎಂಬ ವೀಣೆಯನ್ನು ಧರಿಸಿದ್ದಾರೆ. ಅಂತಹ ಸರಸ್ವತೀದೇವಿಯರು ನನ್ನ ಮುಖವೆಂಬ ಮನೆಯಲ್ಲಿ ಆವಾಸವಾಗಿರಲಿ ಎಂದು ಪ್ರಾರ್ಥಿಸುತ್ತಾರೆ. ನಾಲಿಗೆಯಲ್ಲಿ ಶ್ರೀ ಸರಸ್ವತಿಯ ಸಾನಿಧ್ಯವಿಶೇಷದಿಂದ, ಶ್ರೀಲಕ್ಷ್ಮೀಪತಿಯಾದ ಶ್ರೀಹರಿಯ ಅನಂತಾನಂತಕಲ್ಯಾಣಗುಣಗಳನ್ನು ಯಾವಾಗಲೂ ಸ್ತೋತ್ರಮಾಡುವುದಕ್ಕೆ ಅನುಗ್ರಹಿಸಲಿ ಎಂದು ಭಕ್ತಿಪುರಸ್ಸರವಾಗಿ ಶ್ರೀ ಸರಸ್ವತೀದೇವಿಯರನ್ನು ಪ್ರಾರ್ಥಿಸಿಕೊಂಡಿದ್ದಾರೆ.

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—

ರುದ್ರಾದಿ ದೇವತೆಗಳಿಂದ ಶ್ರೀ ಸರಸ್ವತೀ ದೇವಿಯರು ತಾರತಮ್ಯದಲ್ಲಿ ಉತ್ತಮರಾದ್ದರಿಂದ ರುದ್ರಾದ್ಯಪೇಕ್ಷಯಾ ವಿಶೇಷಜ್ಞಾನವುಳ್ಳವರು. ವೇದಗಳು ಅನಂತ. ಈ ವೇದವಿಭಾಗಗಳಲ್ಲಿ ಗುಂಪಾಗಿ ಕೂಡಿರತಕ್ಕ (ನಿಗಮ ಪ್ರತತಿಗಳಿಗೆ) ವೇದಸಮೂಹಗಳಿಗೆ ಶ್ರೀ ಸರಸ್ವತಿಯು ಅಭಿಮಾನಿಯು. ಪುನರುಕ್ತಿ ಪರಿಹಾರಾರ್ಥ ತತ್ತ್ವೋಪದೇಶಕರಾದ್ದರಿಂದ "ಬ್ರಹ್ಮಾಣಿ" ಎಂಬ ಪದಪ್ರಯೋಗವನ್ನು ದಾಸರಾಯರು ಮಾಡಿರುವರು. ಬ್ರಹ್ಮದೇವರು ಸೃಷ್ಟಿಕರ್ತರು. ಅವರ ಪತ್ನಿಯಾದ ಶ್ರೀ ಸರಸ್ವತಿಯು "ಜನನಿ" ಎಂದೂ ಕರೆಸಿಕೊಳ್ಳುತ್ತಾರೆ. ಅನಂತಕಲ್ಯಾಣಗುಣಗಣಪರಿಪೂರ್ಣನಾದ ಶ್ರೀಮನ್ನಾರಾ

ಯಣನ ಗುಣಗಳನ್ನು ಅನವರತವೂ ಹೊಗಳಿ ಕೊಂಡಾಡುವುದಕ್ಕೆ ನಿರ್ಮಲವಾದ ಹಾಗೂ ನಿಶ್ಚಲವಾದ ಬುದ್ಧಿ ಅತ್ಯವಶ್ಯ. ಅಂತಹ ಸನ್ಮತಿಯನ್ನು ಕರುಣಿಸಿ ನನ್ನ ಮುಖಗತವೆಂಬ ಮನೆಯಲ್ಲಿ ಆವಾಸಳಾಗಿರು ಎಂದು ಪ್ರಾರ್ಥಿಸಿಕೊಂಡಿದ್ದಾರೆ.

### (೨) ತಾಮ್ರಪರ್ಣೀಯ ವ್ಯಾಖ್ಯಾನ :

ಚತುರವದನ = ನಾಲ್ಕು ಮುಖಗಳುಳ್ಳ, **"ಚತ್ವಾರಿವದನಾನಿ ಅಸ್ಯಾನಿ ಯಸ್ಯ ಸಃ = ಚತುರ್ವದನಃ"** ಅಂತಹ ಚತುರ್ಮುಖ ಬ್ರಹ್ಮದೇವರ ಹೆಂಡತಿ (ರಾಣಿ) ಸರಸ್ವತಿಯು, ಇದಕ್ಕೆ ಪ್ರಮಾಣ : **"ಸರಸ್ವತೀಂತು ತತ್ರಾದ್ಯಾಂ ಬ್ರಹ್ಮಣಾಸಮಯೋಜಯದಿತಿ"** —ಎಂದು **ವಿಷ್ಣುರಹಸ್ಯ** ಪ್ರಮಾಣವಿದೆ. ಪರಶುಕ್ಲತ್ರಯರಲ್ಲಿ ಒಬ್ಬರಾದುದರಿಂದ, ಅವರ ಜ್ಞಾನಕ್ಕೆ ತಿರೋಧಾನವಿಲ್ಲ. (ನಾಶವಿಲ್ಲ): (ಅತಿರೋಹಿತವಿಮಲವಿಜ್ಞಾನಿ) ಬ್ರಹ್ಮ-ವಾಯು-ಸರಸ್ವತಿ ಭಾರತೀ ಇವರು ಪರಶುಕ್ಲತ್ರಯರು. **ಪರಶುಕ್ಲತ್ರಯೋ ಬ್ರಹ್ಮಾ ವಾಯುರ್ವಾಣೀಚ ಭಾರತೀ"**-ಎಂಬ ವಚನಾನುಸಾರ. ಸರಸ್ವತಿಯು ವೇದಾಭಿಮಾನಿನಿಯು. **"ವಾಣೀ ವೇದಾಭಿಮಾನಿನೀ"** —ಎಂಬ ಪ್ರಮಾಣಾನುಸಾರ ಗಾಯತ್ರೀರೂಪದಿಂದ ಸಕಲವೇದರಾಶಿಗಳಿಗೆ ಅಭಿಮಾನಿಗಳು. ದಾಸರಾಯರು ಈ ಪದ್ಯದಲ್ಲಿ "ಬ್ರಹ್ಮಾಣಿ" ಎಂಬ ಪದಪ್ರಯೋಗ ಮಾಡಿರುವರು. **"ಬ್ರಹ್ಮದೇವ"** ಎಂಬ ಕೋಶಾರ್ಥದಿಂದ "ಬ್ರಹ್ಮಾಣಿ" ಎಂಬ ಪದಕ್ಕೆ ನಾಲ್ಕು ಅರ್ಥಗಳಾಗುವುವು. (೧) ಬ್ರಹ್ಮ = ವೇದಗಳನ್ನು ಣಯತಿ = ಹೊಂದಿಸುವವಳು. ಅಂದರೆ, ವೇದಗಳ ಅರ್ಥಗಳನ್ನು ಮಾಡಿಸಿಕೊಡುವವಳು ಎಂದರ್ಥ. (2) ಬ್ರಹ್ಮ = ತಪಸ್ಸನ್ನು, ಗಣತಿ = ಹೊಂದಿಸುವವಳು, ಅಂದರೆ ತಪೋಶಕ್ತಿಪ್ರದಾತ್ರಿ. (೩) ಬ್ರಹ್ಮ = ಪರಮಾತ್ಮನನ್ನು (ಪರಿಪೂರ್ಣ) ಣಯತಿ = ಜೀವರಿಗೆ ಹೊಂದಿಸುವವಳು. ಅಂದರೆ, ಶ್ರೀಹರಿಯ ಅನುಗ್ರಹವು ಜೀವರಿಗೆ ಉಂಟಾಗುವಂತೆ ಮಾಡುವ ಕಾರ್ಯದಲ್ಲಿ ಸಹಕಾರಿಯು. (೪) "ಬ್ರಹ್ಮಣಃ ಇಯಂ" ಅಂದರೆ, ಚತುರ್ಮುಖನ ಪತ್ನಿಯಾದವಳು. ರಮಾಪತಿಯ ಗುಣಗಳನ್ನು ಹಾಗೂ ಮಹಿಮಾವಿಶೇಷಗಳನ್ನೂ ಕೊಂಡಾಡಲು ನಿಶ್ಚಲ ಬುದ್ಧಿಯನ್ನು (ಸನ್ಮತಿ) ಕೊಟ್ಟು ನನ್ನ ಮುಖ

ವೆಂಬ ಮಂದಿರದಲ್ಲಿ (ಮದ್ವದನಸದನ) ಆವಾಸಳಾಗಿರು ಎಂದು ದಾಸರಾಯರು ಶ್ರೀ ಸರಸ್ವತೀದೇವಿಯರನ್ನು ಪ್ರಾರ್ಥಿಸಿಕೊಂಡಿದ್ದಾರೆ.

## (೩) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಈ ಪದ್ಯದಿಂದ ದಾಸರಾಯರು ಶ್ರೀ ಸರಸ್ವತೀದೇವಿಯರನ್ನು ಈ ರೀತಿ ಪ್ರಾರ್ಥಿಸುತ್ತಾರೆ. "ಅಮ್ಮ, ಸರಸ್ವತೀ, ನೀನು ಬ್ರಹ್ಮದೇವರಿಗೆ ಸತಿಯು. ನಿನಗೆ ನಿರ್ಮಲವಾದ ಜ್ಞಾನವು ಯಾವಾಗಲೂ ಇರುವುದು. ವೇದ ಸಮೂಹಗಳಿಗೆ ನೀನು ಅಭಿಮಾನಿಯಾಗಿರುವೆ. ನಿನ್ನ ಕೈಯಲ್ಲಿರುವ ವೀಣೆ ಯಿಂದ (ವೀಣಾಪಾಣಿ) ಪತಿಯನ್ನು ಮೆಚ್ಚಿಸುತ್ತಾ, ಭಗವದ್ಗುಣಗಳನ್ನು ಸುಜನರಿಗೆ ಬೋಧಿಸುತ್ತಿರುವೆ. ವೇದಗಳ ತಾತ್ಪರ್ಯೋಪದೇಶಕಳಾಗಿರುವೆ. (ಬ್ರಹ್ಮಾಣಿ). ಜಗದ್ಗುರುಗಳಾದ ಬ್ರಹ್ಮದೇವರ ಪತ್ನಿಯಾದುದರಿಂದ "ಗುರ್ವಾಣಿ" ಎಂದೆನಿಸುವಳು. ಇದರ ಅರ್ಥವನ್ನೇ "ಬ್ರಹ್ಮಾಣಿ" ಎಂಬ ಪದಪ್ರಯೋಗದಿಂದ ಪ್ರಕಟಿಸಿರುವರು; ಗುರುಪತ್ನಿಯರು. ಪ್ರಕೃತದಲ್ಲಿ ನಾನು ಲಕ್ಷ್ಮೀಪತಿಯ ಗುಣಗಳನ್ನು ಸ್ತೋತ್ರಮಾಡಲು ಯತ್ನಿಸಿರುವೆನು. ಈ ವಿಷಯದಲ್ಲಿ ಅನ್ಯಥಾಜ್ಞಾನ, ಸಂಶಯಜ್ಞಾನಾದಿಗಳು ಬಾರದೆ, ಶ್ರೀಹರಿಯ ಗುಣಗಳೆಲ್ಲವೂ ಸ್ಫೂರ್ತಿಗೆ ಬರುವಂತೆ ಮಾಡಿ, ಸದ್ಬುದ್ಧಿಯನ್ನು ಅನುಗ್ರಹಿಸು. ನೀನು ಒಂದು ರೂಪದಿಂದ ನನ್ನ ವಾಕ್ಕಿನಲ್ಲಿ ನಿಂತು, ಭಗವದ್ವಿಷಯ ಗಳನ್ನು ಚೆನ್ನಾಗಿ ನುಡಿಸಬೇಕೆಂದು ಪ್ರಾರ್ಥಿಸುತ್ತೇನೆ.

**ವಿಶೇಷಾರ್ಥ:**

ಬ್ರಹ್ಮದೇವರಿಗೆ ಸರ್ವದೇವೋತ್ತಮತ್ವವೂ ಮತ್ತು ಜಗದ್ಗುರುತ್ವವೂ ಹೇಗೆ ಇರುವುದೋ, ಹಾಗೆಯೇ ಶ್ರೀ ಸರಸ್ವತಿದೇವಿಯರಿಗೆ ಇವೆ ಎಂಬ ಭಾವನೆಯಿಂದ "ಚತುರವದನನ ರಾಣಿ" ಎಂಬ ಶಬ್ದದಿಂದ ಗುರುಪತ್ನಿತ್ವ ವನ್ನೂ ತೋರಿಸುವರು. ಇದರಿಂದ ಪುನರುಕ್ತಿದೋಷವಿಲ್ಲವೆಂದು ತಿಳಿಯ ಬೇಕು.

## (೪) "ಭಾವದರ್ಪಣಟೀಕಾ" ವ್ಯಾಖ್ಯಾನ :

ಈ ಪದ್ಯದಿಂದ ವಾಗಾಭಿಮಾನಿಗಳಾದ ಸರಸ್ವತಿದೇವಿಯರನ್ನು ಗ್ರಂಥಕಾರರು ಸಮೀಚೀನ ಮನಸ್ಸಿನಿಂದ ಪ್ರಾರ್ಥಿಸುತ್ತಾರೆ "ನಾಲ್ಕುಮುಖಗಳುಳ್ಳ (ಚತುರವದನ) ಬ್ರಹ್ಮಪತ್ನಿಯೇ, ನನಗೆ ಸಮೀಚೀನ ಮತಿಯನ್ನು (ಸನ್ಮತಿಯು) ಕೊಡು. ನನ್ನ ಮುಖಸದನದಲ್ಲಿ (ಮದ್ವದನಸದನದಲಿ) ನೆಲಸು. ಪ್ರತಿಬದ್ಧವಲ್ಲದಿರುವ (ಅತಿರೋಹಿತ) ನಿರ್ಮಲವಾದ (ವಿಮಲ). ವಿಶೇಷಜ್ಞಾನವುಳ್ಳ (ವಿಜ್ಞಾನಿ) ವೇದಸಮೂಹಗಳಿಗೆ ಅಭಿಮಾನಿಯಾದ (ನಿಗಮತತಿಗಳಿಗಭಿಮಾನಿ) "ಕಚ್ಛಪೀ" ಎಂಬ ಹೆಸರಿನ ವೀಣೆಯನ್ನು ಹಸ್ತದಲ್ಲಿ ಧರಿಸಿರುವೆ. **"ಮಹತೀ ನಾರದಸ್ಯ ಸ್ಯಾತ್ಸರಸ್ವತ್ಯಾಸ್ತು ಕಚ್ಛಪೀ"** ಎಂದು **ವೈಜಯಂತೀ** ಎಂಬ ಗ್ರಂಥಪ್ರಮಾಣ. **"ಬ್ರಹ್ಮೇತಿ ವೇದ ಉದ್ದಿಷ್ಟ"** ಎಂಬ **ಕಾಠಕೋಪನಿಷದ್ಭಾಷ್ಯ** ವಚನದಂತೆ, "ಬ್ರಹ್ಮಾಣಿ" ಎಂಬ ಶಬ್ದ ಪ್ರಯೋಗದಿಂದ-ಸಮಸ್ತವೇದಗಳನ್ನು ತಿಳಿದವಳು ಎಂದರ್ಥ. "ಬ್ರಹ್ಮಾಣಿ" ಎಂಬ ಪದದ ಪರ್ಯಾಯಾರ್ಥ– **"ಬ್ರಹ್ಮವೇದಸ್ತಪಸ್ತತ್ವಂ ಬ್ರಹ್ಮಾ ವಿಪ್ರ-ಪ್ರಜಾಪತೀ"**– ಎಂಬ ಶಬ್ದನಿರ್ವಚನದಂತೆ, ಸರಸ್ವತಿಯು **"ತತ್ವಜ್ಞಾನಿ"** ಎಂದರ್ಥ. ನಿನ್ನನ್ನು ನಮಸ್ಕರಿಸಿ ಪ್ರಾರ್ಥಿಸುವೆ. ಲಕ್ಷ್ಮೀಪತಿಯ ಗುಣಗಳನ್ನು ಸ್ತೋತ್ರಮಾಡುವುದಕ್ಕೆ ಸನ್ಮತಿಯನ್ನು ಅನುಗ್ರಹಿಸು–ಎಂದು ಪ್ರಾರ್ಥಿಸುತ್ತಾರೆ.

## (೫) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ :

"ಸರಸ್ವತೀ" ಎಂಬ ಶಬ್ದದ ನಿರ್ವಚನವನ್ನು **"ಪಾವಕಾನಃ ಸರಸ್ವತೀ"** ಎಂಬ ಉಕ್ತಿಯ ಆಧಾರದ ಮೇಲೆ ಈ ರೀತಿ ವಿವರಿಸುತ್ತಾರೆ. "ಸರಣ" ಎಂದರೆ ಎಲ್ಲಾ ಕಡೆಗಳಲ್ಲಿಯೂ ಗಮನ ಮಾಡುವುದು ಎಂದರ್ಥ, ಅಥವಾ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುವುದು ಎಂದರ್ಥ. (ಸರ್ವಗಮನತ್ವ ಹಾಗೂ ಸರ್ವಜ್ಞತ್ವ) ಇದರಿಂದ ಶ್ರೀಹರಿಯು "ಸರಸ್" ಎಂದೆನಿಸಿಕೊಳ್ಳುತ್ತಾನೆ.

ಶ್ರೀ ವಾಯುದೇವರು ಏತಾದೃಶಮಹಿಮನಾದ ಶ್ರೀ ಹರಿಯನ್ನು ಪ್ರೀತಿಪಡಿಸುವುದರಿಂದಲೂ ಮತ್ತು ಶ್ರೀಹರಿಗೆ ಪರಮ ಪ್ರೀತ್ಯಾಸ್ಪದರಾಗಿರು

ವುದರಿಂದಲೂ ಅವರಿಗೆ "ಸರಸ್ವಾನ್" ಎಂದು ಹೆಸರು. ಅಂತಹವನಿಗೆ ಪ್ರಿಯಳಾದುದರಿಂದ ವಾಯುಪತ್ನಿಯು "ಸರಸ್ವತೀ" (ವಾಯುದೇವರು ಭಾವೀಬ್ರಹ್ಮರಾದ್ದರಿಂದ) ಎನಿಸಿಕೊಳ್ಳುವರು. ಭಗವಾನ್ ಶ್ರೀಹರಿಯು ಗುಣಗಳಿಂದ ವ್ಯಾಪಿಸಿದವನಾದುದರಿಂದ ಅವನ ಸ್ತ್ರೀರೂಪವೂ ಸಹ "ಸರಸ್ವತೀ" ಎಂದೇ ವ್ಯವಹರಿಸಲ್ಪಡುವುದು. ಇದಕ್ಕೆ ಪ್ರಮಾಣ:—

**ಹರಿಪ್ರಿಯತ್ವತೋ ವಾಯುಃ ಸರಸ್ವಾಂಸ್ತತ್ಪ್ರಿಯಾಥವಾ ||**

**ಗುಣತ್ವೇನ ತತತ್ವಾದ್ವಾ ಭಗವಾಂಸ್ತು ಸರಸ್ವತೀ || "ಸ್ತ್ರೀರೂಪ"||**

ಹೀಗೆಂದು **ಭಾಷ್ಯ**ವಚನವಿದೆ. "ಸರಸ್ವತೀ" ಎಂದು ಶಬ್ದವಾಚ್ಯನಾದ ಹರಿಯು ಸ್ತ್ರೀರೂಪಕ್ಕೆ ಸರಸ್ವತೀದೇವಿಯರು ಆಧಿಷ್ಠಾನರು. ಈ ರೀತಿ ಸರಸ್ವತೀಸೂಕ್ತವಾಚ್ಯಳಾದ ಬ್ರಹ್ಮಪತ್ನಿಯಾದ ಸರಸ್ವತಿಯನ್ನು ಬುದ್ಧಿ (ಸನ್ಮತಿ) ಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತಾರೆ, "ಬ್ರಹ್ಮಾಣೀ" ಎಂಬ ಶಬ್ದಕ್ಕೆ "ಬ್ರಹ್ಮನನ್ನು ತಿಳಿಯುವವಳು". ಎಂದು ಅರ್ಥಮಾಡಬೇಕು. ಬ್ರಹ್ಮನ ಪತ್ನಿಗೆ "ಬ್ರಾಹ್ಮೀ" ಎಂದು ಶಬ್ದರೂಪವು. ಸರಸ್ವತೀದೇವಿಯರ ಜ್ಞಾನವುಪ್ರಳಯಕಾಲದಲ್ಲಿಯೂಲುಪ್ತವಾಗುವುದಿಲ್ಲ (ಅತಿರೋಹಿತ), ಇಂತಹ ವಿಶೇಷಗುಣವಿರುವುದರಿಂದಲೇ "ವಿಮಲವಿಜ್ಞಾನಿ" ಎಂದು ಕೊಂಡಾಡಿದ್ದಾರೆ. ಬ್ರಹ್ಮದೇವರಿಗೂ, ವಾಯುದೇವರಿಗೂ ಮತ್ತ ಸರಸ್ವತೀದೇವಿಯರಿಗೂ ಪ್ರಳಯಕಾಲದಲ್ಲಿಯೂ ಸಹ ಬುದ್ಧಿಮೋಹವಿಲ್ಲ. ಇದಕ್ಕೆ ಪ್ರಮಾಣ:—

**"ವಾಯೋರ್ನವು ಪ್ರಳಯೇ ಸೃಷ್ಟಿಕಾಲೇ ತಥಾಗಾಯತ್ರ್ಯಾ ನಾಸ್ತಿ ನಾಸ್ತ್ಯೇವಮೋಹಃ । ಗಾಯತ್ರಿವದ್ಭಾರತೀವನ್ ||"** ಹೀಗೆಂದು **ಗರುಡಪುರಾಣದ** ಪ್ರಮೋಣವಾಕ್ಯವಿದೆ. ವೇದಾಭಿಮಾನಿದೇವತೆಯನ್ನು ಸ್ತುತಿಸಿದರೆ, ಅವರಲ್ಲಿರುವ ಹಾಗೂ ವೇದೋಕ್ತವಾದ ಅನೇಕ ರೂಪಗಳನ್ನು ಸ್ತುತಿಸಿದಂತೆ ಆಗುತ್ತದೆ. ಈ ಅಭಿಪ್ರಾಯದಿಂದ "ಬ್ರಹ್ಮಾಣೀ" ಎಂದು ಕೊಂಡಾಡಿದ್ದಾರೆ. ವೇದೋಕ್ತವಾದ ಶ್ರೀಹರಿಯ ರೂಪಗಳನ್ನು ಸ್ತೋತ್ರ ಮಾಡಿ (ನುತಿಸಿ) ಬೇಡುವೆ. ಎಂದು ಹೇಳಿರುವುದರಿಂದ 'ಚತುರವದನನರಾಣಿ' ಮತ್ತು "ಬ್ರಹ್ಮಾಣಿ" ಇವೆರಡು ಪದಪ್ರಯೋಗಗಳಿಗೆ ಪುನರುಕ್ತಿದೋಷ ಬರುವುದಿಲ್ಲ.

## (೬) "ಗುರುಹೃದಯ ಪ್ರಕಾಶಿಕಾ" ವ್ಯಾಖ್ಯಾನ :

ಶ್ರೀ ಸರಸ್ವತೀ ಮತ್ತು ಭಾರತೀದೇವಿಯರು ಬ್ರಹ್ಮ ಮತ್ತು ಪ್ರಾಣರ ಅಧೀನರು. ಚತುರವದನನ ಮತ್ತು ಕೃತಿರಮಣ (ಮುಂದಿನ ಪದ್ಯದಲ್ಲಿ) ಇತ್ಯಾದಿ ಪದಗಳಿಂದ ಚತುರ್ಮುಖ ಬ್ರಹ್ಮನ ಪಟ್ಟದರಸಿಯಾದ ಶ್ರೀ ಸರಸ್ವತೀ ದೇವಿಯನ್ನೂ ಸ್ತೋತ್ರಮಾಡುತ್ತಾರೆ. ಅವರಿಗೆ ನಿರ್ದುಷ್ಟ ಬ್ರಹ್ಮಸಾಕ್ಷಾತ್ಕಾರವೆಂಬ ವಿಜ್ಞಾನವು ನಿರಂತರವೂ ಇರುವುದು, ವೇದಸಮೂಹಗಳಿಗೆ ಅಭಿಮಾನಿಗಳು. ವೀಣೆಯನ್ನು ಹಸ್ತದಲ್ಲಿ ಧರಿಸಿರುವವರು(ವೀಣಾಪಾಣಿ) "ಬ್ರಹ್ಮಾಣಿ"ಎಂದರೆ, ಪರತತ್ತ್ವೋಪದೇಶಕಳಾದ ವೇದಾರ್ಥಜ್ಞಾನಿ ಎಂದರ್ಥ. **"ಬ್ರಹ್ಮ ಅಣತೀತಿ ಬ್ರಹ್ಮಾಣೀ"**–ಎಂದು ಪರಿಷ್ಕಾರವು. ಲೋಕಜನನಿಯಾದ ಸರಸ್ವತಿಯನ್ನು ನಮಸ್ಕರಿಸಿ ಪ್ರಾರ್ಥಿಸುತ್ತಾರೆ–ಲಕ್ಷ್ಮೀಪತಿಯ ಜ್ಞಾನಾನಂದಾದಿಗುಣಗಣನ್ನು ಸ್ತುತಿಸುವುದಕ್ಕೆ ಸದ್ಬುದ್ಧಿಯನ್ನು ಕೊಟ್ಟು, ನನ್ನ ವಾಕ್ಕೆಂಬ ಮನೆಯಲ್ಲಿ ವಾಸವಾಗುವವಳಾಗು–ಎಂದು ಪ್ರಾರ್ಥಿಸಿಕೊಂಡಿದ್ದಾರೆ.

**ಸಾರಾಂಶ :—**

ಶ್ರೀ ಬ್ರಹ್ಮದೇವರು ತಮ್ಮ ನಾಲ್ಕುಮುಖಗಳಿಂದ (ಚತುರವದನನ) ನಾಲ್ಕು ವೇದಗಳನ್ನೂ ಪಾರಾಯಣ ಮಾಡುತ್ತಿರುವರು. ಶ್ರೀಮನ್ನಾರಾಯಣನ ಮಹಿಮಾತಿಶಯಗಳನ್ನು ನಿರಂತರವೂ ಕೊಂಡಾಡುತ್ತಿರುವರು. ಮಹತ್ತತ್ವಾಭಿಮಾನಿಗಳು. ಇಂತಹ ಬ್ರಹ್ಮದೇವರ ನಿಜಪತ್ನಿಯಾದ ಸರಸ್ವತಿಯು ಬುದ್ಧ್ಯಾಭಿಮಾನಿಗಳು. ಶ್ರೀರಮಾಪತಿಯ ಮಂಗಳಕರವಾದ ಗುಣರೂಪಗಳನ್ನು ವಿಚಾರಿಸಿ ತಿಳಿಯುವ ವಿಷಯದಲ್ಲಿ ಜ್ಞಾನತಿರೋಹಿತವಾಗದ, ಅಚ್ಛಿನ್ನಜ್ಞಾನಭಕ್ತಿಗಳಿಂದ ಅತ್ಯಂತಶುದ್ಧವಾದ ವಿಶಿಷ್ಟವಾದ ಜ್ಞಾನವನ್ನು ಉಳ್ಳವರು. ರಮಾನಂತರ ಅನಂತವೇದಗಳಿಗೆ ಮುಖ್ಯಾಭಿಮಾನಿಯಾದವರು, ಪ್ರಣವಪ್ರತಿಪಾದ್ಯನಾದ ಶ್ರೀರಮಾಕಾಂತನ ಗುಣಾತಿಶಯಗಳನ್ನು ಚತುರವೇದಾಭಿಮಾನಿಗಳಾಗಿ ಸಾಮಗಾಯನ ಮಾಡುತ್ತಾ, ಕೈಯಲ್ಲಿ ಹಿಡಿದಿರುವ ವೀಣೆಯಿಂದ ಚತುರವೇದಗಳನ್ನು ನುಡಿಸುತ್ತಿರವರು. ಬ್ರಹ್ಮನಪತ್ನಿಯಾದ "ಬ್ರಹ್ಮಾಣಿ"ಎಂಬ ನಾಮಧೇಯ

ವುಳ್ಳ ಗಾಯತ್ರೀರೂಪಿಯಾದ ಸರಸ್ವತಿಯನ್ನು ಸ್ತೋತ್ರಮಾಡಿ, ಬೇಡಿ ಕೊಳ್ಳುತ್ತಾರೆ- ರಮಾವಲ್ಲಭನ ಮಂಗಳಕರವಾದ ಗುಣಗಳನ್ನು ಸ್ತೋತ್ರ ಮಾಡುವುದಕ್ಕೆ ಸಮೀಚೀನವಾದ ಬುದ್ಧಿಯನ್ನು ಪಾಲಿಸಿ (ಸನ್ಮತಿಯ ಪಾಲಿಸಿ) ಶುದ್ಧವಾದ ನಿಶ್ಚಂಚಲವಾದ ಜ್ಞಾನವನ್ನು ಅನುಗ್ರಹಿಸೆಂದು ಪ್ರಾರ್ಥಿಸುತ್ತಾರೆ. ನನ್ನ ಮುಖವೆಂಬ ಮನೆಯಲ್ಲಿ ನಿಂತು, ಜಿಹ್ವಾಂತರ್ಗತ ಳಾಗಿ, ಶ್ರೀ ರಮಾಕಾಂತನ ನಿರ್ಮಲತರವಾದ ಗುಣರೂಪಕ್ರಿಯಾದಿಗಳನ್ನು ಸ್ತೋತ್ರಮಾಡಿಸಿ, ಜ್ಞಾನಭಕ್ತಿಪ್ರದಳಾಗಿ ನನ್ನನ್ನು ಉದ್ಧರಿಸು-ಎಂದು ಸರಸ್ವತೀದೇಯರಲ್ಲಿ ಪ್ರಾರ್ಥಿಕೊಂಡಿದ್ದಾರೆ.

## ಪದ್ಯ (೬)

**ಕೃತಿರಮಣ ಪ್ರದ್ಯುಮ್ನನಂದನೆ ।**
**ಚತುರವಿಂಶತಿ ತತ್ತ್ವಪತಿ ದೇ ।**
**ವತೆಗಳಿಗೆ ಗುರುವೆನಿಸುತಿಹ ಮಾರುತನ ನಿಜಪತ್ನಿ ॥**
**ಸತತ ಹರಿಯಲಿ ಗುರುಗಳಲಿ ಸ ।**
**ದ್ರತಿಯ ಪಾಲಿಸಿ ಭಾಗವತ ಭಾ ।**
**ರತ ಪುರಾಣ ರಹಸ್ಯ ತತ್ತ್ವಗಳರಪು ಕರುಣದಲಿ ॥೬॥**

**ಅವತರಣಿಕಾ :—**

ಸರಸ್ವತೀದೇವಿಯರನಂತರ, ಭಾವೀಸರಸ್ವತಿಯರಾದ ಶ್ರೀವಾಯು ದೇವರ ನೀತಪತ್ನಿ ಶ್ರೀ ಭಾರತೀದೇವಿಯರನ್ನು ಈ ಪದ್ಯದಿಂದ ಸ್ತೋತ್ರ ಮಾಡುತ್ತಾರೆ.

**ಪ್ರತಿಪದಾರ್ಥ :—**

**ಕೃತಿರಮಣ** = "ಕೃತಿ" ಎಂಬ ಹೆಸರುಳ್ಳ ಲಕ್ಷ್ಮೀದೇವಿಯರ ಪತಿಯಾದ **ಪ್ರದ್ಯುಮ್ನನಂದನೆ** = ಪ್ರದ್ಯುಮ್ನನಾಮಕನಾದ ಶ್ರೀಮನ್ನಾರಾಯಣದೇವ

ರಿಂದ ಪುತ್ರಿಯಾಗಿ ಜನಿಸಿದಳು. **ಚತುರವಿಂಶತಿ** = ಇಪ್ಪತ್ತುನಾಲ್ಕು ಸಂಖ್ಯಾಕವಾದ **ತತ್ತ್ವಪತಿ** = ತತ್ವಾಭಿಮಾನಿಗಳಾದ (ತತ್ವೇಶರು) **ದೇವತೆಗಳಿಗೆ** = ರುದ್ರಾದಿ ದೇವತೆಗಳಿಗೆ (ತತ್ವಾಭಿಮಾನಿದೇವತೆಗಳು) **ಗುರುವೆನಿಸುತಿಹ** = ನಿಯಾಮಕರಾಗ ಪ್ರಭು ಎಂದೆನಿಸಿರುವ **ಮಾರುತನ** = ಶ್ರೀವಾಯುದೇವರ **ನಿಜಪತ್ನಿ** = ನೀತಿಪತ್ನಿಯಾಗಿರುವ ಶ್ರೀ ಭಾರತೀದೇವಿಯೇ **ಸತತ** = **ಯಾವಾಗಲೂ** (ನಿರಂತರವೂ) **ಹರಿಯಲಿ** = ಗುಣಪರಿಪೂರ್ಣನಾದ ಶ್ರೀಮನ್ನಾರಾಯಣನಲ್ಲಿ **ಸದ್ರತಿಯ** = ಪರಮಸಾತ್ವಿಕರೂಪವಾದ ಭಕ್ತಿಯನ್ನು **ಪಾಲಿಸಿ** = ಅನುಗ್ರಹಪೂರ್ವಕ ಕೊಟ್ಟು **ಭಾಗವತ** = ಪುರಾಣರತ್ನವೆನಿಸಿರುವ ಶ್ರೀಮದ್ಭಾಗವತಶಾಸ್ತ್ರದ **ಭಾರತ** = ವೇದತುಲ್ಯವಾದ ಶ್ರೀಮನ್ಮಹಾಭಾರತದ **ಪುರಾಣ** = ಅಷ್ಟಾದಶಪುರಾಣದಲ್ಲಿ ಗರ್ಭೀಕೃತವಾದ **ರಹಸ್ಯತತ್ವಗಳ** = ನಿಗೂಢವಾದ ವೇದಾರ್ಥಪ್ರಮೇಯ ವಿಷಯಗಳನ್ನು **ಕರುಣದಲಿ** = ಪರಮಾಂತಃಕರಣದಿಂದ **ಅರುಹು** = ತಿಳಿಸಿ ಕೊಡುವವಳಾಗು ಎಂದು ಪ್ರಾರ್ಥಿಸಿಕೊಂಡಿದ್ದಾರೆ.

**ತಾತ್ಪರ್ಯ :**

ಮೂಲರೂಪೀನಾರಾಯಣನು ಜಗತ್ತಿನ ಸೃಷ್ಟಿ, ಸ್ಥಿತ್ತು ಲಯಾದಿ ಕಾರ್ಯಗಳನ್ನು ಮತ್ತು ಮುಕ್ತಿಯೋಗ್ಯ ಚೇತನರಿಗೆ ಮೋಕ್ಷಪ್ರದತ್ವಾದಿ ವ್ಯಾಪಾರವಿಶೇಷಗಳನ್ನು ಮಾಡಲು ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವಾದಿ ಪ್ರಾದುರ್ಭಾವರೂಪಗಳಿಂದ ಪ್ರಕಟನಾದನು. ಈ ಜಗದ್ವ್ಯಾಪಾರಗಳಲ್ಲಿ ಶ್ರೀಹರಿಯ ಸೇವೆಗೋಸುಗ,ಜಗನ್ಮಾತೆಯಾದ ಶ್ರೀರಮಾದೇವಿಯರು ಕ್ರಮವಾಗಿ ಶಾಂತಿ, ಕೃತಿ, ಜಯಾ ಮತ್ತು ಮಾಯಾ ಎಂಬ ಹೆಸರುಗಳಿಂದ ಅವತರಿಸಿದರು. ಕೃತಿಪತಿಯಾದ ಪ್ರದ್ಯುಮ್ನನಾಮಕ ಶ್ರೀಮನ್ನಾರಾಯಣನ ಪುತ್ರಿಯಾಗಿ ಬ್ರಹ್ಮಾಂಡದ ಹೊರಗೆ ಸೂಕ್ಷ್ಮಸೃಷ್ಟಿಕಾಲದಲ್ಲಿ ಶ್ರೀ ಭಾರತೀದೇವಿಯರು ಅವತರಿಸಿದರು. ಇದರಿಂದ ಭಾರತೀದೇವಿಯರಿಗೆ "ಪ್ರದ್ಯುಮ್ನನಂದನೆ" ಎಂದು ಹೆಸರು. ಬ್ರಹ್ಮಾಂಡದ ಸೃಷ್ಟಿಯ

೨೪ ತತ್ವಗಳಿಂದ ಉಂಟಾಗಿದೆ. ಈ ತತ್ವಗಳಿಗೆ ಅಭಿಮಾನಿಗಳಾದ ತತ್ತ್ವ ದೇವತೆಗಳಿಗೆ (ತತ್ವೇಶರಿಗೆ) ನಿಯಾಮಕರು ಶ್ರೀ ವಾಯುದೇವರು. ಅವರ ನೀತಪತ್ನಿಯರೇ ಶ್ರೀ ಭಾರತೀದೇವಿಯರು. ಭಾರತೀದೇವಿಯರು ಭಕ್ತಿಗೆ ಅಭಿಮಾನಿಗಳಾಗಿದ್ದರಿಂದ, ಶ್ರೀಹರಿಯಲ್ಲಿ ಹಾಗೂ ಜಗದ್ಗುರುಗಳಾದ ಶ್ರೀ ವಾಯುದೇವರಲ್ಲಿ ಅವಿಚ್ಛಿನ್ನರೂಪವಾದ ಭಕ್ತಿಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತಾರೆ. ಅಲ್ಲದೇ ಶ್ರೀಹರಿಯ ಸರ್ವೋತ್ತಮತ್ವಾದಿಗುಣಾತಿ ಶಯುಗಳನ್ನು ಹೊಗಳುತ್ತಿರುವ ಶ್ರೀಮದ್ಭಾಗವತ, ಪಂಚಮ ವೇದವೆಂದು ಪ್ರಸಿದ್ಧಿಯಾಗಿರುವ ಶ್ರೀಮನ್ಮಹಾಭಾರತ. ಪ್ರಮೇಯರಹಸ್ಯಗಳನ್ನು ತಿಳಿಸುವ ಪುರಾಣಾದಿ ಗ್ರಂಥಗಳು-ಇವುಗಳಲ್ಲಿ ಪ್ರತಿಪಾದಿತವಾಗಿರುವ ಪರಮ ರಹಸ್ಯವಾದ ತಾತ್ವಿಕವಿಷಯಗಳನ್ನು ಪರಮಾನುಗ್ರಹದಿಂದ ತಿಳಿಸುವವಳಾಗು ಎಂದು ಭಾರತೀದೇವಿಯರನ್ನು ಸ್ತೋತ್ರಮಾಡಿದ್ದಾರೆ.

**ವ್ಯಾಖ್ಯಾನಗಳು :**

**(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :**

ಕೃತಿನಾಮಕಳಾದ ಲಕ್ಷ್ಮೀದೇವಿಯರ ಪತಿ ಪ್ರದ್ಯುಮ್ನನಾಮಕ ಶ್ರೀಮನ್ನಾರಾಯಣನು. ಇಂತಹ ಪ್ರದ್ಯುಮ್ನನಿಂದ ಕೃತೀದೇವಿಯರಲ್ಲಿ ಶ್ರೀ ಭಾರತೀದೇವಿಯವರು ಪುತ್ರಿಯಾಗಿ ಜನಿಸಿದರು. (ಕೃತಿರಮಣಪ್ರದ್ಯುಮ್ನನಂದನೆ) ಬ್ರಹ್ಮಾಂಡದ ಹೊರಗೆ ಸೂಕ್ಷ್ಮಸೃಷ್ಟಿಯಲ್ಲಿ ಶ್ರೀಭಾರತೀದೇವಿಯರು ಪುತ್ರಿಯಾಗಿ ಜನಿಸಿದರು. ರುದ್ರಾದಿದೇವತೆಗಳು ೨೪ ತತ್ವಗಳಿಗೆ ಅಭಿಮಾನಿದೇವತೆಗಳು (ಚತುರವಿಂಶತಿತತ್ವಪತಿದೇವತೆಗಳಿಗೆ) ಶ್ರೀವಾಯುದೇವರು ಈ ೨೪ ತತ್ತ್ವಾಭಿಮಾನಿದೇವತೆಗಳಿಗೆ ನಿಯಾಮಕರು (ಗುರುವೆನಿಸುತಿಹ), ಏತಾದೃಶ ಮಹಿಮರಾದ ಶ್ರೀವಾಯುದೇವರು ಬ್ರಹ್ಮಾಂಡದ ಹೊರಗೆ ಸೂಕ್ಷ್ಮ ಸೃಷ್ಟಿಕಾಲದಲ್ಲಿ ಸಂಕರ್ಷಣನಾಮಕ ಪರಮಾತ್ಮನ ದೆಸೆಯಿಂದ ಜಯಾನಾಮಕಲಕ್ಷ್ಮೀದೇವಿಯರಲ್ಲಿ ಪುತ್ರತ್ವೇನ ಜನಿಸಿದರು. ಜಯಾಪತಿ ಸಂಕರ್ಷಣನಿಂದ ಶ್ರೀವಾಯುದೇವರ ಉತ್ಪತ್ತಿ. ಅಂತಹ ವಾಯುದೇವರ (ಮಾರುತನ) ನಿಯತಪತ್ನಿಯರೇ ಶ್ರೀ ಭಾರತೀದೇವಿಯರು (ನಿಜಪತ್ನಿ).

ಅನ್ಯರಾದ ದೇವತೆಗಳಿಗೆ ಅವತಾರ ದೆಸೆಯಲ್ಲಿ ಪತ್ನಿಯಿಂದ ವಿಯೋಗ ಉಂಟು. ಆದರೆ ಭಾರತೀದೇವಿಯರು ಹೀಗೆ ಪತಿಯಿಂದ (ವಾಯು ದೇವರಿಂದ) ಭೇದಿಸಿ ಇರತಕ್ಕವರಲ್ಲ. ಇದರಿಂದ "ನಿಜಪತ್ನಿ" ಎಂದು ತಾತ್ಪರ್ಯ. ಇಂತಹ ಭಾರತೀದೇವಿಯರ ಕರುಣಾವಿಶೇಷವಿಲ್ಲದೆ, ಶ್ರೀಹರಿ ಯಲ್ಲಿಯೂ ಮತ್ತು ಜಗದ್ಗುರುಗಳಾದ ವಾಯುದೇವರಲ್ಲಿಯೂ ಭಕ್ತಿಯು ಉಂಟಾಗುವುದಿಲ್ಲ. **'ಭಾರತಿ ಭಕುತಿಯನೂ ಕೊಡುವುದು । ನೂರುತ ಸತಿನೀನು!'** ಎಂದು ಶ್ರೀ ಗೋಪಾಲದಾಸವರ್ಯರ ವಚನದಂತೆ, ಶ್ರೀಭಾರತೀ ದೇವಿಯರು ಭಕ್ತಿಗೆ ಅಭಿಮಾನಿಗಳು. ಹೀಗೆ ಶ್ರೀಹರಿಗುರುಗಳಲ್ಲಿ ಭಕ್ತಿ ಯುಂಟಾಗಿ, ತದನುಗ್ರಹದ್ವಾರಾ ಭಾಗವತ, ಭಾರತ. ಪುರಾಣ, ಇತಿ ಹಾಸಾದಿಶಾಸ್ತ್ರಗಳಲ್ಲಿ ಗರ್ಭೀಕೃತವಾಗಿರುವ ರಹಸ್ಯಪ್ರಮೇಯಗಳನ್ನು ಅರಿಯಲು ಸಾಧ್ಯವಾಗುವುದು. ಇದಕ್ಕೆ ಭಾರತೀದೇವಿಯರ ಅನುಗ್ರಹ ವಿಶೇಷವಿರಬೇಕು. ಈ ದೃಷ್ಟಿಯಿಂದ ದಾಸರಾಯರು ಭಕ್ತಿ ಹಾಗೂ ಜ್ಞಾನಾದಿಗಳನ್ನು ಕೊಡಲಿ ಎಂದು ಭಾರತೀದೇವಿಯರನ್ನು ಪ್ರಾರ್ಥಿಸಿದ್ದಾರೆ.

## (೨) "ಭಾವಪ್ರಕಾಶಿಕಾ" ವ್ಯಾಖ್ಯಾನ :

ಹಿಂದಿನ ಪದ್ಯದಿಂದ ಸರಸ್ವತೀ ದೇವಿಯರನ್ನು ವಂದಿಸಿ, ಮುಂದೆ, ಸರಸ್ವತೀ ಪದವಿಗೆ ಬರುವ ಭಾರತೀದೇವಿಯರಿಂದ ಇಷ್ಟಾರ್ಥವನ್ನು ಈ ಪದ್ಯದಿಂದ ಬೇಡುತ್ತಾರೆ. "ಅಮ್ಮ, ಭಾರತೀ, ನೀನು ಪ್ರದ್ಯುಮ್ನ ರೂಪಿಯಾದ ಪರಮಾತ್ಮನ ದೆಸೆಯಿಂದ ಕೃತಿನಾಮಕಳಾದ ಶ್ರೀ ಲಕ್ಷ್ಮೀ ದೇವಿಯರಲ್ಲಿ ಜನಿಸಿದ್ದೀಯೆ. ಇದರಿಂದ ನಿನಗೆ ಲಕ್ಷ್ಮೀನಾರಾಯಣರೇ ತಾಯಿ ತಂದೆಗಳೆನಿಸುವರು. ೨೪ ತತ್ತ್ವೇಶರಿಗೆ ನಿಯಾಮಕರಾದ (ಗುರು ವೆನಿಸುತಿಹ) ಶ್ರೀವಾಯುದೇವರೇ ನಿನ್ನ ಪತಿಯು. ಶ್ರೀಹರಿಯಲ್ಲಿಯೂ ಅವನ ಭಕ್ತಾಗ್ರೇಸರರಾದ ನಿನ್ನ ಪತಿಯೇ ಮೊದಲಾಗಿ ಸಮಸ್ತ ಸದ್ಗುರು ಗಳಲ್ಲಿಯೂ ಸುದೃಢಸ್ನೇಹರೂಪವಾದ ಭಕ್ತಿಯನ್ನು ನನಗೆ ಕೊಡು; ನನ್ನಲ್ಲಿ ಕರುಣವನ್ನಿಟ್ಟು ನಾನು ಉದ್ದೇಶಮಾಡಿರುವ ಈ ಹರಿಕಥಾಮೃತ **ಸಾರ ಎಂಬ ಗ್ರಂಥಕ್ಕೆ ಸಾಧಕವಾಗಿ ಹಾಗೂ ಪೂರಕವಾಗಿ ಇರುವ ಭಾರತ,**

ಭಾಗವತಾದಿ ಪುರಾಣಗಳಲ್ಲಿ ಅಡಗಿರುವ ರಹಸ್ಯತತ್ವಾರ್ಥಗಳನ್ನು ನನ್ನ ಜ್ಞಾಪಕಕ್ಕೆ ಬರುವಂತೆ ಮಾಡು" ಎಂದು ಕೇಳಿಕೊಂಡಿದ್ದಾರೆ.

**ವಿಶೇಷಾರ್ಥ :**

ಭಾರತೀದೇವಿಯರೇ ಮುಂದೆ ಸರಸ್ವತೀದೇವಿಯರಾಗುವುದರಿಂದ ಅವರಿಗೆ ಪ್ರತ್ಯೇಕವಾಗಿ ನಮಸ್ಕಾರವನ್ನು ಮಾಡದೆ, ಅಧಿಕಾರಭೇದದಿಂದ ಫಲವನ್ನು ಮಾತ್ರ ಪ್ರತ್ಯೇಕವಾಗಿ ಬೇಡಿಕೊಂಡಿದ್ದಾರೆಂದು ತಾತ್ಪರ್ಯ. ಶ್ರೀ ಭಾರತೀದೇವಿಯರು ಗರುಡ. ಶೇಷ ರುದ್ರಾದಿಗಳಿಗಿಂತ ಉತ್ತಮರೆಂದು ತೋರಿಸುವುದಕ್ಕಾಗಿ "ಕೃತಿರಮಣಪ್ರದ್ಯುಮ್ನ ನಂದನೆ" ಎಂಬ ಪದಪ್ರಯೋಗ ಮಾಡಿರುವರು.

ಸೃಷ್ಟಿಗೆ ಆರಂಭದಲ್ಲಿ ಮೂಲರೂಪೀ ಶ್ರೀಮನ್ನಾರಾಯಣನು ವಾಸುದೇವ ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ನಾಲ್ಕು ರೂಪಗಳನ್ನು ಧರಿಸಿದನು. ಆಗ ಶ್ರೀ ರಮಾದೇವಿಯರೂ ಸಹ ಶ್ರೀ ಭಗವದಾಜ್ಞಾನುಸಾರ ಕ್ರಮವಾಗಿ ಮಾಯಾ, ಜಯಾ, ಕೃತಿ ಮತ್ತು ಶಾಂತಿ ಎಂಬ ನಾಲ್ಕುರೂಪಗಳನ್ನು ಧರಿಸಿದರು. ವಾಸುದೇವನ ದೆಸೆಯಿಂದ ಮಾಯಾದೇವಿಯಲ್ಲಿ ಪುರುಷನಾಮಕ ಬ್ರಹ್ಮನು ಜನಿಸಿದನು. ಸಂಕರ್ಷಣನಿಂದ ಜಯಾದೇವಿಯಲ್ಲಿ ಸೂತ್ರನಾಮಕ ವಾಯುದೇವರು ಜನಿಸಿದರು. ಪ್ರದ್ಯುಮ್ನನಿಂದ ಕೃತಿದೇವಿಯಲ್ಲಿ ಪ್ರಕೃತಿ ಮತ್ತು ಶ್ರದ್ಧಾ ಎಂಬ ಹೆಸರಿನ ಇಬ್ಬರು ಹೆಣ್ಣುಮಕ್ಕಳು ಜನಿಸಿದರು ಆ ಪುರುಷನೇ ಬ್ರಹ್ಮದೇವರು. ಪ್ರಕೃತಿಯೇ ಸರಸ್ವತಿಯು. ಸೂತ್ರನೇ ಶ್ರೀ ವಾಯುದೇವರು. ಶ್ರದ್ಧೆಯೇ ಭಾರತಿಯು. **'ಸೂತ್ರಂ ಸ ವಾಯುಃ ಪುರುಷೋವಿರಂಚಿ : ಪ್ರದ್ಯುಮ್ನತಸ್ತಾಥ ಕೃತೌ. ಸ್ತ್ರೀಯಹೌದ್ವೇ ।'** ಎಂದು ಮಹಾಭಾರತತಾತ್ಪರ್ಯನಿರ್ಣಯ (ಅಧ್ಯಾಯ-೩)ದಲ್ಲಿ ಪ್ರಮಾಣವು. ಪುರುಷ ಮತ್ತು ಸೂತ್ರನಾಮಕರಾದ ಬ್ರಹ್ಮ ಮತ್ತು ವಾಯುದೇವರ ದೆಸೆಯಿಂದ ಸೂಕ್ಷ್ಮಸೃಷ್ಟಿಯಲ್ಲಿ ಗರುಡ. ಶೇಷ ಮತ್ತು ರುದ್ರಾದಿಗಳು ಜನಿಸಿದರು. ಇದರಿಂದ ಇವರೆಲ್ಲರಿಗಿಂತಲೂಭಾರತೀದೇವಿಯು ಉತ್ತಮರು ಎಂದು ಹೇಳಿದಂತಾಯಿತು.

## (೩) ತಾತ್ಪರ್ಯನಿರ್ಣಯವ್ಯಾಖ್ಯಾನ:

ಶ್ರೀ ಭಾರತೀದೇವಿಯು ಕೃತಿಪತಿಯಾದ ಪ್ರದ್ಯುಮ್ನನ ಪುತ್ರಿಯು. (ಕೃತಿರಮಣಪ್ರದ್ಯುಮ್ನನಂದನೆ) ವಾಯುದೇವರು ೨೪ ತತ್ವೇಶರಿಗೆ ನಿಯಾಮಕರು (ಚತುರವಿಂಶತಿತತ್ವಪತಿದೇವತೆಗಳಿಗೆ ಗುರುವೆನಿಸುತಿಹ) ಇಂತಹ ವಾಯುದೇವರ ನೀತಪತ್ನಿಯರೇ ಭಾರತಿಯು. (ಮಾರುತನ ನಿಜಪತ್ನಿ) ೨೪ ತತ್ವಗಳಲ್ಲಿ ಮೊದಲನೆಯದು ಅವ್ಯಕ್ತತತ್ವ. ಇದಕ್ಕೆ ಮುಖ್ಯಾಭಿಮಾನಿಗಳು ಶ್ರೀಲಕ್ಷ್ಮಿಯು. ವಾಯುದೇವರಿಗಿಂತ ಶ್ರೀ ಲಕ್ಷ್ಮೀ ದೇವಿಯು ಉತ್ತಮರು. ಇದರಿಂದ ಭಾರತಿ ಸರಸ್ವತಿಯರು ಅವ್ಯಕ್ತತತ್ವಕ್ಕೆ ಅಮುಖ್ಯಾಭಿಮಾನಿಗಳು (ಅವಾಂತರಾಭಿಮಾನಿಗಳು) ಎಂದು ತಿಳಿಯಬೇಕು ಇದಕ್ಕೆ ಪ್ರಮಾಣ : **'ಅವ್ಯಕ್ತತತ್ವ ರೂಪಿಣ್ಯೌ ಭಾರತೀ ಚ ಸರಸ್ವತೀ ಇತಿ'** ಹೀಗೆಂದು **ಶಾಂಡಿಲ್ಯತತ್ವದ** ಪ್ರಮಾಣವಾಕ್ಯವಿದೆ. ಎರಡನೆಯದು ಮಹತತ್ವ, ಇದಕ್ಕೆ ಬ್ರಹ್ಮವಾಯುಗಳೇ ಅಭಿಮಾನಿಗಳು. ಇದಕ್ಕೆ ಪ್ರಮಾಣ: **'ಬ್ರಹ್ಮವಾಯೂ ಮಹಾತ್ಮಾನೌ ಮಹತ್ತತ್ವ ನಿಯಾಮಕಾ' ಇತಿ,** ಹೀಗೆಂದು ಆದೇ **ಶಾಂಡಿಲ್ಯತತ್ವದ** ವಚನ. ಮೂರನೆಯದು ಅಹಂಕಾರತತ್ವ. ಇದಕ್ಕೆ ಗರುಡ ಶೇಷ ರುದ್ರರು ಅಭಿಮಾನಿಗಳು. ನಾಲ್ಕನೆಯದು ಮನಸ್ತತ್ತ್ವ ಇಂದ್ರ ಮತ್ತು ಕಾಮರು ಮನಸ್ತತ್ವಾಭಿಮಾನಿಗಳು. ಈ ರೀತಿಯಲ್ಲಿ ೨೪ ತತ್ವೇಶರಿಗೂ ವಾಯುದೇವರೇ ನಿಯಾಮಕರು ಎಂದು ತಾತ್ಪರ್ಯ. ಈ ತತ್ವೇಶರಿಗೆ ಅಂತರ್ಗತನೂ ಮತ್ತು ನಿಯಾಮಕನೂ ಆಗಿರುವುದರಿಂದ ವಾಯುದೇವರು "ಗುರು" ಎಂದೆನಿಸುತ್ತಾರೆ. ವಾಯುದೇವರ ನಿಯತ ಅಂದರೆ, ಸ್ವರೂಪದಲ್ಲಿಯೂ ಭಾರತಿಯು ಹೆಂಡತಿ ಎಂದರ್ಥ. ಇದರಿಂದ "ಮಾರುತನ ನಿಜಪತ್ನಿ" ಎಂದು ಹೇಳಿದ್ದಾರೆ. ಏತಾದೃಶ ಮಹಿಮೋಪೇತರಾದ ಶ್ರೀ ಭಾರತೀದೇವಿಯರು ನಿರಂತರದಲ್ಲಿ (ಸತತ) ಪರಮಾತ್ಮನಲ್ಲಿಯೂ (ಹರಿಯಲಿ) ಜಗದ್ಗುರುಗಳಾದ ವಾಯುದೇವರಲ್ಲಿ (ಗುರುಗಳಲಿ), ಹಾಗೆಯೇ ಸ್ವಗುರುಗಳಲ್ಲಿಯೂ ಅತ್ಯಂತ ಆಸಕ್ತಿಯನ್ನು (ಸದ್ರತಿಯ) ಕೊಡಲಿ ಎಂದು ಪ್ರಾರ್ಥಿಸಿ, ಭಾಗವತ, ಭಾರತ ಮತ್ತು ಪುರಾಣ ರಹಸ್ಯಾತ್ಮಕಅಂತರಾರ್ಥಗಳನ್ನು ತಿಳಿಸಿ, ಅನುಗ್ರಹಿಸೆಂದು ಪ್ರಾರ್ಥಿಸುತ್ತಾರೆ.

## (೪) ಭಾವದರ್ಪಣ ಟೀಕಾ ವ್ಯಾಖ್ಯಾನ :

ಪ್ರದ್ಯುಮ್ನನಂದನೆ-ಎಂದರೆ ಪ್ರದ್ಯುಮ್ನನಾಮಕ ಪರಮಾತ್ಮನ ಮಗಳು ಎಂದರ್ಥ. ಇದಕ್ಕೆ ಪ್ರಮಾಣ : **'ಪ್ರದ್ಯುಮ್ನತಃ ಕೃತೌಜಜ್ಞೇ ಕನ್ಯಾನಾಂ ತು ಚತುಷ್ಟಯಮ್ । ಗಾಯತ್ರೀ ಚೈವ ಸಾವಿತ್ರೀ ಶ್ರದ್ಧಾ ಚೈವ ಸರಸ್ವತೀ ॥ ಶ್ರದ್ಧಾ ಸೂತ್ರಸ್ಯ ಭಾರ್ಯಾಸೀತ್ತಿಸ್ರಸ್ತು ಪುರುಷ ಸ್ತ್ರೀಯಃ॥'** ಹೀಗೆಂದು **ವರಾಹಪುರಾಣಪ್ರಮಾಣ ವಚನವಿದೆ. ಚತು**ರ್ವಿಂಶತಿತತ್ವಗಳೆಂದರೆ. ೨೪ ತತ್ವಗಳು. ಇವು ಯಾವುವೆಂದರೆ :— ದಶೇಂದ್ರಿಯಗಳು = ೧೦; ಪಂಚಭೂತಗಳು = ೫; ಪಂಚತನ್ಮಾತ್ರಗಳು = ೫ ಅವ್ಯಕ್ತತತ್ವ = ೧; ಅಹಂಕಾರತತ್ವ = ೧; ಬುದ್ಧಿತತ್ವ = ೧; ಮನಸ್ತತ್ವ = ೧. ಅಂತು ಒಟ್ಟಿನಲ್ಲಿ ೨೪ ತತ್ವಗಳು. ಈ ತತ್ವಗಳಲ್ಲಿ **'ಆಧ್ಯಾಚಾವ್ಯಕ್ತತತ್ವಾತ್ಮಾ ದೇವಿ ಲಕ್ಷ್ಮೀರುದಾತೃತಾ'** ಎಂಬ **ಶಾಂಡಿಲ್ಯ** ತತ್ವವಚನಾನುಸಾರ ಈ ಅವ್ಯಕ್ತತತ್ವಕ್ಕೆ ಮುಖ್ಯಾಭಿಮಾನಿಗಳು ಶ್ರೀ ಲಕ್ಷ್ಮೀದೇವಿ. ಇಂತಹ ರಮಾದೇವಿಯರಿಗೆ ವಾಯುದೇವರು ಗುರುಗಳು ಎಂದು ತಿಳಿದರೆ, ಮಹಾ ಅನರ್ಥವಾದ ದುರ್ಗತಿಯಾಗುವುದು. ತತ್ರೈಯುಕ್ತ ಸಕಲ ತತ್ವಗಳಿಗೆ ಶ್ರೀಹರಿ ಮತ್ತು ಲಕ್ಷ್ಮೀದೇವಿ ಈ ಉಭಯರೂ ಮುಖ್ಯಾಭಿಮಾನಿಗಳಾದರೂ **'ಅವ್ಯಕ್ತ ತತ್ವರೂಪಿಣ್ಯೌ ಭಾರತೀ ಚ ಸರಸ್ವತೀ ।'** ಎಂಬ ಶಾಂಡಿಲ್ಯರ ವಚನಾನುಸಾರ, ಶ್ರೀ ಲಕ್ಷ್ಮೀದೇವಿಯರನ್ನು ಬಿಟ್ಟು ಶ್ರೀ ಭಾರತೀ ಸರಸ್ವತಿಯರನ್ನು ಈ ತತ್ವಕ್ಕೆ ಅಮುಖ್ಯತಯಾ ಗ್ರಹಿಸಿ, ಚತುರ್ವಿಂಶತಿತತ್ವಗಳಿಗೆ ಶ್ರೀ ವಾಯುದೇವರು "ಗುರು" ಗಳೆಂದು ಯೋಜನಾಮಾಡಬೇಕು. ಸಕಲಜೀವರಲ್ಲಿ ತಾವು ಇದ್ದರೂ, ವಾಯುದೇವರು ಜೀವೋತ್ತಮರೆಂದು ಪ್ರಖ್ಯಾತರಾಗಿದ್ದಾರೆ. ಅಂತೆಯೇ. ಚತುರ್ವಿಂಶತಿ ತತ್ವಗಳಲ್ಲಿ ಇದ್ದಾಗ್ಯೂ, ತತ್ವೇಶರಿಗೆ ಗುರುಗಳೆಂದು ಭಾವ. ನಿಜಪತ್ನಿ- ಎಂದರೆ ನಿಯತಪತ್ನಿ ಎಂದರ್ಥ. ನಿರಂತರದಲ್ಲಿಯೂ (ಸತತ) ಶ್ರೀ ಹರಿಗುರ್ರು ಗಳಲ್ಲಿ ಸಮೀಚೀನವಾದ ಆಸಕ್ತಿಯನ್ನು (ಸದ್ರತಿಯ) ಅನುಗ್ರಹಿಸು. ಭಾಗವತಾದಿ ಸಕಲ ಗ್ರಂಥೋಕ್ತತತ್ವಗಳನ್ನು ತಿಳಿಸಿಕೊಡು (ಅರುಪು) ಎಂದು ದಾಸರಾಯರು ಭಾರತೀದೇವಿಯನ್ನು ಪ್ರಾರ್ಥಿಸುತ್ತಾರೆ.

## (೫) ಗುರುಹೃದಯಪ್ರಕಾಶಿಕಾ ವ್ಯಾಖ್ಯಾನ :

ಕೃತಿದೇವಿಪತಿಯಾದ ಪ್ರದ್ಯುಮ್ನಪುತ್ರಿಯೇ, ಇದು ಸರಸ್ವತಿಗೂ ಉಂಟೆಂದು ಭಾವ. ೨೪ ತತ್ತ್ವಗಳೆಂದರೆ, ಪಂಚಭೂತಾದಿಗಳೈದು, ಶಬ್ದಾದಿಗಳೈದು, ಜ್ಞಾನ ಕರ್ಮೇಂದ್ರಿಗಳು ಹತ್ತು, ಮಹತ್ತತ್ವ, ಅಹಂಕಾರ ತತ್ತ್ವ, ಮನಸ್ಸು ಮತ್ತು ಬುದ್ಧಿ ಇವೆಲ್ಲಾ ಒಟ್ಟು ಸೇರಿ ೨೪ ತತ್ತ್ವಗಳು. ಈ ಅಭಿಮಾನಿ ದೇವತೆಗಳಿಗೆ ಜ್ಞಾನಪ್ರದರಾದ ವಾಯುದೇವರ ಪತ್ನಿಯೇ ಹರಿಗುರುಗಳಲ್ಲಿ ಸದಾ ಸಂತೋಷಚಿತ್ತವಿತ್ತು, ಭಾಗವತ, ಭಾರತ ಪುರಾಣಾದಿ ಗಳ ರಹಸ್ಯಪ್ರಮೇಯಗಳನ್ನು ಕರುಣದಿಂದ ಉಪದೇಶಿಸು ಎಂದು ಪ್ರಾರ್ಥಿಸುತ್ತಾರೆ.

## (೬) ಜಮಖಂಡೀ ವಾದಿರಾಜಾಚಾರ್ಯರ ವ್ಯಾಖ್ಯಾನ :

ಶ್ರೀ ಭಾರತಿದೇವಿಯರ ಅನುಗ್ರಹವಿಲ್ಲದಿದ್ದರೆ, ವಾಗ್ಮಿಯೂ ಮೂಕ ನಾಗುತ್ತಾನೆ. ಆಕೆಯ ಅನುಗ್ರಹವಿದ್ದರೆ, ಮೂಕನೂ ವಾಗ್ಮಿಯಾಗುವನು. **"ಭವತಿಯದನುಭಾವಾದೇಡಮೂಕೋಪಿ ವಾಗ್ಮೀ"** ಎಂಬ **ಸುಧಾ ಮಂಗಳಪದ್ಯ**ದಲ್ಲಿ **ಶ್ರೀ ಟೀಕಾಕೃತ್ಪಾದರು** ಮಾಡಿರುವ ಭಾರತೀಸ್ತುತಿ **ಶ್ಲೋ**ಕಕ್ಕೆ ವ್ಯಾಖ್ಯಾನಮಾಡಿರುವ ಶ್ರೀ ಯಾದವಾರ್ಯರ ಭಾವವನ್ನನುಸರಿಸಿ, ದಾಸವರ್ಯರು **"ಭಾ"** ಎಂಬ ಪರಮಾತ್ಮನಲ್ಲಿ ರತಳಾಗಿರುವುದರಿಂದ **"ಭಾರತೀ"** ಎಂದೂ, ಜಗತ್ತನ್ನು ಧರಿಸಿರುವುದರಿಂದ (ಭರಣ) ಮತ್ತು "ಪರಮಾತ್ಮನಲ್ಲಿ ನಿರತರಾದ" ವಾಯುದೇವರ ಪತ್ನಿಯಾಗಿರುವುದರಿಂದ, "ಭಾರತೀ" ಎಂಬ ಹೆಸರು ಬಂದಿದೆ. ಇಂತಹ ಭಾರತಿದೇವಿಯನ್ನು ತತ್ತ್ವ ಜ್ಞಾನಪ್ರಾಪ್ತಿಗಾಗಿ ಪ್ರಾರ್ಥಿಸುತ್ತಾರೆ. "ಕೃತಿ" ಎಂಬುದು ರಮಾದೇವಿಯ ರೂಪವು. ಅವಳಿಗೆ ಪತಿಯಾದ ಪ್ರದ್ಯುಮ್ನರೂಪೀ ಪರಮಾತ್ಮನ ಸುತೆಯು ನೀನು (ಕೃತಿರಮಣ ಪ್ರದ್ಯುಮ್ನನಂದನೆ). ಪ್ರದ್ಯುಮ್ನನಾಮಕ ಭಗವಂತ ನಿಗೆ ಕೃತಿ ಎಂಬ ಲಕ್ಷ್ಮಿಯಲ್ಲಿ ಇಬ್ಬರು. ಪುತ್ರಿಯರು ಜನಿಸಿದರು. ಈವಿಷಯ ದಲ್ಲಿ ಪ್ರಮಾಣ :– **"ಪ್ರದ್ಯುಮ್ನ ಶಶ್ಚಾಥ ಕೃತೇಃ ಸ್ತ್ರೀಯೌ ದ್ವೇ ।"**– ಎಂದು **ತಾತ್ಪರ್ಯನಿರ್ಣಯ** ವಚನವು. ಮಾರುತನ "ನಿಜಪತ್ನಿ" ಎಂಬ

ಪದಪ್ರಯೋಗದಲ್ಲಿ, ಭೀಮಾವತಾರದಲ್ಲಿ ವಾಯುದೇವರಿಗೆ ದ್ರೌಪದಿದೇವಿಯರಲ್ಲಿ ಅವಿಷ್ಟರಾಗಿದ್ದ ಶಚಿ ಮುಂತಾದವರು, ಹಿಡಿಂಬೆ ಮುಂತಾದವರು ನಿಯತ ಪತ್ನಿಯರಲ್ಲ ಎಂಬ ಭಾವಾರ್ಥವು ಪ್ರಕಟಿತವಾಗುವುದು.

## ಪದ್ಯ (೭)

ವೇದಪೀಠ ವಿರಿಂಚಿ ಭವ ಶ ।
ಕ್ರಾದಿ ಸುರ ವಿಜ್ಞಾನದಾಯಕ ।
ಮೋದಚಿನ್ಮಯಗಾತ್ರ ಲೋಕಪವಿತ್ರ ಸುಚರಿತ್ರ ॥
ಛೇದ ಭೇದ ವಿಷಾದಕುಟಿಲಾಂ ।
ತಾದಿ ಮಧ್ಯ ವಿದೂರ ಆದಾ ।
ನಾದಿಕಾರಣ ಬಾದರಾಯಣ ಪಾಹಿ ಸತ್ರಾಣ ॥೭॥

**ಅವತರಣಿಕೆ :**

ಈ ಪದ್ಯದಿಂದ ಪರಮಾತ್ಮನ ಅವತಾರರೂಪರಾದ, ಹಾಗೂ ಭಾರತಾದಿ ಗ್ರಂಥಕರ್ತರಾದ. ಜ್ಞಾನಪ್ರದರೂಪಾತ್ಮಕರಾದ ಶ್ರೀ ವೇದವ್ಯಾಸದೇವರನ್ನು ಗುರುಭಾವನೆಯಿಂದ ಪ್ರಾರ್ಥಿಸುತ್ತಾರೆ.

**ಪ್ರತಿಪದಾರ್ಥ :**

**ವೇದಪೀಠ** = ವೇದಗಳನ್ನೇ ಆಸನವನ್ನಾಗಿ ಉಳ್ಳ ಶ್ರೀರಮಾದೇವಿಯರು (ಅಥವಾ ವೇದ = ಉಪಾಯ. ಉಪಾಯಾವೆಂದರೆ ಯೋಗ. ಇಂತಹ ಯೋಗವೇ ಆಸನವನ್ನಾಗಿ (ಪೀಠ) ಉಳ್ಳ. ಅಂದರೆ, ಯೋಗಾಸನದಲ್ಲಿ ಆರೂಢರಾದ, **ವಿರಿಂಚಿ** = ಬ್ರಹ್ಮದೇವರು **ಭವ** = ರುದ್ರದೇವರು **ಶಕ್ರಾದಿ** = ಇಂದ್ರದೇವರೇ

ಮೊದಲಾದ **ಸುರ** = ದೇವತೆಗಳಿಗೆ **ವಿಜ್ಞಾನದಾಯಕ** = ವಿಶೇಷವಾದ ಜ್ಞಾನವನ್ನು **ಕೊಡತಕ್ಕ** **ಮೋದ** = ಆನಂದ **ಚಿತ್** = ಜ್ಞಾನ ಇವೆರಡರಿಂದ **ಮಯ** = ಪೂರ್ಣವಾದ **ಗಾತ್ರ** = ಶರೀರವುಳ್ಳ (ಜ್ಞಾನಾನಂದಮಯಶರೀರವುಳ್ಳ) **ಲೋಕಪವಿತ್ರ** = ಜಗತ್ಪಾವನರೂಪವಾದ (ಅಥವಾ ತ್ರಿವಿಧಜೀವರುಗಳಲ್ಲಿ ಮುಕ್ತಿಯೋಗ್ಯಜೀವರಿಗೆ ಲಿಂಗಭಂಗರೂಪವಾದ ಪಾವಿತ್ರ್ಯವನ್ನು ಮಾಡತಕ್ಕ) **ಸುಚರಿತ್ರ** = ಮಂಗಳಕರವಾದ ಚರಿತ್ರೆಯುಳ್ಳ (ಅಥವಾ ಉತ್ಕೃಷ್ಟ ಮಹಿಮೆಯುಳ್ಳ) **ಛೇದ** = ಆಯುಧ ವಿಶೇಶಗಳಿಂದ ಶರೀರವು ಕತ್ತರಿಸಲ್ಪಡುವುದು **ವಿಷಾದ** = ವ್ಯಸನಪಡುವಿಕೆ **ಕುಟಿಲ** = ವೈಷಮ್ಯಾದಿ ಕಪಟಗುಣಗಳು (ಅಥವಾ ರೋಗಾದಿಗಳಿಂದ ದೇಹವು ವಕ್ರವಾಗುವುದು) **ಅಂತ** = ಅಂತ್ಯವು (ಕೊನೆಯು) **ಆದಿ** = ಪ್ರಾರಂಭವು **ಮಧ್ಯ** = ಮಧ್ಯಸ್ಥದಶೆ **ವಿದೂರ** = ಮುಂತಾದವುಗಳಿಂದ ದೂರನಾದ (ದೋಷವಿದೂರನೂ ಮತ್ತು ಆದಿಮಧ್ಯಾಂತರಹಿತನೂ ಆದ) **ಆದಾನಾದಿ** = ಬ್ರಹ್ಮಾದಿಗಳಿಂದ ಪೂಜೆಗಳನ್ನು ಸ್ವೀಕರಿಸುವಿಕೆ ಮೊದಲಾದವುಗಳಿಗೆ **ಕಾರಣ** = ಕಾರಣಭೂತನಾದ **ಬಾದರಾಯಣ** = ಬದರಿಕಾಶ್ರಮನಿವಾಸಿಗಳಾದ ಶ್ರೀ ವೇದವ್ಯಾಸದೇವರೇ **ಸತ್ರಾಣ** = ಸಮೀಚೀನವಾದ ನಿಮ್ಮ ಭಜನೆಗೆ ದಾರ್ಢ್ಯರೂಪವಾದ (ಸತ್) ಶಕ್ತಿಯನ್ನು ಕೊಟ್ಟು (ತ್ರಾಣ) **ಪಾಹಿ** = ಸಂರಕ್ಷಿಸಿರಿ ಎಂದು ಪ್ರಾರ್ಥಿಸುತ್ತಾರೆ.

**ತಾತ್ಪರ್ಯ :**

ಶ್ರೀಮನ್ನಾರಾಯಣನೇ ವೇದವ್ಯಾಸರೂಪದಿಂದ ಅವತರಿಸಿ, ವೇದಗಳನ್ನು ವಿಭಾಗಿಸಿ, ಶ್ರೀಮನ್ಮಹಾಭಾರತ ಗ್ರಂಥವನ್ನು ನಿರ್ಮಿಸಿ, ಭಾಗವತಾದಿ ಅಷ್ಟಾದಶಪುರಾಣಗಳನ್ನು ರಚಿಸಿ, ಜ್ಞಾನೋಪದೇಶ ಮಾಡಿದನು. ಯೋಗಾಸನಾರೂಢನಾದ ಶ್ರೀ ಬಾದರಾಯಣರು ಬ್ರಹ್ಮ, ರುದ್ರ, ಇಂದ್ರಾದಿ ಸಮಸ್ತ ದೇವತೆಗಳಿಗೆ ಜ್ಞಾನಪ್ರದಾಯಕರು. ಜಗತ್ಪಾವನರು. ಪರಮಮಂಗಳ ಮಹಿಮರು, ಅವರ ಶರೀರವಾದರೋ ಅಪ್ರಾಕೃತವಾದದ್ದು. ಜ್ಞಾನಾನಂದಮಯವಾದದ್ದು. ಪ್ರಾಕೃತದೇಹಗಳಂತೆ ಛೇದ್ಯವಲ್ಲ. ನಿತ್ಯಾನಂದರು. ಪ್ರಾಕೃತ ಸಂಬಂಧವಾದ ದುಃಖಾದಿಗಳು ಮತ್ತು ಶರೀರದಲ್ಲಿ ವಯೋಧರ್ಮದಿಂದ ಉಂಟಾಗುವ ವಿಕಾರಾದಿಗಳಾವುವೂ ಅವರಿಗಿಲ್ಲ. ಶಶ್ವದೇಕಪ್ರಕಾರವಾಗಿ

ಅಪ್ರಾಕೃತವಾದ ಆನಂದ, ವೀರ್ಯಾದಿ ಕಲ್ಯಾಣಗುಣಗಳಿಂದ ಪೂರ್ಣರು. ಆದಿಮಧ್ಯಾಂತರಹಿತರು. ಸೃಷ್ಟ್ಯಾದಿ ವ್ಯಾಪಾರಗಳಿಗೆ ಮೂಲಕಾರಣರು. ಏತಾದೃಶಮಹಿಮೋಪೇತರಾದ ಶ್ರೀ ಬಾದರಾಯಣದೇವರನ್ನು ಭಕ್ತಿಯಿಂದ ವಂದಿಸಿ. ಭಗವದ್ಗುಣಗಳನ್ನು ಕೊಂಡಾಡುವುದಕ್ಕೆ ತಕ್ಕ ಸಾಮರ್ಥ್ಯವನ್ನು ಕೊಡಿರೆಂದು ದಾಸರಾಯರು ಪ್ರಾರ್ಥಿಸುತ್ತಾರೆ.

## ವ್ಯಾಖ್ಯಾನಗಳು

### (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

**"ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ|| ದೇವೀಂ ಸರಸ್ವತೀಂ ವ್ಯಾಸಂ" !** – ಎಂಬ ವಚನದಂತೆ, ದಾಸರಾಯರು ಭಾರತೀ ದೇವಿಯರವರೆವಿಗೂ ಕ್ರಮವಾಗಿ ತಾರತಮ್ಯಾತ್ವೇನ ನಮಸ್ಕರಿಸಿ, ಈ ಪದ್ಯದಿಂದ ಪರಮಾತ್ಮನ ಅವತಾರರೂಪರಾದ ಶ್ರೀ ವೇದವ್ಯಾಸರನ್ನು (ಶ್ರೀ ಬಾದ ರಾಯಣರನ್ನು) ಗುರುಭಾವನಾಪೂರ್ವಕ ಪ್ರಾರ್ಥಿಸುತ್ತಾರೆ. ಯದ್ಯಪಿ ನಾರಾಯಣದೇವರೇ ವೇದವ್ಯಾಸದೇವರಾದರೂ, ಗ್ರಂಥಪ್ರತಿಪಾದ್ಯನೂ ಸರ್ವೋತ್ತಮನೂ ಆದ ಶ್ರೀಮನ್ನಾರಾಯಣದೇವರಿಗೆ ಮೊದಲು ನಮಸ್ಕಾರ ಮಾಡಿದರು. ಅಧಿಕಾರಭೇದದಿಂದ, ಅಂದರೆ, ಗುರುತ್ವೇನ ಶ್ರೀವೇದವ್ಯಾಸ ದೇವರಿಗೆ ನಮಸ್ಕಾರವೆಂದು ತಿಳಿಯಬೇಕು. ಇದಲ್ಲದೆ **"ವ್ಯಾಸೋ ಕಶ್ಚನ ಋಷಿಃ"**– ಎಂದು ಕೆಲವು ತಾಮಸಪುರಾಣಗಳ ಆಧಾರದಿಂದ ತಮೋ ಯೋಗ್ಯರು ವೇದವ್ಯಾಸರನ್ನು "ಒಬ್ಬ ಸಾಮಾನ್ಯ ಋಷಿ" ಎಂದು ಭಾವಿಸು ವರು. ಅವರು ಹಾಗೆಯೇ ತಿಳಿದುಕೊಂಡು ತಮಸ್ಸಾಧನ ಮಾಡಿಕೊಳ್ಳಲೆಂದು ಕಡೆಗೆ ವೇದವ್ಯಾಸರಿಗೆ ನಮಸ್ಕರಿಸಿರುವರು, ಎಂದು **ಗರುಡಪುರಾಣದಲ್ಲಿ** ಸೂತಪುರಾಣಿಕರು ಶೌನಕಾದಿಗಳಿಗೆ **ಹೇಳಿರುವರು. "ತತ್ರಾಪಿಕಾರಣಂ ವಕ್ಷ್ಯೇಸಾದರೇಣ ಮುನೀಶ್ವರಾಃ । ವ್ಯಾಸಸ್ತು ಕಶ್ಚನ ಋಷಿಃ ಪುರಾಣೇ ತಾಮಸೇಸ್ಮೃತಃ || ಇತಿ ಜ್ಞಾನಾವಲಂಬೇನ ದೈತ್ಯಾ ದೈತ್ಯಾನುಗಾಸ್ಸದಾ| ಪ್ರವಿಶೇಯುರ್ಹ್ಯಂಧತಮಇತಿಹ್ಯಂತೆ ನಮಸ್ಕೃತಂ । ಇದಂ ಚ ಪರಮಂ**

**ಗೋಪ್ಯಂ ಹೃದಿಧಾರ್ಯಂ ನ ಸಂಶಯಃ ॥"**– ಎಂದು **ಸೂತರ ವಾಕ್ಯ.** **"ವಿಧಿಶಕ್ರಪೂರ್ವಗೀರ್ವಾಣ ವಿಜ್ಞಾನದ ಮಾನತೋಸ್ಮಿ"**— ಎಂಬ **ತಂತ್ರಸಾರವಾಕ್ಯಾನುಸಾರವಾಗಿ** "ವಿರಿಂಚಿಭವಶಕ್ರಾದಿಸುರವಿಜ್ಞಾನದಾಯಿಃ" ಮೊದಲಾದ ವಿಶೇಷಣ ಪ್ರಯೋಗದಿಂದ "ವೇದವ್ಯಾಸರು ಒಬ್ಬ ಸಾಮಾನ್ಯ **ಋಷಿ"** ಎಂಬ ಮತವು ನಿರಾಕರಿಸಲ್ಪಟ್ಟಿತು.

ಬೋರೆ ಮರಗಳಿಂದ ಕೂಡಿದ ವನಕ್ಕೆ "ಬಾದರ" ಎಂದು ಹೆಸರು. ಅಂತಹ ವನದಲ್ಲಿ ಆವಾಸರಾಗಿ, ಬೋರೆಮರದ ಅಡಿ ಕುಳಿತು, ಯೋಗಾಸನಾ ರೂಢರಾಗಿರುವುದರಿಂದ ಶ್ರೀವೇದವ್ಯಾಸದೇವರಿಗೆ **"ಬಾದರಾಯಣ"** ಎಂದು ಹೆಸರು.

### (೨) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ಅಪರೋಕ್ಷಜ್ಞಾನಿಗಳಾದ ಶ್ರೀಜಗನ್ನಾಥದಾಸವರೇಣ್ಯರು, ಪ್ರಾರಂಭದಲ್ಲಿ ಶ್ರೀಮನ್ನಾರಾಯಣನನ್ನು ಮೂಲರೂಪವಿವಕ್ಷಾದಿಂದ, ಮೂಲರೂಪಗಳಾದ ಅಂಶಿರೂಪಗಳನ್ನು ಪ್ರಾರ್ಥಿಸಿ, ಈಗ ಈ ಪದ್ಯದಿಂದ ಅವತಾರರೂಪಗಳಾದ ಅಂಶರೂಪಗಳ ವಿವಕ್ಷಾ ಪ್ರಾರ್ಥನೆ ಮಾಡಿರುವುದರಿಂದ ಪುನರುಕ್ತಿದೋಷವಿಲ್ಲ. ಶ್ರೀವೇದವ್ಯಾಸರ ಪ್ರಾರ್ಥನೆಗೆ ಕಾರಣರೂಪರಾದ ಪ್ರಮಾಣವನ್ನು ಕೊಡುತ್ತಾರೆ. **"ವಿಷ್ಣೋರನಂತರಂ ವ್ಯಾಸನಮನಂ ಮುಖ್ಯಮೇವ ಹಿ ಹರಿರೇವ ಯತೋ ವ್ಯಾಸೋ ವಾಚ್ಯವಕ್ತೃಸ್ವರೂಪಕಃ । ವ್ಯತ್ಯಾಸೇನೈವ ನಮ್ಯತ್ವಂ ಮಯೋಕ್ತಂ ಭವತೊ ಹರೇಃ । ತತ್ರಾಪಿ ಕಾರಣಂ ವಕ್ಷ್ಯೇ ಸಾದರೇಣ ಮುನೀಶ್ವರಾಃ। ವ್ಯಾಸಸ್ತು ಕಶ್ಚನಋಷಿಃ ಪುರಾಣೇ ತಾಮಸೇ ಸ್ಮೃತಃ । ಇತಿ ಜ್ಞಾನಾವಲಂಬೇನ ದೈತ್ಯಾ ದೈತ್ಯಾನುಗಾಃ ಸದಾ ॥** –ಎಂದು **ಗರುಡಪುರಾಣದ ಬ್ರಹ್ಮಕಾಂಡದಲ್ಲಿ ಸೂತರ** ವಚನವಿದೆ. ವೇದಗಳು, ಪುರಾಣಗಳು ಇವುಗಳಲ್ಲಿರುವ ತತ್ತ್ವಾರ್ಥಗಳನ್ನು ಬಾದರಾಯಣದೇವರು ನಿರ್ಣಯಮಾಡಿದ್ದರಿಂದಲೂ ವೇದವ್ಯಾಸದೇವರನ್ನು ಪ್ರಾರ್ಥಿಸುತ್ತಾರೆ.

ಶ್ರೀ ಸಂಕರ್ಷಣಒಡೆಯರು ತಮ್ಮ ವ್ಯಾಖ್ಯಾನದಲ್ಲಿ "ವೇದಪೀಠ" ಎಂಬ ಪದಕ್ಕೆ "ಶ್ರೀ ರಮಾದೇವಿಯರು" ಎಂದು ಅರ್ಥಮಾಡಿರುತ್ತಾರೆ.

ಶ್ರೀ ರಮಾದೇವಿಯರು ವೇದಗಳಿಗೆ ಮುಖ್ಯಾಭಿಮಾನಿಗಳು. ಅಪೌರುಷೇಯ ವಾದ ವೇದವಚನಗಳಿಂದ ವೇದಪುರುಷನಾದ ಪರಮಾತ್ಮನನ್ನು ನಿರಂತರ ದಲ್ಲಿಯೂ ಸ್ತೋತ್ರ ಮಾಡುತ್ತಿರುವರು. ವೇದಗಳನ್ನೇ ಆಸನವಾಗಿ ಉಳ್ಳವ ರಾದ್ದರಿಂದ "ವೇದಪೀಠ" ಎಂದಿದ್ದಾರೆ. ಭಾರತ ಮತ್ತು ವೇದಸಮೂಹ ಗಳನ್ನು (ನಿಗಮತತಿಗಳ) ಅತಿಕ್ರಮಿಸಿದ ಪರಮಾತ್ಮನ ಗುಣವಿಶೇಷಗಳನ್ನು ಉಪಾಸನಾಮಾಡುತ್ತಾರಾದ್ದರಿಂದ ವೇದಗಳು ಶ್ರೀರಮಾದೇವಿಯರಿಗೆ ಪೀಠ ರೂಪವಾಯಿತು. ಭಗವದ್ಗುಣಗಳ ಉಪಾಸನೆಗೆ ಶ್ರೀ ಲಕ್ಷ್ಮೀದೇವಿಯ ವೇದಗಳ ಅಗತ್ಯವಿಲ್ಲ ಋಜುಗಳಿಗೇ ವೇದವು ಸಂವಾದರೂಪವಾಗಿದೆ. ಇದರ ಮೇಲೆ ರಮಾದೇವಿಯರಿಗೆ ಹೇಳತಕ್ಕದ್ದೇನಿದೆ ?

ರಮಾದೇವಿಯರಿಗೆ ವಿಶೇಷಜ್ಞಾನವಾವುದೆಂದರೆ, ಪೂರ್ವೋಕ್ತಪ್ರಕಾರ ನೂತನವಾಗಿ ಕಾಣಿಸುವುದು. ತದನ್ಯರಾದ ಬ್ರಹ್ಮಾದಿಗಳಿಗೆ ಸಾಧನಪರಿ ಪಾಕಾನುಸಾರ ವಿಶೇಷಜ್ಞಾನದಾಯಕರು. ಅಸದೃಶವಾದ ಜ್ಞಾನಾನಂದ ಶರೀರವುಳ್ಳವರು. (ಮೋದಚಿನ್ಮಯಗಾತ್ರ) "ಲೋಕಪವಿತ್ರ" ಎಂಬ ಪದ ದಿಂದ- ತ್ರಿವಿಧಜೀವರು ಲಿಂಗಭಂಗದ್ವಾರಾ ಸ್ವರೂಪವ್ಯಕ್ತಿ ಇಲ್ಲದೇ ಅಪವಿತ್ರ ರಾಗಿದ್ದಾರೆ. ಇಂತಹವರಲ್ಲಿ ಮುಕ್ತಿಯೋಗ್ಯಜೀವರಿಗೆ ಲಿಂಗಭಂಗರೂಪವಾದ ಪಾವಿತ್ರ್ಯವನ್ನು ಮಾಡತಕ್ಕವರು. ಮಂಗಳರೂಪವಾದ ಚರಿತ್ರೆಯುಳ್ಳವರು (ಸುಚರಿತ್ರ) ಛೇದ, ಭೇದ, ವ್ಯಸನ, ವೈಷಮ್ಯಾದಿಕಾಪಟ್ಯಗುಣ (ಛೇದ ಭೇದ ವಿಷಾದ ಕುಟಿಲ) ಗಳಿಂದ ರಹಿತರು. ಆದಿಮಧ್ಯಾಂತರಹಿತರು. ಆದಿ ರಹಿತವಾದ ಸೃಷ್ಟ್ಯಾದಿವ್ಯಾಪಾರಗಳಿಗೆ ನಿಮಿತ್ತಕಾರಣರಾದವರು (ಅನಾದಿ ಕಾರಣ) **"ನೇದವಾದರತಾನಾಂ ವಾದಿನಾನುಶ್ರಯತ್ವಾದ್ಬಾದರಾಯಣಃ। ಬದರಾಣಾಂ ಸಂಬಂಧಿ ಯತ್ ಬಾದರಂ ತತ್ ಅಯನಂ ಸ್ಥಾನಂ ಯಸ್ಯ ಸಃ ತಥೋಕ್ತ ಇತಿ ವಾ ಬಾದರಾಯಣಃ ॥"** ಎಂಬ ವಚನಾನುಸಾರ ಬದರೀವೃಕ್ಷ (ಬೋರೆಗಿಡ) ಸಂಬಂಧದಿಂದ ಬಾದರಾಯಣಾಖ್ಯರಾದ ಶ್ರೀ ವೇದವ್ಯಾಸದೇವರು ಸಮೀಚೀನವಾದ ನಿಮ್ಮ ಭಜನೆಗೆ ದಾರ್ಢ್ಯರೂಪವಾದ ಶಕ್ತಿಯನ್ನು ಕೊಟ್ಟು (ಸತ್ರಾಣ) ಸಂರಕ್ಷಿಸಿರಿ (ಪಾಹಿ) ಎಂದು ಪ್ರಾರ್ಥಿಸು ತ್ತಾರೆ.

## (೩) ತಾಮ್ರಪರ್ಣೀಯ ವ್ಯಾಖ್ಯಾನ :

"ವೇದಪೀಠ" ಎಂಬ ಪದಕ್ಕೆ ವೇದವೆಂದರೆ "ಉಪಾಯ" ಎಂದರ್ಥ. "ಸನ್ನಹನ-ಉಪಾಯ-ಧ್ಯಾನ-ಸಂಗತಿ-ಯುಕ್ತಿ" ಎಂಬ ಕೋಶದ ಪ್ರಮಾಣವು ಈ ವಿಷಯದಲ್ಲಿದೆ. ಉಪಾಯವೆಂದರೆ "ಯೋಗ" ಯೋಗವನ್ನೇ ಪೀಠವನ್ನಾಗಿ ಉಳ್ಳವನು (ವೇದಪೀಠ) ಅಂದರೆ, ಯೋಗಾಸನದಲ್ಲಿ ಆರೂಢರಾದ ಶ್ರೀವೇದವ್ಯಾಸರೆಂದು ತಾತ್ಪರ್ಯ. ಬ್ರಹ್ಮ-ರುದ್ರ-ಇಂದ್ರಾದಿದೇವತೆಗಳಿಗೆ ವಿಶೇಷಜ್ಞಾನವನ್ನು ಕೊಡುವವರು (ವಿರಿಂಚಿ ಭವ ಶಕ್ರಾದಿಸುರ ವಿಜ್ಞಾನದಾಯಕ) ಜ್ಞಾನ ಮತ್ತು ಆನಂದಗಳೇ ಸ್ವರೂಪಭೂತವಾದ ದೇಹವುಳ್ಳವರು. (ಮೋದಚಿನ್ಮಯಗಾತ್ರ). "ಲೋಕಪವಿತ್ರ" ಎಂಬ ಪದಕ್ಕೆ ಎರಡು ಅರ್ಥಗಳನ್ನು ಮಾಡಬಹುದು. (೧) ಜಗತ್ಪಾವನರು (೨) ಲೋಕ =ಜಗತನ್ನು, ಪ=ಪಾಲಿಸುವ ಬ್ರಹ್ಮಾದಿಗಳನ್ನು, ವಿ=ವಿಶೇಷವಾಗಿ, ತ್ರ=ಸಂರಕ್ಷಿಸುವವರು. "ಸುಚರಿತ್ರ" ಎಂಬ ಪದಕ್ಕೆ ನಾಲ್ಕು ರೀತಿಗಳಲ್ಲಿ ವ್ಯಾಖ್ಯಾನ ಮಾಡಬಹುದು (೧) ಶುಭಕರವಾದ ವ್ಯಾಪಾರಗಳುಳ್ಳವರು. (೨) ಸು=ಸಮೀಚೀನವಾದ, ಚರಂ=ಜ್ಞಾನ. ಇ=ಭಗವದಿಚ್ಛೆ ಇವುಗಳುಳ್ಳವರನ್ನು (ಸುಚರಿ) ತ್ರ=ರಕ್ಷಿಸುವವರು (೩) ಸ=ದೇವ, ಉ=ಋಷಿ (ಸು), ಚ=ಪಿತೃ, ರ=ಗಂಧರ್ವ, ಇ=ಕ್ಷಿತಿಪರು (ರಿ), ಇವರುಗಳನ್ನು ತ್ರ=ರಕ್ಷಿಸುವವರು. (೪) ಸ=ವರುಣ, ಉ=ಚಂದ್ರ (ಸು), ಚ=ಚಂದ್ರ, ರ=ವಾಯು, ಇ=ಕಾಮ (ರಿ), ಇವರುಗಳನ್ನು ತ್ರ=ಪರಿಪಾಲಿಸುವರು. ಅವರ ದೇಹ ಅಪ್ರಾಕೃತವಾದದ್ದು. ಖಡ್ಗ ಮುಂತಾದ ಅಸ್ತ್ರವಿಶೇಷಗಳಿಂದ ಛೇಧ್ಯವಾಗಲೀ ಭೇದ್ಯವಾಗಲೀ ಸಾಧ್ಯವಿಲ್ಲ. ದುಃಖ (ವಿಷಾದ), ವಕ್ರತಾ (ಕುಟಿಲ), ನಾಶ (ಅಂತ), ಜನನ (ಆದಿ), ಸಂರಕ್ಷಣ (ಮಧ್ಯ) ಇವುಗಳಿಂದ ಯಾವಾಗಲೂ ಅತ್ಯಂತರಹಿತರು. **"ಅಚ್ಛೇದ್ಯೋಯಂ"**—ಮುಂತಾದ **ಸ್ಕಂದಪುರಾಣ**ದ ವಚನಗಳು ಇದಕ್ಕೆ ಆಧಾರವಾಗಿವೆ.

"ಆದಾನಾದಿಕಾರಣ" ಎಂಬ ಶಬ್ದಕ್ಕೆ ಆ=ಉತ್ಪತ್ತಿ, ದಾ=ಸ್ಥಿತಿ, ನ=ಸಂಹಾರ-ಈ ವ್ಯಾಪಾರವಿಶೇಷಗಳಿಗೆ ಆದಿಕಾರಣ=ಮೂಲಕಾರಣರು.

"ಸೃಷ್ಟಿಸ್ಥಿತಿಶ್ಚ"—ಎಂಬ ಸ್ಕಂದಪುರಾಣದ ವಾಕ್ಯಗಳು ಪ್ರಮಾಣ. "ಅಹಂ ಸರ್ವಸ್ಯ" ಇತ್ಯಾದಿ ಪ್ರಮಾಣವಾಕ್ಯಗಳು ಪರಮಾತ್ಮನಿಗೆ ಸ್ವತಃ ಸೃಷ್ಟಿ ಸ್ಥಿತಿ ಮತ್ತು ಲಯಗಳಿಲ್ಲ, ಆದರೆ ಜಗತ್ತಿನ ಸೃಷ್ಟಿಸ್ಥಿತಿಸಂಹಾರಕರ್ತಾ ಎಂಬ ಭಾವಾರ್ಥದ್ಯೋತಕವಾಗಿವೆ. ಬಾದರಿ=ಬದರೀವೃಕ್ಷ (ಬೋರೆಯ ಗಿಡ) ಇದನ್ನು ಆಶ್ರಯಿಸಿರುವುದರಿಂದ "ಬಾದರಾಯಣ ಎಂದರ್ಥ. ಸಜ್ಜನರನ್ನು ಸಂರಕ್ಷಿಸುವರು (ಸತ್ರಾಣ). ಅಂತಹ ಶ್ರೀ ವೇದವ್ಯಾಸರನ್ನು ನಮ್ಮೆಲ್ಲರನ್ನು ಸಲಹಲಿ (ಪಾಹಿ) ಎಂದು ದಾಸರಾಯರು ಪ್ರಾರ್ಥಿಸುತ್ತಾರೆ

## (೪) "ಭಾವದರ್ಪಣಟೀಕಾ" ವ್ಯಾಖ್ಯಾನ :

ಈ ಪದ್ಯದಿಂದ, ಸಮಸ್ತ ವೇದಾರ್ಥಸಾರವನ್ನು ತೆಗೆದು, ಶ್ರೀಮದ್ಬ್ರಹ್ಮ ಸೂತ್ರ, ಭಾಗವತ, ಭಾರತಾದಿ ಗ್ರಂಥಗಳನ್ನು ನಿರ್ಮಿಸಿದ, ಶ್ರೀಮನ್ನಾರಾಯಣನ ಅವತಾರರಾದ ಶ್ರೀ ವೇದವ್ಯಾಸದೇವರನ್ನು ಗುಣಸ್ತವನಪೂರ್ವಕ ಸಂರಕ್ಷಿಸಿರಿ ಎಂದು ಪ್ರಾರ್ಥಿಸುತ್ತಾರೆ. **"ನತ್ವಾ ವಿಷ್ಣುಂ ಶ್ರಿಯಂ ವಾಯುಂ ಭಾರತೀಂ ಶೇಷಸಂಜ್ಞಕಮ್ || ದ್ವೈಪಾಯನಂ ಗುರುಂ ಕೃಷ್ಣಂ ಪ್ರವಕ್ಷ್ಯಾಮಿ ಯಥಾಮತಿ"** —ಎಂದ ಸೂತಪುರಾಣಿಕರು ವಂದನಮಾಡಿದ್ದಾರೆ. ಆಗ ಶೌನಕಾದಿಗಳು ಕೇಳಿದ ಪ್ರಶ್ನೆಗೆ ಉತ್ತರಕೊಡುತ್ತಾ, ಶ್ರೀಸೂತರು **"ವಿಷ್ಣೋರನಂತರಂ ವ್ಯಾಸನಮನಂ ಮುಖ್ಯಮೇವಹಿ || ಹರಿರೇವ ಯತೋ ವ್ಯಾಸಃ ವಾಚ್ಯವಕ್ತೃಸ್ವರೂಪಕಃ" ವ್ಯತ್ಯಾಸೇನೈವ ನಮ್ಯತ್ವಂ ಮಯೋಕ್ತಂ ಭವತಾಂ ಹರೇಃ"** ಎಂದು ವ್ಯತ್ಯಾಸದಿಂದ (ಅಧಿಕಾರಭೇದದಿಂದ) ನಮಸ್ಕಾರಮಾಡಿದ ಕಾರಣವನ್ನು ಹೇಳುತ್ತಾರೆ. **ತತ್ರಾಪಿ ಕಾರಣಂ ವಕ್ಷ್ಯೇ ಸಾದರೇಣ ಮುನೀಶ್ವರಾಃ || ವ್ಯಾಸಸ್ತು ಕಶ್ಚನಋಷಿಃ ಪುರಾಣೇ ತಾಮಸೇಸ್ಮೃತಃ||ಇತಿಜ್ಞಾನಾವಲಂಬನೇನ ದೈತ್ಯಾ ದೈತ್ಯಾನುಗಾಸ್ಸದಾ|| ಪ್ರವಿಶೇಯುರ್ಹಂಧತಮ ಇತಿ ಹ್ಯಂತೇ ನಮಸ್ಕೃತಂ| ಇದಂ ಚ ಪರಮಂ ಗೋಪ್ಯಂ ಹೃದಿ ಧಾರ್ಯಂ ನ ಸಂಶಯಃ ||** ಎಂದು **ಗರುಡಪುರಾಣದ** ಬ್ರಹ್ಮಕಾಂಡದಲ್ಲಿ ಹೇಳಿರುವುದರಿಂದ ಈ ಪ್ರಮಾಣಗಳ ಭಾವನೆಗಳನ್ನು ಮನಸ್ಸಿನಲ್ಲಿಟ್ಟು ಶ್ರೀ ಬಾದರಾಯಣದೇವರು "ಯಾವನೋ ಒಬ್ಬ ಋಷಿ"

ಎಂದು ಮಿಥ್ಯಾಜ್ಞಾನಿಗು ತಿಳಿದು, ಆಚರಿಸಿ ದುರ್ಗತಿಯನ್ನು ಹೊಂದಲಿ ಎಂದು ಶ್ರೀ ಭಾರತೀದೇವಿಯರ ವಂದನಾನಂತರ ಸ್ತೋತ್ರಮಾಡಿರುವರು. ವೇದಗಳಿಗೆ ಪೀಠಸ್ಥಾನಾಪನ್ನರಾದವರು (ವೇದಪೀಠ). ಬ್ರಹ್ಮಾದಿದೇವತೆಗಳಿಗ ವಿಶೇಷಜ್ಞಾನಪ್ರದರು (ವಿರಿಂಚಿಭವಶಕ್ರಾದಿಸುರವಿಜ್ಞಾನದಾಯಕ) **"ವಿಧಿ ಶರ್ವಪೂರ್ವಗೀರ್ವಾಣ ವಿಜ್ಞಾನದವಮಾನತೋಽಸ್ಮಿ"**-ಎಂದುತ **ಂತ್ರಸಾರದ** ಪ್ರಮಾಣ. ಪ್ರಚುರುಗಳಾದ ಆನಂದ ಜ್ಞಾನಗಳೇ ದೇಹವನ್ನಾಗಿ ಉಳ್ಳವರು (ಮೋದಚಿನ್ಮಯಗಾತ್ರ) ಇಲ್ಲಿ "ಮಯಟ್" ಎಂಬ ಪ್ರತ್ಯಯಕ್ಕೆ "ಪ್ರಾಚುರ್ಯ" ಎಂಬ ಅರ್ಥವನ್ನು ತಿಳಿಯಬೇಕು. ಜಗತ್ಪವಿತ್ರರು ಹಾಗೂ ಸಜ್ಜನರನ್ನು ಪವಿತ್ರಮಾಡತಕ್ಕವರು (ಲೋಕಪವಿತ್ರ) ಅತ್ಯಂತ ಒಳ್ಳೆಯ ಚರ್ಯವುಳ್ಳವರು (ಸುಚರಿತ್ರ) ಶಸ್ತ್ರಗಳಿಂದ ಛೇದಿಸೋಣ, ಆಯುಧವಿಶೇಷಗಳಿಂದ ಭೇದನ (ಸೀಳುವಿಕೆ) ಶೋಕ (ವಿಷಾದ), ವಕ್ರಗತಿ (ಕುಟಿಲ), ನಾಶ (ಅಂತ), ಜನನ (ಆದಿ) ಮತ್ತು ಬಾಲ್ಯಾವ್ಯಸ್ಥೆ (ಮಧ್ಯ) ಇವುಗಳಿಂದ ರಹಿತರು (ವಿದೂರ) ಬ್ರಹ್ಮಾದಿಗಳ (ಆದಾನ) ಪೂಜಾಸ್ವೀಕಾರವೇ ಮುಂತಾದವುಗಳಿಗೆ (ಆದಿ) ಕರ್ತಅು (ಕಾರಣ) ವಿಬುಧರನ್ನು ಪಾಲಿಸುವವರು (ಸತ್ರಾಣ) ಏತಾದೃಶಮಹಿಮಾಸಂಪನ್ನರಾದ ಶ್ರೀಬಾದರಾಯಣರನ್ನು ನಮ್ಮೆಲ್ಲರನ್ನು ಸಂರಕ್ಷಿಸಲೆಂದು ಪ್ರಾರ್ಥಿಸುತ್ತಾರೆ.

## (೬) "ಗುರುಹೃದಯ ಪ್ರಕಾಶಿಕಾ" ವ್ಯಾಖ್ಯಾನ :

**"ದೇವೀಂ ಸರಸ್ವತೀಂ ವ್ಯಾಸಂ"** -ಎಂಬಂತೆ ಶಾಸ್ತ್ರನಿರ್ಮಾಣಮಾಡಿದ್ದರಿಂದ ಪುನಃ ಗುರುತ್ವೇನ ಶ್ರೀ ವೇದವ್ಯಾಸರನ್ನು ಸ್ತುತಿಸುತ್ತಾರೆ. ವೇದಗಳಿಗೆ ಪೀಠದಂತೆ ಆಧಾರರೂಪನೇ, ಬ್ರಹ್ಮರುದ್ರಾದಿಗಳಿಗೆ ವಿಜ್ಞಾನವೆಂಬ ಪರಮುಭಕ್ತಿಯೋಗವನ್ನು ಕೊಡುವವನೆ, ಆನಂದಜ್ಞಾನರೂಪನೆ, ಲೋಕಪಾವನಕರಸುಚರಿತ್ರನೆ, ಅವಯುವಖಂಡನ (ಭೇದಭೇದ), ಶರೀರತ್ಯಾಗ, ವ್ಯಸನ, ವಿಕಾರ, ಆದಿಮಧ್ಯಾಂತಗಳೆಂಬ ಜನನ, ಸ್ವಲ್ಪಕಾಲ ಸ್ಥಿತಿ (ಅಶಾಶ್ವತ ಬದುಕು), ಮರಣವೆಂಬ ದೇಹಾಂತರಪ್ರಾಪ್ತಿಯೇ ಮೊದಲಾದ ಸಮಸ್ತ ದೋಷವರ್ಜಿತನೇ. **"ಕಾಮೋದಾತಾ ಕಾಮಃ ಪ್ರತಿಗೃಹೀತಾ"**-

ಎಂಬ **ಶ್ರುತಿವಾಖ್ಯಾನುಸಾರ** ತೆಗೆದುಕೊಳ್ಳುವುದು, ಕೊಡುವುದು ಮೊದಲಾದ ಸರ್ವಕಾರ್ಯಪ್ರವರ್ತನೆಗೆ ಕಾರಣನಾದ, **"ನಾಕೇರತಾನಾಂ ಅಯನಃ"** —ಎಂದರೆ, ಸಚ್ಛಾಸ್ತ್ರಾದಿಗಳಲ್ಲಿ ರತರಾದವರಿಗೆ ಆಶ್ರಯನಾದ, ಬಾದರಾಯಣನೆಂದು ಪ್ರಸಿದ್ಧನಾದ, ವ್ಯಾಸರೂಪಿ ಶ್ರೀಹರಿಯೇ, ಸಜ್ಜನ ರಕ್ಷಕನೇ (ಸತ್ರಾಣ) ನಮ್ಮನ್ನು ಉದ್ಧರಿಸು.

## (೬) ವಾದಿರಾಜಾರ್ಯರ ವ್ಯಾಖ್ಯಾನ :

**"ದೇವೀಂ ಸರಸ್ವತೀಂ ವ್ಯಾಸಂ** —ಎಂದು ವ್ಯಾಸರು ಭಾರತ ಮುಂತಾದವುಗಳಲ್ಲಿ ಆತ್ಮನಮನವನ್ನು ಕೊನೆಯಲ್ಲಿ ಮಾಡಿ ತೋರಿಸಿರುತ್ತಾರೆ. "ತಾಮಸ ಪುರಾಣಗಳಲ್ಲಿ ವ್ಯಾಸನನ್ನು ಒಬ್ಬ ಸಾಮಾನ್ಯ ಋಷಿ ಎಂದೂ (ವ್ಯಾಸಸ್ತು ಕಶ್ಚನಋಷಿಃ) ಹೇಳಲಾಗಿದೆ. ಈ ರೀತಿ ಅನ್ಯಥಾಜ್ಞಾನವನ್ನು ಹೊಂದಿ, ತಮೋಯೋಗ್ಯರಾದ ದೈತ್ಯರು ತಮಸ್ಸನ್ನು ಹೊಂದಲಿ" ಎಂಬ ಉದ್ದೇಶ್ಯದಿಂದ ವ್ಯಾಸರು ತಮ್ಮ ನಮಸ್ಕಾರವನ್ನು ಕೊನೆಯಲ್ಲಿ ಸೇರಿಸಿಕೊಂಡಿದ್ದಾರೆ. ಹೀಗೆಂದೂ ಹೇಳಿರುವ **ಗರುಡಪುರಾಣದ** ವಚನವನ್ನು ಯೋಚಿಸಿ **"ನಾರಾಯಣಂ ನಮಸ್ಕೃತ್ಯ"** ಎಂಬಲ್ಲಿ ಸರಸ್ವತಿಯನ್ನು ನುತಿಸಿದ ನಂತರ, ಬದರಿಕಾಶ್ರಮವಾಸಿಗಳಾದ ಶ್ರೀ ಬಾದರಾಯಣರನ್ನು ತಮ್ಮನ್ನು ಪರಿಪಾಲಿಸಬೇಗಂದು ದಾಸವರ್ಯರು ಪ್ರಾರ್ಥಿಸುತ್ತಾರೆ.

ವೇದಗಳನ್ನೇ ಪೀಠವನ್ನಾಗಿ ಉಳ್ಳವರು ಅಥವಾ ವೇದಗಳಿಗೆ ವಿಸ್ತಾರ ಕಾರಣನಾದುದರಿಂದ ಪೀಠದಂತೆ ಇರುವವನು (ವೇದಪಿಠ). ಸುಖಜ್ಞಾನ ಪೂರ್ಣರು (ವೆಥೇದಚಿನ ಯುಗಾತ್ರ) ಕಾಮ ಮುಂತಾದ ಅಂತಃಶಸ್ತ್ರಗಳಿಂದ ಹಾಗೂ ಖಡ್ಗಾದಿ ಬಾಹ್ಯಶಸ್ತ್ರಗಳಿಂದ ಆಗುವ ಛೇದಗಳು ಮತ್ತು ಶರೀರಕ್ಕೆ (ಚರ್ಮ) ಮತ್ತು ಬುದ್ಧಿಗೆ ಆಗುವ ಭೇದಗಳು (ಛೇದ ಭೇದ), ಚಿತ್ತವ್ಯಥೆ (ವಿಷಾದ), ವಕ್ರತೆ (ಕುಟಿಲ), ಮರಣ ಜನನ ಮಧ್ಯಮಸ್ಥಿತಿ (ಅಂತಾದಿ ಮಧ್ಯ) ಮುಂತಾದ ಅವಸ್ಥೆಗಳಿಂದ ದೂರನಾದವನು. ಲಯಕಾಲದಲ್ಲಿ ತನ್ನಲ್ಲಿ ಜಗತ್ತನ್ನು ಸ್ವೀಕರಿಸುವವನು (ಆದಾನ) ಮತ್ತು ಸೃಷ್ಟಿಯಲ್ಲಿ

ಜಗತ್ತನ್ನು ಪುನಃ ಹೊರಗೆ ತೆಗೆಯುವುದು (ಆದಿ). ಇಂತಹ ಮಹಿಮೋಪೇತರಾದ ಬಾದರಾಯಣರು ನಮ್ಮನ್ನು ಸಂರಕ್ಷಿಸಲಿ ಎಂದು ಪ್ರಾರ್ಥಿಸುತ್ತಾರೆ.

**ಸಾರಾಂಶ:**

ವೇದಗಳಿಗೆ "ಪ್ರಣವ" ವೇ ಮೂಲ. ಪ್ರಣವದಿಂದಲೇ ಸಕಲವೇದ ಶಾಸ್ತ್ರಗಳ ಉತ್ಪತ್ತಿ. ಶ್ರೀಮನ್ನಾರಾಯಣನು ಪ್ರಣವಪ್ರತಿಪಾದ್ಯನು. ಅವನ ಅವತಾರಭೂತರೇ ಆದ ಶ್ರೀ ವೇದವ್ಯಾಸದೇವರು, ಭಾರತ, ಭಾಗವತ ಶ್ರುತಿ ಸ್ಮೃತಿಗಳಿಗೆ ಆಧಾರರೂಪರಾಗಿದ್ದಾರೆ. ಈ ಕಾರಣದಿಂದಲೇ "ವೇದಪೀಠ" ರೆಂದು ಕರೆಯಿಸಿಕೊಳ್ಳುತ್ತಾರೆ. ಬ್ರಹ್ಮ, ರುದ್ರ, ಇಂದ್ರ ಮೊದಲಾದ ಸಮಸ್ತ ದೇವತೆಗಳಿಗೆ ತಾರತಮ್ಯಾನುಸಾರ ವಿಶೇಷಜ್ಞಾನವನ್ನು ಕೊಡತಕ್ಕವರು. ಜ್ಞಾನಾನಂದಮಯಶರೀರವುಳ್ಳಂಥವರು. ಪರಮಪವಿತ್ರಾತ್ಮರು, ಅಂದರೆ, ಜಗತ್ತಿನಲ್ಲಿ ಸಕಲಪದಾರ್ಥಗಳು ಅಪವಿತ್ರವಾದುವು. ಶ್ರೀಬಾದರಾಯಣರ ದಿವ್ಯಸ್ಮರಣೆಯಿಂದ ಸಕಲವೂ ಪವಿತ್ರವಾಗುವುದು. ಸಮಸ್ತಕರ್ಮಗಳೂ ಸಾರ್ಥಕ್ಯವನ್ನು ಹೊಂದುವುವು. ಶ್ರೀಹರಿಯು ಪವಿತ್ರಕ್ಕೆ ಪವಿತ್ರತಮವಾದ ವಸ್ತು (**ಪಾವನಕೆ ಪಾವನ**). ಶ್ರೀಮನ್ನಾರಾಯಣನ ವಿಸ್ಮರಣೆಯೇ ಅಪವಿತ್ರ (ಮೈಲಿಗೆ) ವೆನಿಸುವುದು. ಸಮೀಚೀನವಾದ ಚರಿತ್ರೆಯುಳ್ಳವರು. ಪರಮಾತ್ಮ ಅಚ್ಛೇದ್ಯ ಹಾಗೂ ಅಭೇದ್ಯ. ಅವನ ರೂಪ ಮತ್ತು ಗುಣಗಳಿಗೆ ಅಭೇದ. ಕಾಪಟ್ಯರಹಿತನು. ಆದಿಮಧ್ಯಾಂತರಹಿತನು. ಅಗೋಚರನು. ಶ್ರೀರಮಾಬ್ರಹ್ಮಾದಿಸಮಸ್ತರಿಗೂ ಮೂಲರೂಪನೇ ಶ್ರೀಮನ್ನಾರಾಯಣನು. ಆದಿಮೂಲಸ್ವರೂಪಿಯು (ಆದಾನಾದಿಕಾರಣ) ಚರಾಚರಾತ್ಮಕವಾದ ಈ ಜಗತ್ತನ್ನು ತನ್ನ ಉದರದಲ್ಲಿ ಇಟ್ಟುಕೊಳ್ಳುವುದು. ಅಂದರೆ, ಸ್ವೀಕರಿಸುವುದು (ಇದಕ್ಕೆ "ಆದಾನ" ಎಂದು ಹೆಸರು). "ಆದಿ" ಪದದಿಂದ ಯಾವತ್ತೂ ಸೃಷ್ಟಿ, ಸ್ಥಿತಿ, ಲಯ ಮುಂತಾದ ವ್ಯಾಪಾರವಿಶೇಷಗಳೆಂದರ್ಥ, ಇದಕ್ಕೆ ಮೂಲಕಾರಣನು (ಆದಿಕಾರಣ) ಸಮಸ್ತಜೀವ ಜಡ ಬ್ರಹ್ಮಾಂಡ ಪಿಂಡಾಂಡ ರೂಪವಾದಜಗತ್ತಿಗೆ ತ್ರಾಣ ಅಂದರೆ ಸತ್ತಾಪ್ರದರಾದ (ಜಗತ್ರಾಣ) ವೇದವ್ಯಾಸರೇ ನಮ್ಮ ಸಂರಕ್ಷಿಸಿರಿ.

# ಪದ್ಯ (೮)

ಕ್ಷಿತಿಯೊಳಗೆ ಮಣಿಮಂತ ಮೊದಲಾ ।
ದತಿ ದುರಾತ್ಮರು ಒಂದಧಿಕ ವಿಂ ।
ಶತಿ ಕುಭಾಷ್ಯವ ರಚಿಸೆ ನಡುಮನೆಯೆಂಬ ಬ್ರಾಹ್ಮಣನ ॥
ಸತಿಯ ಜಠರದೊಳವತರಿಸಿ ಭಾ ।
ರತಿರಮಣ ಮಧ್ವಾಭಿಧಾನದಿ ।
ಚತುರದಶಲೋಕದಲಿ ಮೆರದಪ್ರತಿಮಗೊಂದಿಸುವೆ ॥೮॥

**ಅವತರಣಿಕೆ :**

ಈ ಪದ್ಯದಲ್ಲಿ ಶ್ರೀ ವಾಯುದೇವರ ಅವತಾರರಾದ ಶ್ರೀಮಧ್ವಾಚಾರ್ಯರಿಗೆ ವಂದಿಸುತ್ತಾರೆ. ಹಿಂದಿನ ಪದ್ಯಗಳಲ್ಲಿ ವೇದವ್ಯಾಸರನ್ನು ಪ್ರಾರ್ಥಿಸಿ, ತಾರತಮ್ಯೋಕ್ತಪ್ರಕಾರ ಮೊದಲು ವಾಯುದೇವರಿಗೆ ವಂದನ ಮಾಡಿದ್ದರೂ, ಈಗ ಈ ಪದ್ಯದಿಂದ ದ್ವೈತಮಪ್ರವರ್ತಕರಾದ ಹಾಗೂ ಮುಕ್ತಿಗೆ ಮುಖ್ಯ ಸಾಧನಗಳಾದ ಪಂಚಭೇದ ತಾರತಮ್ಯಾದಿ ಜ್ಞಾನವನ್ನು ಜಗತ್ತಿಗೆ ಬೋಧಿಸಿ, ತನ್ಮೂಲಕ ಲೋಕೋಪಕಾರಮಾಡಿದ, ವಾಯುದೇವರ ಅವತಾರಭೂತರಾದ ಸದ್ವೈಷ್ಣವರಿಗೆ ಮುಖ್ಯಗುರುಗಳಾದ ಶ್ರೀಮದಾಚಾರ್ಯರನ್ನು ನಮಸ್ಕರಿಸುತ್ತಾರೆ.

**ಪ್ರತಿಪದಾರ್ಥ :**

**ಕ್ಷಿತಿಯೊಳಗೆ** = ಈ ಭೂಮಿಯಲ್ಲಿ (ಭರತಖಂಡದಲ್ಲಿ) **ಮಣಿಮಂತ ಮೊದಲಾದ** = ಮಣಿಮಂತನೇ ಮೊದಲಾದ ದೈತ್ಯರು **ಅತಿದುರಾತ್ಮರು** = ದುಷ್ಟಸ್ವಭಾವವುಳ್ಳಂಥ ಭಗವದ್ವೇಷಿಗಳು **ಒಂದಧಿಕವಿಶಂತಿ** = ಇಪ್ಪತ್ತು (ವಿಶಂತಿ)–ಒಂದಧಿಕ (ಇಪ್ಪತ್ತರ ಮೇಲೆ ಒಂದು), ಅಂದರೆ ೨೦+೧ =೨೧ ಸಂಖ್ಯಾಕವಾದ **ಕುಭಾಷ್ಯವ** = ವೇದಾರ್ಥಗಳಿಗೆ ವಿರುದ್ಧವಾದ ದುಷ್ಟಭಾಷ್ಯಗಳನ್ನು **ರಚಿಸೆ** = ನಿರ್ಮಿಸಿರಲಾಗಿ, ಅಂತಹ ದುರ್ಭಾಷ್ಯಗಳನ್ನು ಖಂಡಿಸಲು ಭಗವದಾಜ್ಞೆಯನ್ನು ಶಿರಸಾವಹಿಸಿ **ನಡುಮನೆಯೆಂಬ** = "ಮಧ್ಯಗೇಹ"

(ಮಧ್ಯ = ನಡು; ಗೇಹ = ಮನೆ) ಎಂಬ **ಹೆಸರುಳ್ಳ ಬ್ರಾಹ್ಮಣನ** = ಬ್ರಹ್ಮಜ್ಞಾನಿಯಾದ ವಿಪ್ರೋತ್ತಮನ **ಸತಿಯ** = ಪತ್ನಿಯಾದ ವೇದವತಿ ಎಂಬ ಸಾಧ್ವೀಶಿರೋಮಣಿಯ **ಜಠರದೊಳು** = ಗರ್ಭದಲ್ಲಿ ಇದ್ದು, ಜನಿಸಿದಂತೆ ಪ್ರದರ್ಶನ ಮಾಡಿ **ಅವತರಿಸಿ** = ಮೂಲರೂಪದಿಂದ ಅಂಶತ್ವೇನ **ಹೊರಟು**, ಅವತಾರಮಾಡಿ **ಭಾರತೀರಮಣ** = ಶ್ರೀ ಭಾರತೀದೇವಿಯರಿಗೆ ನೀತಪತಿಯಾದ ಶ್ರೀ ವಾಯುದೇವರು **ಮಧ್ವಾಭಿದಾನದಿ** = "ಶ್ರೀಮನ್ಮಧ್ವಾಚಾರ್ಯ" ಎಂಬ ಹೆಸರಿನಿಂದ **ಚತುರದಶಲೋಕದಲಿ** = ಹದಿನಾಲ್ಕು ಲೋಕಗಳಲ್ಲಿ (ಚತುರ = ೪, ದಶ = ೧೦ ಅಂದರೆ, ೧೦ + ೪ = ೧೪) **ಮೆರೆದ** = ಲೋಕಪ್ರಸಿದ್ಧರಾಗಿ ಕೀರ್ತಿವೈಭವದಿಂದ ಬೆಳಗಿದ **ಅಪ್ರತಿಮಗೆ** = ಇಪ್ಪತ್ತೊಂದು ದುರ್ಭಾಷ್ಯಗಳನ್ನು ಖಂಡಿಸಿ, ವಿಷ್ಣುಸರ್ವೋತ್ತಮನೆಂದು ಸ್ಥಾಪಿಸಿದ ಸಿದ್ಧಾಂತವಿಷಯದಲ್ಲಿ ಸದ್ವತರಹಿತರಾದ ಶ್ರೀಮದಾನಂದತೀರ್ಥಭಗವತ್ಪಾದರಿಗೆ **ವಂದಿಸುವೆ** = ಸಾಷ್ಟಾಂಗಪೂರ್ವಕ ನಮಸ್ಕರಿಸುತ್ತೇನೆ.

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—

ಮಣಿಮಂತ ಮೊದಲಾದ ಭಗವದ್ವೇಷಿಗಳು ಈ ಭರತಖಂಡದಲ್ಲಿ ಜನಿಸಿ, ತಮ್ಮ ದುರುದ್ದೇಶ ಸಾಧನೆಗೆ ಅನುಕೂಲವಾದ ಸನ್ಯಾಸಾಶ್ರಮವನ್ನು ಕೈಗೊಂಡು, ಇಪ್ಪತ್ತೊಂದು ಭಾಷ್ಯಗಳನ್ನು ರಚಿಸಿದರು. ಶ್ರೀಹರಿಯ ಮಂಗಳಗುಣಗಳನ್ನು ಆಚ್ಛಾದಿಸಿ, ಮಿಥ್ಯಾಜ್ಞಾನವನ್ನು ಜಗತ್ತಿನಲ್ಲಿ ಹರಡುತ್ತಾ, ವೇದಗಳ ನೈಜಾರ್ಥಗಳಿಗೆ ವಿರುದ್ಧವಾದ ಕುಭಾಷ್ಯಗಳನ್ನು ಖಂಡಿಸಿ, ವೇದಾಂತರ್ಗತವಾದ ನೈಜಭಾವವನ್ನು ಸತ್ಸಿದ್ಧಾಂತಪ್ರಚಾರದ ಮೂಲಕ ಸ್ಥಾಪಿಸಲು, ಭಗವದಾಜ್ಞೆಯಂತೆ, ಶ್ರೀ ವಾಯುದೇವರು ಪಾಜಕವೆಂಬ ಪವಿತ್ರಕ್ಷೇತ್ರದಲ್ಲಿ ಜನಿಸಿದರು. ಅಲ್ಲಿ ಬ್ರಹ್ಮಜ್ಞಾನಿಗಳು ಮತ್ತು ವಿಪ್ರಶ್ರೇಷ್ಠರೂ ಆಗಿದ್ದ ಮಧ್ಯಗೇಹಭಟ್ಟರ ಧರ್ಮಪತ್ನಿ ವೇದವತೀ ಎಂಬ ಪತಿವ್ರತಾಶಿರೋಮಣಿಯಲ್ಲಿ ಅವತರಿಸಿದರು. ಭಾರತೀರಮಣರಾದ ಶ್ರೀ ವಾಯುದೇವರು ತುರ್ಯಾಶ್ರಮ

ವನ್ನು ಕೈಗೊಂಡು, "ಶ್ರೀಮನ್ಮಧ್ವಾಚಾರ್ಯ" ಎಂಬು ಶುಭನಾಮಧೇಯದಿಂದ ಪ್ರಕಾಶಿಸಿದರು. "ಮಧ್ವಿತ್ಯಾನಂದ ಉದ್ದಿಷ್ಟೋವೇತಿ ತೀರ್ಥಮುದಾಹೃತಂ । ಮಧ್ವ ಆನಂದತೀರ್ಥಶ್ಚ ತೃತೀಯಾ ಮಾರುತೀ ತನುಃ ॥" ಎಂದು ತೈತ್ತಿರೀಯಭಾಷ್ಯದಲ್ಲಿ ಪ್ರಮಾಣವಚನವಿದೆ. ಏತಾದೃಶಮಹಿಮೋಪೇತರಾದ ಶ್ರೀಮದಾಚಾರ್ಯರು ಈ ಮಹೀತಲದಲ್ಲಿ ಅವತರಿಸಿ, ೨೧ ಕುಭಾಷ್ಯಗಳನ್ನು ಖಂಡಿಸಿ, ಸಚ್ಛಾಸ್ತ್ರಗಳನ್ನು ಜಗತ್ತಿಗೆ ಬೋಧಿಸುವುದರ ಮೂಲಕ, ದ್ವೈತಸಿದ್ಧಾಂತ ಸಂಸ್ಥಾಪಕರಾದ, ಅಸದೃಶ ಮಹಿಮರಾದ ಶ್ರೀಮದಾಚಾರ್ಯರಿಗೆ ಸಾಷ್ಟಾಂಗಪೂರ್ವಕ ನಮಸ್ಕರಿಸಿ, ಪ್ರಾರ್ಥಿಸುತ್ತಾರೆ.

(೪) "ಭಾವದರ್ಪಣಟೀಕಾ" ವ್ಯಾಖ್ಯಾನ :

"ಏಕವಿಂಶತಿ ಕುಭಾಷ್ಯದೂಷಕವ್" —ಎಂದು ಶ್ರೀಸುಮಧ್ವವಿಜಯದಲ್ಲಿ ಹೇಳಿರುವಂತೆ, ಶ್ರೀಮದಾಚಾರ್ಯರು ೨೧ ಕುಭಾಷ್ಯಗಳನ್ನು ನಿರಾಕರಿಸುತ್ತಾ, ೨೨ನೆಯ ಭಾಷ್ಯವನ್ನು ಬ್ರಹ್ಮಸೂತ್ರಗಳಿಗೆ ರಚಿಸಿರುತ್ತಾರೆ. 'ನಡುಮನೆಯೆಂಬ ಬ್ರಾಹ್ಮಣನ ಸತಿಯ ಜಠರದೊಳವತರಿಸಿ" ಎಂದು ಹೇಳಿರುವುದರಿಂದ, ನೋಡುವವರಿಗೆ ಮಧ್ಯಗೇಹಭಟ್ಟರ ಭಾರ್ಯಳ ಗರ್ಭದಲ್ಲಿ ಜನಿಸಿದರೆಂದು ಲೋಕದಲ್ಲಿ ಪ್ರಸಿದ್ಧಿ ಇರುವುದು. ಆದರೆ ಶ್ರೀ ವಾಯುದೇವರಿಗೆ ಶುಕ್ಲಶೋಣಿತ ಸಂಪರ್ಕಾದಿಗಳಿಂದ ಗರ್ಭಯಾತನಾದಿಗಳಿಲ್ಲ. ಮಧ್ಯಗೇಹಭಟ್ಟರ ಪತ್ನಿಯು ಗರ್ಭಧಾರಣಮಾಡಿ, ದಿವ್ಯವಾದ ಮನ್ಮಥಸ್ವರೂಪನಾದ ಮಗುವನ್ನು ಹೆತ್ತಳು. ಆಗ ವಾಯುದೇವರು ಹೊಸ ರಾಜ್ಯವನ್ನು ಜಯಿಸಿದ ಒಬ್ಬ ರಾಜನು ಅಲ್ಲಿ ಇದ್ದ ಮೊದಲಿನ ರಾಜನನ್ನು ಹೊರಗೆ ಹೊರಡಿಸುತ್ತಾ, ತಾನು ಒಳಗೆ ಹೊಕ್ಕರೆ ಹೇಗೋ ಹಾಗೆ, ಆ ಮಗುವಿನ ದೇಹದೊಳಗಿನ ಜೀವವನ್ನು ಹೊರಗೆ ಹೊರಡಿಸುತ್ತಾ ತಾವು ಒಳಗೆ ಪ್ರವೇಶಿಸಿದರು. "ರಾಜೀವ ಸತ್ಪುರವರಂ ಭುವನಾಧಿರಾಜೋ ನಿಷ್ಕಾಸಯನ್ ಪರಮಸೌ ಭಗವಾನ್ ವಿವೇಶ"–ಎಂಬ ಸುಮಧ್ವವಿಜಯದ ವಾಕ್ಯದಿಂದ ಇದು ಸ್ಪಷ್ಟವಾಗುವುದು. ಇದೇ ಭಾವವನ್ನೇ ದಾಸರಾಯರು "ಜಠರದೊಳವತರಿಸಿ" ಎಂದು ಹೇಳಿರುವರು. "ಚತುರದಶಲೋಕದಲಿ ಮೆರೆದ" ಅಂದರೆ, ಇವರ ಕೀರ್ತಿಯು ಹದಿನಾಲ್ಕು ಲೋಕಗಳಲ್ಲಿಯೂ ವ್ಯಾಪಿಸಿದೆ ಎಂದು ಭಾವ,

## (೪) "ಭಾವದರ್ಪಣಟೀಕಾ"-ವ್ಯಾಖ್ಯಾನ :

**"ಸ ಸಂಕರಾಖ್ಯೋಂಘ್ರಿ ತಲೇಷು ಜಜ್ಞೇ"—ಎಂಬ ಸುಮಧ್ವ ವಿಜಯಾನುಸಾರ.** ಭೂಮಿಯಲ್ಲಿ ಮಣಿಮಂತಾದಿ ದುರಾತ್ಮರಾದ ದೈತ್ಯರು ಹುಟ್ಟಿ, ಇಪ್ಪತ್ತೊಂದು ದುಷ್ಟಭಾಷ್ಯಗಳನ್ನು ನಿರ್ಮಾಣಮಾಡಿದಾಗ, ಆ ದುಷ್ಟಮತಗಳ ನಿರಸನಾರ್ಥ ಮಧ್ಯಗೇಹಭಟ್ಟರಲ್ಲಿ ಅವತರಿಸಿದ ಸರ್ವಜ್ಞಾಚಾರ್ಯರಿಗೆ ನಮಸ್ಕರಿಸುತ್ತಾರೆ.

ಏಕವಿಂಶತಿ ಕುಭಾಷ್ಯಗಳು ಯಾವುವೆಂದರೆ :— **"ಭಾರತೀ ವಿಜಯಶ್ಚೈವ ಸಂವಿದಾನಂದ ಏವ ಚ ॥ ಬ್ರಹ್ಮಘೋಷಃ ಶತಾನಂದ ಉದ್ಧೃತಶ್ಚೈವ ಪಂಚಮಃ।ವಿಜಯೋ ರುದ್ರಭಟ್ಟಶ್ಚ ವಾಮನಾಖ್ಯಸ್ತಥಾಷ್ಟಮಃ॥ ಸ ಯಾದವಪ್ರಕಾಶಶ್ಚ ನವಮಸ್ತು ಪ್ರಕೀರ್ತಿತಃ ರಾಮಾನುಜಸ್ತಥಾ ಭರ್ತೃಪಂಚೋಪದ್ರಮಿಜಸ್ತಥಾ॥ ಬ್ರಹ್ಮದತ್ತೋ ಭಾಸ್ಕರಶ್ಚ ಪಿಶಾಚೋ ವೃತ್ತಿಕಾರಕಃ ॥ ತಥಾ ವಿಜಯಭಟ್ಟಶ್ಚ ವಿಷ್ಣುಕ್ರಾಂತಸ್ತಥೈವ ಚ ॥ ವಾದೀಂದ್ರಸ್ತು ತಥಾ ಪಶ್ಚಾತ್ತಥಾ ಮಾಧವದಾಸಕಃ ॥ ತಥಾ ಪ್ರಶ್ಚಾತ್ಸಂಕರಶ್ಚೇತ್ಯೇಕವಿಂಶತಿವಾದಿಭಿಃ ॥ ಪ್ರಣೀತಾನಿ ನಿರಾಚಕ್ರೆ ದುರ್ಭಾಷ್ಯಾಣೀ ಮಹಾಮತಿಃ ॥ ಇತ್ಯೇಕವಿಂಶತಿಸಂಖ್ಯಾಕೈರಿತ್ಯರ್ಥಃ ॥—** ಹೀಗೆ ಇಪ್ಪತ್ತೊಂದು ದುರ್ಮತಗಳ ವಿವರ. ಇವು ಯಾವುವೆಂದರೆ:— (೧) ಭಾರತೀ ವಿಜಯ (೨) ಸಂವಿದಾನಂದ (೩) ಬ್ರಹ್ಮಘೋಷ (೪) ಶತಾನಂದ (೫) ಉದ್ಧೃತ (೬) ವಿಜಯ (೭) ರುದ್ರಭಟ್ಟೀಯ (೮) ವಾಮನೀಯ (೯) ಯಾದವಪ್ರಕಾಶ (೧೦) ಮಾಧವದಾಸೀಯ (೧೧) ಪ್ರಂಪಚ (೧೨) ದ್ರಾವಿಡ (೧೩) ಬ್ರಹ್ಮದತ್ತೀಯ (೧೪) ಭಾಸ್ಕರೀಯ (೧೫) ಪಿಶಾಚೀಯ (೧೬) ವೃತ್ತಿಪ್ರಕಾಶ (೧೭) ವಿಜಯಭಟ್ಟೀಯ (೧೮) ವಿಷ್ಣುಕ್ರಾಂತೀಯ (೧೯) ವಾದೀಂದ್ರೀಯ (೨೦) ಶಾಂಕರೀಯ ಮತ್ತು (೨೧) ರಾಮಾನುಜೀಯ. ಹೀಗೆ (೨೧) ಕುಭಾಷ್ಯಗಳಲ್ಲದೆ (೧) ಚಾರ್ವಾಕ (೨) ಬೌದ್ಧ (೩) ತಾರ್ಕಿಕ (೪) ಕಣಾದ ಮತ್ತು (೫) ಕಪಿಲ ಎಂಬ ಪಂಚಮತಗಳೇ ಇದಕ್ಕೂ ಪೂರ್ವದಲ್ಲಿ ಇದ್ದುವೆಂದು ಆಚಾರ್ಯರು ಹೇಳುತ್ತಾರೆ. ಮಧ್ಯಗೇಹಭಟ್ಟನ (ನಡುಮನೆ ಎಂಬ ಬ್ರಾಹ್ಮಣನ) ಸತಿಯಾದ

ವೇದವತಿಯ ಜಠರದಲ್ಲಿ ಶ್ರೀ ವಾಯುದೇದರು ಅವತರಿಸಿದರು. ಈ ವಿಷಯ ದಲ್ಲಿ ಪ್ರಮಾಣ :— **"ವೇದವತ್ಯಾಖ್ಯ ಭಾರ್ಯಾಯಾಂ ತಸ್ಮಾಜ್ಜಾತೋ ಭವತ್ಪ್ರಭುಃ "**|| ಇನ್ನೊಂದು ಪ್ರಮಾಣ:— **"ತೃತೀಯಮಸ್ಯ ವೃಷಭಸ್ಯ, ದೋಹಸೇ ದಶಪ್ರಮತಿಂ ಜನಯಂತ ಯೋಷಣಃ**| ಎಂದು **ಶ್ರೀ ಬಳಿತ್ಥಾ ಸೂಕ್ತದ** ಪ್ರಮಾಣ (ಶ್ರುತಿಪ್ರತಿಪಾದ್ಯರು). ಶ್ರೀ ಮುಖ್ಯಪ್ರಾಣದೇವರೇ ಮಧ್ವಾಚಾರ್ಯರೆಂಬ ನಾಮಭಿದಾನದಿಂದ ಜನಿಸಿದರು (ಅವತರಿಸಿದರು). ಚತುರ್ದಶಲೋಕಗಳಲ್ಲಿ ಮೆರೆದಂಥ, ಅಸದೃಶರಾದಂಥ ಮಧ್ವಾಚಾರ್ಯರಿಗೆ ನಮಸ್ಕರಿಸುತ್ತೇನೆ.

## (೪) ತಾಮ್ರಪರ್ಣೀಯ ವ್ಯಾಖ್ಯಾನ :

ಹಿಂದಿದ ಯುಗಗಳಲ್ಲಿ ತಮಗಾದ ಪರಾಜಯಕ್ಕೆ ಪ್ರತೀಕಾರವನ್ನು ಮಾಡಲು ಅಪೇಕ್ಷಿಸಿ, ಭೂಮಿಯಲ್ಲಿ ಹುಟ್ಟಿದ ಮಣಿಮಂತ ಮುಂತಾದ ದೈತ್ಯರು ಇಪ್ಪತ್ತೊಂದು ದುಷ್ಟಭಾಷ್ಯಗಳನ್ನು ರಚಿಸಿದರು. ಆ ದುರ್ಭಾಷ್ಯ ಗಳನ್ನು ಖಂಡಿಸಲು ಅವತರಿಸಿದ ಶ್ರೀಮದಾನಂದತೀರ್ಥಭಗವತ್ಪಾದರನ್ನು ಈ ಪದ್ಯದಲ್ಲಿ ನಮಸ್ಕರಿಸುತ್ತಾರೆ.

ಈ ಮಹೀತಲದಲ್ಲಿ (ಕ್ಷಿತಿಯೊಳಗೆ) ಮಣಿಮಂತ ಮುಂತಾದ ಅತಿ ದುಷ್ಟಸ್ವಭಾವದ ದೈತ್ಯರು (ಅತಿದುರಾತ್ಮರು). ೨೧ ಸಂಖ್ಯಾಕವಾದ ದುಷ್ಟಭಾಷ್ಯಗಳನ್ನು (ಏಕವಿಂಶತಿಕುಭಾಷ್ಯವೆ) ರಚಿಸಿದರು. ಆಗ ಮಧ್ಯ ಗೇಹಭಟ್ಟ (ನಡುಮನೆ ಎಂಬ) ರೆಂಬ ಬ್ರಾಹ್ಮಣನ ಪತ್ನಿಯ ಉದರದಲ್ಲಿ (ಬ್ರಾಹ್ಮಣನ ಸತಿಯ ಜಠರದಲಿ) ಶ್ರೀ ವಾಯುದೇವರು "ಶ್ರೀಮಧ್ವ" ಎಂಬ ಹೆಸರಿನಿಂದ ಅವತರಿಸಿದರು (ಅವತರಿಸಿ ಭಾರತೀರಮಣ ಮಧ್ವಾಭಿಧಾನದಿ). ಇದಕ್ಕೆ ಪ್ರಮಾಣ :— **"ತೃತೀಯಮಸ್ಯ ವೃಷಭಸ್ಯ ದೋಹಸೇ ದಶ ಪ್ರಮತಿಂ ಜನಯಂತ ಯೋಷಣಃ"**—ಎಂದು **ಶ್ರೀ ಬಳಿತ್ಥಾ ಸೂಕ್ತದ** ಪ್ರಮಾಣವಚನ. ಇದರ ಅರ್ಥ ಹೀಗಿದೆ :- ಅಸ್ಯ = ಈ, ವೃಷಭಸ್ಯ = ದೇವ ಶ್ರೇಷ್ಠರಾದ ವಾಯುದೇವರ, ತೃತೀಯಂ = ಮೂರನೆಯ ಅವತಾರರೂಪವಾದ ದಶಪ್ರಮತಿಂ = ಪೂರ್ಣಪ್ರಜ್ಞರನ್ನು (ಶ್ರೀ ಮಧ್ವಮುನಿಗಳನ್ನು), ಯೋಷಣ;

= ವೇದಾಭಿಮಾನಿಗಳಾದ ಶ್ರೀ ಭೂ ದುರ್ಗಾದೇವಿಯರು (ಶ್ರೀರಮಾದೇವಿ), ದೋಹಸೇ = ಜ್ಞಾನವನ್ನು ಪೂರೈಸಲು, ಅಜನಯಂತ = ಜನಿಸಿದರು (ಹುಟ್ಟಿಸಿದರು). ಶ್ರೀ ರಮಾದೇವಿಯರು ಶ್ರೀಭೂದುರ್ಗಾರೂಪಗಳಿಂದ ಋಗಾದಿ ವೇದಗಳಿಗೆ ಅಭಿಮಾನಿಗಳಾಗಿದ್ದಾರೆ. ಭಗವದ್ವೇಷಿಗಳಾದ ದುಷ್ಟದೈತ್ಯರು ಭೂಮಿಯಲ್ಲಿ ಹುಟ್ಟಿ, ವೇದಗಳಿಗೆ ಅಪಾರ್ಥಗಳನ್ನು ಕಲ್ಪಿಸಿದಾಗ, ವೇದಗಳ ಅರ್ಥವನ್ನು ಯಥಾರ್ಥತವಾಗಿ ವ್ಯಾಖ್ಯಾನಿಸುವುದಕ್ಕಾಗಿ ವೇದಾಭಿಮಾನಿಗಳು ಮಧ್ಯಗೇಹನೆಂಬ ಬ್ರಾಹ್ಮಣನ ಪತ್ನಿಯ ಉದರದಲ್ಲಿ ಶ್ರೀವಾಯುದೇವರನ್ನು ಪ್ರಾದುರ್ಭವಗೋಳಿಸಿದರು. ಈ ವಿಷಯದಲ್ಲಿ ಮತ್ತೊಂದು ಪ್ರಮಾಣ :- **"ವಾಯೋಃ ರಾಮುವಚೋನಯಂ ಪ್ರಥಮಕಂ ಪೃಕ್ಷೋ ದ್ವಿತೀಯಂ ವಪುಃ । ಮಧ್ವೋಯತ್ತು ತೃತೀಯಮೇತದಮುನಾ ಗ್ರಂಥಃ ಕೃತಃ ಕೇಶವೇ ।"** ಎಂದು ಶ್ರೀಮದಾಚಾರ್ಯರ ನಿರ್ಣಯದ ಕೊನೆಯ ಶ್ಲೋಕ. ಇದರ ಅರ್ಥ ಹೀಗಿದೆ :- ರಾಮುವಚೋನಯಂ = ರಾಮದೇವರ ವಚನವನ್ನು ಸೀತಾಮಾತೆಗೆ ತಂದಿತ್ತಿರುವ ಹನುಮಂತನ ರೂಪವು, ವಾಯೋಃ ಪ್ರಥಮಕಂ ವಪುಃ = ವಾಯುದೇವರ ಮೊದಲನೆಯರೂಪವು. ಪೃಕ್ಷೋ = ಕೌರವ ಸೇನಾಕ್ಷಯವನ್ನು ಮಾಡಿ, ಪ್ರಸಿದ್ಧವಾದ ಭೀಮಸೇನರೂಪವು, ದ್ವಿತೀಯಂ= ಎರಡನೆಯದು. ಯತ್‌ಮಧ್ವಃ = ಯಾವ ಈ ಮಧ್ವರೂಪದಿಂದ ಮೋಕ್ಷಪ್ರದಶಾಸ್ತ್ರಗಳನ್ನು ಮಾಡಿರುವರೋ, ಏತತ್ = ಈ ಮಧ್ವರೂಪವು, ತೃತೀಯಂ = ಮೂರನೆಯದು. ಅಮುನಾ = ಈ ವಾಯ್ವವತಾರರಾದ ಶ್ರೀ ಮಧ್ವರಿಂದ, ಕೇಶವೇ = ಕೇಶವನ ವಿಷಯದಲ್ಲಿ (ಶ್ರೀಹರಿಯ ಪ್ರೀತಿ ಮತ್ತು ಭೋಧನೆಗಾಗಿ), ಗ್ರಂಥ = ಈ ಗ್ರಂಥವು, ಕೃತಃ = ವಿರಚಿತವಾಯಿತು.

### (೬) "ಗುರುಹೃದಯ ಪ್ರಕಾಶಿಕಾ" ವ್ಯಾಖ್ಯಾನ :

ದಾಸರಾಯರು ಈ ಪದ್ಯದಿಂದ ಶ್ರೀ ಪ್ರಾಣದೇವರನ್ನು ಮಧ್ವಾವತಾರ ಕಾರಣಪೂರ್ವಕ ಸ್ತುತಿಸುತ್ತಾರೆ. ಈ ಭರತಖಂಡಾಖ್ಯಭೂಮಿಯಲ್ಲಿ, ದೈತ್ಯಶ್ರೇಷ್ಠರಾದ ಮಣಿಮಂತನೇ ಮೊದಲಾದವರು ಹುಟ್ಟಿ, ಬ್ರಹ್ಮಸೂತ್ರಗಳಿಗೆ ವಿರೋಧಾರ್ಥಗಳನ್ನು ಕೊಡುವ ಇಪ್ಪತ್ತೊಂದು ವಿಧವಾದ ದುರ್ಭಾಷ್ಯಗಳನ್ನು ತಮ್ಮ ವಿದ್ಯಾಬಲದಿಂದ ಕಲ್ಪಿಸಿ, ಪ್ರಚುರಪಡಿಸಲು, ಅವುಗಳನ್ನು

ನಿರಾಕರಿಸಿ, ಸಜ್ಜನರಿಗೆ ಸುಜ್ಞಾನವನ್ನುಂಟುಮಾಡುವುದಕ್ಕಾಗಿ, ದೇವರ ಆಜ್ಞಾನುಸಾರ ಮಧ್ಯಗೇಹಕುಲದ ಬ್ರಾಹ್ಮಣರ ಪತ್ನಿಯಲ್ಲಿ ಅವತರಿಸಿದ, ಭಾರತೀರಮಣರಾದ ಶ್ರೀಪ್ರಾಣದೇವರೇ ಶ್ರೀಮನ್ಮಧ್ವಾಚಾರ್ಯರೆಂಬ ಹೆಸರಿನಿಂದ ಹದಿನಾಲ್ಕು ಲೋಕಗಳಲ್ಲಿಯೂ ಪ್ರಸಿದ್ಧರಾದ ಅತ್ಯುತ್ತಮ ಗುರುಗಳಿಗೆ ನಮಸ್ಕರಿಸುತ್ತೇನೆ. ಈ ವಿಷಯದಲ್ಲಿ ಪ್ರಮಾಣ :- **"ಕ್ರೋಧವಶಾದ್ಧಿ ದೈತ್ಯಾಃ ಶೈವಂತಪಸ್ತೇ ವಿಪುಲಂ ವಿಧಾಯ । ಜಗದ್ವಿಮೋಹೋರ್ಜಿತ ಶಕ್ತಿಮಸ್ಮಾತ್ । ಪ್ರಾಪ್ಯ ಪ್ರಜಾತಾಭುವಿ ಮೋಹನಂ ಚ ॥ ಚಕ್ರುಃ ಕುತರ್ಕೈರಭಿದಾಂ ವದಂತಃ ತೇಷಾಂ ಪ್ರಪಾತಾಯ ಸತಾಂಚ ಮುಕ್ತ್ಯೈಃ। ಜನ್ಮಾಸಭೀಮಸ್ಯ ಯದುಕ್ತಮತ್ರ ॥"** ಎಂದು ನಿರ್ಣಯಾರ್ಥ ಪ್ರಮಾಣ.

## (೬) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ :

ಹಿಂದಿನ ಪದ್ಯದಿಂದ ಶ್ರೀವೇದವ್ಯಾಸರನ್ನು ವಂದಿಸಿ, ಆ ವ್ಯಾಸರ ವಾಕ್ಯಗಳಿಗೆ ನಿರ್ಣಯವನ್ನೀಯುವ, ಮಧ್ಯಗೇಹರಲ್ಲಿ ಜನಿಸಿದವರೂ, ಬಾಲ್ಯದಲ್ಲಿ ವಾಸುದೇವಾಭಿಧಾನದಿಂದ ಪ್ರಸಿದ್ಧರಾದವರೂ, ದುರ್ವಾದಿಗಳೆಂಬ ಗರ್ವ ಪರ್ವತಕ್ಕೆ ಕುಲಿಶಪ್ರಾಯರೂ, ಮಾಯಾವಾದಿಗಳೆಂಬ ಮದ್ದಾನೆಗಳಿಗೆ ಸಿಂಹ ಪ್ರಾಯರೂ ಆದ ಆನಂದತೀರ್ಥಾಭಿಧಾನದಿಂದ ಮೆರೆದ ಶ್ರೀಮಧ್ವಮುನಿಗಳನ್ನು ನಮಸ್ಕರಿಸುತ್ತಾರೆ.

ಮಣಿಮಂತಾದಿದೈತ್ಯರು ೨೧ ಕುಭಾಷ್ಯಗಳನ್ನು ರಚಿಸಿದಾಗ, ಸಜ್ಜನರ ಚಿತ್ತವು ಅವುಗಳಿಂದ ದೂಷಿತವಾಯಿತು. ಆ ಕುಭಾಷ್ಯಗಳನ್ನು ನಿರಾಕರಿಸಿ, ಸತ್ಸಿದ್ಧಾಂತರೂಪವಾದ ದ್ವೈತಶಾಸ್ತ್ರವನ್ನು ಸಜ್ಜನರಿಗೆ ಬೋಧಿಸಿ, ತನ್ಮೂಲಕ ಅವರ ಸಂಶಯಗಳನ್ನು ಪರಿಹರಿಸಿದ ಶ್ರೀಮದಾನಂದತೀರ್ಥರನ್ನು ಸ್ತುತಿಸುತ್ತಾರೆ. ಶ್ರೀವಾಯುದೇವರು ಮಧ್ವಾಭಿಧಾನದಿಂದ ವೇದವತಿ ಎಂಬ ಹೆಸರಿನ ಮಧ್ಯಗೇಹಭಟ್ಟರ ಪತ್ನಿಯಲ್ಲಿ ಅವತರಿಸಿದರು ಎಂಬ ವಿಷಯದಲ್ಲಿ ಪ್ರಮಾಣ :— **"ವೇದವತ್ಯಾಖ್ಯಭಾರ್ಯಾಯಾಮಿತಿ"**—ಎಂದು **ಸ್ಕಂದಪುರಾಣದ** ವಚನವಿರುವುದು. "ಮಧ್ವ" ಎಂದರೆ; ಆನಂದಕರ ಶಾಸ್ತ್ರಗಳೆಂದರ್ಥ. ಮಧು (ಸುಖವನ್ನು) ಕೊಡುವ ಶಾಸ್ತ್ರವೇ "ಮಾಧ

ಶಾಸ್ತ್ರ" ವು. "ಮಧ್ವ=ಆನಂದಸಂದಾಯಿ ಸುಶಾಸ್ತ್ರ ಕೃತ್ಸಯತ್ತ್" ಎಂದು ಪರಿಷ್ಕಾರವು. ಇದನ್ನು ಸರಿಯಾಗಿ ತಿಳಿದು ಉಪದೇಶಿಸುವವರೇ ತ್ರೈಲೋಕ್ಯಾಚಾರ್ಯರಾದ ಶ್ರೀಮದಾನಂದತೀರ್ಥರು.

**ಸಾರಾಂಶ :—**

ಈ ಭೂಮಂಡಲದಲ್ಲಿ ಮಣಿಮಂತನೇ ಮೊದಲಾದ ದೈತ್ಯರು ಜನಿಸಿದರು. ಅವರೆಲ್ಲರೂ ದುರಾತ್ಮರು. ದೈತ್ಯಾಧಮರಾದ ತಮೋಯೋಗ್ಯರು. ಹಿಂದಿನ ತ್ರೇತಾ ಮತ್ತು ದ್ವಾಪರಯುಗಗಳಲ್ಲಿ ಶ್ರೀ ವಾಯುದೇವರ ಅವತಾರ ಭೂತರಾದ ಹನುಮ ಮತ್ತು ಭೀಮಸೇನದೇವರಿಂದ ಪರಾಜಿತರಾಗಿ, ಅವರ ಕೈಯಿಂದಲೇ ಮರಣವನ್ನು ಹೊಂದಿದರು. ಬಲ ಮತ್ತು ಪರಾಕ್ರಮಗಳಿಂದ ವಾಯುದೇವರನ್ನು ಎದುರಿಸಲಾರದ್ದೇ, ಈ ಕಲಿಯಗದಲ್ಲಿ ಅವರಿಗೆ, ಪ್ರತೀಕಾರಮಾಡಬೇಕೆಂದು ಬಯಸಿ, ಅಪೌರುಷೇಯವಾದ ವೇದಗಳಿಗೆ ಅಪಾರ್ಥಗಳನ್ನು ಕಲ್ಪಿಸಿ, ವೇದವ್ಯಾಸರ ಹೃದ್ಗತಭಾವವನ್ನು ಮರೆಮಾಡಿ, ೨೧ ದುಷ್ಟವ್ಯಾಖ್ಯಾನರೂಪವಾದ ಭಾಷ್ಯಗಳನ್ನು ರಚಿಸಿದರು. ಈಶನೇ ನಾನು,-ಜಗತ್ತು ಮಿಥ್ಯ-ಪರಮಾತ್ಮನು ಮಾಯೆಯಿಂದ ಅವೃತನಾಗಿದ್ದಾನೆ. ಆ ಮಾಯಾರೂಪವಾದ ಉಪಾಧಿಯು ನಾಶವಾದರೆ, ಜೀವ ಮತ್ತು ಬ್ರಹ್ಮರ ಐಕ್ಯ ಸಿದ್ಧಿಸುವುದು– ಇವೇ ಮುಂತಾದ ಕುತ್ಸಿತಮತಗಳನ್ನು ಪ್ರಚಾರ ಮಾಡಿದರು. ಆಗ ಭಗವಾದಾಜ್ಞಾಧಾರಕರಾಗಿ ಶ್ರೀವಾಯುದೇವರು ಮಧ್ಯತಾಳಾಮಠದಲ್ಲಿ ವಾಸಮಾಡುತ್ತಿದ್ದ "ಮಧ್ಯಗೇಹಭಟ್ಟ"ರೆಂಬ ವಿಪ್ರೋತ್ತಮರ ಪತ್ನಿಯ ಜಠರದಲ್ಲಿ ಪ್ರಾದುರ್ಭಾವರೂಪದಿಂದ ಅವತರಿಸಿದರು. (ಶ್ರೀ ವಾಯುದೇವರಿಗೆ ಶುಕ್ಲಶೋಣಿತಸಂಬಂಧವಾಗಲೀ ಗರ್ಭವಾಸದ ಯಾತನೆಗಳಾಗಲೀ ಇಲ್ಲ) "ಶ್ರೀಮನ್ಮಧ್ವಾಚಾರ್ಯರೆಂಬ ಹೆಸರಿನಿಂದ. ಶ್ರೀಹರಿಯೇ ಸರ್ವೋತ್ತಮನು, ವಾಯುದೇವರೇ ಜೀವೋತ್ತಮರು, ಜಗತ್ತು ಸತ್ಯಭೂತವಾದದ್ದು, ತಾರತಮ್ಯ–ಪಂಚಭೇಧ ಸತ್ಯ" ಎಂದು ಡಂಗುರ ಹೊಯ್ಸಿ, ಮಧ್ವಮತಸಿದ್ಧಾಂತವನ್ನು ಹದಿನಾಲ್ಕು ಲೋಕಗಳಲ್ಲಿಯೂ ಪ್ರಚಾರಮಾಡಿ ಭಗವತ್ಕಾರ್ಯಸಾಧಕರೆಂದು ಸುಪ್ರಸಿದ್ಧರಾದ, ಅಪ್ರತಿಮಗುರುಗಳಾದ ಶ್ರೀ ಮಧ್ವಮುನಿಗಳ ಪದಕಮಲಗಳಿಗೆ ವಂದಿಸುತ್ತೇನೆಂದು ಸ್ತೋತ್ರಮಾಡಿದ್ದಾರೆ.

## ಪದ್ಯ (೯)

**ಪಂಚಭೇದಾತ್ಮಕ ಪ್ರಪಂಚಕೆ ।**
**ಪಂಚರೂಪಾತ್ಮಕನೆ ದೈವಕ ।**
**ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ ॥**
**ಪಂಚವಿಂಶತಿತತ್ತ್ವತರತಮ ।**
**ಪಂಚಿಕೆಗಳನು ಪೇಳ್ದ ಭಾವಿವಿ ।**
**ರಿಂಚಿಯೆನಿಪಾನಂದತೀರ್ಥರ ನೆನೆವೆನನುದಿನವು ॥೯॥**

**ಅವತರಣಿಕೆ :**

ಈ ಪದ್ಯದಿಂದ ಶ್ರೀಮನ್ಮಧ್ವಾಚಾರ್ಯರು ದುರ್ಮತನಿರಾಕರಣ ಪೂರ್ವಕ ಸ್ವಮತಸಿದ್ಧಾಂತಸ್ಥಾಪನ ಮಾಡಿದ ಮಹಿಮಾವಿಶೇಷವನ್ನು ತಿಳಿಸುತ್ತಾರೆ.

**ಪಂಚಭೇದ**= ಐದು ಭೇದಗಳು. ಪರಮಾತ್ಮ, ಜೀವರು ಮತ್ತು ಜಡವಸ್ತುಗಳು ಈ ಮೂರರ ಪೈಕಿ ಎರಡನ್ನು ಪರಿಗ್ರಹಿಸಿ, ಭೇದಗಣನೆಮಾಡಿದರೆ, ಐದು ಭೇದಗಳು ಸಿದ್ಧವಾಗುವುವು. ಇವುಗಳಿಗೆ "ಪಂಚಭೇದ" ಎಂದು ಹೆಸರು. ಇವು ಯಾವುವೆಂದರೆ : (೧) ಜೀವೇಶ ಭೇದ, (೨) ಈಶ ಜಡ ಭೇದ (೩) ಜೀವ ಜೀವ ಭೇದ, (೪) ಜೀವ ಜಡ ಭೇದ ಮತ್ತು (೫) ಜಡ ಜಡ ಭೇದ. **ಆತ್ಮಕ** = ಪೂರ್ವೋಕ್ತಭೇದಗಳಿಂದ ಯುಕ್ತವಾದ (ಕೂಡಿದ). **ಪ್ರಪಂಚಕೆ** = ಈ ಐದು ಭೇಧಗಳಿಂದ ಸಹಿತವಾದ ಈ ಜಗತ್ತಿಗೆ. **ಪಂಚರೂಪಾತ್ಮಕನೆ** = ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಐದು ರೂಪಗಳುಳ್ಳ. **ದೈವಕ** = ಗುಣಪೂರ್ಣನಾದ, ಸರ್ವೋತ್ತಮನಾದ ಪರಮಾತ್ಮನೇ ಮಹಾಪ್ರಭುವು (ದೇವರು) **ಪಂಚಮುಖ** = ಐದು ತಲೆಗಳುಳ್ಳ ಮಹರುದ್ರದೇವರು. **ಶಕ್ರಾದಿಗಳು** = ಇಂದ್ರಾದಿ ದೇವತೆಗಳು, **ಶ್ರೀಹರಿಗೆ ಕಿಂಕರರು** = ಪಾಪ ಪರಿಹಾರಕನಾದ ಸರ್ವೋತ್ತಮನಾದ ಪರಮಾತ್ಮನಿಗೆ ಸೇವಕರು ಎಂತಲೂ

**ಪಂಚವಿಂಶತಿ** = ಇಪ್ಪತ್ತೈದು. (ವಿಂಶತಿ= ಇಪ್ಪತ್ತು; ಪಂಚ = ಐದು ಅಂದರೆ ೫+೨೦=೨೫) **ತರತಮ** = ಸ್ರ್ವೋತ್ತಮ ಮತ್ತು ಸ್ಥಾವರ (ನೀಚೋಚ್ಚ ಭಾವ) ಗಳಿಂದ ಯುಕ್ತವಾದ "ತಾರತಮ್ಯ"ವನ್ನೂ **ಪಂಚಿಕೆ ಗಳನು** = ಪಂಚ (ಐದು) ದಿಂದ ಕೂಡಿದ್ದು "ಪಂಚಿಕೆ" ಅಂದರೆ, ಜಗತ್ತು ಪೂರ್ವೋಕ್ತಪ್ರಕಾರ ಪಂಚಭೇದದಿಂದ ಯುಕ್ತವಾದದ್ದು **ಪೇಳ್ದ** = ವೇದ ಶಾಸ್ತ್ರಾದಿಸಮ್ಮತಿಗಳಿಂದ ಸ್ಥಾಪನಮಾಡಿ, ಹೇಳಿದಂತಹ **ಭಾವಿ ವಿರಿಂಚಿ ಯೆನಿಪ** = ಮುಂದಿನ ಕಲ್ಪದಲ್ಲಿ ಬ್ರಹ್ಮಪದವಿಗೆ ಬರುವ (ಭಾವಿ = ಮುಂದಿನ ವಿರಿಂಚಿ = ಬ್ರಹ್ಮ ದೇವರು) **ಆನಂದತೀರ್ಥರ** = ಆನಂದತೀರ್ಥಭಗವತ್ಪಾದರ **ಅನುದಿನವೂ** = ಪ್ರತಿದಿನದಲ್ಲಿಯೂ. **ನೆನೆವೆ** = ಸ್ಮರಿಸುತ್ತೇನೆ.

## ವಿಶೇಷಾರ್ಥ :

ಪಂಚಭೇದಗಳು : ಈ ಜಗತ್ತಿನಲ್ಲಿ ಮೂರೇ ವಸ್ತುಗಳು ಪ್ರಸಿದ್ಧ ವಾಗಿರುವುವು. ಅವುಗಳನ್ನು ಬಿಟ್ಟು ನಾಲ್ಕನೆಯದು ಯಾವುದೂ ಇಲ್ಲ. ಅವು ಯಾವುವೆಂದರೆ : (೧) ಈಶ. (ಸರ್ವೋತ್ತಮನಾದ. ಸರ್ವನಿಯಾಮಕ ನಾದ ಜಗದ್ವಿಲಕ್ಷಣನಾದ ಪರಮಾತ್ಮ) (೨) ಜೀವರು. (ಚೇತನಾತ್ಮರು ಮಾನವ-ಪಶು ಕ್ರಿಮಿ ಕೀಟಾದಿಗಳು. ಈವರ್ಗ "ಜಂಗಮ ವರ್ಗ". ಲತೆ ವೃಕ್ಷಾದಿಗಳು "ಸ್ಥಾವರ ವರ್ಗ") (೩) ಜಡಪದಾರ್ಥಗಳು (ಸ್ವತ ಏವ ಪ್ರವೃತ್ತಿಯಿಲ್ಲದ ಜಡಗಳು). ಭೇದ (ತಾರತಮ್ಯಭಾವ)ವನ್ನು ಹೇಳಬೇಕಾ ದರೆ, ಇವುಗಳ ಪೈಕಿ ಯಾವುದಾದರೂ ಎರಡೆರಡು ವಸ್ತುಗಳನ್ನು ಗಣನೆಗೆ ತೆಗೆದು ಕೊಂಡರೆ : (೧) ಈಶ = ಈಶ. ಇದು ಅಭೇದ. ಪರಮಾತ್ಮನ ಗುಣರೂಪ ಕ್ರಿಯಾದಿಗಳಿಗೆ ಭೇದವಿಲ್ಲ. ಸ್ವಗತಭೇಧವಿವರ್ಜಿತನು. ಇದರಿಂದ ಈ ವರ್ಗವು ಪಂಚಭೇದದಲ್ಲಿ ಕೊಡುವುದಿಲ್ಲ. (೨) ಈಶ-ಜೀವ ಈ ಜೀವೇಶ ಭೇದ ಸ್ವತಸ್ಸಿದ್ಧವಾದುದು. (೩) ಈಶ = ಜಡ. ಈ ಜಡೇಶಭೇದವು ಎರಡ ನೆಯದು. (೪) ಜೀವ -ಜೀವ ಇದು ಮೂರನೆಯದು. (೫) ಜೀವ-ಜಡ. ಇದು ನಾಲ್ಕನೆಯದು. (೬) ಜಡ-ಜಡ ಭೇದ ಇದು ಐದನೆಯದು. ಹೀಗೆ "ಪಂಚಭೇದ"ಗಳು ಸಿದ್ಧವಾಗಿವೆ. ಪ್ರಪಂಚ, ಅಂದರೆ ಪಂಚಗಳಿಂದ (ಈ

ಪಂಚಭೇಧಗಳಿಂದ) ಯುಕ್ತದದ್ದೇ ಈ ಜಗತ್ತು. ಈ ಪಂಚಭೇದಗಳಿಂದ ಕೂಡಿರುವುದರಿಂದಲೇ. ಈ ಜಗತ್ತಿಗೆ "ಪ್ರಪಂಚ" ಎಂದು ಹೆಸರು.

**ಪಂಚರೂಪಾತ್ಮಕ**= ಪರಮಾತ್ಮನು ಜಗತ್ತಿನ ಸೃಷ್ಟ್ಯಾದಿಕಾರ್ಯಗಳನ್ನು ನಡೆಸಲು (೧) ಅನಿರುದ್ಧ (೨) ಪ್ರದ್ಯುಮ್ನ (೩) ಸಂಕರ್ಷಣ (೪) ವಾಸುದೇವ ಮತ್ತು (೫) ನಾರಾಯಣ ಎಂಬ ಪಂಚರೂಪಗಳಿಂದ ಪ್ರಕಟನಾದನು. ಇವೇ ಶ್ರೀಹರಿಯ ಪ್ರಾದುರ್ಭಾವರೂಪಗಳು. ಕಾರಣಕಾರ್ಯರೂಪಗಳು. ಅನಿರುದ್ಧ ಮತ್ತು ಪ್ರದ್ಯುಮ್ನರೂಪಗಳಿಂದ ಬ್ರಹ್ಮಾಂಡದ ಹೊರಗೆ ಸೂಕ್ಷ್ಮ ಸೃಷ್ಟಿ. ಬ್ರಹ್ಮಾಂಡ ಸೃಷ್ಟಿ ಮತ್ತು ಸ್ಥೂಲಸೃಷ್ಟಿ ಹಾಗೂ ಸೃಷ್ಟವಾದ ಜಗತ್ತಿನ ಪಾಲನ ಕಾರ್ಯ (ಸ್ಥಿತಿ), ಸಂಕರ್ಷಣರೂಪದಿಂದ ಮಹರುದ್ರದೇವರಲ್ಲಿ ಸ್ಥಿತನಾಗಿ ಜಗತ್ತಿನ ಲಯ. ವಾಸುದೇವರೂಪದಿಂದ ಮೋಕ್ಷ ಪ್ರದತ್ವ ಮತ್ತು ನಾರಾಯಣ ರೂಪದಿಂದ ಮುಕ್ತರು, ಅಮುಕ್ತರು ಮತ್ತು ಸಮಸ್ತಜಗತ್ತಿಗೂ ಆಶ್ರಯಪ್ರದತ್ವ. ಈ ರೀತಿ ಜಗದ್ವ್ಯಾಪಾರ ರೂಪವಾದ ಕಾರ್ಯಕಾರಣ ವಿಶೇಷಗಳು. ಪಂಚವಿಂಶತಿತತ್ತ್ವಗಳು ಅಂದರೆ, ೨೫ ತತ್ತ್ವಗಳು. ಇವು ಯಾವುವೆಂದರೆ

| | | |
|---|---|---|
| ಅವ್ಯಕ್ತ ತತ್ತ್ವ | =೧ | ಸೂಕ್ಷ್ಮ ತತ್ತ್ವಗಳು |
| ಮಹತತ್ತ್ವ | =೧ | |
| ಅಹಂಕಾರತತ್ತ್ವ | =೧ | |
| ಮನಸ್ತತ್ವ | =೧ | |
| ಜ್ಞಾನೇಂದ್ರಿಯಗಳು | =೫ | ಸ್ಥೂಲ ತತ್ವಗಳು |
| ಕರ್ಮೇಂದ್ರಿಯಗಳು | =೫ | |
| ಪಂಚಭೂತಗಳು | =೫ | |
| ಪಂಚತನ್ಮಾತ್ರಗಳು | =೫ | |
| ಒಟ್ಟು | =೨೪ | |

ಈ ೨೪ ತತ್ತ್ವಗಳಿಗೆ ನಿಯಾಮಕವಾದ ಪ್ರಧಾನತತ್ತ್ವವೇ ಭಗವತ್ತತ್ತ್ವ. ಅಂದರೆ, ಪರಮಾತ್ಮನೇ ೨೫ನೆಯ ತತ್ತ್ವ. ಇದರ ಮೇಲೆ ತತ್ತ್ವವಿಲ್ಲ.

## ವ್ಯಾಖ್ಯಾನಗಳು :

ಈ ಜಗತ್ತು (ಪ್ರಪಂಚವು) ಪಂಚಭೇದಗಳಿಂದ ಕೂಡಿದ್ದು. ಇಂತಹ ಜಗತ್ತಿಗೆ ಪರಮಾತ್ಮನು ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣಾದಿ ರೂಪಗಳಿಂದ ಮುಖ್ಯತ್ವೇನ ನಿಯಾಮಕನು. ಬ್ರಹ್ಮ, ವಾಯು, ರುದ್ರ, ಇಂದ್ರಾದಿ ಸಮಸ್ತದೇವತೆಗಳೂ ಶ್ರೀಹರಿಗೆ ಸೇವಕರು. ಆವನೊಬ್ಬನೇ ಈಶ ಉಳಿದವರೆಲ್ಲರೂ ಅವನ ದಾಸರು. ಚತುರ್ವಿಂಶತಿ ತತ್ತ್ವಗಳ ಸೃಷ್ಟಿ, ನಿಯಮನ ಮತ್ತು ಲಯ ಇವುಗಳಿಗೆ ಮುಖ್ಯ ಕಾರಣನಾದ ೨೫ನೆಯ ತತ್ತ್ವವೆಂದು ಪ್ರಸಿದ್ಧನಾದ ಶ್ರೀಹರಿಯೇ ಸರ್ವೋತ್ತಮ ದೇವತೆಯು. ಪಂಚಭೇದ ಮತ್ತು ತಾರತಮ್ಯಗಳಿಂದ ಪ್ರತಿಪಾದಿತವಾದ ದ್ವೈತಸಿದ್ಧಾಂತರೂಪವಾದ "ತತ್ತ್ವವಾದ" ಎಂಬ ಸಚ್ಛಾಸ್ತ್ರಗಳನ್ನು ಲೋಕಕ್ಕೆ ಬೋಧಿಸಿದ, ಮುಂದಿನ ಕಲ್ಪದಲ್ಲಿ ಬ್ರಹ್ಮಪದವಿಗೆ ಬರುವ ಆನಂದತೀರ್ಥರನ್ನು ಸ್ಮರಿಸುತ್ತೇನೆ. ಆನಂದತೀರ್ಥರು ಎಂಬುದಕ್ಕೆ ಪ್ರಮಾಣ : **ಆನಂದ ರೂಪಸ್ಯ ಪರಸ್ಯ ಪಾತ್ರಧೀರಾನಂದ । ಸಂದಾಯಿ ಸುಶಾಸ್ತ್ರ ಕೃತ್ಸ್ನಯತ್ । ಆನಂದತೀರ್ಥೇತಿ ಪದಂ ಗುರೂದಿತಂ ಬಭೂವ ತಸ್ಯಾತ್ಯನುರೂಪರೂಪಕವ್ ।"** ಎಂದು **ಸಮಧ್ವ ವಿಜಯೋಕ್ತಿಯ** ಪ್ರಕಾರ, ಶ್ರೀಮದಾಚಾರ್ಯರಿಂದ ಪ್ರಣೀತವಾದ ಶಾಸ್ತ್ರಗಳು. ಪರಮಮಂಗಳಕರವಾದ ಮೋಕ್ಷವನ್ನು ಕೊಡಿಸುವುದರಿಂದ, ಅವರಿಗೆ "ಆನಂದತೀರ್ಥರು" ಎಂದು ಅವರ ಗುರುಗಳಾದ ಶ್ರೀ ಅಚ್ಯುತಪ್ರೇಕ್ಷಾಚಾರ್ಯರು ಪ್ರಸಿದ್ಧಿಪಡಿಸಿದರು. ಆನಂದ = ಸಂತೋಷ (ಮೋಕ್ಷ ಸುಖ)- ತೀರ್ಥ = ಸಚ್ಛಾಸ್ತ್ರಗಳು ಎಂದು ಭಾವ. ಸಮಸ್ತ ಜೀವವರ್ಗ ಮತ್ತು ಜಡವರ್ಗ "ಕ್ಷರ" ಎಂದು ಕರೆಯಿಸಲ್ಪಡುತ್ತವೆ. ಈ ಕ್ಷರವರ್ಗದಲ್ಲಿ ಪಂಚಭೇದಗಳು. ಶ್ರೀ ರಮಾದೇವಿಯರು "ಅಕ್ಷರ"ಳು. ಶ್ರೀ ರಮಾದೇವಿಯರಿಗೂ

ಮತ್ತು ಪರಮಾತ್ಮನಿಗೂ ಭೇದವು ನಿತ್ಯಸಿದ್ಧವೇ. ಶ್ರೀ ಲಕ್ಷ್ಮೀದೇವಿಯರಿಗಿಂತ ಅನಂತಾನಂತಗುಣಗಳಿಂದ ಶ್ರೀ ಹರಿಯು ಅಧಿಕನು. ರಮಾದೇವಿಯರು ಪರಮಾತ್ಮನ ಅಧೀನರಾಗಿ ಜಗದ್ವ್ಯಾಪಾರಾದಿಗಳನ್ನು ಮಾಡುತ್ತಾರೆ.

## (೨) "ಭಾವದರ್ಪಣಟೀಕಾ" ವ್ಯಾಖ್ಯಾನ :

**"ಧ್ಯೇಯೋ ಪಂಚಮುಖೋ ರುದ್ರಃ"**— ಎಂದು ತಂತ್ರಸಾರ ಪ್ರಮಾಣದಿಂದ "ಪಂಚಮುಖಿ" ನೆಂದರೆ ಐದು ತಲೆಗಳುಳ್ಳ "ರುದ್ರದೇವರು" ಎಂದರ್ಥ. ವಿಷ್ಣುವೇ ಸರ್ವೋತ್ತಮನು. ನಂತರ ಶ್ರೀ ರಮಾದೇವಿಯವರು. ಜೀವಕೋಟಿಯಲ್ಲಿ ಬ್ರಹ್ಮ ವಾಯುಗಳು ಜೀವೋತ್ತಮರು. ಅವರ ನಂತರ ಗರುಡ ಶೇಷ ರುದ್ರಾದಿಗಳು ಹೀಗೆ ನೀಚೋಚ್ಚ ಭಾವೋಪೇತವಾದ ತಾರತಮ್ಯ ಜ್ಞಾನವನ್ನೂ ಮತ್ತು ಪರಮಾತ್ಮನಿಂದ ಯುಕ್ತವಾದ ೨೫ ತತ್ತ್ವಗಳ ವಿವರಗಳನ್ನೂ, ಪಂಚಭೇದಗಳನ್ನೂ ಮತ್ತು ಜಗತ್ಸತ್ಯತ್ವವನ್ನೂ ಲೋಕಕ್ಕೆ ಅರುಹಿದವರೇ ಶ್ರೀ ಮದಾನಂದತೀರ್ಥಭಗವತ್ಪಾದರು. ಏತಾದೃಶ ಮಹಿಮೋಪೇತರಾದ ಶ್ರೀ ಮೋದಮುನಿಗಳೇ ಮುಂದಿನ ಬ್ರಹ್ಮಪದವಿಗೆ ಬರುವವರು(ಭಾವಿಬ್ರಹ್ಮರು).

## (೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :

**"ಯದೀಮುಸುಪ್ರದಿವೋ ಮಧ್ವ ಆಧವೇ ಗುಹಾಸಂತಂ ಮಾತರಿಶ್ವಾ ಮಥಾಯತಿ"** ಎಂಬ **ಶ್ರೀ ಬಳಿತ್ಥಾ ಸೂಕ್ತದ** ಪ್ರಮಾಣದಂತೆ, ಈ ಪದ್ಯದಿಂದ ದಾಸವರೇಣ್ಯರು ಶ್ರೀಮದಾನಂದತೀರ್ಥರನ್ನು ಮಹಾತ್ಮಜ್ಞಾನಪೂರ್ವಕ ಸ್ಮರಿಸುತ್ತಾರೆ. ಭಾವಿಬ್ರಹ್ಮರಾದ ಶ್ರೀಮದಾನಂದತೀರ್ಥರನ್ನು ಸ್ಮರಿಸುತ್ತೇನೆ. ಪಂಚಭೇದಯುಕ್ತವಾದ ಈ ಪ್ರಪಂಚಕ್ಕೆ ಅನಿರುದ್ಧ ಪ್ರದ್ಯುಮ್ನ. ಸಂಕರ್ಷಣ ವಾಸುದೇವ ಮತ್ತು ನಾರಾಯಣ ಎಂಬ ಪಂಚರೂಪಾತ್ಮಕನಾದ ಶ್ರೀಹರಿಯೇ ದೇವರು. ಇಂತಹ ಶ್ರೀಹರಿಗೆ ಪಂಚಮುಖಿ (ರುದ್ರದೇವರು) ಇಂದ್ರಾದಿಗಳು ಸೇವಕರು. **"ಧ್ಯೇಯಃ ಪಂಚಮುಖೋರುದ್ರಃ ಸ್ಫಟಿಕಾಮಲಕಾಂತಿಮಾನ್"**– ಎಂದು ತಂತ್ರಸಾರದಲ್ಲಿ ಮಹರುದ್ರದೇವರಿಗೆ "ಪಂಚಮುಖಿ" ನೆಂಬುದಕ್ಕೆ ಪ್ರಮಾಣವಚನವಿದೆ. ಪಂಚವಿಂಶತಿ ತತ್ತ್ವವೆಂಬ ವಿಷಯ

ದಲ್ಲಿ ಪ್ರಮಾಣಃ **"ಪುರುಷೋವ್ಯಕ್ತಂಚ ಮಹಾನಂಹಕಾರೋ ಮನಸ್ಥಥಾ । ಭೂತೇಂದ್ರಿಯಾಣಿ ಶಬ್ದಾದ್ಯಾಃ ಭೂತೇತಾಃ ಪಂಚವಿಂಶತಿಃ ।"** ಎಂದು ತಂತ್ರಸಾರವಚನವಿದೆ. "ಪಂಚಕ" ಎಂದರೆ ಪಂಚೀಕರಣ ಎಂದರ್ಥ. ಇದರ ವಿವರಗಳು : (೧) ಆಕಾಶ ಶಬ್ದದಲ್ಲಿ ಒಂದು ಅಂಶ ಮತ್ತು ಸತ್ವಗುಣದಲ್ಲಿ ಒಂದು ಅಂಶ ಇವೆರಡೂ ಸೇರಿ ಶ್ರೋತ್ರೇಂದ್ರಿಯ (ಕಿವಿ) ವಾಯಿತು. (೨) ವಾಯು ಅಂಶ ಸತ್ವಾಂಶ ಸೇರಿ ತ್ವಗಿಂದ್ರಿಯ (ಚರ್ಮ) ವಾಯಿತು. (೩) ಅಗ್ನಿ ಸತ್ವಾಂಶದಿಂದ ಚಕ್ಷುರಿಂದ್ರಿಯ (ನೇತ್ರ) ವಾಯಿತು. (೪) ಅಪ್ಪು ಸತ್ವಾಂಶದಿಂದ ಜಿಹ್ವೇಂದ್ರಿಯ (ನಾಲಿಗೆ) ವಾಯಿತು. (೫) ಪೃಥ್ವೀ ಸತ್ವಾಂಶದಿಂದ ಘ್ರಾಣೇಂದ್ರಿಯ (ಮೂಗು) ವಾಯಿತು. ಈ ರೀತಿಯಲ್ಲಿ ಪಂಚಮಹಾಭೂತಗಳು ಅವುಗಳ ತನ್ಮಾತ್ರಾಸಹಿತ ಸತ್ವಾಂಶ ಕೂಡಲಾಗಿ. "ಜ್ಞಾನಪಂಚಕ" (ಪಂಚ ಜ್ಞಾನೇಂದ್ರಿಯಗಳು) ಉತ್ಪತ್ತಿಯಾದುವು. ಇದೇ ರೀತಿಯಲ್ಲಿ ಪಂಚ ಕರ್ಮೇಂದ್ರಿಯಗಳ ಉತ್ಪತ್ತಿ ಈ ವಿವರಗಳನ್ನು ತಿಳಿಯಬೇಕು.

### (೪) ತಾಮ್ರಪರ್ಣೀಯ ವ್ಯಾಖ್ಯಾನ :

ಈ ಜಗತ್ತು ಸುಳ್ಳು (ಮಿಥ್ಯಾಭೂತವಾದುದದ್ದು). ಪರಮಾತ್ಮನಿಗೆ ಜ್ಞಾನಾನಂದಾದಿಗುಣಗಳಿಲ್ಲ. ನಿರ್ಗುಣನು-ಈಶ ಜೀವರಲ್ಲಿ ಅಭೇದ. ಜೀವ, ಜಡಗಳಲ್ಲಿ ಪರಸ್ಪರ ಭೇದಗಳಿಲ್ಲ" ಎಂಬ ಅದ್ವೈತವಾದ (ಅಭೇದವಾದವು) ಪ್ರಪಂಚದಲ್ಲಿ ತುಂಬಿ, ಸರ್ವತ್ರವ್ಯಾಪಕವಾಗಿ ಹರಡುತ್ತಿರಲು. ಈ ಅಜ್ಞಾನ ವನ್ನು ಕಳೆದು, ಪಂಚಭೇದ, ತಾರತಮ್ಯಾದಿಗಳನ್ನು ಸಮರ್ಥಿಸುವ ಸಚ್ಛಾಸ್ತ್ರ ಗಳನ್ನು ಉಪದೇಶಿಸಿ ಸಜ್ಜನರ ಆತ್ಮೋದ್ಧಾರಕರಾದ ಶ್ರೀಮದಾನಂದತೀರ್ಥ ಮುನಿಗಳನ್ನು ಈ ಪದ್ಯದಿಂದ ಮತ್ತೊಮ್ಮೆ ಸ್ಮರಿಸುತ್ತಾರೆ.

ಪಂಚವಿಂಶತಿತತ್ತ್ವಗಳು ಹಾಗೂ ಅವುಗಳ ಅಭಿಮಾನಿದೇವತೆಗಳು **ಅವರುಗಳಲ್ಲಿ ಗುಣತಾರತಮ್ಯ ವಿವರಗಳನ್ನು ತಿಳಿಯಬೇಕು.**

## ಗುಣತಾರತಮ್ಯ ವಿವರ

| ಕ್ರಮ ಸಂಖ್ಯೆ | ತತ್ತ್ವಗಳು | ಅಭಿಮಾನಿ | ದೇವತೆ | ವಿವರಗಳು |
|---|---|---|---|---|
| ೧ | ಭಗವತ್ತತ್ತ್ವ | ಮುಖ್ಯತ್ವೇನ | ಶ್ರೀ ಹರಿ | ಸರ್ವೋತ್ತಮ |
| ೨ | ಅವ್ಯಕ್ತ ತತ್ತ್ವ | ತ್ರಿಗುಣಗಳು | ಶ್ರೀ ರಮಾ | ಹರಿಗಿಂತ ಅನಂತ ಗುಣಗಳಿಂದ ಕಡಿಮೆ |
| ೩ | ಮಹತತ್ತ್ವ | ವಿಜ್ಞಾನ | ಬ್ರಹ್ಮ-ವಾಯು | ರಮಾಗಿಂತ ಕೋಟಿ ಗುಣಗಳಿದ ಕಡಿಮೆ |
| ೪ | " " | ವೇದಾಭಿಮಾನೀ | ಸರಸ್ವತಿ | ತಮ್ಮ ಪತಿಗಿಂತ ಒಂದು ನೂರು ಗುಣ ಕಡಿಮೆ |
| ೫ | " " | ಭಕ್ತ್ಯಭಿಮಾನೀ | ಭಾರತೀ | |
| ೬ | ಅಹಂಕಾರತತ್ತ್ವ | ಕಾಲಾಭಿಮಾನಿ | ಗರುಡ | ಭಾರತೀ ಸರಸ್ವತಿಯರಿಗಿಂತ ನೂರು ಗುಣ ಕಡಿಮೆ |
| ೭ | " " | ಜೀವಾಭಿಮಾನೀ | ಶೇಷ | |
| ೮ | " " | ಮನೋಭಿಮಾನೀ | ರುದ್ರ | |
| ೯ | " " | ಗರುಡಪತ್ನಿ | ಸೌಪರ್ಣೀ | ತಮ್ಮ ತಮ್ಮ ಪತಿಗಳಿಗಿಂತ ಒಂದು ನೂರು ಗುಣ ಕಡಿಮೆ |
| ೧೦ | " " | ಶೇಷಪತ್ನಿ | ವಾರುಣೀ | |
| ೧೧ | " " | ರುದ್ರಪತ್ನಿ | ಉಮಾ | |
| ೧೨ | ಉಪಮನಸ್ಸು | ಐಶ್ವರ್ಯಾಭಿಮಾನೀ | ಇಂದ್ರ | ಮೇಲಿನವರಿಗಿಂತ ಒಂದು ನೂರುಗುಣ ಕಡಿಮೆ |
| | " " | ಅವೈರಾಗ್ಯಾಧಿಪತಿ | ಕಾಮ | |

ಈ ರೀತಿಯಾಲ್ಲಿ ಪಂಚಜ್ಞಾನೇಂದ್ರಿಯಗಳು–ಪಂಚಕರ್ಮೇಂದ್ರಿಯಗಳು– ಪಂಚಭೂತಗಳು ಮತ್ತು ಪಂಚತನ್ಮಾತ್ರಗಳು ಇವುಗಳ ಅಭಿಮಾನಿಗಳಾದ ತತ್ವೇಶರ ಗುಣತಾರತಮ್ಯ ವಿವರಗಳನ್ನು ತಿಳಿಯಬೇಕು.

**(೫) "ಗುರು ಹೃದಯ ಪ್ರಕಾಶಿಕಾ" ವ್ಯಾಖ್ಯಾನ :**

ದುರ್ಮತನಿರಾಕರಣಪೂರ್ವಕ. ಸತ್ಸಿದ್ಧಾಂತ ಸ್ಥಾಪನೆಯನ್ನು ಸಂಗ್ರಹವಾಗಿ ವರ್ಣಿಸುತ್ತಾ ಸ್ತುತಿಸುತ್ತಾರೆ, ಸ್ವರೂಪಸಿದ್ಧವಾದ, ಅನಾದಿನಿತ್ಯವಾದ ಐದು ಭೇದಗಳುಳ್ಳ ಈ ಸತ್ಯವಾದ ಜಗತ್ತಿಗೆ ಅನಿರುದ್ಧಾದಿ ಐದು ರೂಗಳುಳ್ಳ ವಿಷ್ಣುವೇ ಸರ್ವೋತ್ತಮನು **"ಮುಖಾನಿ ಪಂಚೋಪನಿಷತ್ತವೇಶ"** ಎಂಬ ಶ್ರೀಮದ್ಭಾಗವತ ವಾಕ್ಯದಂತೆ ಪಂಚಮುಖನೆಂಬ ರುದ್ರ ಮತ್ತು ಇಂದ್ರಾದಿಗಳು ವಿಷ್ಣುಸೇವಕರು. ಅವ್ಯಕ್ತಾದಿ ಇಪ್ಪತ್ತೈದು ತತ್ವಗಳನ್ನೂ **"ವಿಷ್ಣು ಸರ್ವೋತ್ತಮೋಥ ಪ್ರಕೃತಿ"** ಎಂದು ತಾರತಮ್ಯೋಕ್ತಪ್ರಕಾರ ವಿಷ್ಣು, ರಮಾ, ಬ್ರಹ್ಮಾದಿಗಳ ತಾರತಮ್ಯದ ವಿವರಗಳನ್ನೂ ಸಹ ಬೋಧಿಸಿದ ಮುಂದೆ ಬ್ರಹ್ಮಪದವಿಗೆ ಬರುವ ಶ್ರೀಮದಾನಂದತೀರ್ಥಮಹಾಮುನಿಗಳನ್ನು ಸದಾ ಸ್ಮರಿಸುತ್ತೇನೆ.

**(೬) ಜಮುಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ:**

ಈ ಪದ್ಯದಿಂದ ಮತ್ತೊಮ್ಮೆ ಶ್ರೀಮದಾನಂದತೀರ್ಥರನ್ನೇ ನಮಿಸಿ, ಸ್ತುತಿಸುತ್ತಾರೆ. ಈ ವ್ಯಾಖ್ಯಾನದ ಪ್ರಕಾರ ೨೫ ತತ್ವಗಳು ಹೀಗಿವೆ. ಪಂಚಭೂತಗಳು = ೫; ತನ್ಮಾತ್ರಾಗಳು = ೫; ಇಂದ್ರಿಯಗಳು = ೧೦; ಬುದ್ಧಿ = ೧; ಅಹಂಕಾರ = ೧; ಚಿತ್ತ = ೧ ಮತ್ತು ಮೂಲ ಪ್ರಕೃತಿ = ೧. ಇವೆಲ್ಲಾ ಒಟ್ಟು ಸೇರಿ ೨೫ ತತ್ವಗಳು.

**ಸಾರಾಂಶ :**

ಈ ಪದ್ಯದಿಂದ ಶ್ರೀ ಮದಾನಂದತೀರ್ಥಭಗವತ್ಪಾದರನ್ನು ಸ್ತುತಿಸುತ್ತಾರೆ. ಈ ಜಗತ್ತು ಪಂಚಭೇದಾತ್ಮಕವಾದದ್ದು. ಇಂತಹ ಪ್ರಪಂಚದ ಸೃಷ್ಟಿ ಸ್ಥಿತಿ ಲಯಾದಿಗಳಿಗೆ ಅನಿರುದ್ಧಾದಿ ಪಂಚರೂಪಾತ್ಮಕನಾದ ಪರಮಾತ್ಮನೇ ಮುಖ್ಯ ಕಾರಣನು. ಅತ ಏವ ಸರ್ವೋತ್ತಮನು. "ಪಂಚಮುಖ"

ಎಂಬ ಶಬ್ದಕ್ಕೆ ಅನೇಕ ಅರ್ಥಗಳಿವೆ; (೧) ಮೊದಲಿಗೆ ಐದು ಮುಖಗಳಿದ್ದ ಬ್ರಹ್ಮದೇವರು. (೨) ಮೂಲದಲ್ಲಿಯೇ ಹನುಮ, ನರಸಿಂಹ, ವರಾಹ, ಗರುಡ ಮತ್ತು ಹಯವದನ ಹೀಗೆ ಐದು ಮುಖಗಳುಳ್ಳ ಪಂಚಮುಖೀ ಪ್ರಾಣ ದೇವರು. (೩) "ಪಂಚಮುಖ"ನೆಂದು ಪ್ರಖ್ಯಾತನಾದ ರುದ್ರದೇವರು. ರಮಾದಿ ಸಮಸ್ತ ದೇವತೆಗಳೂ ಶ್ರೀ ಹರಿಗೆ ಸೇವಾನುಸೇವಕರು. ಈ ಪ್ರಕಾರ ಶ್ರೀ ವಿಷ್ಣು ಸರ್ವೋತ್ತಮತ್ವ. ತಾರತಮ್ಯಜ್ಞಾನ ಪಂಚಭೇದಗಳ ವಿವರ, ಇವೇ ಮುಂತಾದ ಪ್ರಮೇಯಗಳನ್ನು ಸಂಪ್ರದಾಯಪೂರ್ವಕ ತಮ್ಮ ಶಿಷ್ಯಕೋಟಿಗೆ ಉಪದೇಶ ಮಾಡಿದಂಥ ಶ್ರೀಮದಾನಂದತೀರ್ಥರನ್ನು ಮನಸಾ ಸ್ಮರಿಸಿ, ನಮಸ್ಕರಿಸುತ್ತೇನೆ.

## ಪದ್ಯ (೧೦)

**ವಾಮದೇವ ವಿರಂಚಿತನಯ ಉ।**
**ಮಾಮನೋಹರ ಉಗ್ರ ಧೂರ್ಜಟಿ ।**
**ಸಾಮಜಾಜಿವಸನಭೂಷಣ ಸುಮನಸೋತ್ತಂಸ ॥**
**ಕಾಮಹರ ಕೈಲಾಸಮಂದಿರ ।**
**ಸೋಮಸೂರ್ಯಾನಲವಿಲೋಚನ ।**
**ಕಾಮಿತಪ್ರದ ಕರುಣಿಸೆಮಗೆ ಸದಾ ಸುಮಂಗಳವ ॥೧೦॥**

**ಅವತರಣಿಕೆ :** ಶ್ರೀ ವಾಯುದೇವರಿಗೆ ಅವರರಾದ (ಕಡಿಮೆ) ಮನೋಭಿಮಾನಿಗಳಾದ ಶ್ರೀ ರುದ್ರದೇವರನ್ನು ಈ ಪದ್ಯದಿಂದ ಸ್ತೋತ್ರ ಮಾಡುತ್ತಾರೆ.

**ಪ್ರತಿಪದಾರ್ಥ :**

**ವಾಮದೇವ**= ಮಹರುದ್ರದೇವರು ತಮ್ಮ ಎಡಭಾಗ (ವಾಮಭಾಗ) ದಲ್ಲಿರುವ ಪರಮಾತ್ಮನನ್ನು ಸರ್ವದಾ ಉಪಾಸನೆ ಮಾಡುವಮಾಡುತ್ತಿರು

ವುದರಿಂದ "ವಾಮದೇವ" ಎಂದು ಪ್ರಸಿದ್ಧರು. **ವಿರಿಂಚಿತನಯ** = ಬ್ರಹ್ಮದೇವರ ಭ್ರೂಮಧ್ಯದಿಂದ ಜನಿಸಿದವರು. **ಉಮಾಮನೋಹರ** = ಪಾರ್ವತೀದೇವಿಯವರ ಮನಸ್ಸನ್ನು ಸಂತೋಷಪಡಿಸುತ್ತಿರುವ **ಉಗ್ರ** = ಜಗತ್ಸಂಹಾರ (ಲಯ) ರೂಪವಾದ ಕ್ರೂರಕಾರ್ಯವುಳ್ಳ **ಧೂರ್ಜಟಿ** = ಧೂಮ್ರವರ್ಣದಂತೆ ಜಟೆಯುಳ್ಳ. **ಸಾಮಜ** = ಆನೆಯ **ಅಜಿನ** = ಚರ್ಮವನ್ನೇ **ವಸನಭೂಷಣ** = ವಸ್ತ್ರವನ್ನಾಗಿ ಅಲಂಕರಿಸಿ ಕೊಂಡಿರುವ (ಗಜಚರ್ಮಾಂಬರನಾದ) **ಸುಮನಸ** = ಇಂದ್ರಾದಿದೇವತೆ ಗಳಿಂದ **ಉತ್ತಂಸ** = ಉತ್ತಮರಾದ **ಕಾಮಹರ** = ಮನ್ಮಥನನ್ನು ತಮ್ಮ ನೇತ್ರಾಗ್ನಿಯಿಂದ ಭಸ್ಮಮಾಡಿದ, **ಕೈಲಾಸ ಮಂದಿರ** = ಕೈಲಾಸಪರ್ವತ ವನ್ನೇ ಮನೆಯನ್ನಾಗಿ ಉಳ್ಳ **ಸೋಮ** = ಚಂದ್ರನನ್ನು ಎಡ ನೇತ್ರದಲ್ಲಿಯೂ **ಸೂರ್ಯ** = ಸೂರ್ಯನನ್ನು ಬಲನೇತ್ರದಲ್ಲಿಯೂ **ಅನಲ** = ಅಗ್ನಿಯನ್ನು ಫಾಲ ನೇತ್ರದಲ್ಲಿಯೂ (ಹಣೆಯಲ್ಲಿ) ಉಳ್ಳ **ವಿಲೋಚನ** = ವಿಶೇಷವಾದ ನೇತ್ರ ತ್ರಯವುಳ್ಳವರೇ (ವಿರೂಪಾಕ್ಷ-ಮುಕ್ಕಣ್ಣ) **ಕಾಮಿತಪ್ರದ** = ಬೇಡಿದ ಇಷ್ಟಾ ರ್ಥಗಳನ್ನು ಕೊಡುವ **ಎಮಗೆ** = ನಮ್ಮೆಲ್ಲರಿಗೂ **ಸದಾ** = ಯಾವಾಗಲೂ **ಸುಮಂಗಳವ** = ಸಮೀಚೀನವಾದ ಜ್ಞಾನ ಸಂಪತ್ತನ್ನು (ಶುಭಫಲಗಳನ್ನು) **ಕರುಣಿಸು** = ಅಂತಃಕರಣದಿಂದ ಕೊಡುವವನಾಗು ಎಂದು ಪ್ರಾರ್ಥಿಸುತ್ತಾರೆ.

**ತಾತ್ಪರ್ಯ :**

ಮಹರುದ್ರದೇವರು ಮನೋಭಿಮಾನಿಗಳು. "ವಾಮದೇವ" ಎಂದು ಅವರಿಗೆ ಹೆಸರು. ಸೃಷ್ಟಿಕಾಲದಲ್ಲಿ ಬ್ರಹ್ಮದೇವರ ಹುಬ್ಬಿನಿಂದ ಹುಟ್ಟಿದವರು. (ಅಜಭ್ರುಕುಟಿಸಂಭೂತ) ಉಮಾದೇವಿಯವರ ಮನಸ್ಸನ್ನು ಸದಾ ಆನಂದ ಪಡಿಸುವವರು. ಲವಣ ಸಮುದ್ರದಲ್ಲಿ ಹತ್ತು ಕಲ್ಪಗಳ ಪರ್ಯಂತ ಉಗ್ರ ವಾದ ತಪಸ್ಸನ್ನು ಆಚರಿಸಿ, ಶ್ರೀಹರಿಯನ್ನು ಒಲಿಸಿದರು. ಇದರಿಂದ ಅವರಿಗೆ "ಉಗ್ರತಪ" ಎಂದು ಹೆಸರಾಯಿತು. ಶ್ರೀಮನ್ನಾರಾಯಣನ ಪಾದದಿಂದ ಹುಟ್ಟಿದ ಗಂಗೆಯನ್ನು ತಮ್ಮ ತಲೆಯಲ್ಲಿ ಧರಿಸಲು ತಮ್ಮ ಜಟೆಯನ್ನು ಆಕಾಶ ದಲ್ಲಿ ಒಗೆದು ಹರಡಿದರು. ಇದರಿಂದ ಅವರಿಗೆ "ವ್ಯೋಮಕೇಶ" ಅಥವಾ "ಧೂರ್ಜಟಿ" ಎಂಬ ಹೆಸರಾಯಿತು. ಆನೆಯ ಚರ್ಮವನ್ನೇ ಮೇಲು ಹೊದಿಕೆಯಾಗಿ ಉಳ್ಳವರು. ಇಂದ್ರಾದಿ ದೇವತೆಗಳಿಗೆ ಉಪದೇಶಕರು. ತಮ್ಮ

ತಪಸ್ಸಿಗೆ ವಿಘ್ನವನ್ನುಂಟುಮಾಡಲು ಯತ್ನಿಸಿದ ಮನ್ಮಥನನ್ನು ತಮ್ಮ ಫಾಲ ನೇತ್ರದಿಂದ ಹೊರಟ ಅಗ್ನಿಯಿಂದ ಭಸ್ಮ ಮಾಡಿದರು. ಕೈಲಾಸಪರ್ವತವೇ ಅವರ ನಿವಾಸಸ್ಥಳ. ಬಲಗಣ್ಣಿನಲ್ಲಿ ಸೂರ್ಯನನ್ನೂ ಎಡಗಣ್ಣಿನಲ್ಲಿ ಚಂದ್ರನನ್ನೂ ಮತ್ತು ಹಣೆಗಣ್ಣಿನಲ್ಲಿ ಅಗ್ನಿಯನ್ನೂ ಉಳ್ಳ ತ್ರಿನೇತ್ರರು. ಮನೋಭಿಮಾನಿಗಳಾದ್ದರಿಂದ, ನಮ್ಮ ಮನಸ್ಸಿನ ಅಭಿಲಾಷೆಗಳನ್ನು ಪೂರ್ತಿ ಮಾಡುವ ಸಾಮರ್ಥ್ಯವುಳ್ಳವರು. ಏತಾದೃಶಮಹಿಮಾತಿಶಯಗಳುಳ್ಳ ಮಹರುದ್ರದೇವರು ನಮಗೆ ನಿರಂತರದಲ್ಲಿಯೂ ಶುಭವನ್ನುಂಟುಮಾಡಲಿ ಎಂದು ಪ್ರಾರ್ಥಿಸುತ್ತಾರೆ.

**ವ್ಯಾಖ್ಯಾನಗಳು :**

**(೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :**

ಶ್ರೀ ಮಹರುದ್ರದೇವರಿಗೆ "ವಾಮದೇವ" ಎಂದು ಹೆಸರು ಬರಲು ಪ್ರಮಾಣ : **ಈಶಾನ್ಯಕೋಣೇ ಸಂಸ್ಥಿತೋ ಯಸ್ತು ರುದ್ರೋಹ್ಯವಾಪ ದೇವೋ ವಾಮದೇವೇತಿ ಸಂಜ್ಞಾವ್ । ಸ್ವವಾಮಭಾಗೇ ಸಂಸ್ಥಿತಂ ವಾಸುದೇವಂ ಸ್ವಯೋಗ್ಯಭಕ್ತ್ಯಾ ಪೂಜತೇ ಸರ್ವದೈವ । ಅತೋ ರುದ್ರೋ ವಾಮದೇವೇತಿ ಸಂಜ್ಞಾಂ ಹ್ಯವಾಪ ಜ್ಯೇಷ್ಠತ್ವಮಥೋತ್ತಮತ್ವವ್ ॥** ಹೀಗೆಂದು **ಗರುಡ ಪುರಾಣದಲ್ಲಿ ಬ್ರಹ್ಮಕಾಂಡದ** ವಚನವಿದೆ. ಹೃತ್ಕಮಲದ ಈಶಾನ್ಯಮೂಲೆಯು ರುದ್ರದೇವರ ಸ್ಥಾನ. ತಮ್ಮ ಎಡಭಾಗದಲ್ಲಿರುವ (ವಾಮಭಾಗ) ಶ್ರೀ ವಾಸುದೇವನಾಮಕನಾದ ಪರಮಾತ್ಮನನ್ನು ಭಕ್ತಿಯಿಂದ ಪೂಜಿಸುತ್ತಿರುತ್ತಾರೆ. ಈ ಕಾರಣದಿಂದ "ವಾಮದೇವ" ಎಂದು ಹೆಸರು. ಶ್ರೀ ಸಂಕರ್ಷಣನಾಮಕಪರಮಾತ್ಮನು ರುದ್ರದೇವರಲ್ಲಿ ಸ್ಥಿತನಾಗಿ ಅವರ ಮೂಲಕ ಜಗತ್ತಿನ ಲಯಕಾರ್ಯವನ್ನು ಮಾಡಿಸುವುದರಿಂದ "ಉಗ್ರ" ಎಂಬ ಅಭಿಧಾನ. ಧೂಮ್ರವರ್ಣದ ಜಟೆಯುಳ್ಳವರಾದ್ದರಿಂದ ಧೂರ್ಜಟಿ" ಎಂದು ಹೆಸರು. ಚಂದ್ರಕಿರಣೋಪಾದಿಯಲ್ಲಿ ತೇಜೋಮಯವಾದ ಪ್ರಖರ ಕಾಂತಿಯುಕ್ತವಾದ ಬಲನೇತ್ರ ಮತ್ತು ಅಗ್ನಿಯೋಪಾದಿಯಲ್ಲಿ ದಾಹಕಶಕ್ತಿಯುಳ್ಳ ಮಧ್ಯಗತನೇತ್ರ (ಫಾಲನೇತ್ರ) ಈ ರೀತಿ ವಿಶಿಷ್ಟವಾದ ಮೂರು ಕಣ್ಣುಗಳುಳ್ಳವರು (ವಿಲೋಚನ). ಬೇಡಿದ ಇಷ್ಟಾರ್ಥಗಳನ್ನು ನಮಗೆ ಕೊಡುವುದಕ್ಕೆ ಯೋಗ್ಯತೆ ಎಷ್ಟು ಇದೆಯೋ ಅಷ್ಟು ಮಾತ್ರ ಕೊಡತಕ್ಕವರು.

ಅಂತಹ ಮಹರುದ್ರದೇವರು ನಮಗೆ ಸಮೀಚಿನವಾದ, ಭೇದಜ್ಞಾನರೂಪವಾದ ಜ್ಞಾನಸಂಪತ್ತನ್ನು (ಸುಮಂಗಳವ). ಅಂತಃಕರಣದಿಂದ ಕೊಡುವವರಾಗಲಿ (ಕರುಣಿಸು ಎಮಗೆ) ಎಂದು ಪ್ರಾರ್ಥಿಸಿದ್ದಾರೆ.

**(೨) ಭಾವಪ್ರಕಾಶಿಕಾ ವ್ಯಾಖ್ಯಾನ :**

"ವಾಮದೇವ" ಎಂದರೆ ಮೃದುಸ್ವಭಾವವುಳ್ಳ ದೇವತೆ ಎಂದರ್ಥ. ಶತೃಗಳಿಗೆ ಉಗ್ರರೂಪರಾದ್ದರಿಂದಲೂ ಮತ್ತು ಪ್ರಳಯಕಾಲದಲ್ಲಿ ಉಗ್ರರೂಪದಿಂದ ಪ್ರಪಂಚವನ್ನು ದಹಿಸುವುದರಿಂದಲೂ "ಉಗ್ರ" ನಾಮಕರು. ದೇವೋತ್ತಮರು (ಸುಮನಸೋತ್ತಂಸ).

**(೩) "ಭಾವದರ್ಪಣಟೀಕಾ" ವ್ಯಾಖ್ಯಾನ :**

**ಮನ ಏವ ಮಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ** ಎಂದು ಪ್ರಮಾಣವಿರುವುದರಿಂದ. ಮನಸಿಗೆ ಮುಖ್ಯಾಭಿಮಾನಿಗಳಾದ ರುದ್ರದೇವರನ್ನು ಸರ್ವದಾ ಮಂಗಳವನ್ನು ಕರುಣಿಸೆಂದು ಈ ಪದ್ಯದಿಂದ ಪ್ರಾರ್ಥಿಸುತ್ತಾರೆ. **ವಾಮಃ ಸುಂದರಶ್ಚಾಸೌ ದೇವಶ್ಚ ವಾಮದೇವಃ**-ಎಂದು ವ್ಯುತ್ಪತ್ತಿಯಿರುವುದರಿಂದ "ವಾಮದೇವ" ಅಂದರೆ, "ಸುಂದರವಾದ ದೇವತೆ"ಎಂದರ್ಥ. **ಉಗ್ರತ್ವಾದುಗ್ರಃ** ಎಂಬಂತೆ ಪ್ರಳಯ ಕಾಲದಲ್ಲಿ ಉಗ್ರರೂಪವನ್ನು ಧರಿಸುವವನು ಎಂದು ತಾತ್ಪರ್ಯ. **ಧೂರ್ಗಂಗಾ ಜಟಾಸು ಯಸ್ಯೇತಿ ಧೂರ್ಜಟಿಃ** ಎಂಬಂತೆ ತಮ್ಮ ಜಟೆಯಲ್ಲಿ ಗಂಗೆಯನ್ನು ಧರಿಸಿರುವುದರಿಂದ (ಗಂಗಾಧರ) "ಧೂರ್ಜಟಿ" ಎಂದು ಹೆಸರು. **ಸಿಂಧೂರಃ ಸಾಮಜಃ ಕುಂಭೀ**-ಎಂಬ **ಅಮರಕೋಶ** ರೀತ್ಯಾ "ಸಾಮಜ" ಎಂದರೆ "ಆನೆ" ಎಂದರ್ಥ. **ಅಜಿನಂ ಚರ್ಮ ಕೃತ್ತಿಸ್ತ್ರೀ**-ಎಂಬಂತೆ **ಅಮರಕೋಶ** ರೀತ್ಯಾ "ಅಜಿನ" ಎಂದರೆ "ಚರ್ಮ" ಎಂದರ್ಥ. ಅಂದರೆ, ಸಾಮಜಾಜಿನ ಎಂದರೆ, ಆನೆಯ ಚರ್ಮವು. ದೇವತೆಗಳಲ್ಲಿ ಶ್ರೇಷ್ಠರು. (ದೇವೋತ್ತಮರು) ಇದರಿಂದ "ಸುಮನಸೋತ್ತಂಸ"ರು. "ಸೋಮ" ಎಂಬ ಪದಕ್ಕೆ ಈ ವ್ಯಾಖ್ಯಾನಕಾರರು ಹೀಗೆ ಅರ್ಥ ಮಾಡಿರುತ್ತಾರೆ. **ಉಮಯಾ ಸಹಿತಃ = ಸೋಮಃ** ಉಮಾದೇವಿಯರಿಂದ ಯುಕ್ತರಾದವರು. "ಸೂರ್ಯ" ಎಂಬ ಶಬ್ದಕ್ಕೆ **ಸೂರಿಭಿಃ ಪ್ರಾಪ್ಯಃ= ಸೂಯಃ ತಸ್ಯ ಸಂಬುದ್ಧಿಃ** ಜ್ಞಾನಿಗಳಿಂದ (ಸೂರಿಗಳು) ಪ್ರಾಪ್ಯರು ಎಂದು

## (೪) ತಾಮ್ರಪರ್ಣೀಯವ್ಯಾಖ್ಯಾನ :

ಶ್ರೀ ರುದ್ರದೇವರು ಮನೋಭಿಮಾನಿಗಳು. ಅಹಂಕಾರತತ್ವಾಭಿಮಾನಿಗಳು. ವೈಷ್ಣವೋತ್ತಮರು. ಮನೋಹರರೂ, ಕ್ರೀಡಾದಿ ಗುಣವಂತರೂ ಮತ್ತು ಶುಭ್ರಕಾಯರೂ ಆಗಿರುವುದರಿಂದ "ವಾಮದೇವ"ಎಂದು ಸಂಬೋಧಿಸಿದ್ದಾರೆ. (ವಾಮಃ ಸುಂದರಶ್ಚಾಸೌ ದೇವಶ್ಚ ವಾಮದೇವಃ। ದೇವಃ ಕ್ರೀಡಾದಿಗುಣವಿಶಿಷ್ಟಃ ದ್ಯೋತಮಾನಶ್ಚ) ಉಂ=ಸಂಸಾರಾಖ್ಯವಾದ ದುಃಖವನ್ನು ಗ್ರ=ನಾಶಗೈಯುವವರು (ಉಮಾ) ಧೂರ್ಜಟಿ=ಧೂಮ (ಹೊಗೆ) ದಂತಿರುವ ಜಡೆಗಳನ್ನು ಧರಿಸಿರುವವರು (ಧೂ=ಹೊಗೆ) ಇಂದ್ರಾದಿ ದೇವತೆಗಳಿಂದ ಉತ್ತಮರು (ಸುಮನಸೋತ್ತಂಸ). ಆನೆಯ ಚರ್ಮವೆಂಬ ವಸ್ತ್ರದಿಂದ ಅಲಂಕೃತರಾದವರು. ಕಾಮನನ್ನು ಸಂಹರಿಸಿದರು. ಕೈಲಾಸವನ್ನೇ ಮನೆಯನ್ನಾಗಿ ಉಳ್ಳವರು. ಚಂದ್ರ ಸೂರ್ಯ ಮತ್ತು ಅಗ್ನಿಗಳೇ ಕಣ್ಣುಗಳಾಗಿ ಉಳ್ಳವರು. ಸರ್ವೇಷ್ಟಾರ್ಥಪರರು. ಅಂತಹ ರುದ್ರದೇವರು ನಮಗೆ ಯಾವಾಗಲೂ ಉತ್ತಮಮಂಗಲವನ್ನು ಕರುಣೆಯಿಂದ ಕೊಡಲಿ ಎಂದು ಸ್ತುತಿಸುತ್ತಾರೆ.

## (೬) "ಗುರುಹೃದಯ ಪ್ರಕಾಶಿಕಾ" ವ್ಯಾಖ್ಯಾನ :

ಪ್ರಾಣ ಮತ್ತು ಭಾರತೀದೇವಿಯರ ಅಧೀನರಾದ ರುದ್ರದೇವರನ್ನು ಈ ರೀತಿ ಸ್ತುತಿಸುತ್ತಾರೆ. ಸೌಂದರ್ಯ ಕಾಂತ್ಯಾದಿ ಗುಣವುಳ್ಳ, ಬ್ರಹ್ಮಪುತ್ರರಾದ. ಭವಾನೀಮನೋಹರರಾದ, ದುಷ್ಟಭಯಂಕರರಾದ. ಚಲಿತ ಜಟಾಮಂಡಲರಾದ, ಕಾಮನನ್ನು ನೇತ್ರಾಗ್ನಿಯಿಂದ ದಹಿಸಿ ಸಂಹರಿಸಿದ, ಕೈಲಾಸಪರ್ವತವೇ ಮನೆಯಾಗಿ ಉಳ್ಳ, ಚಂದ್ರಸೂರ್ಯಾಗ್ನಿನೇತ್ರರಾದ ಇಷ್ಟಾರ್ಥಪ್ರದರಾದ ಮಹಾದೇವರು ಸದಾ ನಮಗೆ ಮಂಗಳವನ್ನು ಕೊಡಲಿ.

## (೬) ಜಮಖಂಡೀ ವಾದಿರಾಜಾಚಾರ್ಯರ ವ್ಯಾಖ್ಯಾನ :

ಮನೋಭಿಮಾನಿಗಳಾದ ಶ್ರೀರುದ್ರದೇವರನ್ನು ತಮ್ಮ ಅಭಿಷ್ಟಸಿದ್ಧಿಗಾಗಿ ಪ್ರಾರ್ಥಿಸುತ್ತಾರೆ. **ಸ್ವನಾಮಭಾಗೇ ಸಂಸ್ಥಿತೋ ವಾಸುದೇವಃ ಸ್ವ**

**ಯೋಗ್ಯ ಭಕ್ತ್ಯಾ ಪೂಜ್ಯತೇ-ಅತೋ ರುದ್ರೋ ವಾಮದೇವೇತಿ.** ಹೀಗೆಂದು **ಗರುಡಪುರಾಣದ** ಪ್ರಮಾಣವಿದೆ. ರುದ್ರದೇವರು ತಮ್ಮ ವಾಮ ಪಾರ್ಶ್ವ (ಎಡಭಾಗ) ದಲ್ಲಿರುವ ವಾಸುದೇವನಾಮಕ ಪರಮಾತ್ಮನನ್ನು ಸ್ವಯೋಚಿತವಾದ ಭಕ್ತಿಯಿಂದ ಸರ್ವದಾ ಪೂಜಿಸುತ್ತಿರುವರು. ಇದರಿಂದ ಅವರಿಗೆ "ವಾಮದೇವ" ಎಂಬ ಹೆಸರು. ಈ ವ್ಯಾಖ್ಯಾನಕಾರರು "ಉಗ್ರ" ಎಂಬ ಪದಕ್ಕೆ ಈ ರೀತಿ ಅರ್ಥವಿವರಣೆ ಮಾಡಿರುವರು. ಉಂ = ಉತ್ಕೃಷ್ಟನಾದ ಶ್ರೀ ರಮಾದೇವಿಯರನ್ನು, ಗ್ರ=ಉಪಜೀವಿಸುವವನು (ಗ್ರಸತಿ) ಅಂದರೆ, "ಶ್ರೀರಾಮನಾಮದಿಂದ ಉಪಜೀವಿಸುವವರು" ಎಂದು ತಾತ್ಪರ್ಯ. ಧೂರ್ಜಟಿ=ಜಟಾಭಾರವನ್ನು ಧರಿಸಿಕೊಂಡಿರುವವರು.

**ಸಾರಾಂಶ:**

ರುದ್ರದೇವರು ಮನೋಭಿಮಾನಿಗಳು. ಧವಳಭಸಿತಾಂಗರು. ಶುಭ್ರವಾದ ದೇಹಕಾಂತಿ ಉಳ್ಳವರು. ಸುಂದರಗಾತ್ರರು. ತಮ್ಮ ಎಡಭಾಗದಲ್ಲಿ ಸರ್ವದಾಸ್ಥಿತನಾಗಿರುವ ವಾಸುದೇವೋಪಾಸಕರು. ಚತುರ್ಮುಖಬ್ರಹ್ಮದೇವರ ಹುಬ್ಬಿನಿಂದ ಜನಿಸಿದವರು. ಉಮಾದೇವಿಯರಿಗೆ ಮನೋಭಿಮಾನಿಗಳಾಗಿ, ಅವರಿಗೆ ಸದಾ ಆನಂದಪ್ರದಾಯಕರು. ಧವ್ರುವರ್ಣದ ಜಟೆಯಿಂದ ಅಲಂಕೃತರಾಗಿ, "ವ್ಯೋಮಕೇಶ" ಎಂದು ಆಕಾಶಪಥದಲ್ಲಿ ತಮ್ಮ ಜಟೆಯುಗಳನ್ನು ವಿಸ್ತರಿಸಿ. ಗಂಗೆಯನ್ನು ಶಿರದಲ್ಲಿ ಧರಿಸಿದವರು. ಮಹಾರುದ್ರರೂಪಿಗಳು. ದುಷ್ಟಭಯಂಕರರು. ಪ್ರಳಯಕಾಲದಲ್ಲಿ ಜಗತ್ತನ್ನು ತಮ್ಮ ಬಿಂಬಮೂರ್ತಿ ಸಂಕರ್ಷಣನ ಅನುಗ್ರಹದಿಂದ ಲಯಗೊಳಿಸುವವರು. ಗಜಚರ್ಮಾಂಬರಭೂಷಿತರು. ಇಂದ್ರಾದಿ ದೇವತೆಗಳಿಗಿಂತ ಉತ್ತಮರಾಗಿ, ದೇವೋತ್ತಮರೆನಿಸಿಕೊಂಡವರು. ವೈಷ್ಣವಾಗ್ರಣಿಗಳು, ಇಚ್ಛಾರಹಿತರು. ಕಾಮಾದಿ ಅರಿಷಡ್ವರ್ಗಗಳನ್ನು ಗೆದ್ದ ಪರಮವೈರಾಗ್ಯಾಧಿಪತಿಗಳು.ನರಸಿಂಹೋಪಾಸಕರು. ಅಹಂಕಾರ ತತ್ವಾಭಿಮಾನಿಗಳು. ಚಂದ್ರ (ಎಡನೇತ್ರ) ಸೂರ್ಯ (ಬಲನೇತ್ರ) ಮತ್ತು ಅಗ್ನಿ (ಫಾಲನೇತ್ರ) ಇವರನ್ನು ಕಣ್ಣುಗಳಾಗಿ ಉಳ್ಳ ತ್ರಿನೇತ್ರರು. ಭಕ್ತರ ಇಷ್ಟಾರ್ಥಪ್ರದರು. ಏತಾದೃಶಮಹಿಮೋಪೇತರಾದ

ಶ್ರೀರುದ್ರದೇವರು ನಮಗೆ ಸರ್ವದಾ ಹರಿಸರ್ವೋತ್ತಮತ್ವ, ತಾರತಮ್ಯ ಪಂಚ ಭೇದಾದಿ ಸಮೀಚೀನ ಜ್ಞಾನವನ್ನು ಕೊಟ್ಟು ಉದ್ಧರಿಸಲಿ-ಎಂದು ಪ್ರಾರ್ಥಿಸಿದ್ದಾರೆ.

## ಪದ್ಯ (೧೧)

**ಅವತರಣಿಕೆ :**

**ಕೃತ್ತಿವಾಸನೆ ಹಿಂದೆ ನೀ ನಾ ।**
**ಲ್ವತ್ತು ಕಲ್ಪ ಸಮೀರನಲಿ ಶಿ ।**
**ಷ್ಯತ್ವ ವಹಿಸ್ಯಖಿಳಾಗಮಾರ್ಥಗಳೋದಿ ಜಲಧಿಯೊಳು ॥**
**ಹತ್ತು ಕಲ್ಪದಿ ತಪವಗೈದಾ ।**
**ದಿತ್ಯರೊಳಗುತ್ತಮನೆನಿಸಿ ಪುರು ।**
**ಷೋತ್ತಮನ ಪರಿಯಂಕಪದವೈದಿದೆಯೋ ಮಹದೇವ ॥೧೧॥**

ಶ್ರೀ ರುದ್ರದೇವರು ಶೇಷಪದವಿಪ್ರಾಪ್ತಿಗಾಗಿ ಸಾಧನಮಾಡಿದ ವಿವರ ಗಳನ್ನು ತಿಳಿಸಿ, ಶೇಷದೇವರ ಸ್ತೋತ್ರವನ್ನೂ ಈ ಪದ್ಯದಿಂದಲೇ ಮಾಡು ತ್ತಾರೆ.

**ಪ್ರತಿಪದಾರ್ಥ :**

**ಕೃತ್ತಿವಾಸನೇ** = ಹುಲಿಯ ಚರ್ಮವನ್ನೇ ವಸ್ತ್ರವನ್ನಾಗಿ ಉಳ್ಳ, **ಹಿಂದೆ** = ರುದ್ರಪದವಿಗೆ ಬರುವುದಕ್ಕಿಂತ ಪೂರ್ವದಲ್ಲಿ **ನೀ ನಾಲ್ವತ್ತು ಕಲ್ಪ** = ನೀನು ನಲವತ್ತು ಬ್ರಹ್ಮನ ದಿನಕಲ್ಪಗಳಲ್ಲಿ **ಸಮೀರನಲಿ** = ಶ್ರೀ ವಾಯು ದೇವರಲ್ಲಿ **ಶಿಷ್ಯತ್ವ ವಹಿಸಿ** = ಶಿಷ್ಯನಾಗಿ ಇದ್ದುಕೊಂಡು, **ಅಖಿಳಾಗಮಾರ್ಥ ಗಳ** = ಸಮಸ್ತವೇದಗಳ ಅಂತರಾರ್ಥಗಳನ್ನು **ಓದಿ** = ತಮ್ಮ ಯೋಗ್ಯತಾನು ಸಾರ ಓದಿ **ಜಲಧಿಯೊಳು** = ಅನಂತರ ಲವಣಸಮುದ್ರದಲ್ಲಿ **ಹತ್ತುಕಲ್ಪದಿ** = ಬ್ರಹ್ಮದೇವರ ಹತ್ತುದಿನಕಲ್ಪಗಳಲ್ಲಿ **ತಪವಗೈದು** = ಉಗ್ರವಾದ ತಪಸ್ಸನ್ನು

**ಮಾಡಿ ಆದಿತ್ಯರೊಳು**=ದೇವತಾಸಮೂಹದಲ್ಲಿ **ಉತ್ತಮನೆನಿಸಿ**=ಶ್ರೇಷ್ಠರು ಎನಿಸಿಕೊಂಡು(ದೇವೋತ್ತಮರೆಂದು), ಈಗಿನ ರುದ್ರಪದವಿಗೆ ಬರುವವರಾದಿರಿ. **ಪುರುಷೋತ್ತಮನ**=ಕ್ಷರಾಕ್ಷರಪುರುಷರಿಂದ ಶ್ರೇಷ್ಠನಾದ ಸರ್ವೋತ್ತಮನಾದ ಶ್ರೀಮನ್ನಾರಾಯಣನ **ಪರಿಯಂಕ ಪದ**=ಮಂಚವಾಗುವ ಪದವಿಯನ್ನು. ಅಂದರೆ ಶೇಷಪದವಿಯನ್ನು (ಶ್ರೀ ಹರಿಯ ಹಾಸಿಗೆಯಾಗಿ) **ಐದಿದೆಯೋ**=ಹೊಂದಿದೆಯೋ **ಮಹದೇವ**=ಹೇರುದ್ರದೇವರೇ.

**ತಾತ್ಪರ್ಯ :**

ಈ ಪದ್ಯದಿಂದ ರುದ್ರದೇವರ ಮಹಿಮಾತಿಶಯಗಳನ್ನು ಇನ್ನಷ್ಟು ವಿಸ್ತಾರವಾಗಿ ವರ್ಣಿಸುತ್ತಾರೆ. ರುದ್ರದೇವರು ಹುಲಿಯ ಚರ್ಮವನ್ನು ಉಟ್ಟಿದ್ದಾರೆ ಮತ್ತು ಆನೆಯ ಚರ್ಮವನ್ನು ಹೊದ್ದಿದ್ದಾರೆ. ಅವರು ರುದ್ರಪದವಿಗೆ ಬರುವ ಪೂರ್ವದಲ್ಲಿ ನಾಲ್ವತ್ತು ಬ್ರಹ್ಮನ ದಿನಕಲ್ಪಗಳಲ್ಲಿ ಶ್ರೀವಾಯುದೇವರಲ್ಲಿ ಶಿಷ್ಯತ್ವವನ್ನು ವಹಿಸಿ, ಸಮಸ್ತ ವೇದಾರ್ಥಗಳನ್ನೂ ಅಧ್ಯಯನ ಮಾಡಿದರು. ಅನಂತರ ಲವಣಸಮುದ್ರದಲ್ಲಿ ಬ್ರಹ್ಮದೇವರು ಹತ್ತುದಿನಕಲ್ಪಗಳಲ್ಲಿ ಘೋರವಾದ ತಪಸ್ಸನ್ನು ಆಚರಿಸಿ, ಸಂಕರ್ಷಣರೂಪೀ ಪರಮಾತ್ಮನನ್ನು ಒಲಿಸಿಕೊಂಡರು. ದೇವೋತ್ತಮರೆಂದು ಪ್ರಸಿದ್ಧರಾದರು. ವೈಷ್ಣವಗ್ರಗಣಿಗಳೆಂದು ಖ್ಯಾತರಾಗಿದ್ದಾರೆ. ಸರ್ವೋತ್ತಮನಾದ ಪರಮಾತ್ಮನ ಹಾಸಿಗೆಯಾಗಿ, ಶ್ರೇಷ್ಠ ಪದವಿಯನ್ನು ಹೊಂದಿದರು. ಮಹರುದ್ರದೇವರಿಗೆ ಶೇಷಪದವಿಯಿಂದಲೇ ಮುಕ್ತಿ.

**ವ್ಯಾಖ್ಯಾನಗಳು :**

**(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :**

ಮೃಗಚರ್ಮವೇ ವಸ್ತ್ರವನ್ನಾಗಿ-**ಉಳ್ಳ** (ಕೃತ್ತಿವಾಸನೆ) ರುದ್ರದೇವರು ವರ್ತಮಾನ ಬ್ರಹ್ಮಕಲ್ಪಕ್ಕೆ ಹಿಂದೆ ಗತವಾದ ಪೂರ್ವಬ್ರಹ್ಮಕಲ್ಪದಲ್ಲಿ ಒಂದು ಕಲ್ಪದಲ್ಲಿ (ಹಿಂದೆ), ನೀವು (ನೀ) ನಾಲ್ವತ್ತು ಸಂಖ್ಯಾಕವಾದ ಬ್ರಹ್ಮನ ದಿನ ಕಲ್ಪಗಳಲ್ಲಿ (ನಾಲ್ವತ್ತುಕಲ್ಪ) ಶ್ರೀವಾಯುದೇವರ ಶಿಷ್ಯರಾಗಿ ಇದ್ದು (ಸಮೀರದಲ್ಲಿ ಶಿಷ್ಯತ್ವ ವಹಿಸಿ) ತಮ್ಮ ಯೋಗ್ಯತೆಗೆ ತಕ್ಕಂತೆ ಸಮಸ್ತವಾದ ವೇದಗಳು,

ಅವುಗಳ ಅರ್ಥಗಳು (ಅಖಿಳಾಗಮಾರ್ಥಗಳ ನೋಡಿ) ಇವುಗಳನು ಆಳವಾಗಿ ಅಧ್ಯಯನ ಮಾಡಿ, ಅನಂತರ ಲವಣಸಮುದ್ರದಲ್ಲಿ (ಲವಣಜಲಧಿಯೊಳು) ಹತ್ತು ಸಂಖ್ಯಾಕವಾದ ಬ್ರಹ್ಮದೇವರ ದಿನಕಲ್ಪಗಳಲ್ಲಿ (ಹತ್ತು ಕಲ್ಪದಿ) ಮುಳುಗಿದ್ದು ತಪಸ್ಸನ್ನು ಆಚರಿಸಿದವರಾಗಿ (ತಪವಗೈದು) ದೇವತೆಗಳಲ್ಲಿ ಶ್ರೇಷ್ಠರೆನಿಸಿಕೊಂಡು (ಆದಿತ್ಯರೊಳಗೆ ಉತ್ತಮನೆನಿಸಿ) ವರ್ತಮಾನ ರುದ್ರ ಪದವಿಗೆ ಬರುವವರಾದಿರಿ. ಹೀಗೆ ರುದ್ರದೇವರ ಸ್ತೋತ್ರ. ಇದರಿಂದಲೇ ಶೇಷದೇವರ ಸ್ತೋತ್ರವನ್ನೂ ಮಾಡುತ್ತಾರೆ ಕ್ಷರಾಕ್ಷರಪುರುಷರಿಂದ ಶ್ರೇಷ್ಠನಾದ ಶ್ರೀಮನ್ನಾರಾಯಣನ (ಪುರುಷೋತ್ತಮನ) ಶಯ್ಯಾರೂಪವಾದ ಶೇಷ ಪದವಿಯನ್ನು (ಪರಿಯಂಕಪದವೈದಿದೆಯೋ) ಹೊಂದುತ್ತೀರಿ ಎಂದು ಶೇಷ ದೇವರನ್ನು ಸ್ತುತಿಸಿದ್ದಾರೆ. ಹೇ ರುದ್ರದೇವರೇ (ಮಹದೇವ) ನೀವು ಉತ್ತರ ಕಲ್ಪಕ್ಕೆ ಶ್ರೀಹರಿಯ ಪರಿಯಂಕ ಪದವನ್ನು ಪಡೆಯುತ್ತೀರಿ ಎಂದು ರುದ್ರ ದೇವರ ಸ್ತೋತ್ರ. ರುದ್ರಗಣ ಬೇರೆ-ಶೇಷಗಣ ಬೇರೆ ಇಲ್ಲ. ರುದ್ರಪದದಿಂದಲೇ ಶೇಷಪದವಿಪ್ರಾಪ್ತಿ. ಈ ಪದ್ಯದಲ್ಲಿ ರುದ್ರ ಹಾಗೂ ಶೇಷದೇವರ ಸ್ತೋತ್ರಗಳು ಕ್ಷೀರ ಮತ್ತು ನೀರು ಮಿಶ್ರದಂತೆ ಮಾಡಲ್ಪಟ್ಟಿವೆ.

### (೨) "ಭಾವಪ್ರಕಾಶಿಕೆ"ಯ ವ್ಯಾಖ್ಯಾನ :

**"ವ್ಯಾಘ್ರಚರ್ಮಾಂಬರಧರಂ"** ಎಂಬ **ಭಾಗವತ** ವಚನದಂತೆ, ರುದ್ರ ದೇವರು ಹುಲಿಚರ್ಮವನ್ನು ಉಟ್ಟಿದ್ದಾರೆ. ಇದೇ ಭಾವದಿಂದ ಶ್ರೀಪುರಂದರ ದಾಸರಾಯರು **"ಉಟ್ಟಿದ್ದು ಹುಲಿತೊಗಲು-ಬೆನ್ನಮೇಲೆ ಹೊದಿದ್ದು ಆನೆಯತೊಗಲು"** ಎಂದು ರುದ್ರದೇವರನ್ನು ಸ್ತೋತ್ರ ಮಾಡಿದ್ದಾರೆ. ರುದ್ರ ದೇವರಿಗೆ (೧) ೪೦ ಕಲ್ಪಗಳು ಶ್ರೀವಾಯುದೇವರಲ್ಲಿ ಶಿಷ್ಯರಾಗಿದ್ದುಕೊಂಡು, ಸಕಲವೇದಾಧ್ಯಯನಪೂರ್ವಕ ಸಾಧನೆ ಮತ್ತು (೨) ೧೦ ಕಲ್ಪಗಳ ಪರ್ಯಂತ ಲವಣಸಮುದ್ರದಲ್ಲಿ ಘೋರ ತಪಸ್ಸಿನ ಮೂಲಕ ಸಾಧನೆ. ಅಂದರೆ. ರುದ್ರ ದೇವಲಿಗೆ ೫೦ ಕಲ್ಪ ಸಾಧನವಾದಂತಾಯಿತು.

**"ತಥೈನ ಚತ್ವಾರಿಂಶದ್ಭಿಃ ಪದಂ ಶೈವಂ ಚ ಜನ್ಮಭಿಃ"**ಎಂಬ **ಭಾಗವತ ತಾತ್ಪರ್ಯ** ವಚನದಿಂದಲೂ ಮತ್ತು **"ದಶಕಲ್ಪ ತಪಶ್ಶೀರ್ಣಂ ರುದ್ರೇಣ**

**ಲವಣಾರ್ಣವೇ"** ಎಂಬ ಅನುವ್ಯಾಖ್ಯಾನ ವಚನದಿಂದಲೂ ರುದ್ರದೇವರಿಗೆ ೫೦ ಕಲ್ಪಸಾಧನವು ಸಿದ್ಧವಾಗುವುದು. **"ಬ್ರಹ್ಮಣಾಂ ಶತಕಾಲತ್ತು ಪೂರ್ವ ಮಾರಬ್ಧ ಸಂಕ್ಷಯಃ । ಬ್ರಹ್ಮಣಸ್ತ್ವೇವತಾವತ್ವಂ ಪಂಚಾಶದ್ಬ್ರಹ್ಮಣ ಸ್ತಥಾ । ರುದ್ರಸ್ಯವಿಂಶದೇವಸ್ಯಾಚ್ಛಕ್ರಸ್ಯಾರ್ಕಾದಿಕೇದಶ"** ಎಂದು **ಭಾಗ ವತತಾತ್ಪರ್ಯ**ದಲ್ಲಿ (ಚತುರ್ಥಸ್ಕಂಧ) ಹೇಳಿರುವುದರಿಂದ, ೫೦ ಬ್ರಹ್ಮಕಲ್ಪ ಸಾಧನವೆಂದಂತಾಯಿತು. ರುದ್ರಪದವಿಗೆ ಬರಬೇಕಾದರೆ ೪೦ ಕಲ್ಪಸಾಧನ ವನ್ನು ಶೇಷಪದವಿಯನ್ನು ಹೊಂದಿದ ನಂತರ ಮುಕ್ತಿಯನ್ನು ಹೊಂದುವವುದ ಕ್ಕಾಗಿ ೧೦ ಕಲ್ಪವೂ ಬೇರೆಯಾಗಿ ಸಾಧನ ಮಾಡಬೇಕು. **ದಶಕಲ್ಪಸ್ಯ ಮೋಕ್ಷ ವಿಶೇಷಾರ್ಥಂ ತಪಃ ಪರತ್ವಮುಕ್ತಂ** ಎಂದು ನಿರ್ಣಯ ವಾಕ್ಯಪ್ರಮಾಣ.

## (೩) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಸಮೀಚೀನ ಜ್ಞಾನದಾಯಕರಾದ ರುದ್ರದೇವರನ್ನು ಭಕ್ತ್ಯಾತಿಶಯ ದಿಂದ ಪುನಃ ಮತ್ತೊಂದು ಪದ್ಯದಿಂದ ಪ್ರಾರ್ಥಿಸುತ್ತಾರೆ. ಹಿಂದೆ ನಾಲ್ವತ್ತು ಕಲ್ಪ ವಾಯುದೇವರಲ್ಲಿ ಶಿಷ್ಯತ್ವ ಮಾಡಿ, ಸಕಲ ವೇದಾರ್ಥಗಳನ್ನೂ ವ್ಯಾಸಂಗ ಮಾಡಿ ಶಿವಪದವನ್ನು ಹೊಂದಿದರು. ಈ ವಿಷಯದಲ್ಲಿ ಪ್ರಮಾಣ:— **"ತಥೈವ ಚತ್ವಾರಿಂಶದ್ಭಿಃ ಪದಂ ಶೈವಂಚ ಜನ್ಮಭಿಃ"** ಇನ್ನು ಹತ್ತು ಕಲ್ಪ ತಪಸ್ಸು ಮಾಡಿದರೆಂಬ ವಿಷಯದಲ್ಲಿ ಪ್ರಮಾಣ: **"ದಶಕಲ್ಪ ತಪಶ್ಚೀರ್ಣಂ ರುದ್ರೇಣ ಲವಣಾರ್ಣವೇ । ತ್ಯಕ್ತ್ವಾ ಸುಖಾನಿ ಸರ್ವಾಣಿ ಕ್ಲಿಷ್ಟೇನ ಲವಣಾಂಭಸಿ"**–ಎಂದು ಅನುವ್ಯಾಖ್ಯಾನದ ಪ್ರಮಾಣವಚನವಿದೆ.

## (೪) ತಾಮ್ರಪರ್ಣೀಯ ವ್ಯಾಖ್ಯಾನ :

ಕೃತ್ತಿವಾಸನೆ ಎಂದರೆ, ವ್ಯಾಘ್ರಚರ್ಮವನ್ನು ಉಟ್ಟವನೇ–ಎಂದರ್ಥ (ವ್ಯಾಘ್ರಚರ್ಮಾಂಬರಃ ಇತ್ಯರ್ಥಃ) ಈ ಬ್ರಹ್ಮಕಲ್ಪವನ್ನು ಆರಂಭಿಸಿಕೊಂಡು, ಒಂದಾ ನೂರು ಬ್ರಹ್ಮಕಲ್ಪಗಳು ಕಳೆದ ನಂತರದಲ್ಲಿ ಯಾರಿಗೆ ಬ್ರಹ್ಮಪದವಿಯು ಬರುತ್ತದೆಯೋ ಅವರೇ ಲಾತವ್ಯರು. ಇಂತಹ ಬ್ರಹ್ಮಪದವಿಗೆ ಯೋಗ್ಯರಾದ ಲಾತವ್ಯರೆಂಬ ಋಜುಗಳ ಬಳಿ ಇದ್ದು, ರುದ್ರಪದವಿಗೆ ಯೋಗ್ಯನಾದ **ಉಪ್ರತಪ**

ನೆಂಬುವನು ಒಂದೂವರೆ ಪರಾರ್ಧಪರ್ಯಂತ (ಸಾರ್ಧಪರಾರ್ಧ) ಭಗವಂತನ ಗುಣಗಳನ್ನು ಶ್ರವಣದಿಂದ ತಿಳಿದುಕೊಂಡು. ಹತ್ತು ಮನ್ವಂತರಕಾಲಾವಧಿಯಲ್ಲಿ ಮನನ ನಿಧಿಧ್ಯಾನಸ್ವರೂಪವಾದ ಉಪಾಸನೆಯನ್ನು ಏಕಾಗ್ರವಾದ ಮನಸ್ಸಿನಿಂದ ಮಾಡಿದನು. ಈ ವಿಷಯದಲ್ಲಿ ಪ್ರಮಾಣ:- **ಶುಶ್ರಾವೋಗ್ರತಪೋನಾಮುಯೋಗ್ಯೋ ರುದ್ರಪದಸ್ಯಯಃ । ಸಾರ್ಧಂ ಪರಾರ್ಧಂ ವಿಷ್ಣೋಸ್ತು ಗುಣಾನ್ ಭಕ್ತ್ಯಾಸಮನ್ವಿತಃ ॥ ತತ್ರಿಭಾಗಮುಪಾಸಾಂ ಚಕ್ರೇ ಸಂಭೃತಿಮಾನಸಃ ॥** ಹಿಗೆಂದು **ಅನುವ್ಯಾಖ್ಯಾನದ** ಪ್ರಮಾಣ (ಅಧ್ಯಾಯ ೪; ಪಾದ ೧, ಅಧಿಕರಣ ೧) ಕಲ್ಪವೆಂದರೆ ಬ್ರಹ್ಮದೇವರ ದಿವಸ ಎಂದು ತಿಳಿಯಬೇಕು. ಹೀಗೆ ಹತ್ತು ಕಲ್ಪಗಳು ಮುಗಿಯುವವರೆಗೆ ತಪಸ್ಸನ್ನು ರುದ್ರದೇವರು ಲವಣಸಮುದ್ರದಲ್ಲಿ ಮುಳುಗಿ ಆಚರಿಸಿದರು. ಈ ವಿಷಯದಲ್ಲಿ ಪ್ರಮಾಣ : **"ದಶಕಲ್ಪಂ ತಪಶ್ಚೀರ್ಣಂ ರುದ್ರೇಣ ಲವಣಾಂಭಸಿ"** ಹೀಗೆಂದು **ಅನುವ್ಯಾಖ್ಯಾನದ** ಪ್ರಮಾಣ (ಅಧ್ಯಾಯ ೩; ಪಾದ ೪), ನಾಲ್ವತ್ತು ಬ್ರಹ್ಮಕಲ್ಪ ಆರಂಭಿಸಿಕೊಂಡು, ರುದ್ರದೇವರಿಗೆ ಅಪರೋಕ್ಷವೂ, ಪ್ರಾರಬ್ಧಕರ್ಮನಾಶವೂ ಆಗಿ, ನಾಲ್ವತ್ತೊಂದನೆಯ ಕಲ್ಪದಲ್ಲಿ ಶೇಷಪದವಿಯು ಪ್ರಾಪ್ತವಾಗುವುದು. ಈ ವಿಷಯದಲ್ಲಿ ಪ್ರಮಾಣ : **"ಚತ್ವಾರಿಂಶದ್ಬ್ರಹ್ಮಕಲ್ಪಂ ಸಮಾರಭ್ಯ ಖಗೇಶ್ವರ । ರುದ್ರಸ್ಯಹ್ಯಪರೋಕ್ಷಂಚ ತಥಾ ಪ್ರಾರಬ್ಧಸಂಚಯಃ । ಏಕಚತ್ವಾರಿಂಶತ್ ಕಲ್ಪೇ ಶೇಷತ್ವಂ ಯಾತಿ ಸುವ್ರತ"** ಹೀಗೆಂದು **ಗರುಡ ಪುರಾಣ** ವಚನ **"ಕಲ್ಪೋ ಬ್ರಹಣ ದಿವಸ ಇತಿ"** ಹೀಗೆಂದು 'ಕಲ್ಪ'ವೆಂದರೆ 'ಬ್ರಹ್ಮನ ಒಂದು ದಿವಸ' ಎಂದು **ಶ್ರೀಮನ್ನ್ಯಾಯಸುಧಾ** ವಚನ.

### (೫) ಗುರುಹೃದಯಪ್ರಾಕಾಶಿಕಾ ವ್ಯಾಖ್ಯಾನ :

ಹುಲಿಯ ಚರ್ಮನ್ನೆ ವಸ್ತ್ರವನ್ನಾಗಿ ಉಳ್ಳ ಶಿವನೇ, ನೀನು ಹಿಂದೆ ನಾಲ್ವತ್ತು ಬ್ರಹ್ಮ ಕಲ್ಪಗಳ ಕಾಲ ವಾಯುದೇವರ ಶಿಷ್ಯನಾಗಿ, ಸಕಲಸದಾಗಮಾರ್ಥಗಳನ್ನು ತಿಳಿದು, ಹತ್ತು ಕಲ್ಪಗಳಲ್ಲಿ ಧ್ಯಾನರೂಪತಪಸ್ಸನ್ನು ಲವಣ ಸಮುದ್ರದಲ್ಲಿಮಾಡಿ, ದೇವೋತ್ತಮತ್ವವನ್ನು ಹೊಂದಿ, ಪುರುಷೋತ್ತಮನಾದ

ಶ್ರೀ ವಿಷ್ಣುವಿನ ಮಂಚವೆಂಬ ಶೇಷಪದವಿಯನ್ನು ಹೊಂದಿದಿ. ಇಂತಹ ಮಹ ದೇವನೇ, ನಮಗೆ ಮಂಗಳವನ್ನು ಕರುಣಿಸು ಎಂದು ಪ್ರಾರ್ಥಿಸುತ್ತಾರೆ.

## (೬) ವಾದಿರಾಜಾಚಾರ್ಯರ ವ್ಯಾಖ್ಯಾನ :

ಸಮೀರನಲಿ, ಎಂದರೆ ವಾಯುಪದವಿಗೆ ಯೋಗ್ಯರಾದ ಲಾತವ್ಯರಲ್ಲಿ ಎಂದರ್ಥ. ಈ ವಿಷಯದಲ್ಲಿ ಪ್ರಮಾಣ : **ಲಿಂಗಾಲ್ಲಾತವ್ಯತಃ** ಎಂಬ **ಅನುವ್ಯಾಖ್ಯಾನದ** ಭಾವಾರ್ಥವನ್ನು ವಿವರಿಸುವಾಗ-ಲಾತವ್ಯರು ತಮ್ಮ ಶಿಷ್ಯ ರಾದ ರುದ್ರದೇವರಿಂದ ಉಪಾಸಿತರಾಗುವರು-ಎಂದು ಶ್ರೀ ಜಯತೀರ್ಥರು ನಿರೂಪಿಸಿರುವರು. "ನಾಲ್ವತ್ತುಕಲ್ಪಗಳಿಂದ ಶೈವಪದವಿಯು" ಎಂದು ಅನುವ್ಯಾಖ್ಯಾನದಲ್ಲಿ ಹೇಳಿರುವುದರಿಂದ, ಕಲ್ಪವು ಬ್ರಹ್ಮಮಾನವುಳ್ಳದ್ದೆಂದು ತಿಳಿಯ ಬೇಕು. ಹತ್ತು ಕಲ್ಪಗಳನ್ನು ತಪಸ್ಸಿನಲ್ಲಿ-ಕಳೆದು ಎಂದು ಹೇಳಿರುವುದರಿಂದ ಬ್ರಹ್ಮದೇವರ ದಿವಸವು ಇಲ್ಲಿ ಕಲ್ಪವೆನಿಸುವುದು ಎಂದು ಅರ್ಥಮಾಡಬೇಕು. **"ಕಲ್ಪೋತ್ರ ಬ್ರಹ್ಮಣೋದಿವಸ ಇತಿ"** ಹೀಗೆಂದು **ಶ್ರೀಮನ್ನ್ಯಾಯ ಸುಧಾ** ಪ್ರಮಾಣವಿದೆ. ಇಂತಹ ಹತ್ತು ಕಲ್ಪಸಾಧನವನ್ನು ರುದ್ರದೇವರು ಮೋಕ್ಷದಲ್ಲಿ ಆನಂದೋದ್ರೇಕವನ್ನು ಅಪೇಕ್ಷಿಸಿ ಮಾಡುತ್ತಾರೆ ಎಂದು ಭಾವ.

### ವಿಶೇಷ ವಿಚಾರ :

"ಅಶೀತಿರಷ್ಟಕಃ ಪ್ರೋಕ್ತ ಅಷ್ಟಪಂಚ ಖಗೇಶ್ವರ | ಚತ್ವಾರಿಂಶದ್ಬ್ರಹ್ಮಕಲ್ಪೇನೇವ ಮಾಹ ಚತುರ್ಮುಖಃ | ಹೀಗೆಂದು **ಗರುಡ ಪುರಾಣದ** ವಚನವಿದೆ. ಇಲ್ಲಿ "ಪಂಚಾಶೀತಿ" ಎಂದರೆ ೮೫ ಎಂಬ ಸಂಖ್ಯೆ. "ಅಷ್ಟಪಂಚ" ಎಂದು ಹೇಳಿರುವುದರಿಂದ ಎಂಟನ್ನು ಐದರಿಂದ ಗುಣಿಸಬೇಕು ಎಂದು ತಾತ್ಪರ್ಯ. ಆಗ ೪೦ ಎಂಬ ಗುಣಲಬ್ಧವು ಬರುವುದು. ಅಂದರೆ, ೪೦ ಕಲ್ಪಗಳು ಎಂಬ ಲೆಕ್ಕಾಚಾರವು ಸರಿಹೊಂದುವುದು. ೮೫ ಕಲ್ಪಸಾಧನ ಎಂದು ಅರ್ಥಮಾಡಬಾರದು. ಇದರಿಂದ "ಪಂಚಾಶೀತಿ ಬ್ರಹಕಲ್ಪಂ" ಎಂಬ ವಾಕ್ಯಕ್ಕೂ "ಚತ್ವಾರಿಂಶಿತ್" ಎಂಬ ವಾಕ್ಯಕ್ಕೂ ವಿರೋಧವು ಪರಿಹಾರವಾಗಿ ೪೦ ಕಲ್ಪಗಳು ಎಂದು ಯಾಥಾರ್ಥ ಜ್ಞಾನವುಂಟಾಗುವುದು.

**ಶ್ರೀಮಹರುದ್ರದೇವರ ಕಲ್ಪಸಾಧನೆಯ ವಿಚಾರದಲ್ಲಿ ವಿಶೇಷ ವಿಷಯ:-**

ಶ್ರೀ ರುದ್ರದೇವರ ಸಾಧನವು ಶ್ರೀ ವಾಯುದೇವರಲ್ಲಿ ಉಪದೇಶ ಹೊಂದಿದ್ದು **ನಾಲ್ವತ್ತುಕಲ್ಪ**. ಲವಣಸಮುದ್ರದಲ್ಲಿ ತಪಸ್ಸು ಮಾಡಿದುದು **ಹತ್ತುಕಲ್ಪ**. ಅಂದರೆ ಒಟ್ಟು 50 ಕಲ್ಪವೆಂದು ಈ ಪದ್ಯದಿಂದ ಅಭಿವ್ಯಕ್ತವಾಗಿದೆ. ಆದರೆ ಶ್ರೀಜಗನ್ನಾಥದಾಸವರೇಣ್ಯರು **ಕಲ್ಪಸಾಧನ ಸಂಧಿಯಲ್ಲಿ "ಐದಲೆಯುಗೈವತ್ತು"** ಎಂದು ವಿವರಿಸಿರುತ್ತಾರೆ :—

## [ಸಂಧಿ (೨೩) ಪದ್ಯ (೪೫)]

**ಸಾಧನೆಗಳಪರೋಕ್ಷನಂತರ**
**ಐದುವರು ಮೋಕ್ಷವನು ಶಿವ ಶ**
**ಕ್ರಾದಿದಿವಿಜರು ಉಕ್ತಕ್ರಮದಿಂ ಕಲ್ಪಸಂಖ್ಯೆಯಲಿ ॥**
**ಐದಲೆಯುಗೈವತ್ತು ಉಪೇಂದ್ರ ಸ**
**ಹೋದರನಿಗಿಪ್ಪತ್ತು ದ್ವಿನವ ತ್ವ**
**ಗಾಧಿಪತಿ ಪ್ರಾಣನಿಗೆ ಗುರುಮನುಗಳಿಗೆ ಷೋಡಶವು ॥೪೫॥**

ಅಂತೆಯೇ, ಶ್ರೀದಾಸರಾಯರು, ಅದೇ ೨೩ನೆಯ ಸಂಧಿ (**ಅಪರೋಕ್ಷತಾರತಮ್ಯಸಂಧಿ**) ೪೨ಯ ಪದ್ಯದಲ್ಲಿ ಹೀಗೆ ನಿರೂಗಿಸಿರುತ್ತಾರೆ :—

**ಪಾದನ್ಯೂನಶತಾಬ್ದಪರಿಯಂ**
**ತೋದಿ ಉಗ್ರತಪಾಹ್ವಯದಿ ಲವ**
**ಣೋದಧಿಯೊಳಗೆ ಕಲ್ಪದಶತವಿದ್ದಪನಂತರದಿ ॥**
**ಸಾಧಿಸಿದ ಮಹದೇವ ಪದವಾ**
**ರೈದುನವಕಲ್ಪಾವಸಾನಕೆ**
**ಐದುವನು ಶೇಷನ ಪದವ ಪಾರ್ವತಿಸಹಿತವಾಗಿ ॥೪೨॥**

ಈ ಪದ್ಯದಲ್ಲಿ **ಆರೈದು ಕಲ್ಪಾವಸಾನಕೆ** ಎಂದು ಪದಪ್ರಯೋಗ ಮಾಡಿದ್ದಾರೆ. ಇದನ್ನು ಎರಡು ರೀತಿಗಳಲ್ಲಿ ವಿವರಿಸಬಹುದು: (೧) ಆರು ಐದು= ೬+೫=೧೧ ಮತ್ತು ನವ (ಒಂಬತ್ತು) ಅಂದರೆ ಇವೆರಡನ್ನೂ ಗುಣಿಸಿದರೆ ೧೧×೯=೯೯ ಎಂದಾದಾಗುವುದು. (೨) ಆರು ಐದು ೬×೫=೩೦ (ಗುಣಾಕಾರದಿಂದ) ಇದಕ್ಕೆ ನವ, ಅಂದರೆ, ೯ನ್ನು ಕೂಡಿದರೆ. ಆಗ ೩೦+೯ (ಮೂವತ್ತೊಂಭತ್ತು) ಆಗುವುದು. ಇವುಗಳಲ್ಲಿ ಯಾವುದು ಸಾಧಕ ಎಂದು ವಿಚಾರ ಮಾಡಬೇಕು. ಶ್ರೀ ವಾಯುದೇವರಿಗೆ ೯೯ ಕಲ್ಪ ಸಾಧನ ಮತ್ತು ೧೦೦ನೆಯ ಕಲ್ಪದಲ್ಲಿ ಬ್ರಹ್ಮ ಪದವಿಯಿಂದ ಮೋಕ್ಷ. ಶ್ರೀ ರುದ್ರದೇವರಿಗೆ ೯೯ ಕಲ್ಪಸಾಧನ ಎಂದು ಹೇಳಿದರೆ, ಇದರಿಂದ ವಿರೋಧ ಬರುತ್ತದೆ. ಈ ಕಾರಣದಿಂದ ಎರಡನೆಯ ಅಂಶವನ್ನು ಅಂದರೆ [೬×೫]+[೯]=೩೦+೯=೩೯ ಎಂಬ ಸಂಖ್ಯಾವಾಚಕ ಕಲ್ಪದ ವಿಚಾರವನ್ನೇ ಪರಿಶೀಲಿಸಬೇಕು. ಇದಕ್ಕೆ ಪೂರಕವಾಗಿ ಈ ಕೆಳಗಿನ ಪ್ರಮಾಣಗಳನ್ನು ವಿಚಾರ ಮಾಡೋಣ :—

(೧) **ಸುಶ್ರಾವೋಗ್ರಪೋತನಾಮ ಯೋಗ್ಯಾ ರುದ್ರಪದಸ್ಯಯಃ॥**

(೨) **ದಶಕಲ್ಪಂ ತಪಶ್ಚೀರ್ಣಂ ರುದ್ರೋಲವಣಾರ್ಣವೇ ।**
**ತ್ಯಕ್ತ್ವಾ ಸುಖಾನಿ ಸರ್ವಾಣಿ ಕ್ಲಿಷ್ಟೇನ ॥**

ಎಂಬ ಶ್ರೀಮದನುವ್ಯಾಖ್ಯಾನ ಪ್ರಮಾಣಾನುಸಾರ **ಶುಶ್ರಾವ** ಎಂಬ ಅಧ್ಯಯನರೂಪವಾದ ಸಾಧನವಿಶೇಷ ಮತ್ತು ಲವಣಸಮುದ್ರದಲ್ಲಿ **ಉಗ್ರತಪ** ನೆಂಬ ಹೆಸರಿನಿಂದ **ಹತ್ತು** ಕಲ್ಪ ಸಾಧನ ಎಂದು ಸಿದ್ಧವಾಯಿತು.

(೩) **ತಥೈವ ಚತ್ವಾರಿಂಶದ್ಭಿಃ ಪದಂ ಶೈವಂಚ ಜನ್ಮಭಿಃ** ಹೀಗೆಂಬ **ಶ್ರೀಮದ್ಭಾಗವತ ಚತುರ್ಥಸ್ಕಂದ ತಾತ್ಪರ್ಯ ನಿರ್ಣಯದಂತೆ. ನಾಲ್ವತ್ತು** ಕಲ್ಪ ಸಾಧನವೆಂದು ಹೇಳಿದಂತಾಯಿತು.

(೪) ಸಾರ್ಧಂ ಪರಾರ್ಧಂ ವಿಷ್ಣೋಸ್ತು ಗುಣಾನ್ ಭಕ್ತ್ಯಾ ಸದೋದಿತಃ ।
ತತ್ರ ಭಾಗಮುಸಾಂಚ ಚಕ್ರೇ ಸಂಭೃತ ಮಾನಸಃ ॥

(೫) ದ್ವಿಪಂಚಾಶತ್ಕಲ್ಪಮಿತಾಶೇಷಾದ್ಯಾಸ್ತು ಸಭಾರ್ಯಕಾಃ ॥
ಎಂಬ **ಪ್ರಕಾಶಸಂಹಿತೆಯ** ಪ್ರಮಾಣವಾಕ್ಯಾನುಸಾರ. ಸಾರ್ಧ=ಐವತ್ತು ಮತ್ತು ಪರಾರ್ಧ=ಇಪ್ಪತ್ತೈದು, ಅಂದರೆ, ಒಟ್ಟು ೭೫ ಕಲ್ಪವೆಂದೂ, (ಪ್ರಮಾಣ-೪) ಪಂಚಾಶತ್=೫೦ ಮತ್ತು ದ್ವಿ=ಎರಡು ಅಂದರೆ, ೨×೫೦ ೧೦೦ ಕಲ್ಪ ಎಂದೂ ವಿರುದ್ಧವಾಗಿ ಹೇಳಿದಂತಾಯಿತು. ಪ್ರಮಾಣವಾಕ್ಯಗಳು ವಿರುದ್ಧಾರ್ಥ ಹೇಳುವುದಿಲ್ಲ. ಇಂತಹ ವಿರೋಧ ಕಂಡುಬಂದರೆ, ಸಮನ್ವಯ ಕ್ರಮದಿಂದ ಅನ್ಯಪ್ರಮಾಣಗಳಿಂದ ನಿರ್ಣಯಿಸಬೇಕು. **ಶ್ರೀ ಗರುಡ ಪುರಾಣದ ಬ್ರಹ್ಮಕಾಂಡದಲ್ಲಿ** ಶ್ರೀಗರುಡದೇವರ ಪ್ರಾರ್ಥನೆಯಂತೆ **ಶ್ರೀ** ಕೃಷ್ಣನು ಸಂಶಯವನ್ನು ಪರಿಹರಿಸಿದ್ದಾನೆ :—

ಪಂಚಾಶೀತಿ ಬ್ರಹ್ಮಕಲ್ಪಂ ಸಮಾರಭ್ಯ ಮಹಾಪ್ರಭೋ ।
ರುದ್ರಸ್ಯಹ್ಯೆಪರೊಕ್ಷಂ ಸ್ಯಾತ್ತಥಾಹ್ಯಾರಭ್ಧ ಸಂಕ್ಷಯಃ ॥೧॥

ಇತಿ ಶ್ರುತಂ ಮಾಯಾ ಬ್ರಹ್ಮನ್ ಬ್ರಹ್ಮಣೋಕ್ತಂ ಪದಂ ಹರನ್ ।
ಇತ್ಥಂತ್ವಯೋಕ್ತಂ ಶುತ್ವಾಪ ಸಂಶಯಂ ಬಾಧತೇ ಮಮ ॥೨॥

ಅತೋಮೇ ಭಗರ್ವಭಿಂದಿ ಯಥಾನಸ್ಯಾತ್ಪುನಸ್ತಥಾ ।
ಇದಂತದ್ವಚನಂ ಶ್ರುತ್ವಾ ಕೃಷ್ಣೋವಚನಮಬ್ರವೀತ್ ॥೩॥

## ಶ್ರೀ ಕೃಷ್ಣ ಉವಾಚ

ಬ್ರಹೋಕ್ತಸ್ಯ ಮಯೋಕ್ತಸ್ಯ ವಿವಾದೋನಾಸ್ತಿ ಸರ್ವಥಾ
ಆಸೀತಿಹ್ಯಷ್ಟಕ್ರಾ ಪ್ರೋಕ್ತಾ ಅಷ್ಟಪಂಚ ಖಗೇಶ್ವರ ॥೪॥

**ಚತ್ವಾರಿಂಶದ್ಬ್ರಹ್ಮ ಕಲ್ಪಂ ಏವಮಾಹ ಚತುರ್ಮುಖಃ ।**
**ತತ್ವಾನಾಂ ಪರಮಂ ಗೋಪ್ಯಂ ಮಯೋಕ್ತಂ ಬ್ರಹ್ಮಣೇ ನತು**
**ಅಭಿಪ್ರಾಯ ಸ್ತ್ವತ್ಥಮೇವಜ್ಞಾತವ್ಯಂನಾತ್ರ ಸಂಶಯಃ ॥೫॥**

ಮೇಲಿನ ಪ್ರಮಾಣವಾಕ್ಯಗಳಲ್ಲಿ ಪಂಚಾಶೀತಿ ಅಂದರೆ ೮೫ಕ್ಕೆ ೪೦ ಎಂದು ಅರ್ಥಮಾಡಿದಂತೆ, ದ್ವಿಪಂಚಾಶತ್, ಅಂದರೆ ೧೦೦ಕ್ಕೆ೪೦ × ೨= ೮೦ [೪೦ರ ಎರಡರಷ್ಟು (ದ್ವಿ)]ಕಲ್ಪವಾಗುತ್ತದೆ. ಇದರಿಂದ ಶ್ರೀವಾಯು ಮತ್ತು ಬ್ರಹ್ಮರಿಗೆ ದ್ವಿಶಕಲ್ಪ ಹೇಳಿ ಸಾಧನ, ಭೋಗ ಎಂದು ದ್ವಿಭಾಗದಿಂದ ಸಮನ್ವಯವಾದಂತೆ, ಶ್ರೀರುದ್ರದೇವರಿಗೆ ೪೦ಕಲ್ಪ–ಸಾಧನ, ೪೦ ಕಲ್ಪ-ಭೋಗ ಎಂದಾಗುತ್ತದೆ. ಇದರಿಂದ, ಸಾರ್ಧ ಪರಾರ್ಧಂ ಅಂದರೆ, ೫೦+೨೫=೭೫ ಕಲ್ಪ ಎಂದಾಗುವುದು. ಇದು ಪಾದನ್ಯೂನ ಎಂದು ಪೂರ್ವೋಕ್ತ ಪದ್ಯದಲ್ಲಿ ಹೇಳಿರುವಂತೆ. ೧೦೦ಕ್ಕೆ ಪಾದ ಅಂದರೆ, ಕಾಲುಭಾಗ, ಅಂದರೆ, ೨೫ ಕಲ್ಪ ಕಡಿಮೆ (ನ್ಯೂನ) ಎಂದರೆ, ೧೦೦-೨೫=೭೫ ಎಂಬ ವಾಕ್ಯಕ್ಕೆ ಸರಿಹೊಂದುವುದು. ಸಾಧನ ಮತ್ತು ಭೋಗದ ೮೦ ಕಲ್ಪಗಳಲ್ಲಿ ಈ ಪೂರ್ವೋಕ್ತ ೭೫ಕಲ್ಪ ಕಳೆದರೆ, ೫ ಕಲ್ಪ ಉಳಿಯಿತು ಇದರಲ್ಲಿ ೮೦ನೆಯ ಕಲ್ಪ ಶೇಷಪದವಿ. ಶ್ರೀ ರುದ್ರದೇವರ ಸಾಧನವಾದ ಅಂತ್ಯ ೭೫ನೆಯ ಕಲ್ಪದಲ್ಲಿ ೭೫ ವರ್ಷನಂತರ ಲಯಕಾಲ ಆರಂಭ ೮೭ ೧/೨ ವರ್ಷದ ವರೆಗೆ ಅಂತರವಿರುವ ೧೨ ೧/೨ (೮೭ ೧/೨-೭೫) ವರ್ಷಗಳನ್ನು ಬ್ರಹ್ಮ ದೇವರ ದಿನಕಲ್ಪವಾಗಿ ಪರಿಗಣಿಸಿದರೆ. ಒಂದು ವರ್ಶಕ್ಕೆ ೩೬೦ ದಿನಗಳಂತೆ ೧೨ ೧/೨ ವರ್ಷಗಳಿಗೆ ೧೨ ೧ / ೨×೩೬೦=೪೫೦೦ ದಿನಗಳಾಗುವುವು. ಇದರಲ್ಲಿ ಕೊನೆಯ ೫೦ ದಿನಕಲ್ಪಗಳಲ್ಲಿ (೪೦+೧೦)೪೦ ದಿನ ಕಲ್ಪ ಶ್ರೀ ವಾಯುದೇವರಲ್ಲಿ ತನ್ನ ಪದವಿ ಪೂರ್ಣವಾದ ಭಕ್ತಿ ದಾರ್ಢ್ಯಕ್ಕಾಗಿ ಅಧ್ಯಯನವೂ ಮತ್ತು೧೦ ದಿನ ಕಲ್ಪಗಳಲ್ಲಿ ಲವಣಸಮುದ್ರದಲ್ಲಿ ಉಗ್ರತಪನಾಮಕವಾಗಿ ತಪಸ್ಸು ಆಚರಿಸಲ್ಪಟ್ಟು. ರುದ್ರಪದವಿಯ ಸಾಧನ ಪೂರ್ಣವಾಯಿತು. ಈ ೫೦ ದಿನಕಲ್ಪಗಳೇ ಶ್ರೀ ದಾಸವರ್ಯರ ಐದಲೆಯಗೈವತ್ತು ಎಂಬ ಸಾಧನ ಉಭಯವಾಕ್ಯಗಳಿಗೆ ಸಮನ್ವಯಮಾಡಿ ಕೊಳ್ಳಬೇಕೆಂಬುದೇ ಪ್ರಾಜ್ಞರ ಮತ ಉಳಿದ ೫ಕಲ್ಪಗಳಲ್ಲಿ ಶೇಷಾದ್ಯಾಸ್ತು

**ಸಭಾರ್ಯರ್ಕಕಾಃ** ಎಂಬ **ಪ್ರಕಾಶಸಂಹಿತೆಯ** ವಾಕ್ಯಾನುಸಾರ ೪ ಕಲ್ಪಗಳು ಶೇಷಪದಯೋಗ್ಯಸಾಧನ. ಇಲ್ಲಿಗೆ ೭೯ ಕಲ್ಪಗಳಾಯಿತು. (೭೫ ± ೪) ೮೦ನೆಯ ಕಲ್ಪ ಶೇಷಪದ ಭೋಗ–ನಂತರ ಮೋಕ್ಷವೆಂದು ಭಾವ. ಭೋಗಯೋಗ್ಯ ೪೦ ಕಲ್ಪಗಳಲ್ಲಿ ೩೯ನೆಯ ಕಲ್ಪದವರೆಗೆ ಶೇಷಪದಯೋಗ್ಯಸಾಧನ ಎಂದು ಸೂಚಿಸಿ **ಆರೈದು ನವಕಲ್ಪಾವಸಾನಕೆ‌ೈದುವನು ಶೇಷಪದವ ಪಾರ್ವತಿ ಸಹಿತವಾಗಿ** ಎಂದು ಸಮನ್ವಯಾರ್ಥ.

## ಪದ್ಯ (೧೨)

**ಪಾಕಶಾಸನ ಮುಖ್ಯ ಸಕಲ ದಿ ।**
**ವೌಕಸರಿಗಭಿನಮಿಪೆ ಋಷಿಗಳಿ ।**
**ಗೇಕಚಿತ್ತದಿ ಪಿತೃಗಳಿಗೆ ಗಂಧರ್ವ ಕ್ಷಿತಿಪರಿಗೆ ॥**
**ಆ ಕಮಲನಾಭಾದಿ ಯತಿಗಳ ।**
**ನೀಕಕಾನಮಿಸುವೆನು ಬಿಡದೆ ರ ।**
**ಮಾಕಳತ್ರನ ದಾಸವರ್ಗಕೆ ನಮಿಪೆನನವರತ** ॥೧೩॥

**ಅವತರಣಿಕೆ :**

ಈ ಪದ್ಯದಿಂದ ಇಂದ್ರದೇವರು ಆರಂಭಮಾಡಿಕೊಂಡು, ಕ್ರಮವಾಗಿ ಯತಿಪರಂಪರೆ ಮತ್ತು ಸ್ವಗುರುಪರ್ಯಂತ ದಾಸವರ್ಗಕ್ಕೆ ನಮಸ್ಕರಿಸುತ್ತಾರೆ. **ಪಾಕಶಾಸನ**=ಇಂದ್ರದೇವರೇ ಮೊದಲಾದ **ಮುಖ್ಯ**=ಮುಖ್ಯರಾದ **ಸಕಲ ದಿವೌಕಸರಿಗೆ**—ಸಮಸ್ತರಾದ ತತ್ವಾಭಿಮಾನಿ ದೇವತೆಗಳಿಗೆ (ಹಾಗೂ ಇತರ ದೇವತಾವರ್ಗಕ್ಕೆ) **ಅಭಿನಮಿಪೆ**=ಚೆನ್ನಾಗಿ (ವಿಧ್ಯುಕ್ತವಾಗಿ)ನಮಸ್ಕರಿ

ಸುತ್ತೇನೆ. **ಋಷಿಗಳಿಗೆ** = ಋಷಿವರ್ಗಕ್ಕೆ **ಏಕಚಿತ್ತದಿ** = ಸ್ಥಿರ ಮನಸ್ಸಿನಿಂದ ನಮಸ್ಕರಿಸುತ್ತೇನೆ. **ಪಿತೃಗಳಿಗೆ** = ಪಿತೃದೇವತೆಗಳಗೆ **ಗಂಧರ್ವ** = ಗಂಧರ್ವ ವರ್ಗಕ್ಕೆ ಸೇರಿದ ದೇವತೆಗಳಿಗೆ **ಕ್ಷಿತಿಪರಿಗೆ** = ಮಾನುಷ ಚಕ್ರವರ್ತಿಗಳಿಗೆ ನಮಸ್ಕರಿಸುತ್ತೇನೆ. ಆ **ಕಮಲನಾಭಾದಿ** = ಶ್ರೀಮದಾಚಾರ್ಯರ ಶಿಷ್ಯವರ್ಗ ದಲ್ಲಿ ಶ್ರೇಷ್ಠರಾದ ಶ್ರೀ ಪದ್ಮನಾಭತೀರ್ಥರೇ ಮೊದಲಾಗಿ ಪರಂಪರಾಗತವಾಗಿ ಬಂದಿರುವ ಸಮಸ್ತಮಾಧ್ವಯತಿವೃಂದಕ್ಕೂ **ಯತಿಗಳು** = ಮುನಿಶ್ರೇಷ್ಠರ **ಅನೀಕಕೆ** = ಸಮೂಹಕ್ಕೆ (ವೃಂದ) **ಬಿಡದೆ** = ವಿಸ್ಮೃತಿಯಿಂದ ಬಿಡದೇ **ಅನವಿುಸುವೆನು** = ಸಾಷ್ಟಾಂಗಪೂರ್ವಕ ನಮಸ್ಕರಿಸುತ್ತೇನೆ. **ರಮಾ ಕಳತ್ರನ** = ರಮಾಪತಿಯಾದ ಶ್ರೀಹರಿಯ **ದಾಸವರ್ಗಕೆ** = ಶ್ರೀಪುರಂದರ ದಾಸಾರ್ಯರಾದಿಯಾಗಿ ಇಡೀ ದಾಸಕೂಟಕ್ಕೆ **ಅನವರತ** = ಯಾವಾಗಲೂ **ನಮಿಪೆ** = ನಮಸ್ಕರಿಸುವೆ.

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—

"ಪಾಕ"ನೆಂಬ ಹೆಸರಿನ ದೈತ್ಯನನ್ನು ಸಂಹರಿಸಿದುದರಿಂದ, ಇಂದ್ರದೇವ ರಿಗೆ "ಪಾಕಶಾಸನ" ಎಂದು ಹೆಸರಾಯಿತು. ಈ ಪದ್ಯದಿಂದ ಮಹರುದ್ರ ದೇವರಿಗಿಂತ ಅವರರಾದ ಇಂದ್ರದೇವರನ್ನು ಪ್ರಾರಂಭಿಸಿಕೊಂಡು, ಶತಸ್ಥ ದೇವಗಣಪರ್ಯಂತ ನಮಸ್ಕರಿಸುತ್ತಾರೆ. ಋಸಿ ಸಾಂಕೇತದಿಂದ ಕರ್ಮಜ ದೇವತೆಗಳು ಪುಷ್ಕರನವರೆಗೆ ಅಮುಖ್ಯತತ್ವಾಭಿಮಾನಗಳ ವರ್ಗವನ್ನು ಹೇಳುತ್ತಾರೆ. ಕರ್ಮಜರಲ್ಲಿ ಪ್ರವಿಷ್ಟರಾದ ಋಷಿಗಳನ್ನು ಆರಂಭಮಾಡಿ ಪುಷ್ಕರನವರೆಗಿರುವ ದೇವತಾವರ್ಗ. "ಪಿತೃ"ಗಳು ಅಜಾನಜರಲ್ಲಿ ಸೇರಿ ದವರು. ಪಿತೃಶಬ್ದ ಸಾಂಕೇತದಿಂದ, ಪುಷ್ಕರನ ಅನಂತರ ಅವರರಾದ ದೇವ ಗಂಧರ್ವರ ಪರ್ಯಂತ ಅಜಾನಜರು ಗ್ರಾಹ್ಯ. ಅಜಾನಜರ ಸಮೇತ ಪಿತೃ ದೇವತೆಗಳವರೆಗೆ ಮೂವತ್ತಮೂರು ಕೋಟಿ ದೇವತೆಗಳನ್ನು ಹೇಳಿ

ನುತಾಯಿತು. ಮಾನುಷಗಂಧರ್ವರು ಮತ್ತು ಮಾನುಷ ಚಕ್ರವರ್ತಿಗಳನ್ನು (ಗಂಧರ್ವ ಕ್ಷಿತಿಪರಿಗೆ) ಹೇಳುತ್ತಾರೆ. ಅನಂತರ ಶ್ರೀಮನ್ಮಧ್ವಾಚಾರ್ಯರ ಶಿಷ್ಯಪರಂಪರೆಯಲ್ಲಿ ಕ್ರಮವಾಗಿ ಶ್ರೀ ಪದ್ಮನಾಭತೀರ್ಥರು. ಶ್ರೀ ನರಹರಿ ತೀರ್ಥರು, ಶ್ರೀ ಮಾಧವತೀರ್ಥರು, ಶ್ರೀ ಅಕ್ಷೋಭ್ಯತೀರ್ಥರು, ಶ್ರೀ ಟೀಕಾ ಕೃತ್ಪಾದರು ಶ್ರೀಪಾದರಾಜರು, ಶ್ರೀ ವ್ಯಾಸರಾಜರು. ಶ್ರೀ ವಾದಿರಾಜರು, ಶ್ರೀರಾಘವೇಂದ್ರಯತಿಸಾರ್ವಭೌಮರು ಇತ್ಯಾದಿ ಯತಿಗಳ ಪರಂಪರೆಗೆ ನಮಸ್ಕರಿಸಿರುತ್ತಾರೆ. ನಂತರ ರಮಾಪತಿಯ ದಾಸಶ್ರೇಷ್ಠರಾದ ಶ್ರೀ ಪುರಂದರ ದಾಸರು, ಶ್ರೀ ವಿಜಯದಾಸರು ಮತ್ತು ತಮ್ಮ ಸ್ವರೂಪೋದ್ಧಾರಕರಾದ ಶ್ರೀ ಗೋಪಾಲದಾಸರಾದಿಯಾಗಿ ದಾಸಕೂಟಕ್ಕೆ ಸೇರಿದ ಸಮಸ್ತ ದಾಸ ಶ್ರೇಷ್ಠರನ್ನು ನಮಸ್ಕರಿಸುತ್ತಾರೆ.

## (೨) "ಭಾವಪ್ರಕಾಶಿಕಾ" ವ್ಯಾಖ್ಯಾನ :

**"ನಾರಾಯಣಂ ನಮಸ್ಕೃತ್ಯ"** ಎಂಬ ಶ್ಲೋಕದ ಭಾವಾರ್ಥದಂತೆ, ಪರಮಾತ್ಮನನ್ನು ಮೊದಲು ಮಾಡಿ, ಶ್ರೀ ರುದ್ರದೇವರ ಪರ್ಯಂತ ತಾರತಮ್ಯ ಪ್ರಕಾರ ನಮಸ್ಕಾರ ಮತ್ತು ಪ್ರಾರ್ಥನಾದಿಗಳನ್ನು ಮಾಡಿ, ಈಗ ಈ ಪದ್ಯ ದಿಂದ ತಾರತಮ್ಯದಲ್ಲಿ ಅವರರಾದ ಇಂದ್ರಾದಿ ದೇವತೆಗಳನ್ನು ಪ್ರಾರಂಭಿಸಿ, ಮನುಷ್ಯೋತ್ತಮರ ಪರ್ಯಂತ ನಮಸ್ಕರಿಸುತ್ತಾರೆ.

ಇಂದ್ರನೇ ಮೊದಲಾದ ದೇವತೆಗಳೆಂದರೆ (ಪಾಕಶಾಸನಮುಖ್ಯ) ಇಂದ್ರ, ಕಾಮ, ಅನಿರುದ್ಧನಾಮಕ ಪ್ರಾಣ, ರತಿ, ಮನು, ಗುರು, ದಕ್ಷ, ಶಚಿ, ಪ್ರವಹ, ಯಮ, ಶತರೂಪಾ, ಚಂದ್ರ, ಸೂರ್ಯ, ವರುಣ ಇತ್ಯಾದಿ ಸಕಲ ತತ್ವಾಭಿಮಾನಿ ದೇವತೆಗಳು ಎಂದರ್ಥ. "ಋಷಿಗಳಿಗೆ" ಎಂಬ ಪದ ದಿಂದ ನಾರದರು, ಭೃಗು, ಅಗ್ನಿ, ಪ್ರಸೂತಿ, ವಿಶ್ವಾಮಿತ್ರ, ಮರೀಚ್ಯಾದಿ ಏಳುಮಂದಿ ಬ್ರಹ್ಮದೇವರ ಮಕ್ಕಳುಗಳನ್ನು ಹೇಳುತ್ತಾರೆ. ಪುಷ್ಕರನೆಂಬ ಕರ್ಮಜದೇವತೆಯೂ ಮತ್ತು ಅಜಾನಜರೆಂಬ ದೇವತೆಗಳೂ ಈ ವರ್ಗಕ್ಕೆ ಸೇರುತ್ತಾರೆ. ದೇವಕುಲದಲ್ಲಿ ಹುಟ್ಟಿ, ತತ್ವಾಭಿಮಾನಿಗಳಾಗದೇ ಸೋಮ

ಪಾನಕ್ಕೂ ಅರ್ಹರಲ್ಲದ ದೇವತೆಗಳು, ತುಂಬುರರು ಮೊದಲಾದ ಪ್ರಧಾನ ಗಂಧರ್ವರು, ೧೦೦ ಮಂದಿ ಅಪ್ಸರೆಯರು, ನಾರದರು ಮೊದಲುಗೊಂಡು ಉಚಥ್ಯರವರೆವಿಗೂ, ಮೇಲೆ ತಾರತಮ್ಯದಲ್ಲಿ ಹೇಳಿರುವ ಋಷಿಗಳನ್ನು ಬಿಟ್ಟು ಮಿಕ್ಕ ಋಷಿವರ್ಗ–ಈ ಸಮೂಹಕ್ಕೆ "ಅಜಾನಜರು" ಎಂದು ಹೆಸರು. ಉತ್ತಮಗಣದಲ್ಲಿ ಸೇರಿರುವ ಪಿತೃಗಣಗಳನ್ನು ಬಿಟ್ಟು ಉಳಿದ ಪಿತೃಗಣವನ್ನು ಇಲ್ಲಿ ತೆಗೆದುಕೊಳ್ಳಬೇಕು. "ಗಂಧರ್ವ" ಶಬ್ದದಿಂದ ತುಂಬರರು ಮೊದಲಾದ ಪ್ರಧಾನಗಂಧರ್ವರನ್ನು ಬಿಟ್ಟು, ಉಳಿದ ಗಂಧರ್ವರನ್ನು ತೆಗೆದುಕೊಳ್ಳಬೇಕು. "ಕ್ಷಿತಿಪ"ರೆಂಬ ಶಬ್ದದಿಂದ ಪ್ರಿಯವ್ರತಾದಿ ಉತ್ತಮಾಧಿಕಾರಿಗಳನ್ನು ಬಿಟ್ಟು ಉಳಿದ ರಾಜರುಗಳ ವರ್ಗವನ್ನೂ, ಮನುಷ್ಯೋತ್ತಮರನ್ನೂ ತೆಗೆದುಕೊಳ್ಳಬೇಕು. ತಾರತಮ್ಯೋಕ್ತ ಪದ್ಮನಾಭತೀರ್ಥರು ಮೊದಲಾಗಿ ಇಡೀ ಮಾಧ್ವಯತಿಗಳ ಪರಂಪರೆಯನ್ನೂ, ನಂತರ ದಾಸಕೂಟಸ್ಥರನ್ನೂ ನಮಸ್ಕರಿಸುತ್ತಾರೆ. "ರಮಾಕಳತ್ರನ" ಎಂಬ ಪದದಿಂದ. ಪರಮಾತ್ಮನು ಗೃಹಸ್ಥಾಶ್ರಮಿಯಾಗಿ ಜಗತ್ಕುಟುಂಬಿ ಎಂಬ ಅರ್ಥವನ್ನು ಸೂಚಿಸಿದಂತಾಯಿತು. ಕುಟುಂಬಕ್ಕೆ ದಾಸವರ್ಗವು ಅವಶ್ಯಕವು. ಭಗವದ್ದಾಸರಲ್ಲಿ ಪರಮಾತ್ಮನಿಗೆ ಪ್ರೀತಿ ಹೆಚ್ಚು ಎಂಬ ಅರ್ಥವನ್ನು "ರಮಾಕಳತ್ರನ" ಎಂಬ ಪದವು ಸೂಚಿಸುವುದು. **"ನಾಹಂ ವಸಾಮಿ ವೈಕುಂಠೇ ನ ಯೋಗೀಹೃದಯೇರವೌ । ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ'** - ಎಂಬ ಭಗವದ್ವಚನದಂತೆ ಭಕ್ತರಲ್ಲಿ ಪರಮಾತ್ಮನು ಯಾವಾಗಲೂ ಸನ್ನಿಹಿತನಾಗಿರುವನು.

## (೨) "ಭಾವಪ್ರಕಾಶಿಕೆ"ಯ ವ್ಯಾಖ್ಯಾನ :

ಹರಿಭಕ್ತರಾದ ಇಂದ್ರಾದಿದೇವತೆಗಳನ್ನೂ, ಪದ್ಮನಾಭತೀರ್ಥಾದಿ ಯತಿಗಳನ್ನೂ ಮತ್ತು ಭಗವದ್ದಾಸ ವರ್ಗವನ್ನೂ ನಮ್ರತೆಯಿಂದ ನಮಸ್ಕರಿಸುತ್ತಾರೆ. "ಪಾಕಶಾಸನ" ಎಂದರೆ "ಇಂದ್ರ"ನೆಂದರ್ಥ. **"ಬಿಡೌಜಾಃ ಪಾಕಶಾಸನಃ"** ಎಂಬ ಅಮರಕೋಶದಂತೆ. "ದಿವೌಕಸರು" ಎಂದರೆ ಸ್ವರ್ಗವನ್ನೇ ಸ್ಥಾನವನ್ನಾಗಿ ಉಳ್ಳ ದೇವತೆಗಳು ಎಂದರ್ಥ. ಒಂದೇ ಮನಸ್ಸಿನಿಂದ (ಏಕಚಿತ್ತದಿ), ರಾಜರಿಗೆ (ಕ್ಷಿತಿಪರಿಗೆ) ಇತ್ಯಾದಿ ಭಗವದ್ಭಕ್ತರ ಸಮೂಹಕ್ಕೆ (ಅನೀಕಕೆ) ನಮಸ್ಕರಿಸುತ್ತಾರೆ.

### (೪) ತಾಮ್ರಪರ್ಣೀಯ ವ್ಯಾಖ್ಯಾನ :

ಈ ಪದ್ಯದಿಂದ ದಾಸರಾಯರು ಇಂದ್ರಾದಿದೇವತೆಗಳು, ಋಷಿಗಳು, ಪಿತೃಗಳು, ಗಂಧರ್ವರು, ಕ್ಷಿತಿಪರು, ಪದ್ಮನಾಭಾದಿ ಯತಿಗಳ ಸಮೂಹ, ಭಗವದ್ಭಕ್ತರಾದ ಹರಿದಾಸವರ್ಗ ಇವರೆಲ್ಲರಿಗೂ ತಾರತಮ್ಯಾನುಸಾರ ಪ್ರಣಮಿಸುತ್ತೇನೆಂದು ಹೇಳುತ್ತಾರೆ. **"ಜಯಂತಃ ಪಾಕಶಾಸನಃ"** ಎಂಬ **ಅಮರಕೋಶ** ವಾಕ್ಯದಂತೆ "ಪಾಕ" ಎಂಬ ಹೆಸರಿನ ಅಸುರನನ್ನು ಶಾಸನ ಮಾಡಿದ್ದರಿಂದ ದೇವೇಂದ್ರನಿಗೆ "ಪಾಕಶಾಸನ" ಎಂದು ಹೆಸರು. ಏಕಾಗ್ರ ಮನಸ್ಸಿನಿಂದ ಋಷಿವರ್ಗಕ್ಕೆ, ಪಿತೃಗಣಕ್ಕೆ, ಗಂಧರ್ವರ ಸಮೂಹಕ್ಕೆ, ಕ್ಷಿತಿಪರಿಗೆ ಹಾಗೂ ಮನುಷ್ಯೋತ್ತಮರಿಗೆ ನಮಸ್ಕರಿಸುತ್ತೇನೆ. ಶ್ರೀ ಪದ್ಮನಾಭ ತೀರ್ಥರನ್ನು ಆರಂಭಿಸಿ, ಶ್ರೀ ರಾಘವೇಂದ್ರತೀರ್ಥರ ಪರ್ಯಂತ ಯಾವತ್ತೂ ಯತಿಪರಂಪರೆಗೆ ನಮಿಸುತ್ತೇನೆ. ರಮಾಪತಿಯ ದಾಸಕೂಟಸ್ಥರಿಗೆ ನಮಸ್ಕರಿಸುವೆ.

### (೫) "ಗುರುಹೃದಯ ಪ್ರಕಾಶಿಕೆ" ವ್ಯಾಖಾನ :—

ಪೂರ್ವೋಕ್ತ ದೇವತೆಗಳ ಅಧೀನರಾದ ಇಂದ್ರಾದಿದೇವತೆಗಳನ್ನು ಕ್ರಮವಾಗಿ, ಸಂಕ್ಷೇಪದಿಂದ ಸ್ತುತಿಸಿ, ನಮಿಸುತ್ತಾರೆ. ಪಾಕನೆಂಬ ಅಸುರನನ್ನು ಸಂಹರಿಸಿದ ದೇವೇಂದ್ರನೇ ಮೊದಲಾದ ಪುಷ್ಕರಾಂತ ಸರ್ವದೇವತೆಗಳಿಗೆ ಅಭಿವಂದಿಸುವೆ. ಅನಂತರ, ಋಷಿಗಳಿಗೆ, ಪಿತೃಗಳಿಗೆ. ಗಂಧರ್ವರಿಗೆ, ಮಹಾಭೂಪತಿಗಳಿಗೆ, ಪದ್ಮನಾಭತೀರ್ಥರೇ ಮೊದಲಾದ ಯತಿಗಳ ಸಮೂಹಕ್ಕೆ, ರಮಾಪತಿಯ ಸೇವಕರಾದ ಪುರಂದರಾರ್ಯಾದಿ ಭಕ್ತವರ್ಗಕ್ಕೆ ದೃಢಚಿತ್ತದಿಂದ ಸದಾ ನಮಸ್ಕರಿಸುತ್ತೇನೆ ಎಂದು ತಾತ್ಪರ್ಯ.

### ಸರ್ವವ್ಯಾಖ್ಯಾನಸಾರಸಂಗ್ರಹ :

ಜೀವಕೋಟಿಪ್ರವಿಷ್ಟರಾದ ಮುಕ್ತಿಯೋಗ್ಯ ಚೇತನವರ್ಗದಲ್ಲಿ ಐದು ಮುಖ್ಯ ಪ್ರಭೇಧಗಳು :—(೧) ದೇವತೆಗಳು, (೨) ಋಷಿಗಳು, (೩) ಪಿತೃ

ಗಳು, (೪) ಕ್ಷಿತಿಪರು. (೫) ಮಾನುಷೋತ್ತಮರು. ಈ ವರ್ಗಕ್ಕೆ "ಪಂಚ ಜೀವರು" ಎಂದು ಪ್ರಸಿದ್ಧಿ. (೧) ದೇವತಾ ವರ್ಗದಲ್ಲಿ ೨೪ ತತ್ತ್ವಗಳಿಗೆ ಅಭಿಮಾನಿಗಳಾದ "ತತ್ತ್ವಾಭಿಮಾನಿದೇವತೆಗಳು ಮತ್ತು ಉಳಿದ ಅತಾತ್ವಿಕ ದೇವತಾವರ್ಗ" ಎಂದು ಸ್ಥೂಲನಾಗೆ ಎರಡು ಗುಂಪುಗಳು. ಈ ಮಂಗಳಾ ಚರಣ ಸಂಧಿಯಲ್ಲಿ ಪರಮ ಜ್ಞಾನಿಗಳಾದ ಶ್ರೀ ಜಗನ್ನಾಥದಾಸವರೇಣ್ಯರು ಪರಮಾತ್ಮ ಮತ್ತು ಈತಕೋಟಿಪ್ರವಿಷ್ಟಳೂ ಮತ್ತು ಅಕ್ಷರನಾಮಕಳೂ ಆದ ಶ್ರೀ ರಮಾದೇವಿಯರನ್ನು ಸ್ತುತಿಸಿದ ನಂತರ, ಜೀವಕೋಟಿಪ್ರವಿಷ್ಟರಾದ. ಜೀವೋತ್ತಮರಾದ ಶ್ರೀ ಚತುರ್ಮುಖಬ್ರಹ್ಮದೇವರಿಂದ ಪ್ರಾರಂಭಿಸಿ, ಇಂದ್ರಾದಿ ದೇವತೆಗಳ ಪರ್ಯಂತ ತತ್ತ್ವಾಭಿಮಾನಿ ದೇವತೆಗಳನ್ನು ಸ್ತುತಿಸಿರು ತ್ತಾರೆ. **"ನಮೋಸ್ತು ತಾತ್ವಿಕಾ ದೇವಾಃ ವಿಷ್ಣುಭಕ್ತಿಪರಾಯಣಾಃ । ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವ ಏವಹಿ॥"**—ಎಂಬ ವಚ ನಾನುಸಾರ ನಮ್ಮ ಮನಸ್ಸನ್ನು ಯಾವಾಗಲೂ ಧರ್ಮಮಾರ್ಗದಲ್ಲಿ ಪ್ರೇರಿಸಲಿ. ಎಂದು ಭಕ್ತಿಪೂರ್ವಕವಾಗಿ ತತ್ವೇಶರಿಗೆ ನಮಿಸುವುದು ಸಂಪ್ರದಾಯಬದ್ಧ ವಾಗಿದೆ. (೨) ನಂತರ ಋಷಿವರ್ಗದಲ್ಲಿ ಕರ್ಮಜದೇವತೆಗಳು, ಪುಷ್ಕರನ ವರೆಗೆ ಅಮುಖ್ಯ ತತ್ತ್ವಾಭಿಮಾನಿಗಳನ್ನು ನಮಿಸುತ್ತಾರೆ. ಋಷಿಗಳು ಕರ್ಮಜದೇವತೆಗಳಲ್ಲಿ ಪ್ರವಿಷ್ಟರು. (೩) ತರುವಾಯ, ಪಿತೃಗಣಕ್ಕೆ ನಮ ಸ್ಕರಿಸುತ್ತಾರೆ. ಪಿತೃದೇವತೆಗಳು ಅಜಾನಜರಲ್ಲಿ ಸೇರಿದವರು. ಇವರು ತತ್ತ್ವಾಭಿಮಾನಿ ವರ್ಗದವರಲ್ಲ. ಅವರಿಗಿಂತ ತಾರತಮ್ಯದಲ್ಲಿ ಅವರರು. ಈ ವರ್ಗದಲ್ಲಿ ಪುಷ್ಕರನ ನಂತರ ಅವನಿಗಿಂತ ಅವರರಾದ ದೇವಗಂಧರ್ವರ ಪರ್ಯಂತ ಅಜಾನಜದೇವತೆಗಳನ್ನು ತೆಗೆದುಕೊಳ್ಳಬೇಕು. (೪) ನಂತರ "ಕ್ಷಿತಿಪ"ರಿಗೆ ನಮಸ್ಕಸುತ್ತಾರೆ. ಈ ವರ್ಗದಲ್ಲಿ ಮಾನುಷಗಂಧರ್ವರು ಮತ್ತು ಮಾನುಷ ಚಕ್ರವರ್ತಿಗಳೂ ಸೇರುತ್ತಾರೆ. ಪ್ರಾತಃಸ್ಮರಣೀಯರಾದ ಪ್ರಿಯವ್ರತ. ಮಾಂಧಾತ, ನಹುಷ ಮುಂತಾದ ರಾಜಶ್ರೇಷ್ಠರು ಬರುತ್ತಾರೆ. (೫) ಮಾನುಷೋತ್ತಮರನ್ನು (ನರವರ್ಗ) ನಂತರ ನಮಿಸುತ್ತಾರೆ. ಶ್ರೀಮದಾಚಾರ್ಯರ ಶಿಷ್ಯರಾದ ಶ್ರೀ ಪದ್ಮನಾಭತೀರ್ಥರನ್ನು ಮೊದಲು ಮಾಡಿ, ಯತಿಪರಂಪರೆ ಹಾಗೂ ಶ್ರೀ ಪುರಂದರದಾಸವರ್ಯರಾದಿಯಾಗಿ

ರಮಾಕಳತ್ರನ ದಾಸವರ್ಗವನ್ನು ಬಿಡದೆ ನಮಸ್ಕರಿಸುತ್ತಾರೆ. **"ಶ್ರೀಮಧ್ವಂ ಪದ್ಮನಾಭಂ ನರಹರಿಮುನಿಪಂ ಮಾಧವಾಕ್ಷೋಭ್ಯ ತೀರ್ಥಾನ್"**-ಎಂದು ಸಂಪ್ರದಾಯಪೂರ್ವಕ ಯತಿವಂದನ ಮಾಡಿರುತ್ತಾರೆ. ಕೊನೆಯಲ್ಲಿ, ಸಮಸ್ತ ಭಗವದ್ಭಕ್ತರ ಸಮೂಹಗಳಿಗೆ ವಂದಿಸುತ್ತಾ, **"ಪೃಥ್ವೀಮಂಡಲಮಧ್ಯಸ್ಥಾಃ ಪೂರ್ಣಬೋಧಮತಾನುಗಾಃ । ವೈಷ್ಣವಾಃ ವಿಷ್ಣು ಹೃದಯಾಸ್ತಾನ್ನಮಸ್ಯೇ ಗುರೂನ್ಮಮ ॥"** ಎಂಬ ಉತ್ತಮಾನುಸಂಧಾನದಿಂದ ನಮನ ಮಾಡಿದ್ದಾರೆ.

## ಪದ್ಯ (೧೩)

**ಪರಿಮಳವು ಸುಮನದೊಳಗನಲನು ।**
**ಅರಣಿಯೊಳಗಿಪ್ಪಂತೆ ದಾಮೋ ।**
**ದರನು ಬ್ರಹ್ಮಾದಿಗಳ ಮನದಲಿ ತೋರಿತೋರದಲೆ ॥**
**ಇರುತಿಹ ಜಗನ್ನಾಥವಿಠಲನ ।**
**ಕರುಣಪಡೆವ ಮುಮುಕ್ಷುಜೀವರು ।**
**ಪರಮಭಾಗವತರನು ಕೊಂಡಾಡುವುದು ಪ್ರತಿದಿನವು॥ ॥೧೩॥**

**ಅವತರಣಿಕೆ :—**

ಈ ಪದ್ಯದಿಂದ ಸಂಧಿ ಸಮಾಪ್ತಿಮಾಡುತ್ತಾ, ಅಂತ್ಯಮಂಗಳರೂಪವಾಗಿ ಚರಾಚರಜಗತ್ತಿನಲ್ಲಿ ಪರಮಾತ್ಮನ ವ್ಯಾಪ್ತಿಕಾರವನ್ನು ದೃಷ್ಟಾಂತ ಪೂರ್ವಕ ವಿವರಿಸುತ್ತಾ, ತಮ್ಮ ಬಿಂಬರೂಪಿಯಾದ ಶ್ರೀ ಜಗನ್ನಾಥವಿಠಲನ ಚರಣಾರವಿಂದಗಳಲ್ಲಿ ಭಕ್ತಿಯಿಂದ ನಮಿಸಿ, ಪ್ರಸಕ್ತಸಂಧಿಸ್ಥವಾದ ಗ್ರಂಥ ವಿಷಯವನ್ನು ಅರ್ಪಣೆಮಾಡುತ್ತಾರೆ.

**ಪ್ರತಿಪದಾರ್ಥ :—**

**ಪರಿಮಳವು** = ಸುವಾಸನೆಯು **ಸುಮನದೊಳು** = ಹೂವಿನಲ್ಲಿ **ಅನಲನು** = ಅಗ್ನಿಯು **ಅರಣಿಯೊಳು** = ಕಾಷ್ಠದಲ್ಲಿ **ಇಪ್ಪಂತೆ** = ಇರುವಂತೆ **ದಾಮೋದರನು** = ಗುಣಪೂರ್ಣನಾದ ಶ್ರೀಹರಿಯು **ಬ್ರಹ್ಮಾದಿಗಳ** = ಬ್ರಹ್ಮದೇವರೇ ಮೊದಲಾದ ಜೀವರುಗಳ **ಮನದಲಿ** = ಮನಸ್ಸೆಂಬ ಅಧಿಷ್ಠಾನದಲ್ಲಿ **ತೋರಿ** = ವ್ಯಕ್ತಮಾಡಿಸಿ **ತೋರದಲೆ** = ತನ್ನ ಮಹಿಮಾವಿಶೇಷಗಳನ್ನು ಸಾಕಲ್ಯೇನ ತೋರಗೊಡದೆ (ಅವ್ಯಕ್ತನಾಗಿ ಕಾಣಿಸಿಕೊಳ್ಳದೆ) **ಇರುತಿಹ** = ಅಧಿಷ್ಠಿತನಾಗಿ ಇರತಕ್ಕ **ಜಗನ್ನಾಥವಿಠ್ಠಲನ** = ಜಗತ್ತಿಗೆ ಪ್ರಭುವಾದ ದಾಸವರ್ಯರ ಬಿಂಬರೂಪಿಯಾದ ವಿಠ್ಠಲರೂಪೀ ಶ್ರೀಹರಿಯ **ಕರುಣ ಪಡೆವ** = ಕಾರುಣ್ಯವಿಶೇಷವನ್ನು ಹೊಂದಬೇಕೆಂದು ಅಪೇಕ್ಷಿಸುವ **ಮುಮುಕ್ಷುಜೀವರು** = ಮೋಕ್ಷಾಪೇಕ್ಷಿಗಳಾದ ಜೀವರು (ಮುಕ್ತಿಯೋಗ್ಯಜೀವರು) **ಪರಮಭಾಗವತರನ** = ಶ್ರೇಷ್ಠರಾದ ಭಗವದ್ಭಕ್ತರನ್ನು **ಪ್ರತಿದಿನವು** = ಪ್ರತಿಯೊಂದು ದಿವಸದಲ್ಲಿಯೂ (ನಿರಂತರವಾಗಿ) **ಕೊಂಡಾಡುವುದು** = ಗುಣ ವಿಶೇಷಗಳನ್ನು ಸ್ತೋತ್ರ ಮಾಡಬೇಕು.

**ವ್ಯಾಖ್ಯಾನಗಳು :**

**(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—**

ಪುಷ್ಪದೊಳಗೆ ಸುವಾಸನೆಯು ಇದೆ. ಹಾಗೆಯೇ ಅಗ್ನಿಯು ಕಾಷ್ಠದಲ್ಲಿದ್ದಾನೆ. ಗುಣಪೂರ್ಣನಾದ ಶ್ರೀಮನ್ನಾರಯಣನು ಜೀವೋತ್ತಮರಾದ ಚತುರ್ಮುಖ ಬ್ರಹ್ಮದೇವರೇ ಮೊದಲಾದ ಯಾತ್ತೂ ಸ್ಥಾವರ ಜಂಗಮ ಜೀವರುಗಳ ಮನಸ್ಸೆಂಬ ಅಧಿಷ್ಠಾನದಲ್ಲಿ ಇದ್ದಾನೆ. ಪುಷ್ಪವು ಅರಳಿದರೆ, ಪುಷ್ಪಗತ ಪರಿಮಳವು ಹೊರಸೂಸಿ, ನಾಸಿಕೇಂದ್ರಿಯಕ್ಕೆ ವಿಷಯವಾಗುವುದು.

ಕಾಷ್ಠವನ್ನು ಮಥಿಸಿದಾಗ, ಕಾಷ್ಠಗತ ಅಗ್ನಿಯು ಕಣ್ಣಿಗೆ ಗೋಚರವಾಗುವುದು. ಅಹಂ ಮಮತಾದಿಗಳಿಂದ ಕೂಡಿರುವ ಮನಸ್ಸನ್ನು ಪುಷ್ಪಕ್ಕೆ ಹೋಲಿಸಿದ್ದಾರೆ. ಜ್ಞಾನ, ಭಕ್ತಿ ಮತ್ತು ವೈರಾಗ್ಯ ಎಂಬ [ಗುಣವಿಶೇಷಗಳಿಂದ ಮನಸ್ಸು ಅರಳಬೇಕು. ಆಗ ಪರಿಮಳದಂತಿರುವ ಪರಮಾತ್ಮನು ತನ್ನ ರೂಪವನ್ನು ತೋರಿ ಉದ್ಧರಿಸುವನು. ಮನಸ್ಸೆಂಬ ಅಧಿಷ್ಠಾನಗತನಾದ ಪರಮಾತ್ಮನ ಸಾಕ್ಷಾತ್ಕಾರವಾಗಬೇಕಾದರೆ, ಅಹಂಕಾರ ಮತ್ತು ಮಮಕಾರಗಳ ತ್ಯಾಗ ಅತ್ಯಾವಶ್ಯಕ. ನಂತರ, ಜ್ಞಾನ, ಭಕ್ತಿ, ಮತ್ತು ವೈರಾಗ್ಯಗಳಿಂದ ಮನಸ್ಸೆಂಬ ಪುಷ್ಪವನ್ನು ವಿಕಾಸಗೊಳಿಸಬೇಕು. ಕಾಷ್ಠಮಥನದಂತೆ, ಮನಸ್ಸಿನಿಂದ ಪರಮಾತ್ಮನ ಕಲ್ಯಾಣಗುಣಗಳನ್ನು ವಿಚಾರವಾಗಿ ಮಥನ ಮಾಡಿದರೇ, ಕಾಷ್ಠಗತ ಅಗ್ನಿ ಪ್ರತ್ಯಕ್ಷವಾದಂತೆ, ತಾನು ಕಣ್ಣಿಗೆ ತೋರಿ, ಉದ್ಧಾರ ಮಾಡುತ್ತಾನೆ. ಪೂರ್ವೋಕ್ತಪ್ರಕಾರ ಮಾಡದವರಿಗೆ ಅವರವರ ಮನಸ್ಸಿನಲ್ಲಿ ಪುಷ್ಪಗತ ಪರಿಮಳದಂತೆ ಮತ್ತು ಕಾಷ್ಠಗತ ಅಗ್ನಿಯಂತೆ ಅವ್ಯಕ್ತನಾಗಿ ಗೋಚರಿಸದೇ ಇರುತ್ತಾನೆ (ತೋರದೆಲೆ). ಕುಸುಮದಲ್ಲಿ ಪರಿಮಳವು ಇರುವಂತೆ, ಅರಣಿಯಲ್ಲಿ ಅಗ್ನಿಯು ಇರುವಂತೆ, ಬ್ರಹ್ಮಾದಿಗಳ ಮನಸ್ಸಿನಲ್ಲಿ ಕಾಣಿಸಿಕೊಂಡು, ಸಾಕಲ್ಯೇನ ಗೊತ್ತಾಗದೇ. ಭಕ್ತಿನಿಮಿತ್ತ ಯಶೋದಾದೇವಿಯಿಂದ ದಾಮ (ಹಗ್ಗ) ದಿಂದ ಬದ್ಧನಾದ ಶ್ರೀ ಕೃಷ್ಣನು (ದಾಮೋದರನು) ಇರುವವನಾಗಿದ್ದಾನೆ. ಇಂತಹ ಜ್ಞಾನಪ್ರದನಾದ ಪರಮಾತ್ಮನ ಕರುಣವನ್ನು ಸಂಪಾದಿಸುವ ಮೋಕ್ಷಾಕಾಂಕ್ಷಿಗಳು ಪೂರ್ವೋಕ್ತ ಪರಮಭಾಗವತರಾದ ಬ್ರಹ್ಮಾದಿಗಳನ್ನು ಸದಾ ತಾರತಮ್ಯ ಕ್ರಮದಿಂದ ಸ್ತುತಿಸಬೇಕೆಂದು ತಾತ್ಪರ್ಯ. ಪುಷ್ಪಗತಪರಿಮಳದ ದೃಷ್ಟಾಂತದಿಂದ ಕಾರ್ಯಭೂತ ಈ ಜಗತ್ತಿಗೆ ಕಾರಣಭೂತನಾದ ದೇವರೊಬ್ಬನಿದ್ದಾನೆ ಎಂದು ಶ್ರುತಿ ಸ್ಮೃತಿಗಳಿಂದ ತಿಳಿಸಿದರು. ಅರಣಿಗತ ಅಗ್ನಿಪ್ರಾಪ್ತಿಗೆ ಮಥನದಂತೆ ಗುರುಸೇವಾ, ಶಾಸ್ತ್ರಾಭ್ಯಾಸ, ಧ್ಯಾನ, ಉಪಾಸನಾದಿ ಮಾರ್ಗ ಹೊರತು, ಪರಮಾತ್ಮನು ದೊರೆಯುವುದಿಲ್ಲ ಎಂದು ತಿಳಿಸುವುದಕ್ಕೆ ಈ ಎರಡು ದೃಷ್ಟಾಂತಗಳನ್ನು ಕೊಟ್ಟಿರುತ್ತಾರೆ.

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :

ಮಲ್ಲಿಕಾದಿ ಪುಷ್ಪಗಳು ಅರಳಿದ ಕೂಡಲೇ ಸುವಾಸನೆಯು ವ್ಯಕ್ತವಾಗುವುದು. ಅಂತೆಯೇ ಬ್ರಹ್ಮ ವಾಯುಗಳಿಗೆ ಪರಮಾತ್ಮನು ಅಪರೋಕ್ಷದಲ್ಲಿ ಸರ್ವದಾ ವ್ಯಕ್ತನಾಗಿಯೇ ಕಾಣಿಸುತ್ತಿರುವನು. ಅರಣಿಯಲ್ಲಿ, ಅಂದರೆ, ಯಾಗಶಾಲೆಯಲ್ಲಿ ಅಗ್ನಿಯನ್ನು ಪಡೆಯುವುದಕ್ಕಾಗಿ ಇಟ್ಟುಕೊಂಡಿರುವ ಅಶ್ವತ್ಥಕಾಷ್ಟವು. ಅದನ್ನು ಮತ್ತೊಂದು ಕಾಷ್ಠಕ್ಕೆ ಕಡೆದಾಗ (ಮೊಸರನ್ನು ಕಡೆಯುವಂತೆ) ಕಾಷ್ಠಗತ ಅಗ್ನಿಯು ಕಾಣಿಸುವುದು. ಮಥನವಾಗದಿದ್ದರೆ ಕಾಷ್ಟದಲ್ಲಿ ಅಗ್ನಿ ಇದ್ದರೂ ಕಾಣುವುದಿಲ್ಲ. ಹಾಗೆಯೇ ರುದ್ರಾದಿದೇವತೆಗಳಲ್ಲಿ ಪರಮಾತ್ಮನು ಇದ್ದರೂ, ಯಾವಗಲೂ ಗೋಚರನಾಗದೇ, ಧ್ಯಾನ ಮಾಡುವಕಾಲದಲ್ಲಿ ಮಾತ್ರ ಅಪರೋಕ್ಷದಲ್ಲಿ ಗೋಚರನಾಗುತ್ತಿರುವನು. ಈ ಕಾರಣದಿಂದ ಮುಕ್ತಿಯೋಗ್ಯರೆಲ್ಲರೂ (ಮುಮುಕ್ಷುಜೀವರು) ತಾರತಮ್ಯತ್ವೇನ ಪರಮಭಗವದ್ಭಕ್ತರಾದ ಸಕಲದೇವತೆಗಳಿಗೂ ಮತ್ತು ತಮಗಿಂತಲೂ ಉತ್ತಮರಾದ ಮನುಷ್ಯೋತ್ತಮರಿಗೂ ನಮಸ್ಕಾರವನ್ನು ಮಾಡಿ, ಅವರ ಅನುಗ್ರಹವನ್ನು ಪಡೆದರೆ, ಭಗವತ್ಪ್ರಸಾದವಾಗುವುದೆಂದು ತಾತ್ಪರ್ಯ.

## (೩) "ಭಾವದರ್ಪಣಟೀಕಾ" ವ್ಯಾಖ್ಯಾನ :—

ಅವರವರ ಯೋಗ್ಯತಾನುಸಾರ ಹೃದಯಕಮಲದಲ್ಲಿ ಶ್ರೀ ಹರಿಯು ದರ್ಶನ ಕೊಡುವ ರೀತಿಯನ್ನು ಹೇಳುತ್ತಾರೆ. **"ಏವಂ ಪ್ರಳಯಕಾಲೇಪಿ ಪ್ರತಿಭಾತಪರಾವರಃ"** -ಎಂಬ ವಚನಾನುಸಾರ ಶ್ರೀ ಬ್ರಹ್ಮದೇವರ ಮನಸ್ಸಿನಲ್ಲಿ ಪುಷ್ಪನಿಷ್ಠ ಸುಗಂಧದಂತೆ ಶ್ರೀಹರಿಯು ಸರ್ವದಾ ವ್ಯಕ್ತನಾಗಿರುತ್ತಾನೆ. ರುದ್ರಾದಿಗಳ ಮನಸ್ಸಿನಲ್ಲಿ ಅರಣಿಗತ ಅಗ್ನಿಯಂತೆ ಕದಾಚಿತ್ ವ್ಯಕ್ತನಾಗುತ್ತಾನೆ. ಈ ವಿಷಯದಲ್ಲಿ ಪ್ರಮಾಣ :— **"ವಿದ್ಯುದ್ಧಾಮ್ನಾಸುಷಾ ವಿದ್ಯುಃ ಸೂರ್ಯಮಂಡಲ ವತ್ಸುರಾಃ । ಪ್ರತಿಬಿಂಬ ವಚ್ಚ ಗಿರಿಶಃ ಬ್ರಹ್ಮೈನಂ ಪಶ್ಯತಿ ಸ್ಫುಟವತ್" ॥** —ಹೀಗೆಂದು **ತೈತ್ತಿರೀಯಭಾಷ್ಯ** ಪ್ರಮಾಣವಿದೆ.

ಅಗ್ನಿಯನ್ನು ಕಡೆಯುವ ಅಶ್ವತ್ಥಕಾಷ್ಠಕ್ಕೆ "ಅರಣಿ" ಎಂದು ಹೆಸರು. **ಮೋಕ್ಷಮಿಕ್ಷುಃ ಮುಮುಕ್ಷುಃ** —ಎಂದರೆ ಮುಕ್ತಿಯೋಗ್ಯರು ಎಂದರ್ಥ. (ಮುಮುಕ್ಷುಗಳು).

## (೪) ತಾಮ್ರಪರ್ಣೀಯ ವ್ಯಾಖ್ಯಾನ :

ಶ್ರೀಮನ್ನಾರಾಯಣನು "ಬ್ರಹ್ಮಾದಿ ಸಕಲ ಜೀವರಲ್ಲಿ ವ್ಯಕ್ತಾವ್ಯಕ್ತನಾಗಿ ವ್ಯಾಪಿಸಿರುವನು" ಎಂಬ ತತ್ವವನ್ನು ಹೂವಿನೊಳಗಿರುವ ಪರಿಮಳ, ಅರಣಿಯೊಳಗಿರುವ ಅಗ್ನಿಗಳ ದೃಷ್ಟಾಂತದಿಂದ ತಿಳಿಸಿರುತ್ತಾರೆ. ಸುಗಂಧ (ಆಮೋದವು-ಪರಿಮಳ) ಪುಷ್ಪಗಳಲ್ಲಿ ಸಾಮಾನ್ಯವಾಗಿ ಇರುವುದು. ಅದರಂತೆಯೇ ಪರಮಾತ್ಮನು ಚತುರ್ಮುಖ ಬ್ರಹ್ಮನಲ್ಲಿ ನಿಜವಿಭೂತಿರೂಪದಿಂದ ವ್ಯಕ್ತನಾಗಿಯೇ ಇರುತ್ತಾನೆ. ಅರಣಿ ಎಂಬುದು ಯಜ್ಞಾಗ್ನಿಯನ್ನು ಕಡಿದು ತೆಗೆಯುವ ಕಾಷ್ಠ ವಿಶೇಷ. ಇದರಲ್ಲಿ ಅಂತರ್ಗತವಾಗಿರುವ ಅಗ್ನಿಯು ಮಂಥನ ಮುಂತಾದ ವ್ಯಾಪಾರವಿಶೇಷಗಳಿಂದ ವ್ಯಕ್ತವಾಗುವುದು. ಅಂತೆಯೇ, ಜೀವರು ಮಾಡುವ ಉಪಾಸನೆ ಮುಂತಾದುವುಗಳಿಂದ ಶ್ರೀಹರಿಯು ಅಭಿವ್ಯಕ್ತನಾಗುವನು. ಈ ವಿಚಯದಲ್ಲಿ ಪ್ರಮಾಣ :— **ದಧಿಸ್ಥಘೃತವತ್ ಕಾಷ್ಠೇ ವಹ್ನಿವಚ್ಚ ಜನಾರ್ದನಃ** । —ಎಂದು ಶ್ರೀಮಧ್ವಾಚಾರ್ಯರು **ಭಾಗವತ ಸಪ್ತಮಸ್ಕಂಧದ ತಾತ್ಪರ್ಯ**ದಲ್ಲಿ ಹೇಳಿರುವಂತೆ ಮೊಸರಿನಲ್ಲಿ ಅಡಗಿರುವ ತುಪ್ಪ, ಕಾಷ್ಠದಲ್ಲಿರುವ ಅಗ್ನಿಗಳಂತೆ ದೇಹ ಇಂದ್ರಿಯ, ಪ್ರಾಣ, ಜೀವರಲ್ಲಿದ್ದರೂ ಪರಮಾತ್ಮನು ಅವುಗಳಿಂದ ಭಿನ್ನನಾಗಿರುವುದು ತಿಳಿಯುವುದಿಲ್ಲ ಎಂದು ಶ್ಲೋಕದ ಭಾವವು. ನಮ್ಮಂಥ ಅಲ್ಪಚೇತನಗಳಲ್ಲಿ ಪರಮಾತ್ಮನು ಅವ್ಯಕ್ತನಾಗಿರುತ್ತಾನೆ ಎಂದು ತಾತ್ಪರ್ಯ.

## (೫) "ಗುರು ಹೃದಯ ಪ್ರಕಾಶಿಕಾ" ವ್ಯಾಖ್ಯಾನ :

ತಾರತಮ್ಯಕ್ರಮವುಳ್ಳ ಸಾತ್ವಿಕಾಧಿಷ್ಠಾನವನ್ನು ಬಿಟ್ಟು, ಶ್ರೀಹರಿಯು ದೊರೆಯುವುದಿಲ್ಲವಾದ್ದರಿಂದ, ತಾರತಮ್ಯ ಕ್ರಮದಿಂದ ಪರಮಾತ್ಮನನ್ನು

ಭಜಿಸಬೇಕೆಂದು ದೃಷ್ಟಾಂತಸಹಿತ ಹೇಳಿ, ಮಂಗಳಾಚರಣ ಸಂಧಿಯನ್ನು ಉಪಸಂಹಾರ ಮಾಡುತ್ತಾರೆ. ಹೂವಿನಲ್ಲಿ ಸುವಾಸನೆಯೂ ಇರುವಂತೆಯೂ ಮತ್ತು ಅರಳಿಕಾಷ್ಠದಲ್ಲಿ ಅಗ್ನಿ ಇರುವಂತೆಯೂ, ಬ್ರಹ್ಮಾದಿಗಳ ಮನಸ್ಸಿನಲ್ಲಿ ಕಾಣಿಸಿಕೊಂಡು, ಸಾಕಲ್ಯೇನ ಗೊತ್ತಾಗದೆ, ಭಕ್ತಿನಿಮಿತ್ತ ಯಶೋದೆಯಿಂದ ಹಗ್ಗದಿಂದ ಕಟ್ಟಲ್ಪಟ್ಟ ಉದರವುಳ್ಳ (ದಾಮೋದರನು) ಕೃಷ್ಣನು ಇರುತ್ತಾನೆ. ಇಂತಹ ಲೋಕಕ್ಕೆ ಒಡೆಯನಾದ "ಜಗನ್ನಾಥವಿಠ್ಠಲ" ಎಂದರೆ, ಜ್ಞಾನ ಪ್ರದನಾದ ಪರಮಾತ್ಮನ ದಯೆಯನ್ನು ಅಪೇಕ್ಷಿಸುವ (ಕರುಣ ಪಡೆವ) ಮೋಕ್ಷಾದಿಕಾರಿಗಳು ಪೂರ್ವೋಕ್ತ ಪರಮ ಭಾಗವತರಾದ ಬ್ರಹ್ಮಾದಿಗಳನ್ನು ಸದಾ ತಾರತಮ್ಯ ಕ್ರಮದಿಂದ ಸ್ತುತಿಸಬೇಕೆಂದು ತಾತ್ಪರ್ಯ. ಪುಷ್ಪ ಗತ ಗಂಧದ ದೃಷ್ಟಾಂತದಿಂದ, ಕಾರ್ಯಭೂತ ಜಗತ್ತಿಗೆ ಕಾರಣನಾದ ಪರಮಾತ್ಮನು ಇದ್ದಾನೆಂದು ಶೃತಿ (ಯುಕ್ತಿ) ಗಳಿಂದ ತಿಳಿದಾಗ್ಯೂ, ಅರಣಿ ಯಲ್ಲಿರತಕ್ಕ ಅಗ್ನಿಯು ಅರಣಿ ಕಾಷ್ಠವನ್ನು ಮಥನಮಾಡಿದ ಹೊರತು ಹೇಗೆ ಪ್ರಾಪ್ತವಾಗುವುದಿಲ್ಲವೋ ಹಾಗೆ ಗುರುಸೇವಾ, ಶಾಸ್ತ್ರಾಭ್ಯಾಸ ಮೊದಲಾದ ಸೇವಾವಿಶೇಷಗಳ ವಿನಹ, ದೇವರು ದೊರಕುವುದಿಲ್ಲ ಎಂಬ ವಿಷಯವನ್ನು ತಿಳಿಸುವುದೇ ಈ ಎರಡು ದೃಷ್ಟಾಂತಗಳ ಹೃದಯ. ಈ ವಿಷಯದಲ್ಲಿ ಪ್ರಮಾಣ :– **"ಓಂ ಅಗ್ನಿರ್ವೈಷ ದೇವಾನಾಮುವಮೋ ವಿಷ್ಣುಃ ಪರಮಃ । ಸಾಕಾಷ್ಠಾ ಸಾಪರಾಗತಿಃ"॥ ದೇವಾಸುರೇಭ್ಯೋಏವಘು ವಾಸ್ತ್ರಥಾನಃ । ದದಕ್ಷ್ಯಾಯೋ ಬ್ರಹ್ಮಸುತಾಶ್ಚ ತೇಷಾಂ ॥ ಭವಃ ಪರ ಸ್ಸೋsಥ ವರಿಂಚಿವೀರ್ಯಃ । ಸಮುತ್ಪರೋsಹಂ ದ್ವಿಜದೇವ ದೇವಃ"॥** ಇತ್ಯಾದಿ ಶೃತಿ, ಭಾಗವತ ವಚನಗಳು ವಿವರಿಸಲ್ಪಟ್ಟವು.

## (೬) ಜಮುಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ:

ಶ್ರೀ ಲಕ್ಷ್ಮ್ಯಾಲಂಗಿತನಾದ ಶ್ರೀ ನಾರಾಯಣನನ್ನು ಸ್ಮರಿಸುತ್ತಾ, ದಾಸ ರಾಯರು ಈ ಸಂಧಿಯ ಕೊನೆಯ ಪದ್ಯದಿಂದ ಉಪಸಂಹಾರ ಮಾಡುತ್ತಾರೆ. ತಮ್ಮ ಬಿಂಬಮೂರ್ತಿಯಾದ "ಜಗನ್ನಾಥವಿಠಲನ" ನ ನಾಮಾಂಕಿತದಿಂದ ಶ್ರೀ ಹರಿನಾಮಸಂಕೀರ್ತನೆ ಮಾಡುತ್ತಾ ಈ ಸಂಧಿಗತ ವಿಷಯಗಳನ್ನು

ತಮ್ಮ ಉಪಾಸ್ಯಮೂರ್ತಿಯ ಚರಣಾರವಿಂದಗಳಲ್ಲಿ ಅರ್ಪಿಸುತ್ತಾರೆ. ಹೂವಿನಲ್ಲಿರುವ ಪರಿಮಳದಂತೆ ಶ್ರೀ ಹರಿಯು ಬ್ರಹ್ಮಾದಿಗಳ ಮನಸ್ಸಿನಲ್ಲಿ "ತೋರಿಸಿಕೊಳ್ಳುವವನು". ಕಟ್ಟಿಗೆಯೊಳಗೆ (ಅರಣಿ) ಅಡಗಿರುವ ಅವ್ಯಕ್ತ ಅಗ್ನಿಯಂತೆ (ಈ ಅಗ್ನಿಯು ಮಥನದಿಂದಲೇ ವ್ಯಕ್ತವಾಗುವುದು) ಇತರರಲ್ಲಿ ತೋರದೇ ಇರುತ್ತಾನೆ. ಪರಮಾತ್ಮನು ವ್ಯಕ್ತಾವ್ಯಕ್ತನು. ಅಚಿಂತ್ಯಾದ್ಭುತಮಹಿಮನು. ಬಾಲ್ಯದಲ್ಲಿಯೇ ತನ್ನ ಮಹಿಮಾವಿಶೇಷಗಳನ್ನು ಯಶೋದಾದೇವಿಗೆ ತೋರಿಸಿದ "ದಾಮೋದರ" ನಾಮಕ. ಶ್ರೀ ಹರಿಯು ಜಗತ್ಸ್ವಾಮಿಯು. ಮೋಕ್ಷಾಪೇಕ್ಷಿಗಳಾದ ಸಮಸ್ತ ಸಜ್ಜನರೂ ಅವನನ್ನು ಸದಾ ಅನನ್ಯ ಭಕ್ತಿಭಾವದಿಂದ ಭಜಿಸುತ್ತಿರುವ ಪರಮ ಭಾಗವತೋತ್ತಮರನ್ನು ಸ್ತುತಿಸಬೇಕೆಂದು ಅಭಿಪ್ರಾಯ. ಹೀಗೆ ಸ್ತುತಿಸುವುದು ಬಿಂಬೋಪಾಸನೆಗೆ ಮುಖ್ಯ ಸಾಧನಮಾರ್ಗವು. ಈ ರಹಸ್ಯವನ್ನು ಪರಮಸಾರವೆಂದು ಆದರದಿಂದ ತಿಳಿಯಬೇಕೆಂದು ದಾಸವರೇಣ್ಯರು ತಿಳಿಸುತ್ತಾರೆ.

**ಸರ್ವ ವ್ಯಾಖ್ಯಾನಸಾರಸಂಗ್ರಹ :—**

ಶ್ರೀ ಹರಿಯು ಕರುಣಾಸಾಗರಮೂರ್ತಿ· ವ್ಯಕ್ತಾವ್ಯಕ್ತಶಕ್ತಿವಿಶೇಷವುಳ್ಳನು. ಶ್ರೀಹರಿಯ ವಕ್ತಾವ್ಯಕ್ತಮಹಿಮಾವಿಶೇಷವನ್ನು ಈ ಕೊನೆಯ ಪದ್ಯದಲ್ಲಿ ಜ್ಞಾನಿವರೇಣ್ಯರಾದ ಶ್ರೀ ಜಗನ್ನಾಥದಾಸವರ್ಯರು ಎರಡು ಉಪಮಾಲಂಕಾರಗಳಿಂದ ವಿವರಿಸುತ್ತಾರೆ. ಮೊದಲನೆಯ ನಿದರ್ಶನ–ಪುಷ್ಪಗತ ಸುವಾಸನೆ ; ಎರಡನೆಯದು ಕಾಷ್ಟ (ಅರಣಿ)ಗತ ಅಗ್ನಿ. ಪುಷ್ಪದಲ್ಲಿ ಸುವಾಸನೆ ಇದೆ, ಇದು ಸಹಜರೀತಿಯಿದೆ. ಸುವಾಸನೆ (ಪರಿಮಳ) ಹೊಂದಿರುವ ಗುಣಧರ್ಮವು ಹೂವಿಗೆ ಸ್ವಾಭಾವಿಕ. ಹೂವು ಅರಳಿದರೆ, ಪರಿಮಳದ ಕಂಪು ತಾನಾಗಿಯೇ ಹೊರಸೂಸುವುದು ಈ ಕಂಪನ್ನು ಹೊತ್ತ ವಾಯುವು (ಗಂಧವಾಹನ) ನಾಸಿಕೇಂದ್ರಿಯದ್ವಾರಾ ನಮ್ಮ ಅನುಭವಕ್ಕೆ ತಂದುಕೊಡುವುದು. ಇದೇರೀತಿಯಲ್ಲಿ ಬ್ರಹ್ಮಾದಿಗಳ ಮನಸ್ಸಿನಲ್ಲಿ ಅಧಿಷ್ಠಿತನಾಗಿರುವ ಶ್ರೀ ಹರಿಯು ಅವನ ಜ್ಞಾನಕ್ಕೆ ಗೋಚರನಾಗಿ,

ವ್ಯಕ್ತನಾಗಿರುವನು. ಬ್ರಹ್ಮಾದಿ ಋಜುಗಳು ಶ್ರೀಹರಿಯ ಏಕಾಂತಭಕ್ತರು. ಜಾತಾಪರೋಕ್ಷಿಗಳು. ಬಿಂಬೋಪಾಸನೆ ಹಾಗೂ ಬಿಂಬದರ್ಶನ ಅವರಿಗೆ ಪರಮಸ್ವಾಭಾವಿಕ. ಆದರೆ ಅಗ್ನಿಯು ಯಜ್ಞಶಾಲೆಯಲ್ಲಿ ಅಗ್ನಿಯನ್ನು ಉತ್ಪತ್ತಿ ಮಾಡಲು ಉಪಯೋಗಿಸುವ "ಅರಣಿ" ಎಂಬ ಸಾಧನ ಸಾಮಗ್ರಿಯಲ್ಲಿ ಅವ್ಯಕ್ತನಾಗಿ ಅಡಗಿರುವುದು. ಆ ಅಗ್ನಿಯು ಕಣ್ಣಿಗೆ ಅಗೋಚರ. ಆ ಕಾಷ್ಟವನ್ನು ಮಥಿಸಿದಾಗ ಮಾತ್ರ, ಘರ್ಷಣೆಯಿಂದ ಕಾಷ್ಟಗತ ಅಗ್ನಿಯು ಗೋಚರವಾಗುವುದು. ಇದರಂತೆಯೇ ಬ್ರಹ್ಮಾದಿಗಳ ಮನದಲ್ಲಿ ವ್ಯಕ್ತನಾಗಿ ತೋರುವ ಶ್ರೀ ಹರಿಯು ಅವರಿಗಿಂತ ಅಮರರಾದ ಇತರ ದೇವತೆಗಳಲ್ಲಿ ಅವರವರ ಜ್ಞಾನಕ್ಕೆ ಮತ್ತು ಸಾಧನ ಸಂಪತ್ತಿಗೆ ತಕ್ಕಂತೆ, ಯೋಗ್ಯತಾನುಸಾರ ವ್ಯಕ್ತನಾಗುವನು. ಯೋಗ್ಯತಾ ಮೀರಿ ನೋಡಲು ಅನಂತಾನಂತ ರೂಪಗಳಿಂದ ಅಗೋಚರನು. ತತ್ವಾಭಿಮಾನಿದೇವತೆಗಳು ಸಾಮಾನ್ಯಾಪರೋಕ್ಷಿಗಳು. ಅವರವರ ಉಪಾಸನಾ ಬಲವಿಶೇಷದಿಂದ ಅವರವರ ಜ್ಞಾನಕ್ಕೆ ಗೋಚರಿಸುವನು. ಇನ್ನು ಕರ್ಮಜ ದೇವತೆಗಳು, ಅಲೌಕಿಕ ದೇವತೆಗಳು, ಇವರಲ್ಲಿ ಶ್ರೀ ಹರಿಯು ತೋರದೆಲೇ ಇರುವನು. ಅವರಿಗೆ ಧ್ಯಾನ ಉಪಾಸನಾದಿ ಸಾಧನಮಾರ್ಗಗಳ ದ್ವಾರ ಗೋಚರಿಸುವನು. ಸಾಧನ ಸಂಪನ್ನರಾದ ಅತಾತ್ವಿಕರಿಗೆ ಕಾಷ್ಠಗತ ಅಗ್ನಿಯಂತೆ ಅವ್ಯಕ್ತನಾಗಿರುವನು. ಹೀಗೆ ನಿರ್ಮಲಾಂತಃಕರಣವಾದ ಜ್ಞಾನಕ್ಕೆ ಗೋಚರನಾಗಿ, ಅಜ್ಞಾನಕ್ಕೆ ಅಗೋಚರನಾಗಿ ವ್ಯಕ್ತಾವ್ಯಕ್ತನಾಗಿದ್ದಾನೆ. ಅಚಿಂತ್ಯಾದ್ಭುತಶಕ್ತನಾದ ಪರಮಾತ್ಮನು ಎಲ್ಲರ ಮನಸ್ಸಿನಲ್ಲಿಯೂ ವ್ಯಾಪ್ತನಾಗಿದ್ದು, ತಾನು ಮಾತ್ರ ನಿರ್ಲಿಪ್ತನಾಗಿ, ಬ್ರಹ್ಮಾದಿಗಳ ಮನಸ್ಸಿಗೆ ಮತ್ತು ಜ್ಞಾನಕ್ಕೆ ಗೋಚರನಾಗುತ್ತಾ, ಸಾಧನಸಂಪನ್ನರಾದ ಇತರ ದೇವತೆಗಳಿಗೆ ತೋರದ ಹಾಗೆ ವ್ಯಾಪಾರ ಮಾಡುತ್ತಾನೆ. ತನ್ನ ಬಾಲ್ಯದಲ್ಲಿಯೇ ಅದ್ಭುತ ಮಹಿಮಾ ವಿಶೇಷಗಳನ್ನು ತೋರಿಸುತ್ತಾ, ಶ್ರೀಕೃಷ್ಣರೂಪೀ ಹರಿಯು, ಯಶೋದಾದೇವಿಯು ಆ ಅಗಣಿತ ಮಹಿಮನನ್ನೂ ಸಾಮಾನ್ಯಶಿಶುವೆಂದು ತಿಳಿದು, ಅವನನ್ನು ಒರಳಿಗೆ ಹಗ್ಗದಿಂದ ಕಟ್ಟಿಹಾಕಲು ಪ್ರಯತ್ನಿಸಿದಾಗ, ತನ್ನ ಅಪರಿಮಿತ ಮಹಿಮೆಯನ್ನು ತೋರಿ 'ದಾಮೋದರ'ನೆಂದು ಕೀರ್ತಿ ಪಡೆ

ದನು. ಇಂತಹ ದಾಮೋದರಾಖ್ಯ ಶ್ರೀಹರಿಯ ಕಾರುಣ್ಯವಿಶೇಷವನ್ನು ಹೊಂದಬೇಕೆಂಬ ಅಪೇಕ್ಷೆಯುಳ್ಳ ಮುಕ್ತಿಯೋಗ್ಯ ಚೇತನರು (ಮುಮುಕ್ಷುಗಳು) ಶ್ರೀಹರಿಯ ಏಕಾಂತಭಕ್ತರಾದ ಭಾಗವತೋತ್ತಮರನ್ನು ಸ್ತುತಿಸಿ, ಅವರ ಅನುಗ್ರಹ ದ್ವಾರಾ, ಅಂದರೆ, ಸ್ತೋತ್ತಮರ ದ್ವಾರಾ ಶ್ರೀಹರಿಯ ಪರಮಪ್ರಸಾದವನ್ನು ಹೊಂದಬೇಕು ಎಂಬ ಸಾಧನರೂಪವಾದ ರಹಸ್ಯ ಮಾರ್ಗವನ್ನು ದಾಸರಾಯರು ಈ ಪದ್ಯದಲ್ಲಿ ತೋರಿಸಿಕೊಟ್ಟಿರುತ್ತಾರೆ.

ಇಂತು ಮಂಗಳಾಚರಣಸಂಧಿಯ "ಸರ್ವವ್ಯಾಖ್ಯಾನಸಾರಸಂಗ್ರಹ"

ಸಮಾಪ್ತಿಯಾಯಿತು ॥

॥ ಶ್ರೀಮಧ್ವೇಶಾರ್ಪಣಮಸ್ತು ॥

॥ ಶುಭಮಂಗಳಂ ॥